# ಉತ್ತರ ಕರ್ನಾಟಕದ ನವಮೌಖಿಕ ಸಾಹಿತ್ಯದ ಆಯಾಮಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ


ಸಂಶೋಧಕರು

ಬಸವರಾಜ ಎಂ. ಜನಗೌಡ

ಮಾರ್ಗದರ್ಶಕರು

ಡಾ. ಮಲ್ಲಿಕಾರ್ಜುನ ವಣೇನೂರು

ಸಹಾಯಕ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ





ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೯

# ಉತ್ತರ ಕರ್ನಾಟಕದ ನವಮೌಖಿಕ ಸಾಹಿತ್ಯದ ಆಯಾಮಗಳು

**ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ**


**ಸಂಶೋಧಕರು**

**ಬಸವರಾಜ ಎಂ. ಜನಗೌಡ**

**ಮಾರ್ಗದರ್ಶಕರು**

**ಡಾ. ಮಲ್ಲಿಕಾರ್ಜುನ ವಣೇನೂರು**

ಸಹಾಯಕ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ



**ಭಾಷಾ ನಿಕಾಯ**

**ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ**

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ವಿದ್ಯಾರಣ್ಯ–೫೮೩೨೭೬**

**೨೦೧೯**

# ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ **"ಉತ್ತರ ಕರ್ನಾಟಕದ ನವಮೌಖಿಕ ಸಾಹಿತ್ಯದ ಆಯಾಮಗಳು"** ಎಂಬ ಮಹಾಪ್ರಬಂಧವು **ಡಾ. ಮಲ್ಲಿಕಾರ್ಜುನ ವಣೇನೂರು,** ಸಹಾಯಕ ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಂಶೋಧನಾತ್ಮಕ ಅಧ್ಯಯನವನ್ನು ಆಧರಿಸಿ ರಚನೆಗೊಂಡಿದ್ದಾಗಿದೆ. ಈ ಮಹಾಪ್ರಬಂಧವನ್ನು ನಾನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲವೆಂದು ಹಾಗೂ ಇದು ಬಿಡಿ ಇಲ್ಲವೇ ಇಡಿಯಾಗಿ ಎಲ್ಲಿಯೂ ಪ್ರಕಟಗೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ದಿನಾಂಕ : 10-12-2019
ಸ್ಥಳ : ವಿದ್ಯಾರಣ್ಯ, ಹಂಪಿ

(ಬಸವರಾಜ ಎಂ. ಜನಗೌಡ)
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

# ದೃಢೀಕರಣ ಪತ್ರ

**"ಉತ್ತರ ಕರ್ನಾಟಕದ ನವಮೌಖಿಕ ಸಾಹಿತ್ಯದ ಆಯಾಮಗಳು"** ಎಂಬ ವಿಷಯದ ಕುರಿತು **ಬಸವರಾಜ ಎಂ. ಜನಗೌಡ** ಇವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ಮಹಾಪ್ರಬಂಧವನ್ನು ಸಿದ್ಧಪಡಿಸಿರುತ್ತಾರೆ. ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಯಾವುದೇ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಇದು ಇವರ ಸ್ವತಂತ್ರ ಸಂಶೋಧನ ಅಧ್ಯಯನವಾಗಿದೆ. ಇದನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾಗಿದೆ.

ಮಾರ್ಗದರ್ಶಕರು

**ದಿನಾಂಕ :** 10-12-2019
**ಸ್ಥಳ : ವಿದ್ಯಾರಣ್ಯ, ಹಂಪಿ**

**(ಡಾ. ಮಲ್ಲಿಕಾರ್ಜುನ ವಣೇನೂರು)**
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

# ಪರಿವಿಡಿ

# ಅಧ್ಯಾಯ : ಒಂದು

## ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೧.೧ ಪೀಠಿಕೆ

೧.೨ ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿ

೧.೩. ಪರಿಕಲ್ಪನಾತ್ಮಕ ಚರ್ಚೆ

೧.೪ ಅಧ್ಯಯನದ ವಿಧಾನ

೧.೫. ಮಹಾಪ್ರಬಂಧದ ವಿನ್ಯಾಸ

# ಅಧ್ಯಾಯ : ಒಂದು
# ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

## ೧.೧ ಪೀಠಿಕೆ

ಜಾನಪದ ಎಂಬುದು ಒಂದು ಪ್ರದೇಶದ ಜನಜೀವನದ ಸಾರವಾಗಿರುತ್ತದೆ. ಅಲ್ಲಿಯ ಆಚರಣೆಯ ಮೂಲ ಬೇರು ಆಯಾ ಪ್ರದೇಶದ ಜನರಲ್ಲಿ ಅಡಗಿರುತ್ತದೆ. ಉತ್ತರ ಕರ್ನಾಟಕದ ಆಚರಣೆಗಳನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಪ್ರಾದೇಶಿಕ ಅರಿವು ಬಹುಮುಖ್ಯ. ಯಾವುದೇ ಜನಪದ ಸಮುದಾಯವು ಆ ಕಾಲದ ನೋವು–ನಲಿವು, ಏಳು–ಬೀಳುಗಳನ್ನು ಕಥೆ, ಗೀತೆ, ಗಾದೆ, ಐತಿಹ್ಯ, ಒಗಟು, ನುಡಿಗಟ್ಟು, ನಂಬಿಕೆ, ಸಂಪ್ರದಾಯ, ಕಲೆಗಳ ಮೂಲಕ ಒಂದು ತಲೆಮಾರಿನಿಂದ ಮುಂದಿನ ತಲೆಮಾರಿಗೆ ವರ್ಗಾಯಿಸಿರುತ್ತದೆ. ಜನಪದ ಸಾಹಿತ್ಯ ಜನಪದರ ಅಭಿವ್ಯಕ್ತಿಯ ಮುಖ್ಯ ಸಾಧನ. ಅನುಭವದ ಸಂಪತ್ತಿನಿಂದ ರೂಪ ಪಡೆದ ಜನಪದ ಸಾಹಿತ್ಯದಲ್ಲಿ ಆ ಸಮುದಾಯದ ಮೌಲ್ಯ, ನೀತಿ, ಆದರ್ಶಗಳು ಅಡಗಿರುತ್ತವೆ. ಜನಪದರ ಮಾತುಗಳು ಕಾವ್ಯವಲ್ಲದ ಕಾವ್ಯ, ಮೌನವೇ ಧ್ವನಿ, ಧ್ವನಿಯೇ ಅರ್ಥ, ಪಿಸುಗುಡುವಿಕೆಯೇ ಮಾತು, ಅವರ ಬದುಕೆ ಮೌಲ್ಯದ ಗಣಿ. ಹೀಗಾಗಿ ಜನಪದ ಸಾಹಿತ್ಯವೆಂದರೇ ಪರಂಪರೆಯ ಬೇರುಗಳ ಅರಿವಿನ ಆಗರವೇ ಆಗಿರುತ್ತದೆ. ಕರ್ನಾಟಕದಲ್ಲಿ ಅದರಲ್ಲೂ ಉತ್ತರ ಕರ್ನಾಟಕ ಭಾಗ ಪ್ರಾಕೃತಿಕವಾಗಿ, ಸಾಂಸ್ಕೃತಿಕವಾಗಿ ಅತ್ಯಂತ ವೈವಿಧ್ಯಮಯ ಜಿಲ್ಲೆಗಳನ್ನು ಹೊಂದಿದೆ.

ಇಂದು ಜನಪದ ಮತ್ತು ಜಾನಪದ ಈ ಎರಡರಲ್ಲಿ ಯಾವುದು ಸರಿ? ಎಂಬುದರ ಕುರಿತು ನಮ್ಮಲ್ಲೇ ಸಾಕಷ್ಟು ಗೊಂದಲಗಳು ಇವೆ. ಆದರೆ ಈ ಪ್ರಶ್ನೆಗೆ ಉತ್ತರ ಈ ಎರಡು ಪದಗಳೂ ಸರಿಯಾಗಿವೆ. ಏಕೆಂದರೆ ಹಿಂದೆ "ಕುಮಾರವ್ಯಾಸ ಭಾರತದಲ್ಲಿ ಪಾಂಡವರನ್ನು ಕುರಿತು 'ಜನಪದಗಳನ್ನು ದಾಟಿದರು' ಎಂಬ ಉಲ್ಲೇಖವಿದೆ. ಇಲ್ಲಿ ಜನಪದಗಳನ್ನು ದಾಟಿದರು ಎಂದರೆ ಗ್ರಾಮಗಳನ್ನು, ಹಳ್ಳಿಗಳನ್ನು ದಾಟಿದರು ಎಂದರ್ಥ. ಸ್ಥೂಲ–ಸರಳಾರ್ಥದಲ್ಲಿ ಜನಪದ ಎಂದರೆ ಹಳ್ಳಿ ಎಂದರ್ಥ. 'ವಾಲ್ಮೀಕಿ ರಾಮಾಯಣ'ದಲ್ಲಿ ದಶರಥನನ್ನು ಕುರಿತು 'ಪೌರ ಜಾನಪದ ಪ್ರಿಯಃ' ಎಂಬ ವರ್ಣನೆಯಿದೆ. ಅಂದರೆ ಪುರಜನರಿಗೂ, ಹಳ್ಳಿಯವರಿಗೂ ಪ್ರಿಯನಾದವನು ಎಂದು. ಜನಪದ ಎಂದರೆ ಇಲ್ಲಿ ಹಳ್ಳಿಯವನು ಎಂದರ್ಥ. ಕಾಳಿದಾಸನ 'ಮೇಘ ಸಂದೇಶ'ದಲ್ಲೂ 'ಜಾನಪದ'ಶಬ್ದ ಪ್ರಯೋಗವಿದೆ."[೧] ಒಟ್ಟು ಜನಪದ ಎಂದರೆ ಹಳ್ಳಿ, ಜಾನಪದ ಎಂದರೆ ಹಳ್ಳಿಯವನು ಎಂದು ಅರ್ಥೈಸಬಹುದು.

ಹಳ್ಳಿಯ ಹೆಣ್ಣು ಮಗಳೊಬ್ಬಳು ರಾಗಿ ಬೀಸುವಾಗ ಹೀಗೆ ಹಾಡಿದ್ದಾಳೆ.

ರಾಗಿ ಕಲ್ಲಿನ ಮೇಲೆ ಚೆಲ್ಯಾವ ನಮ ಹಾಡು
ಬಲ್ಲಂತ ಜಾಣರು ಬರಕೊಳ್ಳಿ/ ಅಹಾ,
ಬಳ್ಳ ತಕ್ಕೊಂಡು ಅಳಕೊಳ್ಳಿ[೨]...

ಇಂತಹ ತ್ರಿಪದಿಗಳನ್ನು ಯಾರು ರಚನೆ ಮಾಡಿದರೋ? ಇಲ್ಲಿ ಒಂದು ಅದ್ಭುತ ಅನುಭವವಿದೆ. ರಾಗಿ ಕಲ್ಲಿನಿಂದ ಉಗಮಗೊಂಡ ಹಾಡು–ಗೀತೆಗಳು ಚೆಲ್ಲಾಡಿ ಹೋಗುತ್ತಿವೆ. ಬಲ್ಲಂತ ಎಂದರೆ ವಿದ್ಯಾವಂತರು ಎಷ್ಟು ಬೇಕೋ ಅಷ್ಟು ಬರಕೊಳ್ಳಿ ಬಳ್ಳಗಳಲ್ಲಿ (ಸೇರುಗಳಲ್ಲಿ) ತುಂಬಿ ತುಂಬಿ ಅಳಕೊಳ್ಳಿ ಎನ್ನುವುದು ಈ ಹಾಡಿನ ತಾತ್ಪರ್ಯವಾಗಿದೆ. ಜನಪದ ಹಾಡುಗಳು ಇಷ್ಟು ಅಗಾಧವಾಗಿವೆ ಎಂದು ಹೆಣ್ಣುಮಗಳು ಹೇಳುತ್ತಾಳೆ. ಈ ಹೆಣ್ಣು ಮಗಳು ಹೀಗೆ ಹೇಳಿದರೆ ಪುರುಷರು ತಮ್ಮ ಕೋಲಾಟದಲ್ಲಿ ಹೀಗೆ ಹಾಡುತ್ತಾರೆ.

ಹತ್ತು ಸಾವಿರ ಪದವ ಎತ್ತಿನ ಮೇಲೆ ಹೇರ್‍ಕೊಂಡು
ಮತ್ತೆ ಸಾವಿರ ಪದವ ಹಿಡಕೊಂಡು। ಕೋಲೆ....
ಎಂಟು ಸಾವಿರ ಪದವ ಒಂಟೆ ಮೇಲೆ ಹೇರ್‍ಕೊಂಡು
ಬಸವಣ್ಣ ಸಭೆಗೆ ಬಂದೆವು। ಕೋಲೆ....
ಕೋಲಿನ ಮೇಲೊಬ್ಬ ಬಸವಣ್ಣ ಕೂತ್ಕೊಂಡು
ಲಾಲಿಸಿ ಪದವ ಬರಕೊಂಡು। ಕೋಲೆ[೩]...

ಬಸವಣ್ಣನವರು ಹತ್ತೊಂಬತ್ತು ಸಾವಿರ ಜನಪದ ಗೀತೆಗಳನ್ನು ಅಭ್ಯಾಸ ಮಾಡಿದ್ದರು ಎಂಬ ಪ್ರತೀತಿ ಇದೆ. ಆದ್ದರಿಂದಲೇ ಅವರ ವಚನಗಳು ಸರಳ, ಸುಂದರ, ಶುಭ್ರ ಶೈಲಿಯಲ್ಲಿ ರಚಿತವಾಗಿ ಜನಮನವನ್ನು ಸೂರೆಗೊಂಡಿವೆ.

ಹೆಣ್ಣು ಮಕ್ಕಳ ನಿರ್ಮಲ ಭಾವನೆ ಜನಪದ ಸಾಹಿತ್ಯದಲ್ಲಿ ಹೇಗೆ ಮೂಡಿ ಬಂದಿದೆ ಎಂಬುದಕ್ಕೆ ಒಂದು ನಿದರ್ಶನ. ಹಳ್ಳಿಯ ಹೆಣ್ಣು ಮಗಳೊಬ್ಬಳ ಮದುವೆ ನಿಶ್ಚಿಯವಾಗಿದೆ. ಆ ಹೆಣ್ಣು ಮಗಳು ತನ್ನ ಮನೋವ್ಯಾಕುಲತೆಯನ್ನು ಹೀಗೆ ತೋಡಿಕೊಂಡಿದ್ದಾಳೆ.

ಎಮ್ಮೆಯ ಕಾಯ್ಕೊಂಡು ಸುಮ್ಮನೆ ನಾನಿದ್ದೆ
ಹಾಳಾದವೆರಡು ಮೊಲೆ ಬಂದು
ಹಾಳಾದವೆರಡು ಮೊಲೆ ಬಂದು ನಮ್ಮಪ್ಪ
ಕಂಡೋರಿಗೆ ನನ್ನ ಕೊಡುತ್ತಾನೆ[೪]...

ಹೆಣ್ಣು ಮಗಳಿಗೆ ಸಹಜವಾಗಿ ಮೊಲೆ ಬಂದಿವೆ. ಆದರೆ ಆಕೆಗೆ ಅದರ ಪರಿಣಾಮವೇನು? ಮಗಳು ಪ್ರಾಯಕ್ಕೆ ಬಂದಳೆಂದು ಅವಳ ಅಪ್ಪ ದಿಗಿಲುಗೊಂಡಿದ್ದಾನೆ. ಆತುರ ಆತುರವಾಗಿ ಮಗಳ ಮದುವೆಗೆ ಸಿದ್ಧತೆ ನಡೆಸುತ್ತಾನೆ.

ಹೀಗೆ ನಾವು ವೈವಿಧ್ಯಮಯವಾದ ಜನಪದ ಗೀತೆಗಳನ್ನು ಕಾಣುತ್ತೇವೆ. ಕಾಲದ ಬದಲಾವಣೆಯೊಂದಿಗೆ ಜನಪದ ಸಾಹಿತ್ಯವು ತಕ್ಕಮಟ್ಟಿಗೆ ಬದಲಾವಣೆ ಹೊಂದುತ್ತಾ ಸಾಗಿದೆ. ಇಂದು ಆ ಬದಲಾವಣೆಯ ಕುರಿತ ಅಧ್ಯಯನ ಮಾಡಬೇಕಾದ ಅವಶ್ಯಕತೆಯಿದೆ.

### ೧.೨ ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿ

ಕನ್ನಡ ಸಾಹಿತ್ಯವಲಯದಲ್ಲಿ ಮೌಖಿಕ ಸಾಹಿತ್ಯದ ಕುರಿತು ಹಾ.ಮಾ.ನಾಯಕರಿಂದ ಮೊದಲುಗೊಂಡು ಪ್ರಚಲಿತ ಹಿರಿಯ-ಕಿರಿಯ ಕನ್ನಡ ಮನಸ್ಸುಗಳು ಕೂಡ, ಜನಪದ ಸಾಹಿತ್ಯವನ್ನು ಮತ್ತು ಅದರ ರೂಪವಾದ ಮೌಖಿಕ ಸಾಹಿತ್ಯವನ್ನು ಎಳೆಎಳೆಯಾಗಿ ಓದುವ ಬಳಗದ ಎದುರು ಪ್ರಚುರಪಡಿಸಿದ್ದಾರೆ. ಅದರ ಮುಂದುವರೆದ ರೂಪವೆನ್ನಬಹುದಾದ ನವಮೌಖಿಕ ಸಾಹಿತ್ಯದ ಕುರಿತಾದ ಸಂಶೋಧನೆ, ಅಭ್ಯಾಸ, ಪರಾಮರ್ಶೆಗಳ ಅಧ್ಯಯನದ ಅವಶ್ಯಕತೆಯು ತುಂಬಾ ಇದೆ. ಕನ್ನಡ ಸಾಹಿತ್ಯ ಸುವರ್ಣಲೋಕಕ್ಕೆ ಸೊಗಸಾದ ಗರಿಯೊಂದು ಸೇರಿಕೊಂಡರೆ ಮತ್ತೊಂದು ನೂತನ ನಡಿಗೆಗೆ ನಾಂದಿಯಾಗಬಲ್ಲದು ನವಮೌಖಿಕ ಸಾಹಿತ್ಯ. ನವಮೌಖಿಕತೆಗೆ ಸಂಬಂಧಿಸಿದಂತೆ ಯಾವುದೇ ಅಧ್ಯಯನವು ಈವರೆಗೂ ನಡೆಯದೆ ಇರುವುದರಿಂದ ಈ ಅಧ್ಯಯನದ ಅನಿವಾರ್ಯತೆಯಿದೆ.

ಸಾಹಿತ್ಯ ಕೃಷಿ ಸತತ ಪ್ರಯತ್ನದಿಂದ ಮೌಖಿಕ ಸಾಹಿತ್ಯ ಸ್ವಲ್ಪಭಾಗವಾದರು ಬರಹದ ಮೂಲಕ ಮೂರ್ತರೂಪ ತಾಳಿ, ಮುಂದಿನ ಪೀಳಿಗೆಗೆ ಉಳಿಯಿತು. ನಮಗೆ ಸಾಕಾರ ಸ್ವರೂಪದಲ್ಲಿ ಲಭ್ಯವಾದ ಸಾಹಿತ್ಯ ಸ್ವಲ್ಪಮಾತ್ರ ಜೀವನಾನುಭಾವ ಹದಗೊಂಡು ಹೆಪ್ಪುಗಟ್ಟಿದ ತುಪ್ಪದಂತೆ ಘನಸಾರದ ಅಮೃತದಂತಹ ಮಾತುಗಳು ಎಷ್ಟೋ ಮರೆಯಾಗಿ ಹೋಗಿವೆ. ಅಲ್ಲದೆ ಜೀವನಾನುಭವದ ಮಾತುಗಳು ಕೈತಪ್ಪಿ ಹೋದವು. ಮೌಖಿಕ ಸಾಹಿತ್ಯದಂತ ಸಾಹಿತ್ಯ ಮುಖಗಳಿಗೆ ಸಾಕಾರ ಸ್ವರೂಪವನ್ನು ಲಿಖಿತ ರೂಪವನ್ನು ನೀಡುವ ಅವಶ್ಯಕತೆ ಯಾದರೂ ಏನಿದೆ? ಅದರ ಫಲಾಫಲಗಳೇನು? ಪ್ರಯೋಜನವೇನು? ಪ್ರಾಮುಖ್ಯತೆ ಏನು? ಎಂದು ವಿವೇಚನೆ ನಡೆಸಿದರೆ, ಇಂತಹ ಸಾಹಿತ್ಯವನ್ನು ಸಂಗ್ರಹಿಸದೆ ಹೋದರೆ ನಮ್ಮ ಕನ್ನಡ ಸಾಹಿತ್ಯವಲಯ ಸಂಕ್ಷಿಪ್ತವಾಗಿಯೇ ಉಳಿಯುತ್ತದೆ. ಜಾಗತಿಕ ಸಾಹಿತ್ಯದಲ್ಲಿ ಕನ್ನಡ ಸಾಹಿತ್ಯದ ಕಂಪು ತಂಪುಗಳು ಕಾಣದೆ ಹೋಗುತ್ತದೆ.

ಎಷ್ಟೋ ವಿಷಯಗಳ ಸಂಶೋಧನೆಗಳು, ಸಾಧನೆಗಳು ಪಾಶ್ಚಾತ್ಯರ ತಿಳಿಯುವ ಪೂರ್ವದಲ್ಲಿಯೇ ಪೂರ್ವಾತ್ಯರಲ್ಲಿ ಆಗಿಹೋದವು. ಆದರೆ ಅವುಗಳನ್ನು ಸೂಕ್ತವಾಗಿ ದಾಖಲಿಸುವ ಕೆಲಸಗಳಾಗಲಿಲ್ಲ, ಸಾಕ್ಷಿ ಸಹಿತ ಸಿಗಲಿಲ್ಲ. ಹೀಗಾಗಿ ಸಾಧನೆಯ ಪಟ್ಟ ಸಲ್ಲಬೇಕಾದವರಿಗೆ ಸಲ್ಲದೆ ಸಲ್ಲಲಾರದವರಿಗೆ ಸಲ್ಲಿತು. ಈ ಸಂಗತಿಯು ಕನ್ನಡ ಭಾಷೆಯ ಜನಪದವೆಂದರೆ ಮೌಖಿಕತೆ ಎನ್ನುವುದು. ಜನಪದ ವಿದ್ವಾಂಸರ ನಂಬಿಕೆ ಇನ್ನೂ ಮೌಖಿಕತೆ ಬಗ್ಗೆ ಚಿಂತಿಸುವರಿದ್ದಾರೆ, ಅದು ಜನಪದರೇತರವಾದದ್ದು ಎಂದು ಚಿಂತನೆ ಭಾವಿಸುತ್ತದೆ.

ಇಂದು ಜನಪದ ಹಾಡುಗಳ ಧಾಟಿಯಲ್ಲಿ ಸಿನೆಮಾ ಹಾಡುಗಳು ತಯಾರಾಗುತ್ತಿವೆ. ಹಾಗೆಯೇ ಸಿನಿಮಾ ಹಾಡುಗಳ ಧಾಟಿಯಲ್ಲಿಯೂ ಜನಪದ ಗೀತೆಗಳು ರಚನೆಯಾಗಿವೆ. ಇದಕ್ಕೊಂದು ಉದಾಹರಣೆ: ನಿಂಬಿಯ ಬನಾದ ಮ್ಯಾಗಳ ಚಂದ್ರಾಮ ಚಂಡಾಡಿದ. ಇದು ಜನಪದ ಗೀತೆಯಾಗಿದ್ದರು ಇಂದು ನವಮೌಖಿಕತೆಯನ್ನು ತಲುಪಿದೆ ಎಂದು ತೋರಿಸಲು ಉದಾಹರಣೆ ಅಷ್ಟೇ. ಈ ಗೀತೆಯನ್ನು ವಿಜಯ ರಾಘವೇಂದ್ರ ನಾಯಕ ನಟನಾಗಿ ಅಭಿನಯಿಸಿದ ಸೇವಂತಿ ಸೇವಂತಿ ಚಲನಚಿತ್ರದಲ್ಲಿ ಬಳಕೆಗೊಂಡು ಸಾಕಷ್ಟು ಬದಲಾವಣೆ ಆಗಿದೆ. ಚಲನಚಿತ್ರದಲ್ಲಿ ಈ ಗೀತೆಯನ್ನು ರಮ್ಯ ಗೀತೆಯಾಗಿ ಬಳಸಿಕೊಂಡಿದ್ದಾರೆ. ನೃತ್ಯ, ಭಾವ, ಗೇಯತೆ, ರೂಪ ಎಲ್ಲವೂ ಆಧುನಿಕ ಸಿನಿಮಾ ಗೀತೆಗಳ ಪ್ರತಿರೂಪವಾಗಿದೆ. ಆದರೆ ಬಳಕೆ ಮಾಡಿಕೊಂಡಿರುವ ಗೀತೆ ಮಾತ್ರ ಜನಪದ ಗೀತೆಯಾಗಿದೆ. ಜನಪದದ ಜ್ಞಾನವಿಲ್ಲದವರು ಕೇಳಿದರೆ ಇದು ಚಲನಚಿತ್ರ ಗೀತೆಗಾಗಿಯೆ ಬರೆಯಲಾಗಿದೆ ಎಂದು ಪರಿಭಾವಿಸುವಂತಿದೆ. ಜನಪದ ಸಾಂಪ್ರದಾಯಿಕ ರಾಗದ ಬದಲಾಗಿ, ಚಲನಚಿತ್ರಕ್ಕೆ ಹೊಂದುವ ರಾಗ ಸಂಯೋಜನೆಯನ್ನು ಮಾಡಿದ್ದಾರೆ.

ಇದು ಹಳ್ಳಿಗಾಡಿನ ಮತ್ತು ಆಧುನಿಕತೆಯ ಒಂದು ಸಮರೂಪ ಮಿಶ್ರಣದಂತೆ ಕಂಡುಬರುತ್ತದೆ. ಈ ಗೀತೆಯನ್ನು ಬಿ.ಕೆ.ಸುಮಿತ್ರಾ ಅವರು ಹಾಡಿದ್ದಾರೆ. ಸಂಪೂರ್ಣವಾಗಿ ಹಳ್ಳಿಯ ಸೊಗಡನ್ನು ಕಣ್ಣಮುಂದೆ ಕಟ್ಟುವಂತಹ ಹಿನ್ನೆಲೆಯ ಸಂಗೀತದಲ್ಲಿ ಆಯಾ ಪದಗಳನ್ನು ಅಳವಡಿಸಲಾಗಿದೆ. ಈ ರೀತಿಯ ವಿಷಯಗಳು ಚಲನಚಿತ್ರ ಗೀತೆಯಲ್ಲಿ ಸ್ವಲ್ಪ ಕಣ್ಮರೆಯಾಗಿವೆ. (ಅಂದರೆ ಹಳ್ಳಿಯ ನೆನಪನ್ನು ತಂದುಕೊಂಡು ಮಧುರವಾದ ಕೋಳಲಿನ ನಾದ ಸ್ವಲ್ಪ ಬದಲಾಗಿ ಮೂಡಿಬಂದಿದೆ) ಮೂಲ ಗೀತೆಯೂ ರಮ್ಯ ಗೀತೆಯಾಗಿದೆ.

ಎದ್ದೋನೆ ನಿಮಗ್ಯಾನ ಏಳುತಲೇ ನಿಮಗ್ಯಾನ
ಸಿದ್ಧರ ಗ್ಯಾನ ಶಿವುಗ್ಯಾನ
ಸಿದ್ಧರ ಗ್ಯಾನ ಶಿವುಗ್ಯಾನ ಮಾಶಿವನೆ
ನಿದ್ರೆಗಣ್ಣಾಗೆ ನಿಮಗ್ಯಾನ ನಿಂಬಿಯ[೫]...

ಎಂದು ಶಿವಸ್ಮರಣೆಯೊಂದಿಗೆ ಆರಂಭವಾಗುವುದು. ಯಾವ ರೀತಿಯಾಗಿ ಜನಪದ ಮನಸ್ಸುಗಳು ಏನೇ ಕಾರ್ಯ ಮಾಡಿದರೂ ಭಗವಂತನ ನಾಮಸ್ಮರಣೆಯನ್ನು ಮಾಡಿ ಆರಂಭಿಸುತ್ತಿದ್ದರು. ಅಲ್ಲದೇ ಮತ್ತೊಂದು ಮುಖದಲ್ಲಿ ಇದು ಭಾರತೀಯ ಸಂಸ್ಕೃತಿಯನ್ನು, ಧಾರ್ಮಿಕ ಶ್ರದ್ಧೆಯನ್ನು ಎತ್ತಿ ತೋರಿಸುವ ಕೆಲಸವನ್ನು ಮಾಡುತ್ತದೆ. ಸಿನಿಮಾ ಗೀತೆಗಳಲ್ಲಿ ಮೂಲ ಜನಪದದ ಮೊದಲಿನ ಈ ಪದ್ಯ ಭಾಗವನ್ನು ಕೈ ಬಿಟ್ಟು, ಎರಡನೆಯ ಪದ್ಯ ಭಾಗದಿಂದ ಆರಂಭಿಸಲಾಗಿದೆ.

ಆರೇಲೆ ಮಾವಿನ ಬೇರಾಗಿ ಇರುವೋಳೆ
ವಾಲ್ಗದ ಸದ್ದಿಗೆ ಒದಗೋಳೆ
ವಾಲ್ಗದ ಸದ್ದಿಗೆ ಒದಗೋಳೆ ಸರಸತಿಯೇ
ನಮ್ ನಾಲಿಗೆ ತೊಡರ ಬಿಡಿಸವ್ವಾ ನಿಂಬಿಯ[೬]...

ಮೂಲ ಗೀತೆಯನ್ನು ಆಲಿಸಿದಾಗ ರಮ್ಯತೆಯೇನು ಕಂಡು ಬರುವುದಿಲ್ಲ ಬದಲಾಗಿ ಎಲ್ಲೋ ಒಂದು, ಏನೋ ಒಂದು ರೀತಿಯ ಭಕ್ತಿರಸದ ಭಾವ ಭವಿಸುತ್ತದೆ. ಆದರೆ ಚಲನಚಿತ್ರಗೀತೆಯಲ್ಲಿ ಸಂಪೂರ್ಣವಾಗಿ ರಮ್ಯತೆಯನ್ನು ತೋರ್ಪಡಿಸಲು ಬಳಕೆಯಾಗಿದೆ. ಉಭಯ ಗೀತೆಗಳನ್ನು ಹಾಡಿದಾಗ ಮೂಲ ಭಾವಗಳು ಬದಲಾದಂತೆ ಕಂಡುಬರುತ್ತದೆ. ಈ ಪದ್ಯದ ನಂತರದಲ್ಲಿ,

ಎಂಟೆಲಿ ಮಾವಿನ ದಂಟಾಗಿ ಇರುವೋಳೆ
ಗಂಟೆ ಸದ್ದಿಗೆ ಒದಗೋಳೆ
ಗಂಟೆ ಸದ್ದಿಗೆ ಒದಗೊಳೆ ಸರಸತಿಯೇ
ನಮ್ ಗಂಟಲ ತೊಡರ ಬಿಡಿಸವ್ವಾ ನಿಂಬಿಯ[೭]...

ಎಂಬ ಎರಡನೆಯ ಪದ್ಯದಲ್ಲಿ ರಮ್ಯತೆಯ ಭಾವವನ್ನು ಹೊಮ್ಮಿಸಲಾಗಿದೆ. ಕೊನೆಯ ಪದ್ಯವನ್ನು ಚಲನಚಿತ್ರ ಗೀತೆಯಲ್ಲಿ ಕೈಬಿಡಲಾಗಿದೆ. ಅಂದರೆ ಮೂಲ ಜನಪದ ಗೀತೆಯಲ್ಲಿ ನಾಲ್ಕು ನುಡಿಗಳಿವೆ. ಸಿನಿಮಾ ಗೀತೆಯಲ್ಲಿ ಮೊದಲನೆಯ ಮತ್ತು ಕೊನೆಯ ನುಡಿಗಳನ್ನು ವಿಭಜನೆ ಮಾಡಿ ಮಧ್ಯದ ಎರಡು ನುಡಿಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ.

ಈ ಗೀತೆಯಲ್ಲಿ ವಿಶೇಷವಾಗಿ ಗಮನಿಸಬೇಕಾಗಿರುವ ಸಂಗತಿಯೆಂದರೆ ಮೂಲ ಜನಪದ ಗೀತೆಯಂತ ಪದಗಳು ಬಿ.ಕೆ.ಸುಮಿತ್ರಾ, ಎಂ.ಎಲ್.ಸುಧಾಕರ, ಗೋಪಿ ಮತ್ತು ಜಯರಾಮಚಂದ್ರ ಮುಂತಾದ ಗಾಯಕರಿಂದ ನವಮೌಖಿಕ ಸ್ವರೂಪ ಪಡೆದುಕೊಂಡಿದೆ. ಅದು ಮುಂದುವರೆದು, ರೂಪ ಬದಲಿಸಿಕೊಂಡು ವಿಜಯ ರಾಘವೇಂದ್ರರಂತ ನಾಯಕ ನಟರ ಚಲನಚಿತ್ರವನ್ನು ಸೇರಿ ತನ್ನ ಮೂಲ ಭಾವ, ರಾಗ, ಧ್ಯೇಯಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಯನ್ನು ತಂದುಕೊಂಡಿದೆ. ಕೊನೆಯ ಪದ್ಯವನ್ನು ಇಲ್ಲಿ ನೋಡಬಹುದು.

ಕಲ್ಲವ್ವ ಮಾತಾಯಿ ಮೆಲ್ಲವ್ವ ರಾಗಿಯ
ಜಲ್ಲಜಲ್ಲನೆ ಉದುರವ್ವ ನಿಂಬಿಯ
ಜಲ್ಲನೆ ಜಲ್ಲನೆ ಉದುರವ್ವ ನಾ ನಿನಗೆ
ಬೆಲ್ಲದಾರತಿಯ ಬೆಳಗೇನು ನಿಂಬಿಯ[೮]...

ಇಂದು ಇದೇ ಗೀತೆ ಸಾಂಸ್ಕೃತಿಕ ಕಾರ್ಯಕ್ರಮ, ಕೋಲಾಟ, ಮಕ್ಕಳ ಮನರಂಜನೆ ಮುಂತಾದ ಸಂದರ್ಭಗಳಲ್ಲಿ ಬಳಕೆಗೊಳ್ಳುತ್ತ, ನವಮೌಖಿಕತೆಯ ಅನೇಕ ಮಗ್ಗಲುಗಳಾಗಿ ಪ್ರಸ್ತುತ ಕಾಲದಲ್ಲಿ ಬೆಳೆಯುತ್ತಲಿದೆ.

ನಾವು ಇಂದು ಈ ಸಮಾಜವನ್ನು ಅವಲೋಕಿಸಿದಾಗ, ಉತ್ತರ ಕರ್ನಾಟಕವಾಗಲಿ, ಕರ್ನಾಟಕವಾಗಲಿ ಅಥವಾ ಭಾರತವೇ ಆಗಲಿ ಸಂಪೂರ್ಣ ಆಧುನಿಕರಣಗೊಂಡಿದೆ ಎಂದು ಹೇಳಲಾಗದು. ಪ್ರಸ್ತುತ ಸ್ಥಿತಿ ಹಳೆಬೇರು ಹೊಸ ಚಿಗುರಿನಂತಿದೆ. ಹಳೆಯ ಮತ್ತು ಹೊಸದರ ಸಂಪರ್ಕದಿಂದ ಪ್ರಾಚೀನ ಮತ್ತು ಆಧುನಿಕತೆಯ ಸಮರೂಪದ ಮಿಶ್ರಣವಾಗಿದೆ. ಉತ್ತರ ಕರ್ನಾಟಕದ ಯಾವುದೇ ದಿಕ್ಕಿಗೆ ಬಹಳೇನಲ್ಲ ಕೇವಲ್ಯೆವತ್ತು ಅರವತ್ತು ಕಿ.ಮಿ.

ಪ್ರಮಾಣದಲ್ಲಿರುವಾಗ ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ ಸಾಕು ಹಳೆಯ ಕಾಲದ, ಹಳ್ಳಿಗಳ ಆಧುನಿಕ ನಗರಗಳ ಅಪರೂಪದ ಸಂಗಮ ಅನುಭವಕ್ಕೆ ಬರದೇ ಇರದು. ಪ್ರಯಾಣದ ಸಮಯದಲ್ಲಿ ಕುಳಿತು ಸುಮ್ಮನೆ ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ ಸಾಕು ಹಳ್ಳಿಯ ಬದುಕಿನ ಜೀವನ ಕಾಣಿಸುತ್ತದೆ. ದಾರಿಯುದ್ದಕ್ಕೂ ಕಾಣಸಿಗುವ ಹಳ್ಳಿಗಳು, ರೈತರ ಕಣಗಳು, ದನಗಳಿಗಾಗಿ ಒಟ್ಟಿದ ಹುಲ್ಲಿನ ಬಣವೆಗಳು, ಜೋಳದ ಹೊಲಗಳು, ಅಲ್ಲಿ ಕೆಲಸ ಮಾಡುವ ಬಡ ರೈತರು, ಎಣ್ಣೆ ಕಾಣದ ಅವರ ತಲೆ ಕೂದಲುಗಳು, ಹಂಚಿನ ಮನೆಗಳು, ಮನೆಯ ಮುಂದೆ ಎತ್ತು ಚಕ್ಕಡಿಗಳು, ಡಾಂಬರನ್ನು ಕಾಣದ ಮಣ್ಣಲ್ಲಿ ಮುಣುಗಿದ ರಸ್ತೆಗಳು, ಇತ್ತಿಂದತ್ತ ಓಡಾಡುತ್ತಿರುವ ಕೋಳಿಗಳು, ಪ್ರಾಣಿಗಳಿಗಾಗಿ ಸೊಪ್ಪೆಯ ಹೊರೆಯನ್ನು ಹೊತ್ತು ಮನೆಕಡೆಗೆ ಸಾಗಿರುವ ರೈತರು ಮುಂತಾದವುಗಳು ಹಳೆಯತನವನ್ನು ತೋರಿಸುತ್ತವೆ. ಹಳೆಯದರ ಕುರುಹು ಹಾಗೆಯೇ ಉಳಿದಿವೆ.

ಇದು ಒಂದೆಡೆಯಾದರೆ ಬಸ್ಸಿನಲ್ಲಿ ಕುಳಿತು ಸಹ ಪ್ರಯಾಣಿಕರತ್ತ ಗಮನಿಸಿದರೆ ಆಧುನಿಕತೆಯ ಚಿಹ್ನೆಗಳು ಕಾಣಸಿಗುತ್ತವೆ. ಅರೆಬರೆ ಬಟ್ಟೆಗಳು, ಆಂಡ್ರಾಯ್ಡ್ ಫೋನ್ (Android phone) ಹಿಡಿದುಕೊಂಡು, ವಾಟ್ಸಾಪ್‌ಗೆ (WhatsApp) ಮುಳುಗಿರುವ ಯುವಕ, ಮೇಲ್ (Mail) ಮಾಡಿ ಎಂದು ಮೊಬೈಲಲ್ಲಿ ಮಾತನಾಡುತ್ತಿರುವ ಮಧ್ಯ ವಯಸ್ಕ, ಟಾರ ರೋಡಗಳು, ಮುಗಿಲೆತ್ತರಕ್ಕೆ ಬೆಳೆದು ನಿಂತ ಬಹು ಮಹಡಿ ಕಟ್ಟಡಗಳು, ಟ್ಯಾಬ್‌ನಲ್ಲಿ (Tab) ಟೈಪ್ (Type) ಮಾಡುತ್ತ ಕುಳಿತ ಮತ್ತೋರ್ವ ಹೀಗೆ ಇವೆಲ್ಲವುಗಳು ಆಧುನಿಕತೆಯ ಗುರುತುಗಳಂತೆ ಕಾಣುತ್ತವೆ. ಇದರರ್ಥ ಪ್ರಸ್ತುತ ಸಮಾಜವು ಹಳೆಬೇರು ಹೊಸ ಚಿಗುರಿನ ಪ್ರತೀಕವಾಗಿದೆ. ಇದು ಸಹಜವಾಗಿಯೇ ಪ್ರಸ್ತುತ ಸಾಹಿತ್ಯ, ಸಂಗೀತದ ಮೇಲೆ ಪ್ರಭಾವ ಬೀರಿದೆ. ಅದೇ ನವಮೌಖಿಕ ರೂಪದಲ್ಲಿ ಪ್ರತಿಬಿಂಬಿತವಾಗಿದೆ. ಹಳೆಯ ಮತ್ತು ಹೊಸ ಸಂಸ್ಕೃತಿಗಳ ಸಮ್ಮಿಲನವಾಗಿ ಪ್ರಸ್ತುತ ಸಮಾಜದ ನಿರ್ಮಾಣವಾಗದೆ, ಅದರ ನೇರ ಪ್ರಭಾವವೇ ನವಮೌಖಿಕ ಸಾಹಿತ್ಯ ನಿರ್ಮಾಣಕ್ಕೆ ಪ್ರೇರಣೆಯಾಗಿದೆ ಎಂದು ವಿವರವಾಗಿ ಸಾದರಪಡಿಸುವುದೇ ಈ ಸಂಶೋಧನೆಯ ಉದ್ದೇಶಗಳಲ್ಲೊಂದಾಗಿದೆ. ಅದು ಹೇಗೆಂದರೆ ಮೌಖಿಕತೆಯು ಹಳೆಯ ಹಿಂದಿನ ವಿಚಾರಗಳನ್ನು ಬಿಂಬಿಸಿದರೆ ಅವುಗಳನ್ನೇ ಹೋಲುವಂಥ ಸಾಹಿತ್ಯವನ್ನು ಸ್ವಲ್ಪ ಭಿನ್ನವಾಗಿಯೇ ರಚಿಸಿ, ಆಧುನಿಕ ಸಂಪರ್ಕ ಮಾಧ್ಯಮಗಳಾದ ಟಿ.ವಿ, ರೇಡಿಯೋ, ಮೊಬೈಲ್, ಇಂಟರ್‌ನೆಟ್ ಮುಂತಾದವುಗಳ ಮೂಲಕ ಬಿಂಬಿಸಲಾಗುವುದು. ಇವುಗಳೆಲ್ಲ ಆಧುನಿಕ ಕಾಲದ ಪರಿಕರಗಳಾಗಿವೆ. ಅಂದರೆ ಮೌಖಿಕ ಸಂಸ್ಕೃತಿಯು ಆಧುನಿಕತೆಯನ್ನು ಪಡೆದು ನವಮೌಖಿಕವಾಗಿ ಹೊರಹೊಮ್ಮಿದೆ ಎಂಬುದು ಈ ಸಂಶೋಧನೆಯಿಂದ ತೋರಿಸುವ ಸ್ಪಷ್ಟ ವಿಚಾರವಾಗಿದೆ. ಹಳೆಯದು ಮತ್ತು ಹೊಸದು ಸೇರಿಕೊಂಡು ಮತ್ತೊಂದು ರೂಪವಾಗಿ ಮೊದಲಿನ ಎರಡನ್ನು ಮರೆಮಾಚಿ ಬಿಡುತ್ತದೆ. ಮೌಖಿಕ ಜೊತೆ ಆಧುನಿಕ ಮಾಧ್ಯಮಗಳು ಸೇರಿಕೊಂಡು ನವಮೌಖಿಕ ಎಂಬ ಅರ್ಥವನ್ನು ಪಡೆಯುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನವಮೌಖಿಕತೆ ಮೊದಲೆರಡು ಅಂಶಗಳನ್ನು ಮರೆತರೆ ಅದರ ಅಸ್ತಿತ್ವವೇ ಇಲ್ಲದಾಗುವುದು. ಹೀಗೆ ಮೌಖಿಕತೆ ಮತ್ತು ಆಧುನಿಕ ಮಾಧ್ಯಮಗಳು ಮಿಶ್ರಣಗೊಂಡು ನವಮೌಖಿಕ ನಿರ್ಮಾಣವಾಗಿದೆ. ಆದರೆ ಮೌಖಿಕ ಮತ್ತು ಆಧುನಿಕ ಮಾಧ್ಯಮೋಪಕರಣಗಳು ಸ್ವಲ್ಪ ಗೌಣವಾಗಿ ಉಳಿಯುತ್ತವೆ. ನವಮೌಖಿಕ ಎದ್ದು ತೋರುತ್ತದೆ. ನವಮೌಖಿಕ ನಿರ್ಮಾಣದ ನಡೆಯನ್ನು ತೋರಿಸುವುದು ಈ ಅಧ್ಯಯನದ ಆಶಯವಾಗಿದೆ.

**ಉದಾಹರಣೆ:** **ಮುಂಜಾನೆದ್ದು ಕುಂಬಾರಣ್ಣ....**

ಮುಂಜಾನೆದ್ದು ಕುಂಬಾರಣ್ಣ ಹಾಲು ಬಾನುಂಡಾನ
ಹಾರ್ಯಾರಿ ಮಣ್ಣ ತುಳಿದಾನ
ಹಾರಿ ಹಾರ್ಯಾರಿ ಮಣ್ಣ ತುಳಿಯುತ್ತ ಮಾಡ್ಯಾನ
ನಾರ್ಯಾರು ಹೊರುವಂತ ಐರಾಣಿ॥
ಹೊತಾರೆದ್ದು ಕುಂಬಾರಣ್ಣ ತುಪ್ಪ ಬಾನುಂಡಾನ
ಗಟ್ಟೀಸಿ ಮಣ್ಣಾ ತುಳಿದಾನ
ಗಟ್ಟೀಸಿ ಮಣ್ಣಾ ತುಳಿಯೂತ್ತ ಮಾಡ್ಯಾನ
ಮಿತ್ರೇರು ಹೊರುವಂತ ಐರಾಣಿ॥
ಅಕ್ಕಿಹಿಟ್ಟು ನಾವು ತುಂಬ್ಕೊಂಡು ತಂದೀವಿ
ಗಿಂಡೀಲಿ ತಂದೀವ್ನಿ ತಿಳಿದುಪ್ಪ
ಗಿಂಡೀಲಿ ತಂದೀವ್ನಿ ತಿಳಿದುಪ್ಪ ಕುಂಬಾರಣ್ಣ
ತುಂದೀಡು ನಮ್ಮ ಐರಾಣಿ॥
ಕುಂಬಾರಣ್ಣನ ಮಡದಿ ಕಡದಾಗ ಕೈಯಿಟ್ಟ
ಕೊಡದಾ ಮ್ಯಾಲೇನ ಬರೆದಾಳ
ಕೊಡದಾ ಮ್ಯಾಲೇನ ಬರದಾಳ ಕಲ್ಯಾಣದ
ಶರಣ ಬಸವಣ್ಣನ ನಿಲಿಸ್ಯಾಳ॥...

ಈ ಗೀತೆಯು ಕುಂಬಾರನೊಬ್ಬನ ಜೀವನ ಕ್ರಮವನ್ನು ಕಣ್ಣಿಗೆ ಕಟ್ಟುವಂತೆ ವರ್ಣನೆಯನ್ನು ಮಾಡಿದೆ. ಅವನು ಮುಂಜಾನೆದ್ದು ಯಾವ ಯಾವ ಆಹಾರ ಪದಾರ್ಥಗಳ ಸೇವನೆಯನ್ನು ಮಾಡುತ್ತಾನೆ. ಅವನ ಮಡದಿಯು ಅವನಿಗೆ ಅನುಕೂಲಣಿಯಾಗಿ ಅವನಿಗೆ ಹೇಗೆ ಸಹಕರಿಸುತ್ತಾಳೆ. ಅಷ್ಟೇ ಅಲ್ಲ ಅವರ ಕೆಲಸ ಕೇವಲ ಕೆಲಸವಲ್ಲ ಆಸೆಯಿಂದ ಮಾಡಿದರೆ ಅದು ಕಾಯ ನಿಷ್ಕಾಮ, ಭಕ್ತಿಯಿಂದ ಮಾಡಿದರೆ ಅದು ಕಾಯಕವಾಗುತ್ತದೆ. ಅದು ಇಲ್ಲಿ ಮೂಡಿಬಂದಿದೆ. 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪದು ಶಿವಂಗೆ' ಎಂಬ ಶರಣರ ವಾಣಿಯಂತೆ ಕುಂಬಾರಣ್ಣ ಮತ್ತು ಆತನ ಮಡದಿ ಇದ್ದರು ಎಂಬುದಕ್ಕೆ ಕೊನೆಗೆ ಬಳಸಿದ ಸಾಲು ಕಲ್ಯಾಣದ ಶರಣ ಬಸವಣ್ಣನ ನಿಲಿಸ್ಯಾಳ. ಹೂಗಳೆಲ್ಲ ಒಂದೇ ಪ್ರಭೇದಕ್ಕೆ

ಸೇರಿದರೂ ಕೂಡ ಅವುಗಳ ಪರಿಮಳಗಳು ಬೇರೆ ಬೇರೆಯಾಗಿರುವಂತೆ ಈ ಗೀತೆಯು ಬೇರೆ ಬೇರೆ ಕಲಾವಿದರ ಕೈಯಲ್ಲಿ ಸಿಕ್ಕು ಬೇರೆ ಬೇರೆ ರಾಗಗಳಲ್ಲಿ, ತಾಳಗಳಲ್ಲಿ, ಭಾಗಗಳಲ್ಲಿ ಬಳಕೆಯಾಗಿದೆ. ಚಂದ್ರಿಕಾ ಭಟ್ ಅವರು ಹಾಡಿರುವ 'ಚಂದ್ರಿಕಾ' ಎಂಬ ಆಡಿಯೋ ಧ್ವನಿಸುರುಳಿಯಲ್ಲಿ ಮೂಡಿಬಂದ ಗೀತೆಯು ಭಾವಗೀತೆಯ ಅನುಭವವನ್ನು ನೀಡುತ್ತದೆ. ಇದೇ ಗೀತೆಯನ್ನು ಎಸ್.ವಿ.ಭಾಲ್ಕಿ ಹಾಗೂ ಈಶ್ವರಿ ಮೆಲೋಡಿಸ್ ಕೋಲಾರ ಅವರ ಕನ್ನಡ ಸುಮಧುರ ಕರೋಕೆ ಹಾಗೂ ಸಾಹಿತ್ಯದಲ್ಲಿ ಕೇಳಿದಾಗ ಬೇರೊಂದು ಅನುಭವವೇ ಆಗುವುದು. ಹೆಜ್ಜೆ ಹಾಕುವದಕ್ಕೆ, ಕುಣಿಯುವದಕ್ಕೆ, ನೃತ್ಯಕ್ಕಾಗಿಯೇ ಅದನ್ನು ಸಂಯೋಜನೆ ಮಾಡಿದಂತಿದೆ. ಏಕೆಂದರೆ ಅಲ್ಲಿರುವ ರಿದಮ್‌ಗಳನ್ನು ಆ ರೀತಿ ಸಂಯೋಜಿಸಲಾಗಿದೆ. ಆದರೆ ಈ ರೀತಿಯ ವೇಗದ ರಿದಮ್ ಚಂದ್ರಿಕಾ ಭಟ್‌ರ ಗೀತೆಯಲ್ಲಿ ಕಾಣುವುದಿಲ್ಲ. ಆದರೆ ಶ್ರೀಶೈಲ ಹಾಗೂ ವಿ.ಕೆ.ಜಮಾದಾರರ ಧ್ವನಿಯಲ್ಲಿ ಹೊಸತೊಂದನ್ನು ಕಾಣಬಹುದಾಗಿದೆ. ಜಮಾದಾರರು ವಿಶೇಷವಾಗಿ ರಸಮಂಜರಿ ಕಾರ್ಯಕ್ರಮಗಳನ್ನು ನೀಡುವದಕ್ಕಾಗಿಯೇ ಈ ಗೀತೆಯನ್ನು ಮಾರ್ಪಡಿಸಿಕೊಂಡಂತಿದೆ. ಶ್ರೀಗಂಧ ಜಾನಪದ ಆಡಿಯೋ ಫೋಕ್ ಸಾಂಗ್‌ನಲ್ಲಿ (Audio folk song), ರಿಮಿಕ್ಸ್ ಡಿಜೆ (Remix DJ). ಇನ್ನೂ ಕಾರಂಜಿ ಫೋಕ್ಸ್ ಯುಎಸ್‌ಎ (Kaaranji Folks USA), ಕುಂಬಾರಣ್ಣ ಡಿಜಿಟಲ್ (Kumbarannana Digital), ಮನೋಮೂರ್ತಿ, ನ್ಯೂ ಹಿಪ್ ಹೊಪ್ ಕನ್ನಡ ಸಾಂಗ್-೨೦೧೭ದಲ್ಲಿ (Mano Murthy, New Hip Hop Kannada Song-2017) ಗೀತೆಯೂ ಸಂಪೂರ್ಣವಾಗಿ ಬದಲಾಗಿದೆ. ಪಾಶ್ಚಾತ್ಯ ಸಂಗೀತವನ್ನು ಕೇಳಿದಂತಾಗುವುದು ಕೆಲವೊಮ್ಮೆ ಅದೇ ಧಾಟಿ ಬರುವುದು. ಮೂಲ ಗೀತೆಯನ್ನು ಹಾಡುವಾಗ ಮುಂಜಾನೆದ್ದು ಕುಂಬಾರಣ್ಣ ಹಾಲು ಬಾನುಂಡಾನ ಎನ್ನುವಾಗ ಕುಂಬಾರ ಮತ್ತು ಹಾಲು, ಬಾನದ ಚಿತ್ರವನ್ನು ತೋರಿಸಿದರೆ ಈ ರಿಮಿಕ್ಸ್‌ನಲ್ಲಿ (Remix) ಹಾಲಿನ ಬದಲಾಗಿ, ಕುಂಬಾರನ ಬದಲಾಗಿ ಒಬ್ಬ ಮಜಬೂತಾದ ಆಧುನೀಕರಣಗೊಂಡ ವ್ಯಕ್ತಿ ಮುಂಜಾನೆದ್ದು ಫ್ರಿಜ್‌ನಲ್ಲಿರುವ ಆರ್ಗ್ಯಾನಿಕ್ ಮಿಲ್ಕ್ ಬಾಟಲ್‌ನಲ್ಲಿ (Organic Milk Bottle) ತೆಗೆದುಕೊಂಡು ಕುಡಿಯುವುದನ್ನು ಮತ್ತು ಕೊಕೀಸ್ ಜೊತೆ ಸೇರಿಸಿ ತಿನ್ನುವುದನ್ನು ತೋರಿಸುತ್ತಾನೆ. ಐರಾಣಿಯ ಬದಲಾಗಿ ಮಾಡರ್ನ್‌ಆಯ್ಸ್ಡ್ ಪಾಟ್ (Modernized Pot) ಆಧುನಿಕ ಮಡಿಕೆಗಳನ್ನು ಸಾಂಪ್ರದಾಯಿಕ ನಾರಿಯರ ಬದಲಾಗಿ ಬದಲಾದ ನಾರಿಯರನ್ನು ವಿಡಿಯೋದಲ್ಲಿ ತೋರಿಸಲಾಗಿದೆ. ಈ ಗೀತೆಯನ್ನು ಮನೋಮೂರ್ತಿಯವರ ಸಂಗೀತದಲ್ಲಿ ರಾಮಪ್ರಸಾದ್ ಮತ್ತು ವಾಣಿ ಸತೀಶ ಅವರು ಹಾಡಿದ್ದಾರೆ. ಇಲ್ಲಿ ಹಳೆಯ ಮಡಿಕೆ, ಹಳೆಯ ಮನೆಗಳು, ಹಳೆಯ ಸಂಸ್ಕೃತಿಗಳ ಬದಲಾಗಿ, ಆಧುನಿಕ ರಸ್ತೆಗಳು, ಕಾರುಗಳು, ಕಟ್ಟಡಗಳು, ಪಾತ್ರೆಗಳನ್ನು ತೋರಿಸಲಾಗಿದೆ. ನವಮೌಖಿಕತೆಗೆ ಈ ಗೀತೆಯು ಒಳಪಟ್ಟು ಕಲ್ಪನೆಗೂ ಮೀರಿ ತೋರಿಸಲಾಗಿದೆ. ಮುಂದೊಂದು ದಿನ ಹಿಂದಿನ ಕುಂಬಾರ ಹೇಗೆ ಬದಲಾಗಿ ತೋರುತ್ತಾನೆ ಎಂಬುದನ್ನು ಕಲ್ಪನೆಯಾಗಿ ಚಿತ್ರಿಸಲಾಗಿದೆ. 'ನವಮೌಖಿಕದಿಂದ ಮುಂಜಾನೆದ್ದು ಕುಂಬಾರಣ್ಣ' ಗೀತೆಯು ಬದಲಾಗುತ್ತಾ ಬಂದಿದೆ. ಈ ರೀತಿಯಾಗಿರುವ ಹೊಸ ಭಾವಗಳು ಬದಲಾಗಿ ನವಮೌಖಿಕತೆ

ಸ್ವರೂಪದಲ್ಲಿ ಮೂಡಿಬಂದಿದೆ. ಹೀಗೆ ನವಮೌಖಿಕತೆ ಇಷ್ಟೊಂದು ಕವಲುಗಳು ಕುಡಿಯೊಡೆಯುವುದಕ್ಕೆ ದಾರಿಯಾಯಿತು. ಅಲ್ಲದೇ ಇನ್ನೂ ಎಷ್ಟೋ ಪಟ್ಟು ನವಮೌಖಿಕತೆಗೆ ಮುಂದುವರೆಯಲು ಅವಕಾಶಗಳು ಬಂದರೂ ಬರಬಹುದು. ಆದರೆ ಅದು ಕಾಲಕ್ರಮೇಣ ಕಾಣಸಿಗುವ ಬದಲಾವಣೆಯಾಗಿದೆ.

ನವಮೌಖಿಕತೆದಲ್ಲಿ ಬಳಕೆಯಾಗಿರುವ ಜನಪದ ಗೀತೆಗಳು ಕೇವಲ ಪ್ರೀತಿ, ಪ್ರೇಮ, ವಿರಹ ಮುಂತಾದವುಗಳಿಗೆ ಮಾತ್ರ ಸೀಮಿತವಾಗಿಲ್ಲ. ಅವುಗಳ ವ್ಯವಸ್ಥೆಯು ನೈತಿಕತೆ, ಮಾತೃತ್ವ ಮುಂತಾದ ವಿಷಯಗಳಲ್ಲಿ ಮಾರ್ಮಿಕವಾದ ವಿಷಯಗಳನ್ನು ಗಣನೀಯವಾಗಿ ಒಳಗೊಂಡಿವೆ. ಅಲ್ಲದೇ ಮಹತ್ವಕ್ಕೆ ಸಂಬಂಧಿಸಿದ ಅಭೂತಪೂರ್ವ ಅನೇಕ ಗೀತೆಗಳು ಇವೆ.

**ಅಧ್ಯಯನದ ವ್ಯಾಪ್ತಿ**

ಪ್ರಸ್ತುತ ಅಧ್ಯಯನ ಉತ್ತರ ಕರ್ನಾಟಕದ ಪ್ರಾದೇಶಿಕ ವ್ಯಾಪ್ತಿಯನ್ನು ಹೊಂದಿದ್ದು, ಇಲ್ಲಿ ಬರುವ ಹದಿಮೂರು ಜಿಲ್ಲೆಗಳ ಬದಲಾಗಿ ಬೆಳಗಾವಿ, ವಿಜಯಪುರ, ಬಾಗಲಕೋಟ, ಧಾರವಾಡ, ಹಾವೇರಿ ಹಾಗೂ ಗದಗ, ಈ ಆರು ಜಿಲ್ಲೆಗಳು ಅಧ್ಯಯನದ ಪ್ರಾದೇಶಿಕ ವ್ಯಾಪ್ತಿಗೆ ಒಳಪಟ್ಟಿವೆ. ಉತ್ತರ ಕರ್ನಾಟಕದ ಆಚೆಗೆ ಜನಪದ ಗೀತೆಗಳನ್ನು ಕೇಳುಗ ವರ್ಗವನ್ನು ಸಹ ಈ ಅಧ್ಯಯನದಲ್ಲಿ ಗಮನಿಸಲಾಗಿದೆ.

ಈ ಪ್ರದೇಶದಲ್ಲಿ ರಚನೆಗೊಂಡಿರುವ ಜನಪದ ಹಾಡುಗಳು, ಹಾಡುವ ವರ್ಗ, ಕೇಳುವ ವರ್ಗ ಅಲ್ಲದೇ ಇಂದು ಬಿತ್ತರವಾಗುತ್ತಿರುವ ಧ್ವನಿಮುದ್ರಿತ ಕ್ಯಾಸೆಟ್, ಸಿಡಿಗಳು ಹಾಗೂ ಯೂಟ್ಯೂಬ್‌ಗಳಲ್ಲಿ ಬಳಕೆಗೊಳ್ಳುತ್ತಿರುವ ಜನಪದ ಹಾಡುಗಳು ಮತ್ತು ಸಾಹಿತ್ಯ ಅಧ್ಯಯನದ ವ್ಯಾಪ್ತಿಯಾಗಿವೆ. ಅಧ್ಯಯನಕ್ಕೆ ಸಂಬಂಧಿಸಿದ ಇತರೆ ವಿಷಯಗಳನ್ನು ಸಹ ಅಧ್ಯಯನದ ವ್ಯಾಪ್ತಿಗೆ ಅವಶ್ಯಕ ಎನಿಸಿದ ಸಂದರ್ಭಗಳಲ್ಲಿ ಬಳಸಿಕೊಳ್ಳಲಾಗಿದ್ದು, ಇದು ಅಧ್ಯಯನ ವಿಷಯದ ವ್ಯಾಪ್ತಿಯಾಗಿದೆ.

ಅಧ್ಯಯನಕ್ಕೆ ಆಯ್ದುಕೊಂಡ ಜಿಲ್ಲೆಗಳಲ್ಲಿ ಬರುವ ಜನಪದ ಕವಿ ಮತ್ತು ಗಾಯಕರು ಎಂದು ಕರೆಸಿಕೊಳ್ಳುವ ಗುರುರಾಜ ಹೊಸಕೋಟಿ, ಗುರುರಾಜ ಕೆಂಧೂಳಿ, ಶಬ್ಬೀರ ಡಾಂಗೆ, ಬಸವಲಿಂಗಯ್ಯ ಹಿರೇಮಠ, ಬಸವರಾಜ ನರೇಂದ್ರ, ನಿಜಾಂ ಅಲ್ಲಾಖಾನ್ ಮುಂತಾದವರ ಸಾಹಿತ್ಯ ಮತ್ತು ಹಾಡುಗಳನ್ನು ಅಧ್ಯಯನದಲ್ಲಿ ಉಲ್ಲೇಖಿಸಲಾಗಿದೆ. ಇವರನ್ನು ಭೇಟಿಮಾಡಿ ವಿಷಯ ಸಂಗ್ರಹಿಸಿರುವುದು ಅಧ್ಯಯನದ ವ್ಯಾಪ್ತಿಯಾಗಿದೆ. ಈ ಅಧ್ಯಯನಕ್ಕೆ ಮುಖ್ಯ ಕ್ಷೇತ್ರಕಾರ್ಯ ಇದರ ಮೂಲಕ ಅಧ್ಯಯನದ ಪೂರಕ ಮಾಹಿತಿ ಸಂಗ್ರಹಣೆ ಜೊತೆಗೆ ಪೂರಕ ಆಕರಗಳಾದ ಕ್ಯಾಸೆಟ್, ಸಿಡಿ, ಯೂಟ್ಯೂಬ್, ಅಂತರ್ಜಾಲಗಳ ಮೂಲಕ ವಿಷಯ ಸಂಗ್ರಹಿಸಲಾಗಿದೆ. ಹೀಗೆ ಪ್ರಸ್ತುತ ಅಧ್ಯಯನಕ್ಕೆ ನಾನು ಹಾಕಿಕೊಂಡ ಚೌಕಟ್ಟನ್ನು ವ್ಯಾಪ್ತಿ ಎನ್ನುವುದರ ಹಿನ್ನೆಲೆಯಲ್ಲಿ ಗುರುತಿಸಲಾಗಿದೆ.

## ೧.೩ ಪರಿಕಲ್ಪನಾತ್ಮಕ ಚರ್ಚೆ

ಇಂದು ಸಮೂಹ ಮಾಧ್ಯಮಗಳ ಮೂಲಕ ಬಿತ್ತರಗೊಳ್ಳುತ್ತಿರುವ ಮೌಖಿಕವನ್ನು ನಾವು ನವಮೌಖಿಕ ಎಂದು ಗುರುತಿಸಬಹುದು. ರೇಡಿಯೋ, ದೂರದರ್ಶನ, ಚಲನಚಿತ್ರ, ಯೂಟ್ಯೂಬ್, ಇಂಟರ್‌ನೆಟ್ ಮುಂತಾದವುಗಳ ಮೂಲಕ ಅಭಿವ್ಯಕ್ತಿಯಾಗುತ್ತಿರುವುದು ನವಮೌಖಿಕದ ವ್ಯಾಪ್ತಿಗೆ ಬರುತ್ತದೆ. ಇಂದು ಧ್ವನಿ ಮುದ್ರಿತ ಕ್ಯಾಸೆಟ್, ಸಿಡಿಗಳ ಮೂಲಕ ಪ್ರಸಾರವಾಗುತ್ತಿರುವುದು ಸಹ ನವಮೌಖಿಕ ಅನಿಸಿಕೊಳ್ಳುತ್ತದೆ. ಜನಪದ ಹಾಡುಗಳು, ಕಥೆ, ಲಾವಣಿಗಳು ಇತ್ಯಾದಿ ಪ್ರಕಾರಗಳು ಧ್ವನಿ ಮುದ್ರಣಗೊಂಡು ರೇಡಿಯೋದಲ್ಲಿ ಬಿತ್ತರಗೊಳ್ಳುವುದು, ದೃಶ್ಯ ಮತ್ತು ಶ್ರವಣ ಎರಡನ್ನು ಒಳಗೊಂಡು ದೂರದರ್ಶನದಲ್ಲಿ ಪ್ರಸಾರಗೊಳ್ಳುತ್ತಿವೆ. ಜೊತೆಗೆ ಜನಪದರ ಭಾಷೆ, ಸಂಸ್ಕೃತಿ, ಉಡುಗೆ ಎಲ್ಲ ರೀತಿಯ ಆಶಯಗಳನ್ನೊಳಗೊಂಡು ಚಲನಚಿತ್ರ ರೂಪ ಪಡೆಯುತ್ತಿವೆ. ಜನಪದರ ಮೌಖಿಕ ಸಾಹಿತ್ಯವನ್ನು ಕ್ಯಾಸೆಟ್, ಸಿಡಿಗಳ ಮೂಲಕ ಸಂಗ್ರಹಿಸಿ ಕೇಳುವುದು ಮುಂದಿನ ಹಂತ ಎಂಬಂತೆ ಅಂತರ್ಜಾಲದಲ್ಲಿ ಮೌಖಿಕ ಧ್ವನಿ ಮುದ್ರಣವನ್ನು ಅಳವಡಿಸುವುದು. ಇವುಗಳನ್ನು ನಾವು ಸಾಮಾನ್ಯವಾಗಿ ನವಮೌಖಿಕ ರೂಪಗಳೆಂದೆ ಗುರುತಿಸುತ್ತೇವೆ. ಇಂದು ಮೌಖಿಕವು ಕಾಲಾಂತರದಲ್ಲಿ ಹೊಸ ರೂಪಾಂತರ ಪಡೆದುಕೊಂಡಿರುವುದನ್ನು ಕಾಣುತ್ತೇವೆ.

ಕಾಲಮಾನದ ಬದಲಾವಣೆಯೊಂದಿಗೆ ಜನಪದವು ಕೂಡ ಬದಲಾವಣೆ ರೂಪ ಪಡೆದುಕೊಳ್ಳುತ್ತದೆ. ಆದರೆ ಕೆಲವೊಮ್ಮೆ ಬದಲಾವಣೆಯು ಅಸ್ಪಷ್ಟವಾಗಿರುತ್ತದೆ. ಮೌಖಿಕವನ್ನು ವ್ಯಾಖ್ಯಾನಿಸುವಾಗ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿರುವುದು ಎಂದು ಹೇಳುತ್ತೇವೆ. ಅದು ತಾಂತ್ರಿಕತೆ ರೂಪದಲ್ಲಿ ಏನಾದರು ಬಂದರೆ ಅದನ್ನು ನವಮೌಖಿಕ ರೂಪಗಳೆಂದೆ ನಾವು ಗುರುತಿಸಬಹುದು. ಇಂದು ಆಧುನಿಕ ಯಂತ್ರಗಳ ಮೂಲಕ ಮೌಖಿಕವನ್ನು ಸಂಗ್ರಹಿಸಿ ಮರುಪ್ರಸಾರ ಮಾಡುವ ವಿದ್ಯಮಾನವೇ ನವಮೌಖಿಕ ಎನಿಸಿಕೊಳ್ಳುತ್ತದೆ. ಇಲ್ಲಿ ಜನಪದ ಕಲಾವಿದರ ಗೈರು ಹಾಜರಿಯಲ್ಲಿ ಗೀತೆಗಳು ಪ್ರಸಾರಗೊಳ್ಳುತ್ತವೆ. ಉದಾಹರಣೆ: ರೇಡಿಯೋ, ಟಿ.ವಿ. ಕ್ಯಾಸೆಟ್, ಸಿಡಿ, ಯೂಟ್ಯೂಬ್ ಇತ್ಯಾದಿಗಳು.

ಆಧುನಿಕ ಸಂಗತಿಗಳು ಮೌಖಿಕ ಪರಂಪರೆಯ ಮೇಲೆ ಪ್ರಭಾವ ಬೀರಿವೆ. ಅವುಗಳು ಮೌಖಿಕತೆಯನ್ನು ಬದಲಾಯಿಸುತ್ತವೆ. ಉದಾಹರಣೆ: ಚಲನಚಿತ್ರಗಳಲ್ಲಿ ಬಳಕೆಯಾಗುತ್ತಿರುವ ಜನಪದ ಹಾಡುಗಳು. ಅಲ್ಲದೇ ಮೌಖಿಕವು ತಂತ್ರಜ್ಞಾನದ ಜೊತೆಗೆ ಬದಲಾವಣೆ ಆಗಿರುವುದು ಕೂಡ ನವಮೌಖಿಕ ವ್ಯಾಪ್ತಿಗೆ ಬರುತ್ತದೆ. ಉದಾಹರಣೆ: ಜನಪದ ಕಥೆಗಳು ಇಂದು ಕಾರ್ಟೂನ್ ಕಥೆಗಳಾಗಿ, ವಿಡಿಯೋ ಗೇಮ್‌ಗಳಾಗಿ ರೂಪ ಪಡೆದುಕೊಂಡಿವೆ.

ಆಧುನಿಕ ವಿದ್ಯಮಾನಗಳು ಎಲ್ಲಾ ಕಾಲಕ್ಕೂ ಮೌಖಿಕ ಸಾಹಿತ್ಯಕ್ಕೆ ಪ್ರೇರಣೆ ನೀಡುತ್ತವೆ. ಆ ಪ್ರೇರಣೆಯಿಂದ ಅದು ಈಗಿರುವ ಮೌಖಿಕ ಸಾಹಿತ್ಯ ಲಕ್ಷಣಗಳನ್ನು ಆಧರಿಸಿ ಒಂದಿಷ್ಟು ಹೊಸ ವಿದ್ಯಮಾನಗಳನ್ನು ಸೇರಿಸಿಕೊಳ್ಳುತ್ತಾ ಹೋಗುತ್ತದೆ. ಉದಾಹರಣೆ: 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು' ಎಂಬ ಈ ಗಾದೆ ಇಂದು

ಕಾಲಾಂತರದಲ್ಲಿ ರೂಪಾಂತರ ಪಡೆದು 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಕೈಗೊಂದು ಮೊಬೈಲು' ಎಂದಾಗಿ ಬಳಕೆಗೊಳ್ಳುತ್ತಿದೆ. ಹೀಗೆ ಪಾರಂಪರಿಕ ರಚನಾ ವಿನ್ಯಾಸಗಳಲ್ಲಿ ಆಧುನಿಕ ವಿದ್ಯಮಾನಗಳನ್ನು ಸೇರಿಸಿ ಅದನ್ನು ಪ್ರಸಾರ ಮಾಡುವುದೇ ನವಮೌಖಿಕತೆವಾಗಿದೆ.

ಜನಪದ ಗೀತೆಗಳಾದ ಭಜನಾ ಪದಗಳು, ಡೊಳ್ಳಿನ ಪದಗಳು, ಮೊಹರಂ ಪದಗಳು, ಗೀಗೀ ಪದಗಳು ಅಲ್ಲದೇ ಇತರೆ ವೈವಿಧ್ಯಮಯ ಜನಪದ ಗೀತೆಗಳು ಇಂದು ನೂರಾರು ಕ್ಯಾಸೆಟ್, ಸಿಡಿ ಹಾಗೂ ಯೂಟ್ಯೂಬ್‌ಗಳಂತಹ ಆಧುನಿಕ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುತ್ತಿರುವುದನ್ನು ಸ್ಥೂಲವಾಗಿ ನವಮೌಖಿಕ ಸಾಹಿತ್ಯ ಎಂದು ಗುರುತಿಸಬಹುದು. ಇದು ಪ್ರಸ್ತುತ ಅಧ್ಯಯನ ಈ ವ್ಯಾಖ್ಯಾನದ ವ್ಯಾಪ್ತಿಗೆ ಬರುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ವಿಶೇಷವಾಗಿ ಜನಪದ ಗೀತೆಗಳನ್ನು ತೆಗೆದುಕೊಂಡಿದ್ದು, ಇಲ್ಲಿ ಮೌಖಿಕ ಗೀತೆಗಳಲ್ಲಾದ ಬದಲಾವಣೆಯನ್ನು ಮತ್ತು ಆಧುನಿಕ ಯಂತ್ರೋದ್ಯಮ ಕ್ಯಾಸೆಟ್, ಸಿಡಿ, ಡಿವಿಡಿ, ಇಂಟರ್‌ನೆಟ್ ಇದನ್ನು ಬಳಸಿಕೊಂಡು ಜನರು ಹೇಗೆ ಸಂವಹನ ಮಾಡುತ್ತಿದ್ದಾರೆ ಎಂಬುವುದು ಅಧ್ಯಯನದ ವ್ಯಾಖ್ಯಾನದ ವ್ಯಾಪ್ತಿಗೆ ಬರುತ್ತದೆ. ಇದು ನನ್ನ ಅಧ್ಯಯನದ ಗ್ರಹಿಕೆಯಾಗಿದೆ.

ನಾನು ನೇರವಾಗಿ ಕ್ಯಾಸೆಟ್ ಸಿಡಿಗಳಿಗೆ ಹಾಡಿದ ಕವಿಗಳನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಂಡಿದ್ದು, ಹಳ್ಳಿಗಳಲ್ಲಿ ನೇರವಾಗಿ ಮೌಖಿಕ ಪರಂಪರೆಯಲ್ಲಿ ಹಾಡಿರುವ ಕಲಾವಿದರನ್ನು ನಾನು ಪರಿಗಣಿಸಿಲ್ಲ. ಯಾರು ಕೇವಲ ಮೌಖಿಕ ನೆಲೆಯಲ್ಲಿ ರಚನೆ ಮಾಡಿ ನಂತರದಲ್ಲಿ ಆ ಹಾಡುಗಳು ನವಮೌಖಿಕದಲ್ಲಿ ಬಂದಿರುವುದು, ಅವರನ್ನು ಮಾತ್ರ ಅಧ್ಯಯನಕ್ಕೆ ತೆಗೆದುಕೊಂಡಿದ್ದೇನೆ. ಹೀಗೆ ನವಮೌಖಿಕ ಪರಿಕಲ್ಪನೆಯನ್ನು ಭಾವಿಸಿದ್ದೇನೆ. ಈ ಸ್ವರೂಪದಲ್ಲಿ ನವಮೌಖಿಕತೆಯನ್ನು ಪ್ರಸ್ತುತ ಅಧ್ಯಯನದಲ್ಲಿ ಕಾಣಬಹುದು.

**ಜಾನಪದ ವೈವಿಧ್ಯತೆ**



## ೧.೪ ಅಧ್ಯಯನದ ವಿಧಾನ

### ಐತಿಹಾಸಿಕ ಪದ್ಧತಿ

ಒಂದು ವಿಷಯದ ಕುರಿತು ಸಂಶೋಧನೆಯಲ್ಲಿ ತೊಡಗಿಕೊಂಡಾಗ ಆ ವಿಷಯಕ್ಕೆ ಸಂಬಂಧಿಸಿದ ಎಲ್ಲ ವಿಷಯದ ಸಾಮಗ್ರಿಗಳನ್ನು ಕಲೆ ಹಾಕಬೇಕಾಗುತ್ತದೆ. ಡಾ. ಸಂಗಮೇಶ ಸವದತ್ತಿಮಠ ಅವರ ಈ ಹೇಳಿಕೆ ಇಲ್ಲಿ ಪ್ರಸ್ತುತ ಎನಿಸುತ್ತದೆ. "ಯಾವುದೇ ವಿಷಯವನ್ನು ಸಂಶೋಧನೆಗೆ ತೆಗೆದುಕೊಂಡಾಗ, ಅದರ ಇತಿಹಾಸದ ಬೆಳವಣಿಗೆಯ ಅವಸ್ಥೆಗಳು, ಐತಿಹಾಸಿಕ ಅಂಶಗಳು ಮಹತ್ವ ಪಡೆದಿವೆ. ಇತ್ಯಾದಿ ಅಂಶಗಳನ್ನು, ವಿವಿಧ ಆಕರಗಳ ಆಧಾರಗಳಿಂದ ಹೆಕ್ಕಿ ತೆಗೆದು, ಸಾದರ ಪೂರ್ವಕ ವಿವೇಚಿಸುವುದೇ **ಐತಿಹಾಸಿಕ ಸಂಶೋಧನೆ"** ಎನಿಸುತ್ತದೆ ಎಂದು ಹೇಳುತ್ತಾರೆ. ಪ್ರಸ್ತುತ "ಉತ್ತರ ಕರ್ನಾಟಕದ ನವಮೌಖಿಕ ಸಾಹಿತ್ಯದ ಆಯಾಮಗಳು" ಎಂಬ ಮಹಾಪ್ರಬಂಧವನ್ನು ಸಿದ್ಧಪಡಿಸುವಲ್ಲಿ ಈ ಪದ್ಧತಿಯನ್ನು ಅನುಸರಿಸಲಾಗಿದೆ. ಆಯ್ದ ಕೆಲವು ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಜನಪದ ಹಾಡುಗಾರರ ಕುರಿತು ಲಿಖಿತ ಹಾಗೂ ಮೌಖಿಕ ಸಾಮಗ್ರಿಗಳನ್ನು ಅಧ್ಯಯನಕ್ಕೆ ಅಳವಡಿಸಿ, ಅವರು ಹಾಡಿದ ಹಾಡುಗಳು ಅದರ ಇತಿಹಾಸ ಹೀಗೆ ಹಲವಾರು ವಿಷಯಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸಲಾಗಿದೆ.

ಇಂದು ಜನಪದ ಹಾಡುಗಾರ ಅಂದ ತಕ್ಷಣ ಹಲವಾರು ಪ್ರಕಾರದ ಹಾಡುಗಾರರನ್ನು ನಾವು ಕಾಣುತ್ತೇವೆ. ಅವರಲ್ಲಿ ನಾನು ಅಧ್ಯಯನಕ್ಕೆ ತೆಗೆದುಕೊಂಡದ್ದು ಆಧುನಿಕ ಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯೂಟ್ಯೂಬ್ ಇತ್ಯಾದಿಗಳಲ್ಲಿ ಪ್ರಸಾರಗೊಂಡ ಜನಪದ ಹಾಡುಗಳನ್ನು, ಹಾಡಿದ ವರ್ಗವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಹಾಡುಗಾರರ ಜೀವನ ಮತ್ತು ಅವರು ನವಮೌಖಿಕ ಸಾಹಿತ್ಯದಲ್ಲಿ ಮಾಡಿದ ಸಾಧನೆ ಕೂಡ ಇಲ್ಲಿ ಮುಖ್ಯವಾಗುತ್ತದೆ.

ಒಬ್ಬ ಸಾಧನೆ ಮಾಡಿದ ವ್ಯಕ್ತಿಯ ದರ್ಶನವನ್ನು, ಆಶಯವನ್ನು ಅರ್ಥಮಾಡಿ ಕೊಳ್ಳಲು ಅವರ ಕೃತಿಗಳು ಸಾಕು. ಬದಲಾಗಿ ಅವರ ಹುಟ್ಟೂರು, ಮನೆಯನ್ನು ನೋಡಲೇಬೇಕೆಂದಿಲ್ಲ. ಏಕೆಂದರೆ ಎಲ್ಲರ ಮನೆಗಳನ್ನು ನೋಡುವುದು ಅಸಾಧ್ಯ. ಆದರೆ ನೋಡುವುದರಿಂದ ನಮ್ಮ ಅನುಭವಕ್ಕೆ ಹೊಸದೊಂದು ಆಯಾಮ ಸಿಗುತ್ತದೆ ಎಂಬುದನ್ನು ನಾವು ಮರೆಯಬಾರದು. ಈ ಮಾತು ಇಲ್ಲಿ ಪ್ರಸ್ತುತ ಎನಿಸುತ್ತದೆ. ಏಕೆಂದರೆ ನಾವು ಕೇವಲ ಒಬ್ಬ ಹಾಡುಗಾರನ ಹಾಡುಗಳನ್ನು ಮಾತ್ರ ಕೇಳಿ ಅವುಗಳನ್ನು ಮಾತ್ರ ಅಧ್ಯಯನಕ್ಕೆ ಸೀಮಿತಗೊಳಿಸದೆ, ಹಾಡುಗಾರನ ಮನಸ್ಸು ಯಾವ ತೆರನಾದದ್ದು, ಹಾಡನ್ನು ಹಾಡಲು ಕಾರಣ, ಹಾಡಿನಲ್ಲಿರುವ ಅರ್ಥ ಎಲ್ಲವು ತಿಳಿಯಬೇಕು. ಹಾಡು ಯಾವ ಪ್ರದೇಶದಲ್ಲಿ ರಚನೆಗೊಂಡಿದೆ. ಹಾಡು ಸ್ಥಳೀಯ ಪರಿಸರ ಪ್ರಭಾವಕ್ಕೆ ಒಳಗಾಗಿರುತ್ತವೆ ಎಂಬುದನ್ನು ತಿಳಿದರೆ ಅಧ್ಯಯನ ಪರಿಪೂರ್ಣಗೊಳ್ಳಲು ಸಾಧ್ಯ.

ನಾವು ಐತಿಹಾಸಿಕ ಸಂಶೋಧನಾ ಪದ್ಧತಿಯಿಂದ ಒಂದು ವಿಷಯದ ಉದ್ದಗಲ ಮತ್ತು ಆಳವನ್ನು ತಿಳಿಯಬಹುದು. ಹಿಂದಿನ ಹಾಡುಗಳುನ್ನು ಮತ್ತು ಬದಲಾವಣೆಗೊಂಡು ಪ್ರಸಾರವಾಗುತ್ತಿರುವ ಇಂದಿನ ಹಾಡುಗಳನ್ನು ನೋಡಿದಾಗ ಅವುಗಳಲ್ಲಿ ಹಲವು ಭಿನ್ನತೆಗಳನ್ನು ಕಾಣುತ್ತೇವೆ. ಆ ಭಿನ್ನತೆ ಕಾಲಕ್ಕೆ ತಕ್ಕಂತೆ ರಚನೆ ಮಾಡುವವನ, ಹಾಡುವವನ, ಕೇಳುವವನ ಅಭಿರುಚಿಗೆ ತಕ್ಕಂತೆ ರಚನೆಗೊಂಡಿರುತ್ತವೆ ಎಂಬುದು ಸ್ಪಷ್ಟವಾಗುತ್ತದೆ. ಒಟ್ಟಾರೆಯಾಗಿ ಪ್ರಸ್ತುತ ಅಧ್ಯಯನದಲ್ಲಿ ದೊರೆತ ಆಕರಗಳನ್ನು ನಾವು ಪ್ರಧಾನ ಆಕರಗಳು, ದ್ವಿತೀಯ ಆಕರಗಳು, ಇತರೆ ಆಕರಗಳೆಂದು ಗುರುತಿಸಲಾಗಿದೆ. ಈ ರೀತಿಯಾಗಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

**ಪ್ರಶ್ನಾವಳಿ ಪದ್ಧತಿ**

ಸಂಶೋಧನೆಯಲ್ಲಿ ಪ್ರಶ್ನಾವಳಿ ಪದ್ಧತಿಯೇ ಒಂದು ಪ್ರಮುಖವಾದ ಆಕರವಾಗಿದೆ. ಇಲ್ಲಿ ಸಂಶೋಧಕನಿಗೆ ಕಾಡುವ ಹಲವಾರು ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ತಯಾರಿಸಿ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳ ಮುಂದೆ ಇಟ್ಟಾಗ ಆತ ಪರಿಹಾರ ಕಂಡು ಕೊಳ್ಳುತ್ತಾನೆ. ಅದಕ್ಕಾಗಿಯೇ ನೂರಾರು ಪ್ರಶ್ನೆಗಳ ಮೂಲಕ ಮಾಹಿತಿಯನ್ನು ಕಲೆಹಾಕುವ ಪದ್ಧತಿಯನ್ನು **ಪ್ರಶ್ನಾವಳಿ ಪದ್ಧತಿ** ಎಂದು ಕರೆಯುತ್ತಾರೆ. ಒಂದು ವಿಷಯದಲ್ಲಿ ಜ್ಞಾನ ಹೊಂದಿದ ವ್ಯಕ್ತಿಯನ್ನು ನೇರವಾಗಿ ಕಂಡು ಆತನಿಗೆ ನೂರಾರು ಪ್ರಶ್ನೆಗಳನ್ನು ಕೇಳಿ, ವಿಷಯದ ಎಲ್ಲ ಮಾಹಿತಿಯನ್ನು ಸಂಗ್ರಹಿಸುವುದು, ಪ್ರಶ್ನೆಗಳ ಸಮೂಹ ಉದ್ಭವಿಸಿದಾಗ ಕಂಡುಕೊಳ್ಳುವ ಉತ್ತರಗಳ ಕ್ರಮಬದ್ಧ ಜೋಡಣೆಯಾಗಿದೆ. ಇವುಗಳ ಮೂಲಕ ಒಬ್ಬ ವ್ಯಕ್ತಿಯ ಅಂತರಾತ್ಮವನ್ನು ಪ್ರವೇಶಿಸಿ ಆತನ ಚಟುವಟಿಕೆಯನ್ನು ಅರಿಯಲು ಮಾಡುವ ಪ್ರಯತ್ನವಾಗಿದೆ.

ವ್ಯಕ್ತಿಯ ಅಭಿಪ್ರಾಯ, ಪ್ರತಿಕ್ರಿಯೆ ಮತ್ತು ಮಾಹಿತಿಯನ್ನು ಸಂಗ್ರಹಣೆ ಮಾಡುವ ದೃಷ್ಟಿಯಿಂದ ನಿರ್ದಿಷ್ಟ ವಿಷಯದ ಸುತ್ತ ಹೆಣೆದ ಪ್ರಶ್ನೆಗಳ ಸರಣಿಯೇ ಪ್ರಶ್ನಾವಳಿ ಎನಿಸಿಕೊಳ್ಳುತ್ತದೆ. ಪ್ರಸ್ತುತ "ಉತ್ತರ ಕರ್ನಾಟಕದ ಮೌಖಿಕ ಸಾಹಿತ್ಯದ ಆಯಾಮಗಳು" ಎಂಬ ಅಧ್ಯಯನಕ್ಕೆ ತೊಡಗಿದಾಗ ಉದ್ಭವವಾದ ನೂರಾರು ಪ್ರಶ್ನೆಗಳನ್ನು ಇಲ್ಲಿ ಸಂಯೋಜಿಸಲಾಗಿದ್ದು, ಇದರಿಂದ ಕೆಲವು ಪ್ರಮುಖ ಆಕರ ಸಾಮಗ್ರಿಗಳು ದೊರೆಯುವಲ್ಲಿ ಹೆಚ್ಚಿನ ಅನುಕೂಲವಾಯಿತು. ಉತ್ತರ ಕರ್ನಾಟಕದ ಕೆಲವು ಆಯ್ದ ಜಿಲ್ಲೆಗಳಲ್ಲಿ ಇರುವ ಜನಪದ ಗೀತೆಗಳ ಹಾಡುಗಾರರು, ಹಾಡುಗಳ ಸಾಹಿತ್ಯ ರಚನಾಕಾರರು ಮತ್ತು ಕೇಳುವ ವರ್ಗವನ್ನು ಭೇಟಿಮಾಡಿ, ಅವರಿಂದ ಹಲವು ಮಾಹಿತಿಗಳು ದೊರೆತಿರುವುದರಿಂದ ಅಧ್ಯಯನ ಪೂರ್ಣಗೊಳ್ಳಲು ಸಾಧ್ಯವಾಯಿತು.

ಒಂದು ಅಧ್ಯಯನ ಮಾಡಬೇಕಾದರೆ ಕೇವಲ ದೊರೆತ ಕೃತಿಗಳು, ಇತರ ಮಾಹಿತಿಗಳು ಸಾಲದು. ಅಧ್ಯಯನಕ್ಕೆ ಸಂಬಂಧಿಸಿದ ವ್ಯಕ್ತಿಗಳು ಹಾಗೂ ಆ ವಿಷಯದ ಬಗ್ಗೆ ನೋಡಿದ, ತಿಳಿದಿರುವ ವ್ಯಕ್ತಿಗಳ ಪಾತ್ರಗಳು ಮುಖ್ಯ ಎಂಬುದು ನಾನು ಪ್ರಶ್ನಾವಳಿ

ಪದ್ಧತಿಯಿಂದ ಕಂಡುಕೊಂಡೆ. ಅದಕ್ಕಾಗಿಯೇ ಮೊದಲು ಪ್ರಶ್ನಾವಳಿ ಸಿದ್ಧಪಡಿಸಿ ಸಂಬಂಧ ಪಟ್ಟ ವ್ಯಕ್ತಿಗಳ ಪಟ್ಟಿಯನ್ನು ತಯಾರಿಸಿಕೊಂಡೆ. ಅವರಲ್ಲಿ ಬಸವಲಿಂಗಯ್ಯ ಹಿರೇಮಠ, ಶಬ್ಬೀರ ಡಾಂಗೆ, ಬಸವರಾಜ್ ನರೇಂದ್ರ, ದೇವೇಂದ್ರ ಒಡೆಯರ, ನಿಜಾಂ ಅಲ್ಲಾಖಾನ, ಇಮಾಮಸಾಬ ವಲ್ಲೆಪ್ಪನವರ ಹೀಗೆ ಹಲವಾರು ಗಾಯಕರನ್ನು ಹಾಗೂ ಸಾಹಿತ್ಯ ರಚನಾಕಾರರನ್ನು ಭೇಟಿ ಮಾಡಿದಾಗ ಅವರಿಂದ ಸಮರ್ಪಕವಾದ, ಹಿತಕರವಾದ ಉತ್ತರಗಳು ದೊರೆತವು. ಜೊತೆಗೆ ನವಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯುಟ್ಯೂಬ್‌ಗಳಲ್ಲಿ ದೊರೆತ ಮಾಹಿತಿಗಳು. ಇದರಲ್ಲಿ ಹುಟ್ಟಿಕೊಂಡ ಪ್ರಶ್ನೆಗಳು ಅದಕ್ಕೆ ತಕ್ಕ ಉತ್ತರವು ತೃಪ್ತಿದಾಯಕವಾಗಿ ದೊರೆತ ಕಾರಣ ನನ್ನ ಅಧ್ಯಯನ ಪೂರ್ಣಗೊಂಡಿದೆ.

ಪ್ರಶ್ನಾವಳಿ ಪದ್ಧತಿಯಿಂದಾಗಿ ಯಾವ ರೀತಿಯ ಪ್ರಶ್ನೆಗಳನ್ನು ತಯಾರಿಸಬೇಕು ಎಂಬ ಬಹುದೊಡ್ಡ ಪ್ರಶ್ನೆ ಎದುರಾಗುತ್ತದೆ. ಆಗ ನಮ್ಮಲ್ಲೇ ನಮಗರಿವಿಲ್ಲದಂತೆ ಹುಟ್ಟುವ ಪ್ರಶ್ನೆಗಳು ಹೇಗೆ ಒಂದು ಅಧ್ಯಯನಕ್ಕೆ ಪೂರಕ ಆಕರಗಳು ಆಗಬಲ್ಲವು ಎಂಬುದನ್ನು ನಾನು ಈ ಅಧ್ಯಯನದ ಮೂಲಕ ಅರಿತಿದ್ದೇನೆ. ಅದೇ ನನ್ನ ಅಧ್ಯಯನ ಪೂರ್ಣಗೊಳ್ಳಲು ಕಾರಣವಾಯಿತು.

**ಸಂದರ್ಶನ ಪದ್ಧತಿ**

ಸಂಶೋಧನೆಯಲ್ಲಿ ಸಂದರ್ಶನವು ಒಂದು ಮಹತ್ವವಾದ ಸ್ಥಾನವನ್ನು ಪಡೆದು ಕೊಂಡಿದೆ. ನಾವು ಸಂದರ್ಶನ ಎಂದ ತಕ್ಷಣ ಮುಖಾ-ಮುಖಿಯಾಗಿ ಪ್ರಶ್ನೆ ಕೇಳುವುದು ಎನ್ನುತ್ತೇವೆ. ಆದರೂ ಕೂಡಾ ಸಂದರ್ಶನದಲ್ಲಿ ಎರಡು ಬಗೆಯ ವಿಧಗಳನ್ನು ಕಾಣುತ್ತೇವೆ. ಒಂದು ರಚಿತ ಸಂದರ್ಶನ ಇನ್ನೊಂದು ಅರಚಿತ ಸಂದರ್ಶನ.

೧) ರಚಿತ ಸಂದರ್ಶನ: ನಿರ್ದೇಶಿತ, ನಿಯಂತ್ರಿತ ಸಂದರ್ಶನ ಎಂದು ಸಹ ಕರೆಯುತ್ತಾರೆ. ಇಲ್ಲಿ ಪ್ರಶ್ನೆಗಳನ್ನು ಮೊದಲೇ ತಯಾರಿಸಿಟ್ಟುಕೊಂಡು ಪ್ರಶ್ನೆ ಕೇಳುವುದನ್ನು ರಚಿತ ಸಂದರ್ಶನ ಎನ್ನುತ್ತಾರೆ.

೨) ಅರಚಿತ ಸಂದರ್ಶನ: ಈ ಸಂದರ್ಶನದಲ್ಲಿ ಯಾವ ವಿಷಯಗಳ ಮಾಹಿತಿಗಳನ್ನು ಕೊಡುತ್ತೇವೆಂದು ಸಂದರ್ಶಕರಿಗೆ ಗೊತ್ತಿರುವದಿಲ್ಲ.

ಹೀಗೆ ಸಂದರ್ಶನದ ವಿಧಗಳನ್ನು ನೋಡುವುದಾದರೆ, ಇನ್ನೊಂದೆಡೆ ಕೇಂದ್ರೀಕೃತ ಸಂದರ್ಶನ, ಪುನರಾವರ್ತಿತ ಸಂದರ್ಶನ, ಅನಿರ್ದೇಶಿತ ಸಂದರ್ಶನ ಇತ್ಯಾದಿ ಪ್ರಕಾರಗಳು ಸಹ ಸಂದರ್ಶನದಲ್ಲಿ ಕಾಣುತ್ತೇವೆ. ಆದರೆ ನನ್ನ ಅಧ್ಯಯನದ ವಿಷಯ "ಉತ್ತರ ಕರ್ನಾಟಕದ ನವಮೌಖಿಕ ಸಾಹಿತ್ಯದ ಆಯಾಮಗಳು" ಆಗಿರುವುದರಿಂದ ನನಗೆ ರಚಿತ ಸಂದರ್ಶನ ಪದ್ಧತಿಯು ಹೆಚ್ಚು ಸಹಾಯಕಾರಿಯಾಗಿದೆ. ಇಲ್ಲಿ ನವಮಾಧ್ಯಮಗಳಲ್ಲಿ ಬರುವ ಜನಪದ ಹಾಡುಗಾರರನ್ನು, ಜನಪದ ಹಾಡುಗಳನ್ನು ರಚನೆ ಮಾಡುವ ವರ್ಗವನ್ನು, ಕೇಳುವ ವರ್ಗವನ್ನು ಸಂದರ್ಶನ ಮಾಡಲಾಗಿದೆ. ಈ ಮೂರು ವರ್ಗಗಳು ಅಧ್ಯಯನದ

ಪ್ರಮುಖ ಆಕರಗಳಾಗಿವೆ. ಇಲ್ಲಿ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳು, ಜಿಲ್ಲೆಯಲ್ಲಿ ಬರುವ ತಾಲೂಕು, ಊರುಗಳನ್ನು ಮಾತ್ರ ಈ ಅಧ್ಯಯನದಲ್ಲಿ ಸಂದರ್ಶನಕ್ಕಾಗಿ ಬಳಸಿಕೊಳ್ಳಲಾಗಿದೆ.

ಸಂದರ್ಶನ ಪದ್ಧತಿ ಮತ್ತು ಸಂಶೋಧನೆ ಬಗ್ಗೆ ಹೇಳುವುದಾದರೆ, "ಸತ್ಯದ ಸಾಕ್ಷಾತ್ಕಾರವೇ ಸಂಶೋಧನೆ. ನಾವು ಸತ್ಯವನ್ನು ಆದಷ್ಟು ಹತ್ತಿರದಿಂದ ಕಂಡುಹಿಡಿಯಲು ಅದಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸುವ ವಿಧಾನಗಳಲ್ಲಿ ಸಂದರ್ಶನ ಪದ್ಧತಿಯು ಒಂದಾಗಿದೆ. ಸಂಶೋಧಕ ತನ್ನ ಸಂಶೋಧನೆಗೆ ನೆರವಾಗುವ ವ್ಯಕ್ತಿಗಳನ್ನು, ಪ್ರದೇಶಗಳನ್ನು ಪ್ರತ್ಯಕ್ಷವಾಗಿ ಸಂದರ್ಶಿಸಿ, ಮಾನವನ ಆಂತರಿಕ ಭಾವನೆಗಳನ್ನು, ಅವರ ನಂಬಿಕೆಗಳನ್ನು, ಅವರ ವೈಯಕ್ತಿಕ ನಡುವಳಿಕೆಯ ವಿಷಯಗಳನ್ನು ತಿಳಿದುಕೊಳ್ಳಲು ಸಂದರ್ಶನದಿಂದ ಸಾಧ್ಯವಾಗುತ್ತದೆ."[೧೦]

ನಾನು ಅಧ್ಯಯನಕ್ಕೆ ಸಂಬಂಧಿಸಿದಂತೆ ಉತ್ತರ ಕರ್ನಾಟಕದ ಆಯ್ದ ಜಿಲ್ಲೆಗಳನ್ನು, ಊರುಗಳನ್ನು, ವಿಷಯಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನು ಭೇಟಿ ಮಾಡಿ ಅವರನ್ನು ಸಂದರ್ಶನ ಮಾಡಿ ನಂತರ ಅವರಿಂದ ದೊರೆತ ಮಾಹಿತಿಯನ್ನು ಸಂಗ್ರಹಿಸಿದೆ. ಇದರಿಂದಲೇ ಅಧ್ಯಯನಕ್ಕೆ ಒಂದು ವಿಶೇಷವಾದ ರೀತಿಯಲ್ಲಿ ಆಳ ಮತ್ತು ವಿಸ್ತಾರ ದೊರೆತಂತಾಗಿದೆ. ಸಂದರ್ಶನದ ಮೂಲಕ ಸಂಗ್ರಹಿಸಿದ ಎಲ್ಲ ಮಾಹಿತಿಯನ್ನು ಮತ್ತೊಮ್ಮೆ ಪರಿಶೀಲಿಸಿ ಮುಖ್ಯಾಂಶಗಳನ್ನು ಮಾತ್ರ ಟಿಪ್ಪಣೆ ಮಾಡಿಕೊಂಡು ಅಗತ್ಯವಿದ್ದಲ್ಲಿ ಅವುಗಳ ಬಳಕೆ ಮಾಡಲಾಗಿದೆ.

ಅಧ್ಯಯನಕ್ಕೆ ಅಗತ್ಯವಿದ್ದ ಸಂದರ್ಶನ ಸ್ಥಳಗಳಾದ ಬೆಳಗಾವಿ, ಧಾರವಾಡ, ವಿಜಯಪುರ, ಬಾಗಲಕೋಟ, ಹಾವೇರಿ, ಗದಗ ಹೀಗೆ ಉತ್ತರ ಕರ್ನಾಟಕದ ಆಯ್ದ ಕೆಲವು ಜಿಲ್ಲೆಗಳನ್ನು ಮತ್ತು ಅಲ್ಲಿ ಬರುವ ತಾಲೂಕು, ಹಳ್ಳಿಗಳನ್ನು ನೇರವಾಗಿ ಹಲವಾರು ಸಾರಿ ಹೋಗಿ ಸಂದರ್ಶಿಸಿ ಪ್ರಮುಖ ವಿಷಯಗಳನ್ನು ಪಟ್ಟಿಮಾಡಿಕೊಂಡು, ರಿಕಾರ್ಡ ಮಾಡಿಕೊಂಡು, ಫೋಟೋ ಸಹ ಸಂಗ್ರಹಣೆ ಮಾಡಲಾಗಿದೆ. ಈ ಎಲ್ಲ ಮಾಹಿತಿಗಳನ್ನು ಸಾಂದರ್ಭಿಕವಾಗಿ ಬಳಸಿಕೊಳ್ಳುವುದು ಅವಶ್ಯವಿದುದ್ದರಿಂದ ಈ ಪದ್ಧತಿಯನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಸಂದರ್ಶನ ಪದ್ಧತಿ ಇಲ್ಲಿ ಅಧ್ಯಯನ ಗಟ್ಟಿಯಾಗಿ ಮತ್ತು ವಿಸ್ತಾರವಾಗಿ ಬೆಳೆಯಲು ಅತೀ ಮಹತ್ವದ ಪಾತ್ರವನ್ನು ವಹಿಸಿದೆ.

**ಅವಲೋಕನ ಪದ್ಧತಿ**

ಸಂಶೋಧನೆಯ ಹಲವಾರು ವಿಧಾನಗಳಲ್ಲಿ 'ಅವಲೋಕನ ಪದ್ಧತಿ'ಯೂ ಒಂದು. ಅವಲೋಕನವೆಂದರೆ ಸಂಶೋಧನೆಯ ಶಾಸ್ತ್ರೀಯ ಪದ್ಧತಿಯೆಂದು ಹೇಳುತ್ತಾರೆ. ಸಾಮಾನ್ಯವಾಗಿ ನಾವು ಅವಲೋಕನವನ್ನು ಅರ್ಥೈಸುವುದಾದರೆ ವೀಕ್ಷಣೆ, ಗಮನಿಸುವುದು, ನೋಡುವುದು ಎಂಬ ಅರ್ಥವನ್ನು ಕೊಡುತ್ತದೆ. ಆದರೆ ಸಂಶೋಧನೆಯಲ್ಲಿ ಅವಲೋಕನ ಎನ್ನುವುದು ಕೇವಲ ಬಾಹ್ಯ ನೋಟ ಮಾತ್ರ ಅಲ್ಲ, ಬದಲಾಗಿ ಆಂತರಿಕ ನೋಟ, ಇಲ್ಲವೇ

ಕಣ್ಣಿಗೆ ಕಾಣುವ ಸತ್ಯಕ್ಕಿಂತಾ ಅದರ ಹಿಂದೆ ಅಡಗಿರುವ ಸತ್ಯದ ನೋಟ ಕೂಡ ಅವಲೋಕನ ಅಂತಲೇ ಕರೆಯುತ್ತೇವೆ.

**ಅವಲೋಕನ ಪದ್ಧತಿ**

**Observation Method**

→ ವೀಕ್ಷಿಸುವುದು
→ ಸೂಕ್ಷ್ಮವಾದ ಪರಿಶೀಲನೆ
→ ನೋಡುವುದು
→ ಗಮನಿಸುವುದು
→ ಬಾಹ್ಯನೋಟದ ಹಿಂದಿನ ಸತ್ಯ

(ಸಂಶೋಧನೆಯ ಪ್ರಕಾರ)

ಪ್ರಸ್ತುತ ಅಧ್ಯಯನದ ವಿಷಯ 'ಉತ್ತರ ಕರ್ನಾಟಕದ ನವಮೌಖಿಕ ಸಾಹಿತ್ಯದ ಆಯಾಮಗಳು' ಆಗಿರುವುದರಿಂದ ಸಂದರ್ಶಿಸಿದ ಸ್ಥಳಗಳು, ಸಂದರ್ಶನ ಮಾಡಿದ ವ್ಯಕ್ತಿಗಳು, ದೊರೆತ ಆಕರಗಳು, ಆಧುನಿಕ ಮಾಧ್ಯಮಗಳು ಇತ್ಯಾದಿ. ಇವುಗಳಿಂದ ಪ್ರತ್ಯಕ್ಷವಾಗಿ ಕಾಣುವ ಸತ್ಯ ಒಂದೆಡೆಯಾದರೆ, ಅದರಲ್ಲಿ ಅಡಗಿರುವ ಸತ್ಯ ಇನ್ನೊಂದೆಡೆ ನಿಲ್ಲುತ್ತದೆ. ಒಂದು ಉದಾಹರಣೆಯಾಗಿ ಹೇಳುವುದಾದರೆ ನಾನು ಸಂದರ್ಶನ ಮಾಡಲು ಒಬ್ಬ ಹಾಡುಗಾರರ ಹತ್ತಿರ ಹೋದಾಗ ಅವರು ನನ್ನನ್ನು ಕಂಡು ತಾವು ಮಾತನಾಡುವ ಶೈಲಿಯನ್ನು ಬದಲಿಸಿಕೊಂಡರು. ನಾನು ಕೇಳಿದ ಪ್ರಶ್ನೆಗಳಿಗೆ ತಮ್ಮಲ್ಲಿರುವ ನಿಜವಾದ ಅಂತರಾಳದ ಮಾತುಗಳನ್ನಾಡದೆ ಸುಧಾರಿತ ಮಾತುಗಳಲ್ಲಿ ಉತ್ತರಿಸಿದರು. ಏಕೆಂದರೆ ಅವರು ಎಲ್ಲಿ ಗ್ರಾಮೀಣ ಭಾಷೆಯಲ್ಲಿ ಮಾತನಾಡಿದರೇ ತಪ್ಪಾಗಬಹುದು, ಇವರು ಹಾಗೆ ಬರೆದು ಪ್ರಕಟಿಸಬಹುದು ಎಂದು ತಿಳಿದು ಬದಲಾದ ರೀತಿಗಳಲ್ಲಿ ಮಾತುಗಳನ್ನು ಪ್ರಾರಂಭಿಸಿದರು. ಅಂದರೆ ಕೆಲವೊಮ್ಮೆ ನಾವು ನೇರವಾಗಿ ವಿಷಯಕ್ಕೆ ಬಂದು ಉತ್ತರಗಳನ್ನು ಬಯಸಿದಾಗ ಅಲ್ಲಿ ನಾವು ಸರಿಯಾದ ಉತ್ತರ ಪಡೆಯಲು ವಿಫಲರಾಗುತ್ತೇವೆ ಎಂಬುದು ನನ್ನ ಅನುಭವಕ್ಕೆ ಬಂದ ಒಂದು ನಿದರ್ಶನ ಇದಾಗಿದೆ.

ಅವಲೋಕನ ಪದ್ಧತಿಯು ಸಂಶೋಧನೆಗೆ ಒಂದು ಹೊಸ ಆಯಾಮವನ್ನು ತಂದುಕೊಡುತ್ತದೆ. ಒಂದು ವಸ್ತುವನ್ನು ಒಂದೆಡೆ ನಿಂತು ನೋಡಿದಾಗ ಅದು ನಮಗೆ ಕಾಣುವ ಸತ್ಯವೆಂದು ನಂಬಿದರೆ, ಇನ್ನೊಂದೆಡೆ ಬೇರೆ ವ್ಯಕ್ತಿ ಅದೇ ವಸ್ತುವನ್ನು ಕಂಡಾಗ ಆತನಿಗೆ ಕಾಣುವ ಸತ್ಯವೇ ಬೇರೆಯಾಗಿರುತ್ತದೆ. ಆದ್ದರಿಂದ ಒಬ್ಬ ಸಂಶೋಧಕನು ಅಧ್ಯಯನದಲ್ಲಿ ಅವಲೋಕನ ಪದ್ಧತಿ ಅಳವಡಿಸಿಕೊಳ್ಳುವುದರಿಂದ ಅಧ್ಯಯನ ಬೆಂಕಿಯಲ್ಲಿ ಬೆಂದ ಬಂಗಾರದಂತೆ ಹೊಳೆಯುತ್ತದೆಯೇ ಹೊರತು ತನ್ನತನವನ್ನು ಕಳೆದುಕೊಳ್ಳುವುದಿಲ್ಲ. ಈ ಅಧ್ಯಯನದಲ್ಲಿಯೂ ಕೂಡಾ ನನಗೆ ಹಲವು ಸಂದರ್ಭಗಳಲ್ಲಿ ಅನುಭವಕ್ಕೆ ಬಂದಿದೆ.

ಆದ್ದರಿಂದಲೇ ವಿಷಯಕ್ಕೆ ಪೂರಕವಾದ ಸಾಮಗ್ರಿಗಳನ್ನು ಗ್ರಹಿಸಲು ವಿಷಯ ಸಂಗ್ರಹಣೆ, ಪ್ರೇರಣೆಗೆ 'ಅವಲೋಕನ ಪದ್ಧತಿ'ಯನ್ನು ಬಳಸಿಕೊಳ್ಳಲಾಗಿದೆ.

**ಕ್ಷೇತ್ರ ಕಾರ್ಯ**

ಕ್ಷೇತ್ರಕಾರ್ಯವೆನ್ನುವುದು ಸಂಶೋಧನೆಯ ಒಂದು ಅಂಗವಾಗಿ ಕೆಲಸ ಮಾಡುತ್ತದೆ. ಅದಕ್ಕಾಗಿಯೇ ಕ್ಷೇತ್ರ ಕಾರ್ಯದಿಂದ ದೊರೆತ ಆಕರಗಳನ್ನು ಜೀವಂತ ಪುಸ್ತಕಗಳೆಂದು ಕರೆಯುತ್ತಾರೆ. ವಿದ್ವಾಂಸರು ಕ್ಷೇತ್ರ ಕಾರ್ಯವನ್ನು **'ಗೋಡೆಗಳು ಇಲ್ಲದ ಪ್ರಯೋಗ ಶಾಲೆ'** ಎಂದು ಹೇಳುತ್ತಾರೆ. ಕ್ಷೇತ್ರ ಕಾರ್ಯವನ್ನು ಮಾಡಬೇಕಾದರೆ ಸಂಗ್ರಹ ಮೊದಲ ಸ್ಥಾನವಾದರೆ, ಸಂದರ್ಶನ ಎರಡನೇ ಸ್ಥಾನದಲ್ಲಿ, ನಿರೀಕ್ಷಣೆ ಕೊನೆಯದಾಗಿ ಹೀಗೆ ಕ್ರಮವಾಗಿ ನಾವು ಕ್ಷೇತ್ರ ಕಾರ್ಯವನ್ನು ಮಾಡುವಲ್ಲಿ ಅನುಸರಿಸಬೇಕಾದ ಕ್ರಮಗಳಾಗಿವೆ. ಕ್ಷೇತ್ರ ಕಾರ್ಯ ಕೈಗೊಳ್ಳುವುದರಿಂದ ಅಧ್ಯಯನಕ್ಕೆ ಸಂಬಂಧಿಸಿದ ಹಲವಾರು ಮಾಹಿತಿಗಳು ದೊರೆಯುತ್ತವೆ. ಅಲ್ಲದೇ ಇವರೆಗೂ ದೊರೆತ ಮಾಹಿತಿಗಳ ಪುನಃ ಅವಲೋಕನವನ್ನು ಮಾಡಬಹುದಾಗಿದೆ.

ಅಧ್ಯಯನವು ಕ್ಷೇತ್ರ ಕಾರ್ಯವನ್ನು ಒಳಗೊಂಡಿದ್ದರೆ, ದೊರೆತ ಎಲ್ಲ ಮಾಹಿತಿಗಳು ಸಂಶೋಧಕನಿಗೆ ಒಂದು ಹೊಸ ಆಯಾಮವನ್ನು ತಂದುಕೊಡುತ್ತವೆ. ವಿಷಯವನ್ನು ಗಟ್ಟಿಗೊಳಿಸಿ ದೊರೆತ ವಿಷಯ ಹೆಚ್ಚು ಕಾಲ ಉಳಿಯುವಂತೆ ಮಾಡುತ್ತವೆ. ಒಬ್ಬ ಸಂಶೋಧಕ ಒಂದೇ ಕಡೆಯಿಂದ ಸತ್ಯವನ್ನು ಕಂಡು ಕೊಳ್ಳಬಾರದು, ಬೇರೊಂದು ಕಡೆ ಬೇರೆ ಸತ್ಯವು ಇರಬಹುದು. ಕ್ಷೇತ್ರ ಕಾರ್ಯದಿಂದ ಸ್ಥಳೀಯರು ನೀಡುವ ಮಾಹಿತಿ ಒಂದೆಡೆಯಾದರೆ, ಇತರೆ ಆಕರಗಳಿಂದ ಸಂಗ್ರಹಿಸಿದ ಮಾಹಿತಿ ಇನ್ನೊಂದೆಡೆ ನಿಲ್ಲುತ್ತದೆ. ಆದ ಕಾರಣ ಕ್ಷೇತ್ರ ಕಾರ್ಯವನ್ನು ಮಾಡುವುದರಿಂದ ಕ್ಷೇತ್ರ ಮತ್ತು ಸಂಶೋಧಕ ಸಂಧಿಸಿ ಹೊಸದೊಂದು ಆಯಾಮದ ಉಗಮವಾಗುತ್ತದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಬೆಳಗಾವಿ, ವಿಜಯಪುರ, ಬಾಗಲಕೋಟ, ಧಾರವಾಡ, ಹಾವೇರಿ, ಗದಗ ಮುಂತಾದ ಜಿಲ್ಲೆಗಳ ತಾಲೂಕು, ಊರುಗಳಲ್ಲಿ ಕ್ಷೇತ್ರಕಾರ್ಯ ಕೈಕೊಂಡು. ಈ ಪ್ರದೇಶಗಳಲ್ಲಿ ಬರುವ ಜನಪದ ಹಾಡುಗಾರರನ್ನು ಭೇಟಿಮಾಡಿ ಅವರಿಂದ ಸಂಗ್ರಹಿಸಿದ ಮಾಹಿತಿಯನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಹಲವು ಆಕರಗಳು, ಪ್ರಶ್ನಾವಳಿ, ಶ್ರವ್ಯ, ದೃಶ್ಯ ಮಾಧ್ಯಮಗಳು ನೇರ ಸಂಪರ್ಕದ ಮೂಲಕ ವ್ಯಕ್ತಿಗಳ ಸಹಾಯದಿಂದ ಕ್ಷೇತ್ರಕಾರ್ಯದ ಒಟ್ಟು ವ್ಯಾಪ್ತಿಯನ್ನು ಅಧ್ಯಯನದ ವಿಧಾನ ಒಳಗೊಂಡಿದೆ. ಒಂದು ವಿಶೇಷತೆ ಪಡೆಯುವುದರೊಂದಿಗೆ ಜನಪದ ಗೀತೆಗಳ ಹೊಸ ಆಯಾಮದೊಂದಿಗೆ ಪ್ರಸ್ತುತ ಮಹಾಪ್ರಬಂಧ ಸಿದ್ಧಗೊಂಡಿದೆ.

**೧.೫ ಮಹಾಪ್ರಬಂಧದ ವಿನ್ಯಾಸ**

ಅಧ್ಯಯನದ ಅನುಕೂಲಕ್ಕಾಗಿ ಸಂಶೋಧನಾ ಮಹಾಪ್ರಬಂಧವನ್ನು ಎಂಟು ಅಧ್ಯಾಯಗಳಾಗಿ ವಿಂಗಡಿಸಿ ಅಧ್ಯಯನವನ್ನು ಮಾಡಲಾಗಿದೆ.

**ಅಧ್ಯಾಯ ಒಂದು:** ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಈ ಅಧ್ಯಾಯವು ಉದ್ದೇಶ, ವ್ಯಾಪ್ತಿ ಹಾಗೂ ಪರಿಕಲ್ಪನಾತ್ಮಕ ಚರ್ಚೆ, ಅಧ್ಯಯನದ ವಿಧಾನ ತಿಳಿಸುವುದರೊಂದಿಗೆ, ಮಹಾಪ್ರಬಂಧದ ವಿನ್ಯಾಸ ಮತ್ತು ಅಧ್ಯಯನದ ಚೌಕಟ್ಟು ಮುಂತಾದ ವಿವರಣೆಯನ್ನು ಒಳಗೊಂಡಿದೆ.

**ಅಧ್ಯಾಯ ಎರಡು:** ನವಮೌಖಿಕ ಕುರಿತ ಈವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಈ ಅಧ್ಯಾಯದಲ್ಲಿ ನವಮೌಖಿಕ ಸಾಹಿತ್ಯ ಕುರಿತಾದ ಅಧ್ಯಯನ, ಲೇಖನಗಳ ಸಮೀಕ್ಷೆ ಮಾಡಿದ್ದು, ಈವರೆಗೆ ಅಧ್ಯಯನಗಳು ನಡೆಯದೆ ಇರುವುದರಿಂದ ಅಧ್ಯಯನಕ್ಕೆ ಪೂರಕವಾದ ಬಿಡಿ ಬಿಡಿ ಲೇಖನಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

**ಅಧ್ಯಾಯ ಮೂರು:** ನವಮೌಖಿಕ ಸಾಹಿತ್ಯದ ವಸ್ತು, ಆಶಯ ಮತ್ತು ರೂಪ

ಈ ಅಧ್ಯಾಯವು ನವಮೌಖಿಕ ಸಾಹಿತ್ಯ ಅಧ್ಯಯನದ ಒಟ್ಟು ವಸ್ತು, ಆಶಯ ಮತ್ತು ರೂಪ ಒಳಗೊಂಡಿದೆ. ಇಲ್ಲಿ ಮಹಿಳೆ, ಬಡತನ, ಅಣ್ಣ–ತಂಗಿ, ನೀತಿ, ಅನುಭವದ ನುಡಿಗಳು, ಸಂಗೀತ, ಸಂಗೀತಗಾರನ ಮನಸ್ಸು ಮತ್ತು ವಾದ್ಯ ಯಂತ್ರಗಳ ಬಳಕೆ, ಭಾಷೆ, ಛಂದಸ್ಸು ಇತ್ಯಾದಿ ವಿಷಯಗಳ ಕುರಿತಾದ ವಿಶ್ಲೇಷಣೆಯನ್ನು ಒಳಗೊಂಡಿದೆ.

**ಅಧ್ಯಾಯ ನಾಲ್ಕು:** ಜನಪದ ಹಾಡುಗಳ ಕವಿಗಳ ಲೋಕ

ಈ ಅಧ್ಯಾಯದಲ್ಲಿ ಜನಪದ ಹಾಡುಗಳನ್ನು ರಚನೆ ಮಾಡುವ ಕವಿಗಳ ಕುರಿತು, ಅವರು ರಚನೆ ಮಾಡಿರುವ ಸಾಹಿತ್ಯದ ಕುರಿತು ಇಲ್ಲಿ ವಿವರಿಸಲಾಗಿದೆ. ಅಲ್ಲದೇ ಅಧ್ಯಯನಕ್ಕೆ ಪೂರಕವಾದ ಜನಪದ ಹಾಡುಗಳ ಪ್ರಕಾರಗಳನ್ನು ಉದಾಹರಣೆ ಸಮೇತ ವಿಶ್ಲೇಷಿಸಲಾಗಿದೆ.

**ಅಧ್ಯಾಯ ಐದು:** ನವಮೌಖಿಕ ಹಾಡುಗಾರರ ಲೋಕ

ಈ ಅಧ್ಯಾಯದಲ್ಲಿ ನವಮೌಖಿಕ ಸಾಹಿತ್ಯವನ್ನು ಕಟ್ಟಲು ಹೊರಟ ಹಾಡುಗಾರರನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ನವಮೌಖಿಕದಲ್ಲಿ ಬಳಕೆಗೊಳ್ಳುತ್ತಿರುವ ಹಾಡುಗಳು, ಅವು ಯಾವ ರೀತಿ ಇವೆ ಎಂಬುದನ್ನು ಆ ಹಾಡುಗಳ ಮೂಲಕ ಇಲ್ಲಿ ವಿವೇಚಿಸಲಾಗಿದೆ.

**ಅಧ್ಯಾಯ ಆರು:** ಜನಪದ ಗೀತೆಗಳ ಕೇಳುಗ ಲೋಕ

ಈ ಅಧ್ಯಾಯವು ಪ್ರಾದೇಶಿಕ ಹಿನ್ನೆಲೆಯನಿಟ್ಟುಕೊಂಡು, ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಿಗೆ ಪ್ರಾದೇಶಿಕ ಚೌಕಟ್ಟನ್ನು ಹಾಕಿಕೊಂಡು, ಜನಪದ ಗೀತೆಗಳ ಕೇಳುಗ ಲೋಕದ ಕುರಿತಾದ ವಿವರಣೆಯನ್ನು ಕ್ಷೇತ್ರಕಾರ್ಯದ ಮೂಲಕ ಮಾಡಿದ್ದು. ಇಲ್ಲಿ ಕೇಳುಗರಲ್ಲಿ ಒಂದು ಯುವಜನಾಂಗ, ಇನ್ನೊಂದು ಇತರೆ ವರ್ಗದವರು. ಹೀಗೆ ಈ ವರ್ಗಗಳಲ್ಲಿ ಬರುವವರು ಎಂತಹ ಹಾಡುಗಳನ್ನು ಕೇಳುತ್ತಾರೆ, ಆ ಹಾಡುಗಳ ಕುರಿತಾದ ವಿವರಣೆಯನ್ನು ಒಳಗೊಂಡಿದೆ.

**ಅಧ್ಯಾಯ ಏಳು:** ನವಮೌಖಿಕ ಉತ್ಪಾದನ ಲೋಕ

ಈ ಅಧ್ಯಾಯದಲ್ಲಿ ನವಮೌಖಿಕವನ್ನು ಕಟ್ಟಲು ಹೊರಟ ಕ್ಯಾಸೆಟ್, ಸಿಡಿ, ಯೂಟ್ಯೂಬ್ ಇತ್ಯಾದಿ ಮಾಧ್ಯಮಗಳ ಹಿನ್ನೆಲೆಗಳಲ್ಲಿ ನವಮೌಖಿಕವು ಹೇಗೆ ಬೆಳೆಯುತ್ತ ಬರುತ್ತಿದೆ ಎಂಬುದನ್ನು ಈ ಅಧ್ಯಯನದ ಮುಖಾಂತರ ನೋಡುತ್ತೇವೆ. ಅಲ್ಲದೇ ಆಧುನಿಕ ಮಾಧ್ಯಮಗಳಲ್ಲಿ ಬಿತ್ತರಗೊಂಡಿರುವ ಹಾಡುಗಳ ತಯಾರಕರು, ವಿತರಕರು ಜೊತೆ ಹಾಡುಗಳು ಇಂದು ಯಾವ ಹಂತವನ್ನು ತಲುಪಿವೆ ಎಂಬುದನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

**ಅಧ್ಯಾಯ ಎಂಟು:** ಸಮಾರೋಪ

ಈ ಅಧ್ಯಾಯದಲ್ಲಿ ಸಂಶೋಧನೆಯಿಂದ ಕಂಡುಕೊಂಡ ಸತ್ಯಗಳು, ಅಧ್ಯಯನದ ಫಲಿತಗಳನ್ನು ಮತ್ತು ಅಧ್ಯಯನದ ಮುಂದಿನ ಹಂತ, ಕೊನೆಯಲ್ಲಿ ಅಭ್ಯಾಸ ಸೂಚಿ ಹಾಗೂ ಕ್ಷೇತ್ರಕಾರ್ಯದ ಛಾಯಾಚಿತ್ರಗಳನ್ನು ನೀಡಲಾಗಿದೆ.

ಹೀಗೆ ಮಹಾಪ್ರಬಂಧಕ್ಕೆ ಎಂಟು ಅಧ್ಯಾಯಗಳ ವಿನ್ಯಾಸವನ್ನು ಹಾಕಿಕೊಂಡು ಅಧ್ಯಯನ ಮಾಡುವುದರ ಮೂಲಕ ಈ ಸಂಶೋಧನೆ ಪೂರ್ಣಗೊಂಡಿದೆ.

**ಕೊನೆ ಟಿಪ್ಪಣಿಗಳು**

೧. ಎಸ್.ಕೆ.ಕರೀಂಖಾನ, ಜಾನಪದ ಗೀತೆಗಳು, ಪುಟ: ೩.
೨. https://avadhimag.com/?p=178492.
೩. ಎಸ್.ಕೆ.ಕರೀಂಖಾನ, ಜಾನಪದ ಗೀತೆಗಳು, ಪುಟ: ೪.
೪. ಅದೇ, ಪುಟ.
೫. https://youtu.be/ZDjwSnJWBBs.
೬. ಅದೇ.
೭. ಅದೇ.
೮. ಅದೇ.
೯. https://youtu.be/84GbVpEe49c.
೧೦. ಬಿ.ವ್ಹಿ.ಶಿರೂರ, ಸಂಶೋಧನ ಸ್ವರೂಪ, ಪುಟ: ೧೦೩.

# ಅಧ್ಯಾಯ : ಎರಡು

## ನವಮೌಖಿಕ ಕುರಿತ ಈವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

## ಅಧ್ಯಾಯ : ಎರಡು

## ನವಮೌಖಿಕ ಕುರಿತ ಈವರೆಗಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ನಾವು ಯಾವುದೇ ಒಂದು ಅಧ್ಯಯನವನ್ನು ಕೈಗೊಳ್ಳುವುದಕ್ಕಿಂತ ಮುಂಚೆ ಆ ಅಧ್ಯಯನಕ್ಕೆ ಸಂಬಂಧಿಸಿದಂತೆ ಈವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮುಖ್ಯ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ನವಮೌಖಿಕದ ಕುರಿತು ಮಾತನಾಡುವುದಾದರೆ, ಈವರೆಗೆ ಯಾವುದೇ ಅಧ್ಯಯನಗಳು ನಡೆಯದೆ ಇರುವುದರಿಂದ ಅಧ್ಯಯನಕ್ಕೆ ಪೂರಕವಾದ ಕೆಲವು ಪತ್ಯ ಹಾಗೂ ಬಿಡಿ ಬಿಡಿ ಲೇಖನಗಳ ಬಗ್ಗೆ ಮಾತ್ರ ಇಲ್ಲಿ ಚರ್ಚಿಸಬಹುದಾಗಿದೆ.

ಇಂದು ಜಾನಪದ ಶೋಧನೆ ಎಂಬುದರ ಕುರಿತಾದ ಅಧ್ಯಾಯಗಳು ತಲೆ ಎತ್ತಿ ನಿಂತಿವೆ. ಏಕೆಂದರೆ ನಮ್ಮ ಹಿಂದಿನ ಕಾಲದ ಹಿರಿಯರು, ಜಾನಪದ ಸಂಶೋಧಕರಾದ ಹಲಸಂಗಿ ಗೆಳೆಯರು ಮುಂದೆ ಡಾ.ಬಿ.ಎಸ್.ಗದ್ದಗಿಮಠ, ಡಾ.ದೇ.ಜವರೇಗೌಡ, ಡಾ.ಜೀ. ಶಂ.ಪರಮಶಿವಯ್ಯ, ಡಾ.ರಾಮಾನುಜಂ, ಮತ್ತಿಘಟ್ಟ ನಾಗೇಗೌಡ, ಡಾ.ಎಲ್.ಆರ್. ಹೆಗಡೆ ಹೀಗೆ ಮುಂತಾದವರು ಅಪಾರ ಪ್ರಮಾಣದ ಸಾಮಗ್ರಿಗಳನ್ನು ಇಂದಿನ ಕಾಲಕ್ಕೆ ಅಧ್ಯಯನ ಮಾಡುವವರಿಗೆ ಒದಗಿಸಿಕೊಟ್ಟಿದ್ದಾರೆ. ಇವರು ತಮ್ಮ ಕಾಲದಲ್ಲಿ ಲಭ್ಯವಿದ್ದ ಪರಿಕರಗಳನ್ನು ಬಳಸಿಕೊಂಡು ಜನಪದ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇಂದು ನಾವೆಲ್ಲರೂ ಅವರುಗಳು ತಲುಪಿದ ನೆಲೆಯಿಂದಲೇ ಮುಂದೆ ಸಾಗಬೇಕಿದೆ. ಅಲ್ಲದೇ ಈಗಾಗಲೇ ಪರಿವೀಕ್ಷಣೆಗೆ ನಡೆದ ಒಂದೊಂದು ಪ್ರಕಾರವನ್ನು ಕುರಿತು ನಾವು ಬದಲಾದ ಕಾಲ, ದೇಶ, ಸಂದರ್ಭಗಳಲ್ಲಿ ಮರು ಅಧ್ಯಯನಕ್ಕೆ ಅವಕಾಶ ಇರುವುದರಿಂದ ಮರು ಸಂಶೋಧನೆಗೆ ಮುಂದಾಗಬೇಕಿದೆ. ಅಂದರೆ ಕಾಲದ ಬದಲಾವಣೆಯೊಂದಿಗೆ ಸಾಹಿತ್ಯವು ಬದಲಾಗುತ್ತದೆ. ಹಾಗಾಗಿ ಮೌಖಿಕವನ್ನು ಇಂದು ನವಮೌಖಿಕದಲ್ಲಿ ಎದುರುಗೊಳ್ಳಬೇಕಿದೆ. ಈ ಕುರಿತಾದ ಕೆಲವು ಬಿಡಿ ಬಿಡಿ ಲೇಖನ ಮತ್ತು ಪತ್ಯಗಳನ್ನು ಇಲ್ಲಿ ನೋಡಬಹುದು.

**೧. ಎಚ್.ಎಲ್. ನಾಗೇಗೌಡ ಅವರ 'ಜನಪದ ಸಾಹಿತ್ಯದ ಪುನರುಜ್ಜೀವನ' (ಪ್ರಬಂಧ).**

ತರೀಕೆರೆಯಲ್ಲಿ ಮೊದಲ ಅಖಿಲ ಕರ್ನಾಟಕ ಮೊದಲ ಜನಪದ ಸಾಹಿತ್ಯ ಸಮ್ಮೇಳನ ೧೯೬೭ರಲ್ಲಿ ನಡೆಯಿತು. ಅಲ್ಲಿ ಮಂಡಿಸಿದ ಪ್ರಬಂಧಗಳಲ್ಲಿ ಜನಪದ ಧ್ವನಿ ಮುದ್ರಣದಲ್ಲಿ ಸಂಗ್ರಹವಾಗಿ, ಮುಂದಿನ ತಲೆಮಾರಿಗೆ ಉಳಿಸಬೇಕು ಎಂಬ ಯೋಚನೆ ಬಗ್ಗೆ ಚರ್ಚೆ ಆದವು. ಎಚ್.ಎಲ್.ನಾಗೇಗೌಡರು ಈ ಸಮ್ಮೇಳನದಲ್ಲಿ ಮಂಡಿಸಿದ 'ಜನಪದ ಸಾಹಿತ್ಯದ ಪುನರುಜ್ಜೀವನ' ಎಂಬ ಪ್ರಬಂಧದ ನಿಲುವು ಹೀಗಿದೆ.

"ಜನಪದ ಸಾಹಿತ್ಯ ಸಂಗ್ರಹವಾಗಿ ಮುದ್ರಣ ಕಾಣಬೇಕು. ಆದರೆ ಅದಕ್ಕಿಂತ ಮೊದಲು ಬಹು ಜಾಗೃತಿಯಾಗಿ ಆಗಬೇಕಾಗಿರುವುದು ಧ್ವನಿಮುದ್ರಣ ಕಾರ್ಯ. ಏಕೆಂದರೆ ಹಾಡುವವರು ಕಣ್ಮರೆಯಾದರೆ, ಹಾಡಿನ ಜೊತೆಗೆ ಹಾಡುವ ರೀತಿಯು ಕಣ್ಮರೆಯಾಗುತ್ತದೆ. ಇಲ್ಲಿ ಹಾಡುವ ರೀತಿ ಬಹಳ ಮುಖ್ಯ. ಒಂದು ಹಾಡನ್ನು ನಾನಾ ರೀತಿಯಲ್ಲಿ ಹಾಡಬಹುದು. ಇದಕ್ಕಾಗಿ ಜಿಲ್ಲೆಗೆ ಮೂರು ನಾಲ್ಕು ಧ್ವನಿಮುದ್ರಣ ಯಂತ್ರಗಳನ್ನು ಒದಗಿಸಬೇಕು. ಸಾಕಷ್ಟು ಟೇಪುಗಳನ್ನು ಕೊಡಬೇಕು. ಗ್ರಾಮ ಮಟ್ಟದಲ್ಲಿ ಸಂಗ್ರಹಿಸುವಾಗ ಯಾರು ಯಾವ ಯಾವ ಹಾಡುಗಳನ್ನು ಚೆನ್ನಾಗಿ ಹಾಡುತ್ತಾರೆಂಬುದನ್ನು ಪಟ್ಟಿ ಮಾಡಿ ಜಿಲ್ಲಾ ಮಂಡಳಿಗೆ ವರದಿ ಒಪ್ಪಿಸಿ ಎಂದು ಸಂಗ್ರಾಹಕರಿಗೆ ಹೇಳಿರಬೇಕು. ಇಲ್ಲಾ ಮಂಡಳಿಗಳೆ ಹಾಡುಗಳನ್ನು ಧ್ವನಿಮುದ್ರಣ ಮಾಡುವ ಕೆಲಸ ವಹಿಸಬೇಕು. ಇದು ಸುಲಭವಾದ ಕೆಲಸವಲ್ಲ. ಅದರಲ್ಲಿ ನುರಿತ ಹಾಗೂ ಜನಪದ ಸಾಹಿತ್ಯದ ಸರಿಯಾದ ಜ್ಞಾನವುಳ್ಳವರು ಆ ಕೆಲಸ ಮಾಡಬೇಕು. ಒಬೊಬ್ಬರ ಹಾಡುಗಳನ್ನು ಧ್ವನಿಮುದ್ರಣ ಮಾಡಿಕೊಳ್ಳುವ ಕೆಲಸ ಮೂರು ದಿನಗಳ ಕಾಲ ಸಾಗಬೇಕಾಗುತ್ತದೆ. ಅದಕ್ಕೆ ತಕ್ಕ ವ್ಯವಸ್ಥೆ ಆಗಬೇಕು. ಧ್ವನಿಮುದ್ರಣ ಮಾಡಿಕೊಳ್ಳುವವರಿಗೆ ಪೂರ್ವಭಾವಿಯಾಗಿ ಶಿಕ್ಷಣ ಕೊಡುವುದು ಬಹಳ ಅವಶ್ಯಕ."[೧]

ಈ ಲೇಖನದಲ್ಲಿ ಜನಪದ ಸಾಹಿತ್ಯ ಧ್ವನಿಮುದ್ರಣ ಆಗಬೇಕೆಂದು ಹೇಳುತ್ತಾರೆ. ಆ ಮೂಲಕ ಮುಂದಿನ ತಲೆಮಾರಿಗೆ ತಲುಪಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ. ಧ್ವನಿ ಮುದ್ರಣಗೊಳ್ಳಬೇಕು ಎಂದು ಹೇಳುತ್ತಾರಲ್ಲದೆ ಪ್ರಕಟಣೆಯ ಮೂಲಕ ಉಳಿಯುವ ಜನಪದ ಸಾಹಿತ್ಯದ ಮಿತಿಯ ಕುರಿತು ಮಾತನಾಡುತ್ತಾರೆ. ಜನಪದ ಬರಹ ರೂಪದಲ್ಲಿ ಉಳಿದರೆ ಅದನ್ನು ಓದುವವರು ಅಕ್ಷರಸ್ಥರೆ ಆಗಿರುತ್ತಾರೆ. ಅಕ್ಷರ ರೂಪ ಪಡೆದ ನಂತರ ಅದು ಅನಕ್ಷರಸ್ಥ ವರ್ಗದವರೊಂದಿಗೆ ಸಂವಹನ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಧ್ವನಿಮುದ್ರಣದ ಮೂಲಕ ಸರಕಾರ ಜನಪದ ಸಾಹಿತ್ಯವನ್ನು ಸಂಗ್ರಹಿಸಿದರೆ ಅದನ್ನು ಮರುಪ್ರಸಾರ ಮಾಡಿ ಹಳ್ಳಿಗರು ಅಕ್ಷರಸ್ಥ, ಅನಕ್ಷರಸ್ಥ ಎಂಬ ಭೇದವಿಲ್ಲದೇ ಎಲ್ಲರೂ ಕೇಳಬಹುದು. ಇದು ಎಚ್.ಎಲ್.ನಾಗೇಗೌಡರ ಆಶಯವಾಗಿದೆ. ಇದು ಮೌಖಿಕ ಪ್ರಸಾರದ ಮುಂದುವರೆದ ರೂಪವಾಗಿದೆ. ಇಂದಿನ ದಿನಗಳಲ್ಲಿ ಹೀಗೆ ನವಮೌಖಿಕತೆಯು ಸೂಕ್ಷ್ಮವಾಗಿ ಗರಿಗಟ್ಟುತ್ತಾ ಸಾಗುತ್ತಿದೆ.

**೨. ದೇ.ಜವರೇಗೌಡ ಅವರ 'ಜನಪದ ಗೀತಾಂಜಲಿ' (ಗೀತೆಗಳ ಸಂಕಲನ).**

ದೇ.ಜವರೇಗೌಡ ಅವರು ಸಂಪಾದಿಸಿದ ಕನ್ನಡ ಜನಪದ ಗೀತೆಗಳ ಸಂಕಲನ 'ಜನಪದ ಗೀತಾಂಜಲಿ' ಪ್ರಕಟಣೆಗೊಂಡದ್ದು ೧೯೭೮ರಲ್ಲಿ. ಈ ಕೃತಿಯು ಜನಪದ ಗೀತೆಗಳನ್ನು ಒಳಗೊಂಡಿದೆ. ಇದರಲ್ಲಿ ಸತ್ಯಯುತವಾದ ಬದುಕಿನ ಬಗ್ಗೆ ಹೇಳಿದ್ದಾರೆ. ಇಲ್ಲಿ ಸ್ತುತಿ ಗೀತೆಗಳು, ಸಂಸಾರಿಕ ಗೀತೆಗಳು, ಪ್ರೇಮ ಗೀತೆಗಳು, ನೀತಿ ಗೀತೆಗಳು, ಸಂವಾದ

ಗೀತೆಗಳು, ಪೌರಾಣಿಕ ಗೀತೆಗಳು, ಕಥನ ಗೀತೆಗಳು, ಸಂಕೀರ್ಣ ಗೀತೆಗಳು ಹೀಗೆ ಹಲವು ಪ್ರಕಾರದ ಗೀತೆಗಳನ್ನು ಈ ಕೃತಿ ಪರಿಚಯಿಸುತ್ತದೆ. ದೇ.ಜವರೇಗೌಡರು ಗುಣಗಾತ್ರಗಳಲ್ಲಿ ಕನ್ನಡ ಜನಪದ ಗೀತೆಗಳು ಜಗತ್ತಿನ ಯಾವ ಭಾಷೆಯ ಗೀತೆಗಳೊಡನೆಯಾದರೂ ಹಣತೆಯಾಗಿ ನಿಲ್ಲಬಲ್ಲವು ಎಂದು ಹೇಳಿದ್ದಾರೆ. ಅಲ್ಲದೇ ಗೀತೆಗಳಲ್ಲಿ ಅಭಿವ್ಯಕ್ತಗೊಳ್ಳುವ ಸಂಸಾರ ಧರ್ಮದಲ್ಲಿ ಕರ್ಮ, ಭಕ್ತಿ, ಯೋಗಗಳಲ್ಲಿ, ಸೌಂದರ್ಯೋಪಾಸನೆಯಲ್ಲಿ, ಜೀವನಮೌಲ್ಯ ವಿವರಣೆಯಲ್ಲಿ ಕರ್ನಾಟಕ ಸಂಸ್ಕೃತಿಯ ಮಹೋನ್ನತಿ ಪ್ರಕಟವಾಗುತ್ತದೆ. ಸಮಾಜದ ಭದ್ರತೆಗೆ ಸಂಸಾರದ ಸ್ವಾಸ್ಥ್ಯವೇ ಮೂಲ. ಸಾಮಾನ್ಯ ಜೀವನದಲ್ಲಿ ಕಾಣುವಂಥ ಸ್ವಾಸ್ಥ್ಯವನ್ನು ಶಿಷ್ಟ ಜೀವನದಲ್ಲಿ ಕಾಣುವುದು ಕಷ್ಟ. ಕುಬೇರನ ಸಂಪತ್ತಾಗಲಿ, ದೇವೇಂದ್ರನ ಭೋಗ ವೈಭವಗಳು, ದುರ್ಯೋಧನನ ಅಧಿಕಾರವಾಗಿ ನಿಶ್ಚಿಂತವಾದ ಜೀವನಕ್ಕೆ ಅಜರಾಮರವಾಗಿ ಸಂಸಾರಕ್ಕೆ ಸಾಧನವಾಗಲಾರವು ಎಂಬುದಕ್ಕೆ ಶ್ರೀಮಂತ ರಾಷ್ಟ್ರಗಳ ಜನಜೀವನವೇ ಸಾಕ್ಷಿಯಾಗಿದೆ ಎನ್ನುತ್ತಾರೆ. ಇವರು ಜನಪದ ಗೀತೆಗಳು ಜೀವನದಲ್ಲಿ ಹೇಗೆ ಪ್ರಮುಖ ಪಾತ್ರವಹಿಸುತ್ತವೆ. ಅಲ್ಲದೇ ಇಂದಿನ ಪ್ರಸ್ತುತ ಸ್ಥಿತಿಯನ್ನು ಅದರ ಅಸ್ತಿತ್ವವನ್ನು ಅಲ್ಲಗಳೆಯುತ್ತಿವೆ. ಹೀಗೆ ಎಲ್ಲವನ್ನು ಹೇಳುವ ದೇ.ಜವರೇಗೌಡರು, ಇಂದು ಆಧುನಿಕ ಮಾಧ್ಯಮಗಳಲ್ಲಿ ಈ ವಿಷಯ ಬಂದೊಡನೆ ಎಲ್ಲರನ್ನು ಯೋಚನೆಗೆ ಹಚ್ಚಿಸುವ ಕೆಲಸ ನಡೆದಿದೆ ಎನ್ನುತ್ತಾರೆ.

**೩. ಕಮಲಾ ಹೆಮ್ಮಿಗೆಯವರ 'ಹೂವು ಬಿದ್ದಾವ ನೆಲಕ' (ಜನಪದ ಗೀತೆಗಳ ಸಂಗ್ರಹ ಕೃತಿ).**

ಕಮಲಾ ಹೆಮ್ಮಿಗೆಯವರ 'ಹೂವು ಬಿದ್ದಾವ ನೆಲಕ' ಎಂಬ ಕೃತಿಯು ೧೯೮೫ರಲ್ಲಿ ಬೆಳಕು ಕಂಡಿದೆ. ಈ ಕೃತಿಯು ಉತ್ತರ ಕರ್ನಾಟಕದ ಭಾಗದಲ್ಲಿ ಸಂಗ್ರಹಿಸಿರುವ ನಲವತ್ತು ಹಾಡುಗಳ ಸಂಕಲನವಾಗಿದೆ. ಇದರಲ್ಲಿ ಹನ್ನೊಂದು ಮದುವೆ ಹಾಡುಗಳು, ಹದಿನೇಳು ಸ್ತುತಿಪರ ಗೀತೆಗಳು ಮತ್ತು ಹನ್ನೆರಡು ಇತರ ಸಂದರ್ಭದ ಹಾಡುಗಳಿವೆ.

ಮದುವೆಯಲ್ಲಿ ಪುರುಷ ವರ್ಗದ ಉತ್ಸಾಹಕ್ಕಿಂತ ಹೆಣ್ಣುಮಕ್ಕಳ ಉತ್ಸಾಹವೇ ಹೆಚ್ಚು. ಅಂತಹ ಸಂದರ್ಭದಲ್ಲಿ ಬಗೆಬಗೆಯ ಶಾಸ್ತ್ರವಿಧಿಗಳನ್ನು ನೆರವೇರಿಸುವ ಮೂಲಕ ಸಮಾರಂಭಕ್ಕೆ ವಿಶೇಷತೆಯನ್ನು ತಂದುಕೊಡುತ್ತಾರೆ. ಬಹುತೇಕ ಆಚರಣೆಗಳೊಂದಿಗೆ ಹಾಡುಗಳನ್ನು ಹಾಡುತ್ತಾರೆ.

ಹೆಮ್ಮಿಗೆಯವರು ಸೋಬಾನ ಅನ್ನೋದ ಏನಂತ ತಿಳಿಯಬೇಕು, ಅಣ್ಣಾ-ತಂಗಿಯ ಮಾತು, ಬೀಗ ಬಂದಾನಪ್ಪ, ಹೆಸರತರಬೇಕ ಮುಂತಾದ ಮದುವೆ ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅಲ್ಲದೇ ಜನಪದರ ಭಕ್ತಿ ಅಂತಃಕರಣದಿಂದ ಅರಳಿ ಬಂದದ್ದು ಅವರ ಪಾಲಿಗೆ ಎಲ್ಲವೂ ದೇವರೆ. ಗ್ರಾಮದೇವತೆ ದ್ಯಾಮವ್ವನ, ಹಣ್ಣತುಂಬ್ಯಾರೆ, ಮೈಲಾರಲಿಂಗನ, ನನಕೂಡ ಮಾತಡ, ಸವದತ್ತಿ ಎಲ್ಲಮ್ಮನ, ಗಲ್ಲದ ಮ್ಯಾಲ ತುದಿ ಸೆರಗ ಮೊದಲಾದವುಗಳ ಕುರಿತ ಸ್ತುತಿಪರ ಗೀತೆಗಳಿವೆ.

ಭಾಷೆಯ ದೃಷ್ಟಿಯಿಂದ ಪ್ರಾದೇಶಿಕತೆಯನ್ನು ಪ್ರತಿಬಿಂಬಿಸುತ್ತವೆ. ಈ ಗೀತೆಗಳು ಯಾವ ಸಂಪ್ರದಾಯದಲ್ಲಿ ಹಾಡುವ ಸಲುವಾಗಿ ರಚಿತವಾದುವೋ, ಅಲ್ಲಿ ಇವು ಉಚಿತವಾಗಿಯೇ ಇರುತ್ತವೆ. ಇಂದು ಈ ಹಾಡುಗಳು ಆಧುನಿಕ ಮಾಧ್ಯಮಗಳಲ್ಲಿ ಬಳಕೆಗೊಂಡು ಹೊಸದೊಂದು ಆಯಾಮವನ್ನೇ ಸೃಷ್ಟಿಸಿವೆ.

**೪. ಮೊಗಳ್ಳಿ ಗಣೇಶ್ ಅವರ 'ದೇಶಿ' ಮತ್ತು 'ದಲಿತರು ಮತ್ತು ಜಾಗತೀಕರಣ' (ಕೃತಿಗಳು).**

ಮೊಗಳ್ಳಿ ಗಣೇಶ್ ಅವರ 'ದೇಶಿ' ಮತ್ತು 'ದಲಿತರು ಮತ್ತು ಜಾಗತೀಕರಣ' ಕೃತಿಗಳಲ್ಲಿ ನವಮೌಖಿತೆಯ ಕುರಿತಾದ ಚರ್ಚೆ ತಾತ್ವಿಕವಾಗಿ ಮಾಡಿದ್ದಾರೆ. ಇವರು ಜಾನಪದವನ್ನು ವಿವರಿಸುವ ಸಾಂಪ್ರದಾಯಿಕ ಮಾದರಿಗಿಂತ ಬೇರೆ ಮಾದರಿಯೊಂದರಲ್ಲಿ ವಿವರಿಸಿದ್ದಾರೆ. "ವಿಜ್ಞಾನದ ಮೂಲಕ ಹುಟ್ಟಿಕೊಂಡ ತಾಂತ್ರಿಕ ಪ್ರತಿಭೆಯು ಜಾನಪದ ಸಂವೇದನೆಯನ್ನು ಬದಲಿಸಿದೆ. ಹಳೆಯ ಜಾನಪದರ ಸೃಜನಶೀಲ ಪ್ರವೃತಿಯನ್ನು ತಂತ್ರಜ್ಞಾನ ಪ್ರವೇಶಿಸಿದಂತೆಯೇ ಅಲ್ಲಿನ ಸೃಷ್ಟಿ ಕ್ರಿಯೆ ಆಧುನಿಕಗೊಂಡಿದೆ. ಹೊಸ ಯುಗದ ಜಾನಪದದಲ್ಲಿ ನಮಗರಿವಿಲ್ಲದೆಯೇ ತಂತ್ರಜ್ಞಾನ ಆಕೃತಿಗಳು ಬಿತ್ತರಗೊಂಡಿವೆ. ಸಮುದಾಯಗಳೂ ಕೂಡ ತಾಂತ್ರಿಕಗೊಳ್ಳುತ್ತಿವೆ. ಯಾಂತ್ರಿಕ ಜೀವನ ಕ್ರಮದಲ್ಲಿ ಜಾನಪದ ಅತ್ಯಂತ ಆಳದಲ್ಲಿ ಭಿನ್ನ ಪ್ರಕಾರಗಳು ನಶಿಸುತ್ತಿವೆ ಎಂದರೆ ಅದು ಈ ಬಗೆಯ ಆಂತರಿಕ ರೂಪಾಂತರಗಳ ವಿಕಾಸಕ್ಕೆ ಒಳಗಾಗುತ್ತಿದೆ ಎಂದೇ ಅರ್ಥ".[೨]

ಮೊಗಳ್ಳಿ ಗಣೇಶ್ ಅವರು ಹೀಗೆ ಜಾನಪದ ಆಲೋಚನೆಗಳನ್ನು ಬೇರೆ ರೀತಿಯಲ್ಲಿ ಚಿಂತಿಸಿ ಜಾನಪದ ರೂಪಾಂತರ ಪ್ರಕ್ರಿಯೆಯನ್ನು ಗುರುತಿಸಿದ್ದಾರೆ. ಈ ಬಗೆಯ ಆತಂಕ ಮನೋಭಾವ ಬಿಟ್ಟು, ಜನಪದ ರೂಪಾಂತರಗಳೊಂದಿಗೆ ಹೊಸ ರೂಪ ಪಡೆಯುತ್ತಿದೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ.

**೫. ಹಿ.ಶಿ.ರಾಮಚಂದ್ರೇಗೌಡ ಅವರ 'ನಕಲಿ ಜಾನಪದ ಗೀತೆಗಳ ಕ್ಯಾಸೆಟ್ ಸಂವಾದ' ಹಾಗೂ 'ಸಿನಿಮಾ ಮತ್ತು ಜಾನಪದ ಗೀತೆಗಳ ಕ್ಯಾಸೆಟ್ ಪರಿಕಲ್ಪನೆ' (ಸಂವಾದ ಗೋಷ್ಠಿ).**

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಹಿ.ಶಿ.ರಾಮಚಂದ್ರೇ ಗೌಡರು ಮೌಖಿಕತೆಯ ಹೊಸ ರೂಪಾಂತರಗಳ ಬಗ್ಗೆ ಹೊಸ ಕಾರ್ಯಕ್ರಮಗಳನ್ನು ರೂಪಿಸಿದ್ದರು. ೨೦೦೧ರಲ್ಲಿ ನಕಲಿ ಜಾನಪದ ಗೀತೆಗಳ ಕ್ಯಾಸೆಟ್ ಸಂವಾದ, ೨೦೦೨ರಲ್ಲಿ ಸಿನಿಮಾ ಮತ್ತು ಜಾನಪದ ಗೀತೆಗಳ ಕ್ಯಾಸೆಟ್ ಪರಿಕಲ್ಪನೆ. "ಇವುಗಳ ಮೂಲಕ ನವಮೌಖಿಕದ ಸಾಧ್ಯತೆಗಳು ಮತ್ತು ಅಪಾಯಗಳ ಕುರಿತು ಚರ್ಚೆ ನಡೆದಿವೆ. ಆದರೆ ಇವು ಮೇಲ್ಮಟ್ಟದ ವಿವರಣೆಯ ಹಂತದಲ್ಲಿ ಚರ್ಚೆಯಾದವು. ಇವುಗಳಲ್ಲಿ ನಕಾರಾತ್ಮಕ ಧೋರಣೆಯೇ ಹೆಚ್ಚು. ಈ ಚರ್ಚೆ ಉತ್ತರ ಕರ್ನಾಟಕದಲ್ಲಿಯೇ ಹೆಚ್ಚು ದ್ವಂದ್ವಾರ್ಥದಿಂದ ರಚನೆಯಾಗಿ, ಮಹಿಳೆಯನ್ನು ಕೀಳಾಗಿ ಕಾಣುವ ಕೆಲವು ಕ್ಯಾಸೆಟ್‌ಗಳನ್ನು ಮಾತ್ರ ಗುರಿಯಾಗಿ ಇಟ್ಟುಕೊಂಡಿತು. ಆದರೆ ಅದೇ ಉತ್ತರ ಕರ್ನಾಟಕದ ಭಾಗದಲ್ಲಿ ಮೊಹರಂ

ಪದಗಳು, ಸೋಬಾನೆ ಪದಗಳು, ಭಜನಾ ಪದಗಳು, ಡೊಳ್ಳಿನ ಪದಗಳು, ತತ್ವಪದಗಳ ಸಾವಿರಾರು ಕ್ಯಾಸೆಟ್‌ಗಳನ್ನು ಗಮನಿಸದಿರುವುದು ಈ ಚರ್ಚೆಗಳ ಮಿತಿಯಾಗಿದೆ."[೩]

ಜನಪದ ಸಾಹಿತ್ಯದಲ್ಲಿ ನೋಡುವ, ಕೇಳುವ ಪ್ರಕ್ರಿಯೆಗೆ ಹೆಚ್ಚು ಮಹತ್ವವಿದೆ. ಇದು ಮುಂದೆ ಓದುವ, ಗ್ರಹಿಸುವ ಪರಂಪರೆಗೆ ವರ್ಗಾವಣೆಯಾಗಿದೆ. ಈಗ ಮತ್ತೆ ನೋಡುವ, ಕೇಳುವ ಪ್ರಕ್ರಿಯೆ ಹೆಚ್ಚುತ್ತಾ, ಓದುವ ಪರಂಪರೆ ಹಿಂದಕ್ಕೆ ಸಾಗುತ್ತಿದೆ. ಇಂದು ಜನಪದ ಸಂಗ್ರಹಗಳು ಪುಸ್ತಕ ರೂಪದಲ್ಲಿವೆ ಹೊರತು, ಅವು ಓದಿನ ಮೂಲಕ ಮತ್ತೆ ಪುನರ್ ನಿರ್ಮಾಣವಾಗುತ್ತಿಲ್ಲ. ಆದರೆ ರೇಡಿಯೋ, ದೂರದರ್ಶನ, ಸಿನಿಮಾ, ಅಂತರ್ಜಾಲಗಳಲ್ಲಿ ಜನಪದ ಹೊಸರೂಪ ಪಡೆದುಕೊಂಡು ಪುನರ್ ನಿರ್ಮಾಣಗೊಳ್ಳುತ್ತಿದೆ. ಈ ಕುರಿತಾದ ಅಧ್ಯಯನಗಳು ಖಚಿತವಾದ ನಿಲುವಿಗೆ ಬರಲು ಸಾಧ್ಯವಾಗಿಲ್ಲ. ಇದು ನವಮೌಖಿಕವನ್ನು ಗ್ರಹಿಸಲು ತೊಡಕಾಗಿದೆ.

**೬. ಗಂಗಾಧರ ಮೊದಲಿಯಾರ್ ಅವರ 'ಜನಪದ ಗಮ್ಮತ್ತು: ಅಂದಿನ ಕತೆ, ಇಂದಿನ ಸಮಸ್ಯೆ' (ಅಂತರ್ಜಾಲ ಲೇಖನ).**

ಗಂಗಾಧರ ಮೊದಲಿಯಾರ್ ಅವರು ಇಲ್ಲಿ ನೇರವಾಗಿ ನವಮೌಖಿಕದ ಬಗ್ಗೆ ಮಾತನಾಡದೆ ಅದರ ಇನ್ನೊಂದು ರೂಪ ಎನ್ನುವಂತೆ ಜನಪದದ ಪಲ್ಲಟದ ಬಗ್ಗೆ ಇಲ್ಲಿ ಮಾತನಾಡುತ್ತಾರೆ. ಅವರ ನಿಲುವು ಏನೆಂದರೆ, "ಈಗ ಸಿನಿಮಾ ಉದ್ಯಮದಲ್ಲಿ ರಚನೆಯಾಗುತ್ತಿರುವ ಕಥಾ ಜಗತ್ತನ್ನು ಗಮನಿಸಿ, ಗ್ರಾಫಿಕ್ ತಂತ್ರಜ್ಞಾನದ ಪರಿಧಿಯನ್ನು ನೋಡಿದರೆ, ಟಿವಿ ಚಾನಲ್ಲುಗಳ ಸ್ಪರ್ಧೆ ಎದುರಿಸಲು ಸಿನಿಮಾದ ಜನ ಸೃಷ್ಟಿಸುತ್ತಿರುವ ಅತಿಮಾನುಷ ಕತೆಗಳನ್ನು ಕಂಡರೆ ಜಾನಪದ ದೃಶ್ಯ ಮಾಧ್ಯಮದಲ್ಲಿ ಆವಾಹನೆಯಾಗಿ ಅದು ಪ್ರವಹಿಸುತ್ತಿರುವುದು ಎದ್ದು ಕಾಣುತ್ತಿದೆ. ಜಾನಪದ ವ್ಯಾಪ್ತಿ ದೊಡ್ಡದು. ಭೂಲೋಕ ಬಿಟ್ಟು ಬಾಹ್ಯಾಕಾಶದಲ್ಲಿನ ಬೇರೊಂದು ಲೋಕದಲ್ಲಿ ಮನೆ ಮಾಡಿ ಅಲ್ಲಿನ ಜೀವಗಳೊಂದಿಗೆ ವ್ಯವಹರಿಸುವ ಚಿತ್ರಗಳೂ ಕೂಡ ಒಂದು ಜನಪದ ಕಲ್ಪನೆ. ಅದೃಶ್ಯ ರೂಪಗಳೊಂದಿಗೆ ನಡೆಸುವ ಸಾಹಸ, ಭೂತ, ಪಿಶಾಚಿಗಳ ಕಲ್ಪನೆ, ರಾಕ್ಷಸರೊಂದಿಗೆ ಸಂಘರ್ಷ ಹೀಗೆ ಮನುಷ್ಯನ ಕಲ್ಪನೆಗೆ ತಕ್ಕಂತೆ ದೃಶ್ಯಾವಳಿಗಳು ಬೆಳೆಯುತ್ತಾ ಹೋಗುತ್ತವೆ.

ಮಾನವ ದೇವಲೋಕಕ್ಕೆ ಹೋಗಿ ಯಮನನ್ನು ಗೆದ್ದು ಬರುವ ಕಲ್ಪನೆ, ಭೂತವೊಂದನ್ನು ಬಾಟಲಿಯಲ್ಲಿಟ್ಟುಕೊಂಡು ಅದರ ಮೂಲಕ ಅಸಾಮಾನ್ಯ ಸಾಹಸ ಗಳನ್ನು ಮೆರೆಯುವುದು, ರಾಜ್ಯಕ್ಕಾಗಿ, ರಾಜಕುಮಾರಿಗಾಗಿ ಏಳು ಸಮುದ್ರ ದಾಟಿ ಹೋಗುವುದು ಇವೆಲ್ಲಾ ಅತಿಮಾನುಷ ಕಲ್ಪನೆಗಳು ಜನಪದದ ಖಜಾನೆಯನ್ನು ತುಂಬಿವೆ. ಇಂದು ದೂರದರ್ಶನದ ಬಹುತೇಕ ಚಾನಲ್ಲುಗಳು ಬಹುತೇಕ ಸೀರಿಯಲ್ಲುಗಳು ಜಾನಪದದ ಮೊರೆಹೋಗಿವೆ. ಸೂಪರ್‌ಮ್ಯಾನ್, ಸ್ಪೈಡರ್‌ಮ್ಯಾನ್, ಸ್ಟಾರ್‌ವಾರ್, ಹ್ಯಾರಿ ಪಾಟರ್ ವಿಶ್ವಜಾನಪದ ಕಥಾಲೋಕ ಬತ್ತಿ ಹೋಗಿಲ್ಲ ಎಂಬುದನ್ನು ಪದೇ ಪದೇ ನೆನಪಿಸುತ್ತಿವೆ. ಟಿವಿ ಚಾನಲ್ಲುಗಳಲ್ಲಿ ಪಂಚತಂತ್ರ, ಬೇತಾಳ ಕತೆಗಳು ಅತ್ಯಂತ ಜನಪ್ರಿಯ

ಸೀರಿಯಲ್ಲುಗಳು, ಇಂದಿನ ಅನಿಮೇಶನ್ ತಂತ್ರಜ್ಞಾನ ಕೂಡ ಜನಪದದ ವಿಸ್ತೃತದ ಭಾಗಗಳಾಗಿವೆ."[೨]

ಜನಪದ ಎಂಬುದು ಕಾಲಕಾಲಕ್ಕೆ ತನ್ನದೇ ಆದ ಹೊಸಹೊಸ ರೂಪಗಳನ್ನು ಪಡೆದುಕೊಳ್ಳುತ್ತದೆ. ಇಂದಿನ ಆಧುನಿಕ ಮಾಧ್ಯಮಗಳಲ್ಲಿ ಬಳಕೆಗೊಳ್ಳುತ್ತಿರುವ ಬಹುತೇಕ ವಿಷಯಕ್ಕೆ ಬುನಾದಿ ಈ ಜನಪದವಾಗಿದೆ. ಇದು ಬೇರೆ ಬೇರೆ ರೂಪವನ್ನು ಪಡೆದರು ಸಹ ತನ್ನ ಮೂಲ ಸತ್ವವನ್ನು ಎಂದಿಗೂ ಬಿಡದು. ಅದಕ್ಕೆ ಸಿನಿಮಾ ಚಲನಶೀಲ ಪರಂಪರೆಯ ಭಾಗವಾಗಿರುವುದರಿಂದ ಸಿನಿಮಾಕ್ಕೆ ಜನಪದೀಯ ಆಯಾಮ ಪ್ರಾಪ್ತವಾಗಿದೆ ಎಂಬುದು ಗಂಗಾಧರ ಮೊದಲಿಯಾರ್ ಅವರ ಆಶಯವಾಗಿದೆ.

**೭. ಚಂದ್ರು ಕಾಳೇನಹಳ್ಳಿಯವರ 'ಜನಪದ ಮತ್ತು ನಗರ ಜಾನಪದ' (ಲೇಖನ).**

ಚಂದ್ರು ಕಾಳೇನಹಳ್ಳಿಯವರ 'ಜನಪದ ಮತ್ತು ನಗರ ಜಾನಪದ' ಕುರಿತ ಲೇಖನದಲ್ಲಿ ನವಮೌಖಿಕತೆಯ ಪ್ರಸರಣದ ಬಗೆಗೆ ಸೂಕ್ಷ್ಮವಾದ ಒಳನೋಟಗಳಿವೆ. ಇಲ್ಲಿ ಖಚಿತವಾಗಿ ನವಮೌಖಿಕತೆಯ ಕುರಿತಂತೆ ಅವರು ಮಾತನಾಡುತ್ತಿಲ್ಲ. ಬದಲಾಗಿ ನವ ಮೌಖಿಕವು ಪಡೆದುಕೊಳ್ಳಬಹುದಾದ ಪ್ರಾಥಮಿಕ ಹಂತದ ಸೂಕ್ಷ್ಮಗಳನ್ನು ಗುರುತಿಸಿದ್ದಾರೆ. "ನಗರದ ಹಳ್ಳಿಗರು ತಾತ್ಕಾಲಿಕ ವಲಸಿಗರಾಗಿದ್ದು, ಅವರು ತಮ್ಮ ಹಳ್ಳಿಗಳಿಗೆ ಬರುವಾಗ ಬರಿಗೈಯಲ್ಲಿ ಬರದೇ ನಗರದ ಅವಶ್ಯಕತೆಗಳಾಗಿದ್ದ ಬೈಸಿಕಲ್, ರೇಡಿಯೋ, ಗಡಿಯಾರ ಮುಂತಾದವುಗಳನ್ನು ತಮ್ಮ ಹಳ್ಳಿಗಳಿಗೆ ತರುತ್ತಿದ್ದರು. ಇವುಗಳನ್ನು ನೋಡಿದ ಅವನ ಹಳ್ಳಿಯ ಜನರು ಅವುಗಳನ್ನು ವೈಭವದ ವಸ್ತುಗಳು ಎಂದು ಭ್ರಮಿಸಿದರು. ಈ ವೈಭವದ ವಸ್ತುಗಳೇ ನಂತರದಲ್ಲಿ ಅವರ ಜೀವನದ ಅವಶ್ಯಕ ವಸ್ತುಗಳಾದವು. ಹೀಗೆ ಹಳ್ಳಿಗಳ ಪ್ರಭಾವ ನಗರಗಳ ಮೇಲೆ ಹೇಗಾಗುತ್ತದೆ ಮತ್ತು ನಗರಗಳ ಪ್ರಭಾವ ಹಳ್ಳಿಗಳ ಮೇಲೆ ಹೇಗಾಗುತ್ತದೆ ಎಂಬುದನ್ನು ಗಮನಿಸಬಹುದು. ಈ ಕ್ರಿಯೆ ಸದ್ದುಗದ್ದಲವಿಲ್ಲದೆ ನಿರಂತರವಾಗಿ ಸಾಗುತ್ತಲೇ ಇದೆ."[೩]

ಕಾಳೇನಹಳ್ಳಿಯವರು ನಗರ ಮತ್ತು ಹಳ್ಳಿ ಒಂದರೊಳಗೊಂದು ಬೆರೆಯುವ ಸೂಕ್ಷ್ಮತೆಗಳ ಕುರಿತು ಹೇಳಿದ್ದಾರೆ. ಜಾನಪದವನ್ನು ಹಳ್ಳಿಗಳ ಜೊತೆ ಸಮೀಕರಿಸುವುದನ್ನು ಬಿಟ್ಟು, ಜಾನಪದವು ಇಂದು ನಗರದಲ್ಲಿ ಹೇಗೆ ಬೆಳೆಯುತ್ತಿದೆ ಎನ್ನುತ್ತ, ನಗರ ಜಾನಪದ ಪರಿಕಲ್ಪನೆಯ ಕುರಿತು ಮಾತನಾಡುತ್ತಾರೆ. ಇಲ್ಲಿ ಹಳ್ಳಿಯ ಮೌಖಿಕತೆ ನಗರದಲ್ಲಿ ನವಮೌಖಿಕವಾಗಿ ರೂಪಾಂತರಗೊಳ್ಳುತ್ತದೆ ಎಂದು ಹೇಳುತ್ತ, ರೇಡಿಯೋ ಮಾಧ್ಯಮದ ಉದಾಹರಣೆ ಕೊಡುತ್ತಾರೆ. ಹೀಗೆ ಜಾನಪದ ಅಧ್ಯಯನಗಳಲ್ಲಿ ಅದರಲ್ಲೂ ಆಧುನಿಕತೆಯ ಸ್ವೀಕಾರದ ಆಲೋಚನೆಗಳು ಬಂದಾಗ ನವಮೌಖಿಕದ ಹತ್ತಿರವಾದ ಸೂಕ್ಷ್ಮತೆಗಳನ್ನು ಇವರು ಕ್ರೋಡೀಕರಿಸಿದ್ದಾರೆ.

೮. ಅರುಣ್ ಜೋಳದಕೂಡ್ಲಿಗಿ ಅವರ 'ಕನ್ನಡ ಜನಪದ ಅಧ್ಯಯನದ ತಾತ್ವಿಕ ನೆಲೆಗಳು' (ಸಂಶೋಧನಾ ಕೃತಿ).

ಅರುಣ್ ಜೋಳದಕೂಡ್ಲಿಗಿ ಅವರ 'ಕನ್ನಡ ಜನಪದ ಅಧ್ಯಯನದ ತಾತ್ವಿಕ ನೆಲೆಗಳು' ಎಂಬ ಕೃತಿಯು ೨೦೧೨ರಲ್ಲಿ ಪ್ರಕಟಗೊಂಡಿದೆ. ಇದು ಅವರ ಪಿಎಚ್.ಡಿ., ಮಹಾಪ್ರಬಂಧವಾಗಿದೆ. ಈ ಕೃತಿಯು ಅರ್ಥಪೂರ್ಣವಾದ ಎಂಟು ಅಧ್ಯಾಯಗಳಲ್ಲಿ ವಿಶ್ಲೇಷಣೆಗೊಂಡಿದೆ.

ಇವರು ಜನಪದವೆಂದರೆ 'ಮೌಖಿಕತೆ' ಎನ್ನುವುದು ಜನಪದ ವಿದ್ವಾಂಸರ ನಂಬಿಕೆ. ಇನ್ನೂ ಮೌಖಿಕತೆಯ ಮುಂದುವರೆದ ಇನ್ನೊಂದು ಹಂತದ ಬಗೆಗೆ ಚಿಂತಿಸುವುದಿದ್ದರೆ, ಅದು ಜನಪದರೇತರವಾದದ್ದು ಎಂದು ಈ ಚಿಂತನೆ ಭಾವಿಸುತ್ತದೆ ಎನ್ನುತ್ತಾರೆ. ಇವರ ನಿಲುವು "ಮೌಖಿಕತೆಯ ನಂತರ ಹೊಸ ಬಗೆಯ ಮೌಖಿಕತೆಯೊಂದು ಸೃಷ್ಟಿಯಾಗುತ್ತದೆ ಎಂದರೆ, ಮೌಖಿಕ ಎಂಬ ನಂಬಿಕೆಯ ಮೇಲೆ ಹುಟ್ಟಿದ ಜಾನಪದ ಅಧ್ಯಯನಗಳ ಆಲೋಚನೆಗಳನ್ನೆಲ್ಲ ಪುನರ ವ್ಯಾಖ್ಯಾನಕ್ಕೆ ಒಳಪಡಿಸಬೇಕಾಗುತ್ತದೆ. ಇಂದು ಕನ್ನಡದಲ್ಲಿ ನವಮೌಖಿಕತೆಯ ಬಗೆಗೆ ಅಷ್ಟಾಗಿ ಚರ್ಚೆಯಾಗಿಲ್ಲ. ಬದಲಿಗೆ ನವಮೌಖಿಕದ ಕುರಿತು ಆಶಯವಿರುವ ಚರ್ಚೆಗಳು ಅಲ್ಲಲ್ಲಿ ಪ್ರಾಸಂಗೀಕವಾಗಿ ನಡೆದಿವೆ. ಕನ್ನಡ ಜಾನಪದ ಅಧ್ಯಯನಗಳಲ್ಲಾದ ನವಮೌಖಿಕತೆಯ ಚರ್ಚೆಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ನಗರ ಜಾನಪದ, ಸಿನಿಮಾ ಜಾನಪದ, ಸಮೂಹ ಸಂವಹನ ಮಾಧ್ಯಮ ಜಾನಪದ ಕುರಿತಂತೆ ಒಂದು ವಿಶ್ಲೇಷಣಾತ್ಮಕ ಚರ್ಚೆ ಈ ಭಾಗದಲ್ಲಿ ಸಾಧ್ಯವಾಗಿದೆ. ಒಟ್ಟಿನಲ್ಲಿ ಜನಪದವೆಂದರೆ 'ಮೌಖಿಕತೆ' ಎನ್ನುವ ತಿಳುವಳಿಕೆಯ ಆಚೆಗಿನ ಜನಪದ ಜಗಿತ. ನವಮೌಖಿಕ ಚರ್ಚೆಯನ್ನು ಮೂರು ಪ್ರಮುಖ ಅಂಶಗಳ ನೆಲೆಯಲ್ಲಿ ಮಾಡಬಹುದು. ಮೊದಲನೆಯದು ಮೌಖಿಕದಿಂದ ನವಮೌಖಿಕದತ್ತ, ಎರಡನೆಯದು ಧ್ವನಿ ಮುದ್ರಿತ ಮೌಖಿಕತೆ, ಮೂರನೆಯದು ಸಮೂಹ ಸಂವಹನ ಜನಪದ."[೬] ಹೀಗೆ ನವಮೌಖಿಕ ಕುರಿತು ಸ್ಪಷ್ಟವಾದ ನಿಲುವು ಇವರದಾಗಿದೆ.

ಜಾನಪದ ಅಧ್ಯಯನಗಳನ್ನು ಗಮನಿಸಿದರೆ ಜಾನಪದ ಲೋಕವನ್ನು ಕುರಿತು ಅಧ್ಯಯನ ಮಾಡುವ ಅಧ್ಯಯನಕಾರರು, ಇನ್ನೂ ಆಧುನಿಕತೆ ಜಾನಪದದ ಮೇಲೆ ಹೇಗೆ ಪ್ರಭಾವ ಬೀರುತ್ತಿದೆ ಎಂದು ಅಭ್ಯಸಿಸಲು ಹೊರಟವರು. ಹೀಗೆ ಜನಪದರು ಮತ್ತು ಅವರನ್ನು ಕುರಿತು ಅಧ್ಯಯನ ಮಾಡುವವರನ್ನು 'ಆಧುನಿಕತೆ' ಹೇಗೆ ಪ್ರಭಾವಿಸಿದೆ. ಕರ್ನಾಟಕದ ಸಂದರ್ಭದಲ್ಲಿ ಜಾನಪದ ಅಧ್ಯಯನಗಳಲ್ಲಿ ಆಧುನಿಕತೆ ಹುಟ್ಟಿಸಿದ ಆಲೋಚನ ಮಾದರಿಗಳು ಯಾವವು ಎನ್ನುವುದರ ಸ್ಥೂಲ ಚರ್ಚೆ ಈ ಅಧ್ಯಯನದಲ್ಲಿ ಮಾಡಿದ್ದಾರೆ.

ಆಧುನಿಕತೆ ಅಧ್ಯಯನವನ್ನು ಐದು ಭಾಗಗಳಾಗಿ ವಿಶ್ಲೇಷಿಸಿದ್ದು, ಮೊದಲು ಆಧುನಿಕತೆ ಕುರಿತ ಭಿನ್ನ ಆಯಾಮಗಳನ್ನು ತಿಳಿಸಿದ್ದಾರೆ. ಆಧುನಿಕತೆಯನ್ನು ವಿರೋಧಿಸುವ ಮತ್ತು ಸ್ವೀಕರಿಸುವ ವೈರುಧ್ಯಗಳನ್ನು ಇವರು ಉಪಶೀರ್ಷಿಕೆಗಳೊಂದಿಗೆ ಚರ್ಚಿಸಿದ್ದಾರೆ. ಆಧುನಿಕತೆಯ ಕಾರಣಕ್ಕೆ ಹುಟ್ಟಿದ ಅನ್ವಯಿಕ ಜಾನಪದ ಮತ್ತು ನವಮೌಖಿಕತೆಯ ಪರಿಕಲ್ಪನೆಗಳನ್ನು ಕನ್ನಡ ಜಾನಪದ ಅಧ್ಯಯನಗಳನ್ನು ಅನುಲಕ್ಷಿಸಿ ವಿಶ್ಲೇಷಿಸಿದ್ದಾರೆ. ಹೀಗೆ ಇವರು ಮೊದಲ ಬಾರಿಗೆ ನವಮೌಖಿಕತೆ ಎಂಬ ಪದವನ್ನು ಬಳಸುವ ಮೂಲಕ ಹೊಸ ಮೌಖಿಕತೆಯನ್ನು ಹುಟ್ಟು ಹಾಕಿದಂತಾಗಿದೆ.

**೯. ಟಿ.ಗೋವಿಂದರಾಜು ಅವರ 'ಆಧುನಿಕ ಜಾನಪದ ಸ್ವರೂಪ' (ಲೇಖನಗಳ ಸಂಕಲನ).**

ಟಿ.ಗೋವಿಂದರಾಜು ಅವರ 'ಆಧುನಿಕ ಜಾನಪದ ಸ್ವರೂಪ' ಲೇಖನಗಳ ಸಂಕಲನ ೨೦೧೬ರಲ್ಲಿ ಪ್ರಕಟಗೊಂಡಿದೆ. ಇವರು ನೇರವಾಗಿ ಇಲ್ಲಿ ನವಮೌಖಿಕದ ಬಗ್ಗೆ ಮಾತನಾಡದೆ ಅದರದೆ ಇನ್ನೊಂದು ರೂಪವೆಂಬಂತೆ ಆಧುನಿಕತೆಯಲ್ಲಿ ಜಾನಪದವು ಎನೆಲ್ಲಾ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತಿದೆ. ಅದರ ನೆಲೆ-ಹಿನ್ನೆಲೆ ಏನು? ಅದರ ಫಲ-ಪರಿಣಾಮ ಏನಾಗುತ್ತಿದೆ, ಇದನ್ನೆಲ್ಲಾ ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕಾದ, ದಾಖಲಿಸಬೇಕಾದ ಹೊಣೆಗಾರಿಕೆ, ಜಾನಪದ ಅಧ್ಯಯನಕಾರರ ಹಾಗೂ ಜಾನಪದ ಇತಿಹಾಸಕಾರರ ಮೇಲಿದೆ ಎಂಬುದು ನನ್ನ ಭಾವನೆ ಎಂದು ಹೇಳುತ್ತಾರೆ.

"ಜನಪದದ ವೈಜ್ಞಾನಿಕ ಸಂಗ್ರಹ ಕಾರ್ಯ ಒಂದು ಆದರ್ಶ ಆಲೋಚನೆ. ಆದರೆ ಎಲ್ಲರಿಂದಲೂ, ಎಲ್ಲಾ ಸಂದರ್ಶನದಲ್ಲೂ ಇದು ಸಾಧ್ಯವಾಗಲಾರದು. ಆಕಡೆ-ಈಕಡೆ ತಿರುಗುತ್ತಾ ಗದ್ದೆ ಕಳೆ ತೆಗೆಯುವ ಹಾಡುಗಾರತಿಯರ ಮುಂದೆ ಸಂಗ್ರಾಹಕ ತಾನು ಟೇಪ್ ರೀಕಾರ್ಡ್‌ರ್ ಹಿಡಿದುಕೊಂಡು ಓಡಾಡಲು ಸಾಧ್ಯವೇ? ಹಾಗೆ ಮಾಡಿದಾಗಲೂ ಟೇಪ್‌ನಲ್ಲಿ ಮುದ್ರಿತವಾದ ಎಲ್ಲಾ ಶಬ್ದಗಳು ಸ್ಪಷ್ಟವಾಗಿ, ಸರಿಯಾಗಿ ಗುರುತಿಸುವಂತೆ ದಾಖಲಾಗುತ್ತವೆ ಎಂಬುದಕ್ಕೆ ಗ್ಯಾರಂಟಿ ಏನು?. ಹೇಳಿದ್ದನ್ನೆಲ್ಲ ಸರಿಯಾಗಿ ಗ್ರಹಿಸಿ ಹಾಗೆ ಬರೆದುಕೊಳ್ಳುವ ಕಂಪ್ಯೂಟರ್ ಬಂದರೆ ಅದೊಂದು ದೊಡ್ಡ ಸಾಧನೆಯಾಗುತ್ತದೆ. ದಾಖಲೀಕರಣ ಹೆಚ್ಚು ವೈಜ್ಞಾನಿಕವು ಆಗುತ್ತದೆ. ಆದರೆ ಆಗಲೂ ಕಾರ್ಡಲೇಸ್ ಮೈಕ್‌ಗಳು ಅವರ ಬಾಯಿ ಹತ್ತಿರ ಇರುವುದರ ಬಗ್ಗೆ ಅವರು ಜಾಗ್ರತರಾಗುತ್ತಾರೆ. ಅದು ಹಾಡುಗಾರಿಕೆಯ ಮೇಲೆ ಪರಿಣಾಮ ಬೀರುತ್ತದೆ ಎಂಬುದು ನಿಜವಲ್ಲವೇ?."[೭] ಎಂಬುದನ್ನು ಟಿ.ಗೋವಿಂದರಾಜು ಅವರು ಇಲ್ಲಿ ಪಲ್ಲಟದ ಸೂಕ್ಷ್ಮತೆಯ ಕುರಿತು ಗ್ರಹಿಸಿದ್ದಾರೆ.

ಟಿ.ಗೋವಿಂದರಾಜು ಅವರು ಜಾನಪದವನ್ನು ಆಧುನೀಕರಣಗೊಳಿಸುವುದು ಒಂದು ಆಧುನಿಕ ಆಲೋಚನೆ ಎಂದು ಭಾವಿಸುತ್ತಾರೆ. ಆದರೆ ಅದನ್ನು ಸಂಗ್ರಹಿಸುವಾಗ ಆಗುವ ತೊಡಕುಗಳ ಬಗ್ಗೆ ಮಾತನಾಡುತ್ತಾರೆ. ಇಲ್ಲಿ ಜಾನಪದವನ್ನು ಹಿಡಿದಿಡಬೇಕಾದರೆ

ಅತ್ಯಾಧುನಿಕ ತಂತ್ರಗಾರಿಕೆ ಬೇಕು, ಅದನ್ನು ಮಾಡಬೇಕಾದರೆ ಇನ್ನೂ ಆಧುನಿಕ ಸಾಮಗ್ರಿಗಳ ಅವಶ್ಯಕತೆಯಿದೆ. ಮೂಲ ಆಶಯದಲ್ಲಿ ಚ್ಯುತಿ ಬಾರದಂತೆ ಜಾನಪದವನ್ನು ಸಂಗ್ರಹಿಸಿದರೆ ಅದು ಒಂದು ದೊಡ್ಡ ಸಾಧನೆ ಅಂತಲೇ ಹೇಳಬಹುದು ಎನ್ನುವುದು ಇವರ ಆಶಯವಾಗಿದೆ. ಇದು ನವಮೌಖಿಕದ ರೂಪವೇ ಆಗಿದೆ.

**೧೦. ರಂಗನಾಥ ಕಂಟನಕುಂಟೆ "ಕನ್ನಡದ ಹೊಸ ತೋಂಡಿತನ" (ಅಂತರ್ಜಾಲ ಲೇಖನ).**

೨೦೧೮ ಡಿಸೆಂಬರ್ ೧೪ರಂದು ಅಂತರ್ಜಾಲದಲ್ಲಿ ಪ್ರಕಟವಾದ "ಕನ್ನಡದ ಹೊಸ ತೋಂಡಿತನ" ಎಂಬ ಲೇಖನದಲ್ಲಿ ರಂಗನಾಥ ಕಂಟನಕುಂಟೆ ಅವರು ನವಮೌಖಿಕತೆಯನ್ನು ಕನ್ನಡ ಶಿಕ್ಷಣ ವ್ಯವಸ್ಥೆಯ ಕುರಿತಾದ ಚೌಕಟ್ಟಿನಲ್ಲಿ ಚರ್ಚಿಸಿದ್ದಾರೆ.

ಕಂಟನಕುಂಟೆ ಅವರು ಹೇಳುತ್ತಾರೆ, ಕಳೆದ ಎರಡು ದಶಕಗಳಿಂದ ಈಚೆಗೆ 'ಶಿಕ್ಷಣ' ಪಡೆದವರಲ್ಲಿ ಹೆಚ್ಚುತ್ತಿರುವ ಕನ್ನಡದ 'ನವಮೌಖಿಕತೆ' ಮತ್ತು ಕುಗ್ಗಿರುವ ಬರಹದ ಕಸುವಿನ ಬಗೆಗೆ ಚರ್ಚಿಸಲು ಪ್ರಯತ್ನಿಸಲಾಗುವುದು. ಇಲ್ಲಿ ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ, "ಕನ್ನಡ ಕಲಿತವರ ನವಮೌಖಿಕತೆ ಎಂದರೇನು? ಇಂದು ಈ ಪ್ರಶ್ನೆಯನ್ನು ಬಹಳ ಗಂಭೀರವಾಗಿ ಎದುರಾಗಬೇಕಿದೆ. ಅಂದರೆ ಮೇಲೆ ಹೇಳಿದಂತೆ ಶಿಕ್ಷಣದ ಹಲವು ಉದ್ದೇಶಗಳಲ್ಲಿ ಅಕ್ಷರ ಕಲಿಕೆಯೂ ಒಂದು. ಅದರಲ್ಲಿಯೂ ಕನ್ನಡದಂತಹ ನುಡಿಗಳಲ್ಲಿ ಅಕ್ಷರಸ್ಥರಾಗುವುದೆಂದರೆ ಕಲಿತ ವ್ಯಕ್ತಿಯು ಸಾಮಾಜಿಕವಾಗಿ ಸಬಲೀಕರಣಗೊಳ್ಳುವುದು.

ಕನ್ನಡ ನುಡಿಯನ್ನು ಆಧುನಿಕ ಜಗತ್ತಿನ ಅಗತ್ಯಗಳಿಗೆ ತಕ್ಕಂತೆ ಸಜ್ಜುಗೊಳಿಸುವುದು ಮತ್ತೊಂದು ಮುಖ್ಯ ಗುರಿಯಾಗಿರುತ್ತದೆ. ಆ ಮೂಲಕ ಕನ್ನಡವನ್ನು ಅದರದೇ ನೆಲದಲ್ಲಿ ಸಂಗೋಪನೆ ಮಾಡುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ. ಅಲ್ಲದೇ ನವಮೌಖಿಕತೆಗೆ ಬೇರೆ ಬೇರೆ ಕಾರಣಗಳಿವೆ. ೧. ಗಣಕಯಂತ್ರ ಮತ್ತು ಅಂತರ್‌ಜಾಲ ತಂತ್ರಜ್ಞಾನದ ವಿಪರೀತ ಬಳಕೆ. ೨. ಕನ್ನಡದ ದೋಷಪೂರಿತ ಬೋಧನೆ ಮತ್ತು ಕಲಿಕೆ. ೩. ಬದಲಾದ ಆರ್ಥಿಕ, ರಾಜಕೀಯ ನೀತಿಗಳಿಂದ ರೂಪಗೊಂಡ ಔದ್ಯಮಿಕ ಮತ್ತು ಸಾಮಾಜಿಕ ಪರಿಸರ. ೪. ಬದಲಾದ ಆರ್ಥಿಕ ನೀತಿಗಳ ಲಾಭ ಪಡೆದು ಸೃಷ್ಟಿಯಾಗುತ್ತಿರುವ ಪ್ರತಿಷ್ಠಿತ ವರ್ಗ. ಹೀಗೆ ಹಲವು ಸಂಗತಿಗಳು ಕನ್ನಡವನ್ನು ಮತ್ತೆ ನವಮೌಖಿಕತೆಗೆ ಮತ್ತು ಅಂಚಿಗೆ ತಳ್ಳುತ್ತಿವೆ. ಮೊದಲಿಗೆ ಇಲ್ಲಿ ಗಮನಿಸುವುದಾದರೆ ತಂತ್ರಜ್ಞಾನ ಬದುಕಿನ ಎಲ್ಲ ವಲಯವನ್ನು ಆವರಿಸಿಕೊಳ್ಳುತ್ತಿರುವುದು ಎಲ್ಲರ ಗಮನಕ್ಕೂ ಬಂದಿದೆ. ಅದರ ಬಳಕೆ ಹೆಚ್ಚಿದಂತೆ, ಇಂಗ್ಲಿಷ ಕೂಡ ಎಲ್ಲೆಡೆ ನುಗ್ಗಿಬಿಟ್ಟಿದೆ. ದಿನಸಿ ಅಂಗಡಿಯ ರಸೀದಿಗಳಿಂದ ಆರಂಭವಾಗಿ ನಿತ್ಯ ರವಾನಿಸುವ ಫೋನಗಳ ಸಂದೇಶಗಳವರೆಗೆ ಇಂಗ್ಲಿಷ ಹಬ್ಬಿದೆ"[೮] ಎನ್ನುತ್ತಾರೆ.

ರಂಗನಾಥ ಕಂಟನಕುಂಟೆ ಅವರ ಈ ಚರ್ಚೆ ಕನ್ನಡ ಸಮುದಾಯ ಮತ್ತೆ ಅಕ್ಷರದಿಂದ ನವಮೌಖಿಕತೆಯ ಕಡೆಗೆ ಚಲಿಸತೊಡಗಿದೆ ಎನ್ನಿಸುತ್ತದೆ. ಕನ್ನಡವು ಓದು,

ಬರಹ ಮತ್ತು ಬಳಕೆ ಕೆಲವರಿಗೆ ಮಾತ್ರ ಎನ್ನುವಂತಾಗಿದೆ. ಇಂದು ಕನ್ನಡವನ್ನು ನಮ್ಮ ನಾಳೆಗಳಿಗೂ ಉಳಿಸಿಕೊಳ್ಳಲು ಬಯಸುವವರ ಎದುರು ಹೊಸ ಸವಾಲನ್ನು ಮುಂದಿಟ್ಟಿದೆ. ಕನ್ನಡವನ್ನು ನಾವು ನಾಳೆಗೆ ತಕ್ಕಂತೆ ಸಜ್ಜಗೊಳಿಸಲು ಮಾಡಬೇಕಾದ ಹೊಸ ಪ್ರಯತ್ನಗಳ ಮೇಲೆ ಬೆಳಕು ಚಲ್ಲಿದೆ. ಪ್ರಸ್ತುತದಲ್ಲಿ ಕನ್ನಡಪರ ಕಾಳಜಿಯುಳ್ಳವರು ಎಂದಿಗಿಂತಲೂ ಇಂದು ಹೆಚ್ಚು ಯೋಚನೆ ಮಾಡಬೇಕಿದೆ ಎಂಬ ಆಶಯ ಇವರದ್ದಾಗಿದೆ.

ಮೌಖಿಕ ಸಾಹಿತ್ಯದಲ್ಲಿ ಬರುವ ಹಾಡುಗಳು ಬಾಯಿಂದ ಬಾಯಿಗೆ ಹರಡಿರುವ ಅಥವಾ ವರ್ಗಾವಣೆಯಾದ ಸಾಹಿತ್ಯವಾದರೆ, ನವಮೌಖಿಕ ಸಾಹಿತ್ಯ ಎನ್ನುವುದು ಬಾಯಿಯ ಮೂಲಕ ಆಧುನಿಕ ಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯೂಟ್ಯೂಬ್ ಇತ್ಯಾದಿ ಮಾಧ್ಯಮಗಳಿಂದ ಪ್ರಸಾರವಾದವು. ಒಂದು ಕಾಲಕ್ಕೆ ಮುಗಿದು ಹೋಗುತ್ತಿರುವ ಅಥವಾ ಮುಗಿದು ಹೋಗುವ ಸಾಹಿತ್ಯವನ್ನು (ಜನಪದ ಗೀತೆಗಳನ್ನು) ಆಧುನಿಕ ಮಾಧ್ಯಮಗಳು ಮುಂದಿನ ಪೀಳಿಗೆಗೆ ಅವುಗಳನ್ನು ಉಡುಗೊರೆಯಂತೆ ನೀಡುವ ಜವಾಬ್ದಾರಿಗಳನ್ನು ಹೊತ್ತುಕೊಂಡಿವೆ. ಹಾಗಾಗಿಯೇ ಇಂದು ಜನಪದ ಹಾಡುಗಳನ್ನು ಕೇಳುವ ಜನಾಂಗ ಹೆಚ್ಚಾಗಿದೆ. ಏಕೆಂದರೆ ಜನರು ಬಳಸುವ ಮಾಧ್ಯಮಗಳಲ್ಲಿ ಸಂಗೀತ ಸರಳವಾಗಿ ಸಿಗುವುದರಿಂದ ಎಲ್ಲರೂ ಸಂಗೀತವನ್ನು ಆಲಿಸುತ್ತಿದ್ದಾರೆ. ಹಾಗೆಯೇ ಹಾಡುಗಳನ್ನು ಹಾಡುವ ಹಾಗೂ ರಚನೆ ಮಾಡುವವರ ಸಂಖ್ಯೆಯೂ ಇಂದು ಹೆಚ್ಚಾಗುತ್ತಿದೆ.

ಇಂದು ಜಾನಪದ ಅಧ್ಯಯನದ ಬದಲಾದ ರೂಪದ ಕುರಿತು ಅಧ್ಯಯನಗಳು ಇನ್ನೂ ಶೈಶವಾವಸ್ಥೆಯಲ್ಲೇ ಇವೆ. ಏಕೆಂದರೆ ಈ ಬದಲಾದ ಸಾಹಿತ್ಯ ಕಣ್ಣಿಗೆ ಕಂಡರೂ ಕೂಡ ಅದರ ಕುರಿತಾದ ಅಧ್ಯಯನ ಅಷ್ಟೊಂದು ಸುಲಭದ ಅಧ್ಯಯನವಾಗಿಲ್ಲ. ನಾವು ಮತ್ತು ನಮ್ಮ ನಡವಳಿಕೆ ಬದಲಾದಂತೆ ಸಾಹಿತ್ಯವು ಕೂಡಾ ಬದಲಾಗುತ್ತದೆ. ಅದಕ್ಕಾಗಿ ಸಾಹಿತ್ಯವನ್ನು ಆ ಕಾಲಕ್ಕೆ ತಕ್ಕಂತೆ ಅದರ ಅಧ್ಯಯನ ಮುಖ್ಯವಾಗಿರುತ್ತದೆ. ಹೀಗೆ ಜನಪದ ಗೀತೆಗಳು ಬದಲಾದ ರೀತಿಯಲ್ಲಿ ಪ್ರಸಾರವಾಗುತ್ತಿರುವುದು ಇಂದಿನ ಈ ಅಧ್ಯಯನಕ್ಕೆ ಮುಖ್ಯ ಆಕರವಾಗಿದೆ.

ಪ್ರಸ್ತುತ "ಉತ್ತರ ಕರ್ನಾಟಕದ ನವಮೌಖಿಕ ಸಾಹಿತ್ಯದ ಆಯಾಮಗಳು" ಎಂಬ ಅಧ್ಯಯನವು ಇದುವರೆಗೆ ಆದ ಅಧ್ಯಯನಗಳಿಗಿಂತ ಭಿನ್ನವಾದದ್ದು. ಇಲ್ಲಿ ನವಮೌಖಿಕ ಸಾಹಿತ್ಯ ಎಂಬುದು ಮೌಖಿಕ ಸಾಹಿತ್ಯದ ಮುಂದುವರೆದ ಭಾಗವಾಗಿದೆ. ಇಂದು ಈ ಅಧ್ಯಯನದ ಅವಶ್ಯಕತೆ ಇಲ್ಲದಂತೆ ಮೇಲ್ನೋಟಕ್ಕೆ ಕಂಡರೂ ಸಹ ಈ ಅಧ್ಯಯನ ಅವಶ್ಯಕತೆ ಇದೆ ಎಂಬುದನ್ನು ಈ ಅಧ್ಯಯನದ ಮೂಲಕ ತೋರಿಸುವ ಒಂದು ಪ್ರಯತ್ನವಾಗಿದೆ.

**ಕೊನೆ ಟಿಪ್ಪಣಿಗಳು**

೧. ಎಚ್.ಎಲ್.ನಾಗೇಗೌಡ, ಸುವರ್ಣ ಜಾನಪದ-೧, ಪುಟ: ೭೨.
೨. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ಪುಟ: ೧೭೭.
೩. ಅರುಣ್ ಜೋಳದಕೂಡ್ಲಿಗಿ, ಕನ್ನಡ ಜಾನಪದ ಅಧ್ಯಯನದ ತಾತ್ವಿಕ ನೆಲೆಗಳು, ಪುಟ: ೨೭೬.
೪. https//www.prajavani.net/columns/%EO.
೫. ಚಂದ್ರು ಕಾಳೇನಹಳ್ಳಿ, ಸುವರ್ಣ ಜಾನಪದ-೨, ಪುಟ: ೪೧೨.
೬. ಅರುಣ್ ಜೋಳದಕೂಡ್ಲಿಗಿ, ಕನ್ನಡ ಜಾನಪದ ಅಧ್ಯಯನದ ತಾತ್ವಿಕ ನೆಲೆಗಳು, ಪುಟ: ೨೬೭.
೭. ಟಿ.ಗೋವಿಂದರಾಜು, ಆಧುನಿಕ ಜಾನಪದ ಸ್ವರೂಪ, ಪುಟ: ೧೪.
೮. https//samajamukhi.com/%EO.

# ಅಧ್ಯಾಯ : ಮೂರು

## ನವಮೌಖಿಕ ಸಾಹಿತ್ಯದ ವಸ್ತು, ಆಶಯ ಮತ್ತು ರೂಪ

## ಅಧ್ಯಾಯ : ಮೂರು

# ನವಮೌಖಿಕ ಸಾಹಿತ್ಯದ ವಸ್ತು, ಆಶಯ ಮತ್ತು ರೂಪ

ಜನಪದ ಸಾಹಿತ್ಯದಲ್ಲಿ ಗೀತೆಗಳಿಗೆ ಮಹತ್ವವಾದ ಸ್ಥಾನವಿದೆ. ಇಲ್ಲಿ ಕವಿಗಳ ದರ್ಶನವೇ ಕಾವ್ಯ ಎನ್ನುವಂತೆ ಕವಿಯು ಅನುಭವಿಸಿದ ಸೌಂದರ್ಯ, ಆನಂದಗಳನ್ನು ಅಲಂಕಾರಯುತವಾಗಿ ವರ್ಣಿಸಿದಾಗ ಅದು ಕಾವ್ಯವಾಗುತ್ತದೆ. ಜನಪದ ಕವಿಗಳು ಅಲಂಕಾರ ಶಾಸ್ತ್ರವನ್ನು ಅಧ್ಯಯನ ಮಾಡಿದವರಲ್ಲ. ಅವರ ಅನುಭವದ ಸಾರವೇ ಅಲಂಕಾರ ವರ್ಣನೆಯಾಗಿರುತ್ತದೆ. ಹಿಂದಿನಿಂದಲೂ ಹೆಣ್ಣುಮಕ್ಕಳಿಗೆ ಗೀತೆಗಳಲ್ಲಿ ಅಗ್ರಸ್ಥಾನ ವಿದೆ. ಅವರ ಕುರಿತಾದ ಹಾಡುಗಳು ಮತ್ತು ಅವರೇ ಹಾಡಿದ ಹಾಡುಗಳನ್ನು ನೋಡಿದ್ದೇವೆ. ಅದೇ ರೀತಿ ಇಂದು ಆಧುನಿಕ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುತ್ತಿರುವ ಜನಪದ ಗೀತೆಗಳನ್ನು ನೋಡಿದಾಗ, ಮೇಲ್ನೋಟಕ್ಕೆ ಪುರುಷರೇ ಹಾಡುಗಳನ್ನು ರಚನೆ ಮಾಡಿ ಹಾಡಿರುವುದು ಕಂಡು ಬಂದರೂ ಸಹ, ಇಲ್ಲಿಯೂ ಸ್ತ್ರೀಯನ್ನೇ ಕೇಂದ್ರವಾಗಿಟ್ಟುಕೊಂಡು ರಚನೆ ಮಾಡಿರುವುದು ವಿಶೇಷ.

### ವಸ್ತು ಮತ್ತು ಆಶಯ

ಜನಪದ ಸಂಗೀತವು ಜನಸಾಮಾನ್ಯರ ಜೀವನದಲ್ಲಿ ಹಾಸು ಹೊಕ್ಕಾಗಿದೆ. ಮನುಷ್ಯ ತನ್ನ ಜೀವನದ ಪ್ರತಿಯೊಂದು ಅನುಭವವನ್ನು ತನ್ನದೇ ಆದ ಧಾಟಿಯಲ್ಲಿ ಸೆರೆ ಹಿಡಿದಿಟ್ಟ. ಹುಟ್ಟಿನಿಂದ ಮರಣ ಪರಿಯಂತಹ ಪ್ರತಿಯೊಂದು ನಿಮಿಷದ ಅನುಭವಗಳಿಂದ ಪ್ರಚೋದನೆ ಪಡೆದು, ತೀವ್ರತಮ ಭಾವನೆಗಳಿಂದ ಪ್ರೇರಿತನಾಗಿ ಹಾಡಲು ತೊಡಗಿದ. ಉಳುವಾಗ, ಬಿತ್ತುವಾಗ, ಹಾಳು ಹರಟೆ ಹೊಡೆಯುವಾಗ, ಭತ್ತ ಕುಟ್ಟುವಾಗ, ದಾರಿಯ ದಣಿವನ್ನು ಮರೆಯಲು, ಭಯವನ್ನು ಹೋಗಲಾಡಿಸಲು, ಹೆಣ್ಣು ಗಂಡನ ಮನೆಗೆ ಹೋಗುವಾಗ, ತವರು ಮನೆಗೆ ಬರುವಾಗ, ಹುಟ್ಟಿದಾಗ, ಸತ್ತಾಗ ಒಂದೆ, ಎರಡೇ ಜನಪದ ಸಂಗೀತವು ಜೀವನದ ಸಮಗ್ರ ಘಟನೆಗಳನ್ನು ತನ್ನ ಲಯದ ಧಾಟಿಯಲ್ಲಿ ಮುಪ್ಪುರಿಗೊಂಡಿದೆ. ಹೀಗೆ ಜೀವನದ ಬೇರೆ ಬೇರೆ ಅನುಭವಗಳನ್ನು ಆಧರಿಸಿ ಬೇರೆ ಬೇರೆ ಜನಪದ ಹಾಡುಗಳು ಇಂದು ಬೆಳಕಿಗೆ ಬಂದಿವೆ.

ಜನಪದ ಸಾಹಿತ್ಯವು ಕಾಲಾನುಘಟ್ಟಕ್ಕೆ ಅನುಸಾರವಾಗಿ ಬೆಳೆದುಕೊಂಡು ಬಂದಿದೆ. ಪ್ರತಿಯೊಬ್ಬರ ಜೀವನದ ಪಯಣದಲ್ಲಿ ಸುಖ–ದು:ಖಗಳು, ಸಿಟ್ಟು–ಸೇಡು, ತಿಳಿಹೇಳುವ ಮಾತುಗಳು, ಸ್ನೇಹ, ಬಾಂಧವ್ಯಗಳು, ರಸಿಕತೆ, ಮನರಂಜನೆಯ ಕ್ಷಣಗಳು, ಕೌಂಟುಬಿಕ ವಿಚಾರ ಮತ್ತು ಭಾವನೆ ಮುಂತಾದ ವಿಷಯಗಳನ್ನು ಇಂದು ನವಮೌಖಿಕ ಹಾಡುಗಳಲ್ಲಿ

ಕಾಣುತ್ತೇವೆ. ಹಾಗೆಯೇ ಬದುಕಿನಲ್ಲಿ ಘಟಿಸಿದ ಘಟನೆಗಳನ್ನು ಬಿಂಬಿಸುವ ರೂಪದಲ್ಲಿ ನವಮೌಖಿಕ ಹಾಡುಗಳು ಮೂಡಿಬಂದಿವೆ.

**ಮಹಿಳೆ**

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಗೆ ತನ್ನದೇ ಆದ ಸ್ಥಾನವನ್ನು ಕಲ್ಪಿಸಲಾಗಿದೆ. ನಮ್ಮೆಲ್ಲರನ್ನು ತನ್ನ ಎದೆಯ ಮೇಲೆ ಇಟ್ಟುಕೊಂಡು ಸಾಕಿ ಬೆಳೆಸುವ ಈ ಭೂಮಿ ತಾಯಿ, ನಂತರದಲ್ಲಿ ಒಂಬತ್ತು ತಿಂಗಳು ತನ್ನ ಗರ್ಭದಲ್ಲಿ ಇಟ್ಟುಕೊಂಡು ಬೆಳೆಸಿ ಹೊರ ಪ್ರಪಂಚವನ್ನು ಪರಿಚಯಿಸಿ ಬೆಳೆಸುವ ಹೆತ್ತ ತಾಯಿ, ಮುಂದೆ ಒಡಹುಟ್ಟಿದ ಅಕ್ಕ-ತಂಗಿಯಾಗಿ, ನಂತರದಲ್ಲಿ ಗಂಡು ಎಂಬ ಕುಲಕ್ಕೆ ಬರುವ ಹೆಂಡತಿಯಾಗಿ ಮುಂದುವರೆದು ಆ ಮನೆಯ ಮಗಳಾಗಿ ಹೀಗೆ ಬೇರೆ ಬೇರೆ ಸ್ಥಾನದಲ್ಲಿ ಹೆಣ್ಣನ್ನು ಕಾಣುತ್ತೇವೆ. ಇಂತಹ ಹೆಣ್ಣಿನ ಕುರಿತಾಗಿ ಜನಪದರು ತಮ್ಮದೇ ಆದ ಶೈಲಿಯಲ್ಲಿ ಹಾಡುಗಳನ್ನು ಕಟ್ಟಿ ಅವಳ ನಿಜ ಸ್ವರೂಪವನ್ನು ಇಂದು ನವಮೌಖಿಕ ಗೀತೆಗಳ ಮೂಲಕ ಬಿಚ್ಚಿಟ್ಟಿದ್ದಾರೆ.

ಹೆಣ್ಣು ಮಗಳು ಹುಟ್ಟಿ ಬೆಳೆಯುವುದು ಒಂದು ಮನೆ. ನಂತರ ಇನ್ನೊಂದು ಮನೆಯ ಸೊಸೆಯಾಗಿ ಹೋಗಿ ಆ ಮನೆಗೆ ಬೆಳಕಾಗಿ ಇರಬೇಕು. ಪ್ರತಿಯೊಂದು ಹೆಣ್ಣು ಮಗಳು ತನ್ನ ಜೀವಿತಾವಧಿಯಲ್ಲಿ ಎರಡು ಮನೆಯಲ್ಲಿ ತನ್ನ ಜೀವನವನ್ನು ಸಾಗಿಸಬೇಕು. ಒಂದು ತವರು ಮನೆ ಇನ್ನೊಂದು ಗಂಡನ ಮನೆಯಾಗಿದೆ. ಮದುವೆಯಾದ ನಂತರ ತವರು ಮನೆಯಲ್ಲಿನ ತಂದೆ-ತಾಯಂದಿರು ತಮ್ಮ ಮಗಳಿಗೆ ಗಂಡನ ಮನೆಗೆ ಹೋಗಬೇಕಾದ ಸಂದರ್ಭದಲ್ಲಿ ತಿಳಿಹೇಳುವ ಮಾತುಗಳನ್ನು, ಈ ಕೆಳಗಿನ ನವಮೌಖಿಕ ಗೀತೆಗಳಲ್ಲಿ ಕಾಣಬಹುದು.

ಬುದ್ಧಿ ಮಾತು ಹೇಳಿದರೆ ಕೇಳಬೇಕಮ್ಮ!
ಮಗಳೇ ಮನಶುದ್ಧಳಾಗಿ ಗಂಡನೊಡನೆ ನೀ ಬಾಳಬೇಕಮ್ಮ!
ಅತ್ತೆ ಮಾವರಿಗಂಜಿ ನಡೆಯಬೇಕಮ್ಮ![೧]...

ಈ ಪದ್ಯದ ಮೂಲಕ ತಾಯಿಯು ತನ್ನ ಮಗಳಿಗೆ ಗಂಡನ ಮನೆಯಲ್ಲಿ ಎಲ್ಲ ಹಿರಿಯರಿಗೆ ಗೌರವ ನೀಡುತ್ತಾ, ದಿನನಿತ್ಯದ ಕೆಲಸಗಳನ್ನು ಸರಿಯಾಗಿ ಮಾಡುತ್ತಾ, ಯಾರ ಜೊತೆಗೂ ಜಗಳವಾಡದೆ ಎಲ್ಲರೊಂದಿಗೆ ಪ್ರೀತಿಯಿಂದ ಬೆರೆಯಬೇಕು. ಇಲ್ಲಿ ತಾಯಿಯು ಗಂಡನ ಮನೆಗೆ ಹೋಗುವ ತನ್ನ ಮಗಳಿಗೆ ತಿಳುವಳಿಕೆ ಮಾತುಗಳನ್ನಾಡಿರುವುದನ್ನು ಇಲ್ಲಿ ಕಾಣುತ್ತೇವೆ.

ಚಾಡಿ ಮಾತು ಕೇಳಿ ನೀನು ಜಾರಿ ಬೀಳಬೇಡ
ಬಿದ್ದ ಮೇಲೆ ಮಾನ ಉಳಿಯೋದಿಲ್ಲ
ಶೀಲ ಹೋದರೆ ಸತ್ತಂಗ, ಗಡಿಗೆ ಒಡಿದರೆ ಬಾರದಂಗ
ಹೆಣ್ಣಾಗಿ ಇದ್ದೂ ನೀನು ಇಲ್ಲದಂಗ[೨]...

ಇಲ್ಲಿ ಗಂಡನ ಮನೆಗೆ ಹೋಗುವ ತನ್ನ ಮಗಳಿಗೆ ತಾಯಿಯಾದವಳು ನೀತಿ ಮಾತುಗಳನ್ನು ಯಾವ ರೀತಿಯಾಗಿ ಹೇಳುತ್ತಾಳೆ ಎಂಬುದನ್ನು ಈ ಪದ್ಯದಲ್ಲಿ ಕಾಣುತ್ತೇವೆ. ನೆರೆಹೊರೆಯವರ ಚಾಡಿಮಾತುಗಳನ್ನು ಕೇಳಬೇಡ. ನೀನು ಬೆಳಕಾಗಿರಬೇಕಾದ ಮನೆಗೆ ಕತ್ತಲಾಗಬೇಡ ಎಂದು ಹೇಳುತ್ತ, ಹೆಣ್ಣಿಗೆ ಶೀಲ ಎಷ್ಟು ಪವಿತ್ರ ಎಂಬುದನ್ನು ತಿಳಿಸುವ ಸಂದರ್ಭದಲ್ಲಿ ಈ ಗೀತೆ ಮೂಡಿಬಂದಿದೆ.

ಗಂಜೀಯ ಕುಡಿದರೂ ಗಂಡನ ಮನಿಲೇಸು
ಅಂದಣದ ಮ್ಯಾಲೆ ಚವುರದ ಸಾರಿದರ
ಹಂಗಿನ ತವುರ ಮನಿಸಾಕ[೩]...

ಮದುವೆಯಾದ ಹೆಣ್ಣು ಹುಟ್ಟಿದ ಮನೆಯಿಂದ ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ, ಉಳಿದ ಬಂಧು ಬಳಗದವರನ್ನು ಬಿಟ್ಟು ಗಂಡನ ಮನೆಗೆ ಹೋಗುವ ಪ್ರತಿಯೊಂದು ಹೆಣ್ಣು ತನ್ನ ಮನಸ್ಸಿನಲ್ಲಿ ಈ ಭಾವನೆಗಳನ್ನು ಅಳವಡಿಸಿಕೊಳ್ಳಬೇಕು. ಎಷ್ಟೇ ಕಷ್ಟಗಳು ಎದುರಾದರು, ತಿನ್ನಲು ಆಹಾರದ ಕೊರತೆಯಿದ್ದರೂ ಗಂಜಿ ಕುಡಿದಾದರು ದೇವನೆಂಬ ಕಲ್ಪನೆಯಲ್ಲಿ ಪತಿಯ ಜೊತೆ ಬದುಕಬೇಕು ಎಂಬ ಆಶಯ ಈ ಪದ್ಯಭಾಗದಲ್ಲಿ ಕಾಣುತ್ತೇವೆ.

ಅತ್ತೆ ಮಾವರ ಪಾದ ತಂದೆ ತಾಯಿಯರ ಪಾದ
ಮತ್ತೆ ಗಂಡನ ಶ್ರೀಪಾದ। ನೆನೆದರೆ
ಬೆನ್ನ ಹಿಂದಿದೆ ಕೈಲಾಸ॥[೪]...

ತಂದೆ-ತಾಯಿ, ಅತ್ತೆ-ಮಾವ, ಗಂಡನನ್ನು ದೇವರೆಂದು ತಿಳಿದು ಅವರ ಪಾದಸೇವೆ ಮಾಡಬೇಕು. ನಿಯಮದನ್ವಯ ಆ ಹೆಣ್ಣು ಮಗಳು ಇವರನ್ನು ದೇವರೆಂದು ತಿಳಿದರ ಅವಳ ಸ್ವರ್ಗದ ಬಾಗಿಲು ತೆರೆಯುತ್ತದೆ. ಹೆಣ್ಣು ಮಗಳ ಸ್ವಾರ್ಥಕ ಬದುಕಿನ ತಾತ್ಪರ್ಯವನ್ನು ಈ ಗೀತೆ ವ್ಯಕ್ತಪಡಿಸುತ್ತದೆ.

**ಗೆಳೆಯ-ಗೆಳತಿ**

ಮನುಷ್ಯ ಇಂದು ವಿಜೃಂಭಿಸುತ್ತಿರುವ ಸಮಾಜದಲ್ಲಿ ಹಲವಾರು ಬಾಂಧವ್ಯಗಳು ಬೆಸೆದುಕೊಂಡಿವೆ. ಸಂಬಂಧಗಳ ಬಾಂಧವ್ಯಗಳು ಹುಟ್ಟಿ ಬೆಳೆದು ಜೀವನದ ಕೊನೆಯ ವರೆಗೂ ಗಟ್ಟಿಯಾಗಿರುತ್ತವೆ. ಕೆಲವೊಂದು ಸಂಬಂಧಗಳು ತಪ್ಪು ಕಲ್ಪನೆಯಲ್ಲಿಯೇ ಮಾಯವಾಗಿ ಬಿಡುತ್ತವೆ. ಅಂತಹ ಸಂಬಂಧಗಳಲ್ಲಿ ಗೆಳೆಯ-ಗೆಳತಿಯೆಂಬ ಸಂಬಂಧವು ಒಂದು. ಯಾವುದೇ ಒಂದು ಸಂದರ್ಭದಲ್ಲಿ ಅಥವಾ ಯಾವುದೇ ಒಂದು ಘಟನೆಯಲ್ಲಿ ಆಕರ್ಷಣೆಗೆ ಒಳಗಾಗಿ ಒಂದು ಮನಸ್ಸು ಇನ್ನೊಂದು ಮನಸ್ಸಿನಲ್ಲಿ ಲೀನವಾಗಿ ಒಂದು ಹೊಸ ಸಂಬಂಧವನ್ನು ಹುಟ್ಟು ಹಾಕುತ್ತದೆ. ಅದೇ ಮುಂದೆ ಪ್ರೀತಿ, ಪ್ರಣಯ ಎಂಬ ರಹದಾರಿಯಲ್ಲಿ ಗಟ್ಟಿಗೊಂಡ ಸಂಬಂಧವೇ ಈ ಗೆಳೆಯ-ಗೆಳತಿ. ಇಂತಹ ಸಂಬಂಧಗಳ ದ್ಯೋತಕವಾಗಿ ಹಲವಾರು ನವಮೌಖಿಕ ಹಾಡುಗಳು ಇಂದು ಬಿತ್ತರಗೊಳ್ಳುತ್ತಿವೆ.

ಬಾಳಿನ ಹಾದಿಲಿ ಬಂದಾನ
ಜೊತೆಯಲಿ ನಡೆಯಲು ನಿಂತಾನ
ಸೋತರೆ ನಾನಿರುವೆ ಎಂದಾನ,
ಸೋತರೆ ನಾನಿರುವೆ ಎಂದಾನ[೫]...

ಯಾವುದೋ ಒಂದು ಸಮಯ ಸಂದರ್ಭಗಳಲ್ಲಿ ಒಂದು ಮನಸ್ಸು ಕಣ್ನೋಟಿನ ರಸಭಾವಕ್ಕೆ ಒಳಗಾಗಿ, ಇನ್ನೊಂದು ಕಣ್ನೋಟಿಗೆ ಸೋತು ಪ್ರೀತಿ-ಪ್ರೇಮವೆಂಬ ಭಾವಕ್ಕೆ ಒಳಗಾದ ಸಂದರ್ಭದಲ್ಲಿ, ಆ ಹೆಣ್ಣು ತನ್ನ ಇನಿಯನ ಮೋಡಿಯ ಮಾತುಗಳನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತಾ, ನೀನು ಸೋತರೆ ನಾನಿರುವೆ ಎಂಬ ಅಭಯ ಹಸ್ತವನ್ನು ನೀಡಿದ ಮಧುರವಾದ ಕ್ಷಣಗಳನ್ನು ನೆನೆಯುತ್ತಿರುವ ಸಂದರ್ಭದ ಕುರಿತು ಇಲ್ಲಿ ಚಿತ್ರಣಗೊಂಡಿದೆ.

ಸೊಪ್ಪಿಗಂತ ನೀ ಬಾರೆ ಸೌದೆಗಂತ ನಾ ಬರುವೆ
ಮರ್‍ಯಾಗ ನಿಂತು ಮಾತ್ನಾಡೋಣ।
ಮರ್‍ಯಾಗ ನಿಂತು ಮಾತ್ನಾಡೋಣ ಎಲೆ ಹುಡುಗಿ
ತಿಂಗಳಿಂದ ನಿನ್ನ ಮ್ಯಾಗದೆ ನನಗ್ಯಾನ[೬]...

ಪ್ರೀತಿಸುವ ಎರಡು ಮನಸ್ಸುಗಳ ತಳಮಳಗಳನ್ನು ನಾವು ಇಲ್ಲಿ ಕಾಣುತ್ತೇವೆ. ತರಕಾರಿ ತರಲು ನೀನು ಆ ಕಡೆಯಿಂದ ಬಾ ನಾನು ಕಟ್ಟಿಗೆ ತರಲು ಬರುವೆ, ಆ ಸಂದರ್ಭದಲ್ಲಿ ಇಬ್ಬರು ಯಾರೂ ನೋಡದ ಸ್ಥಳದಲ್ಲಿ ನಿಂತು ಹೃದಯದ ಮಾತುಗಳನ್ನು ಹಂಚಿಕೊಳ್ಳೋಣ ಎಂದು ಹಂಬಲಿಸುವ ಮನಸ್ಸುಗಳ ಮಾತುಗಳನ್ನು ಇಲ್ಲಿ ಕಾಣುತ್ತೇವೆ.

ನನ್ನ ನೆನಪು ನಿನಗಿರಲಿ ಗುಂಡಿಗೆಯ ಗೂಡಲ್ಲಿ
ದೂರಾದಿ ನನ್ನ ಗೆಳತಿ, ನಿನ್ನ ಬಂಡಿ ಸಾಗಲಿ
ಕಂಕಣವು ಕೂಡಿ ಚಂದಾಗಲಿ...
ಕಣ್ಣೀರು ಇಂದಿಗೆ ದೂರಾಗಲಿ ॥ಗ॥
ನಿನ್ನ ಮರೆತ್ಯಾಂಗ ನಾ ಇರಲಿ
ಮನಸ್ಸಿಲ್ಲದ ಮನೆಯಲ್ಲಿ ॥ಹೆ॥
ನನ್ನ ನೆನಪು ನಿನಗಿರಲಿ ಗುಂಡಿಗೆಯ ಗೂಡಲ್ಲಿ[೭]...

ನಿನ್ನ ಗುಂಡಿಗೆಯೆಂಬ ಮನಸ್ಸಿನಲ್ಲಿ ನನ್ನ ನೆನಪು ಸದಾ ಹಸಿರಾಗಿರಲಿ. ನಿನ್ನ ಕಣ್ಣೀರ ದೂರಾಗಲಿ, ನಿನ್ನ ಬಂಡಿ ಹಾಗೆ ಸಾಗುತ್ತಾ ಇರಲಿ, ನಿನ್ನನು ಮರೆಯಲು ಸಾಧ್ಯವಿಲ್ಲ ಗೆಳತಿ ಎಂದು ತನ್ನ ಪ್ರಿಯತಮೆಗೆ ಮನಮುಟ್ಟುವ ಹಾಗೆ ಪ್ರಿಯಕರ ಹೇಳುವ ನುಡಿಗಳು ಇಲ್ಲಿ ವ್ಯಕ್ತವಾಗಿವೆ.

ನನ ಗೆಳತಿ ನನ ಗೆಳತಿ
ನನ ನೋಡಿ ನೀ ನಗತಿ
ಓಣಿ ಹಿಡಿದ ನಾ ಬರುವಾಗ

ಹಳ್ಳ ಹೊಡಿತಿದಿ ನಿಂತ ಕಿಡಕ್ಯಾಗ
ಮನಸಾತು ನೀನಮ್ಯಾಲ
ಮೆಟ್ಟಮಾಡಿದಿ ಮನದಾಗ[8]...

ಪ್ರಸ್ತುತವಾಗಿ ಹೆಚ್ಚು ಆಕರ್ಷಣೀಯವಾಗಿ ಈ ಪದ್ಯ ಮೂಡಿಬಂದಿದೆ. ಇಲ್ಲಿ ಪ್ರಿಯತಮ ತಾನು ತನ್ನ ಪ್ರಿಯತಮೆ ಇರುವ ಓಣಿಯಲ್ಲಿ ಬರುವಂತಹ ಸಂದರ್ಭದಲ್ಲಿ ಕಿಟಕಿಯಿಂದ ಹಳ್ಳ ಹೊಡೆದು ನಾನು ನೋಡುವ ಹಾಗೆ ಮಾಡುತಿದ್ದಿ, ಆವಾಗ ನಿನ್ನ ಮೇಲೆ ಪ್ರೀತಿ ಜಾಸ್ತಿಯಾಯ್ತು ಎಂದು ಹೇಳುವ ಭಾವನೆಗಳು ಈ ಹಾಡಿನಲ್ಲಿ ಮೂಡಿವೆ. ಇಂತಹ ಹಾಡುಗಳಿಂದು ಯುವಜನಾಂಗದ ಮನಸ್ಸುಗಳನ್ನು ಸೆಳೆಯುತ್ತಿವೆ.

ಮನಸರ ಹ್ಯಾಂಗ ಬಂತ ಗೆಳತಿ
ಬಿಟ್ಟು ಹೋಗಲಾಕ ನಿಂತಿ...
ಬಣ್ಣದ ಮಾತು ನಂಬಿ ನಾ ಕೆಟ್ಟೆ
ಹಿಂಗ್ಯಾಕ ಮಾಡಿದಿ...
ಕಣ್ಣಾಗ ಕುಂತಿ ಮನದಾಗ ನಿಂತಿ
ಇಗ್ಯಾಕ ದುಡಿದಿ[9]...

ಯಾವುದೋ ಒಂದು ಸಂದರ್ಭದಲ್ಲಿ ಪ್ರೀತಿಸಿದ ಹೃದಯಗಳು ದೂರಾಗುವ ಸಂದರ್ಭಗಳು ಬರುತ್ತವೆ. ಇಲ್ಲಿ ಪ್ರೀತಿಯನ್ನು ದೂರ ಮಾಡಿದ ತನ್ನ ಪ್ರಿಯತಮೆಗೆ ಪ್ರಶ್ನೆಗಳನ್ನು ಕೇಳುವ ಪದ್ಯವಿದು. ಎಷ್ಟೊಂದು ಪ್ರೀತಿಸುತ್ತಿದ್ದ ನಿನಗೆ ಈಗ ಏನಾಗಿದೆ, ಬಿಟ್ಟು ಹೋಗುತ್ತಿರುವೆ ಏಕೆ?. ಬಣ್ಣದ ಮಾತುಗಳನ್ನಾಡಿ ನಾನು ನಂಬಿ ಕೆಟ್ಟು ಹೋದೆ ಎಂದು ಭಾವೋದ್ವೇಗಕ್ಕೆ ಒಳಗಾಗಿರುವ ಆ ಹುಡುಗನ ಮನಸ್ಸಿನ ಮಾತುಗಳು ಇಲ್ಲಿ ಮೂಡಿಬಂದಿವೆ.

ಕುಂತ್ರು ನಿಂತ್ರೂ ಬರಿ ಆಕಿ ನೆನಪಾಗತೈತಿ
ಎಲ್ಲಿ ನೋಡಿದರೂ ಆಕಿ ರೂಪ ಕಾಣತೈತಿ
ಹೊಟ್ಟಿ ಹಸ್ಯುದಿಲ್ಲಾ ನಿದ್ದಿ ಹೆಂಗ ಹತ್ತತೈತಿ
ನಿದ್ದಿ ಹತ್ತಿದಾಗ ಮನ ಎಬ್ಬಿಸತೈತಿ[10]...

ಉತ್ತರ ಕರ್ನಾಟಕ ಭಾಗದ ನವಮೌಖಿಕ ಹಾಡುಗಳಲ್ಲಿ ಹೆಚ್ಚು ಜನಪ್ರಿಯತೆ ಪಡೆದ ಹಾಡಿದು. ಪ್ರೀತಿಸಿದವಳನ್ನು ಪಾರಿವಾಳಕ್ಕೆ ಹೋಲಿಸಿ ತಾನು ಅವಳನ್ನು ಎಷ್ಟೊಂದು ಪ್ರೀತಿಸುತ್ತಿದ್ದೆ, ಅವಳು ಸಹ ತನ್ನನ್ನು ಪ್ರೀತಿಸುವ ಬಗೆಯನ್ನು ಹಾಡಿನ ಮೂಲಕ ಇಲ್ಲಿ ವಿವರಿಸುತ್ತಾರೆ. ಕೊನೆಗೆ ಅವಳು ತನ್ನನ್ನು ಬಿಟ್ಟು ಹೋದ ಸಂದರ್ಭದಲ್ಲಿ ಪಾರಿವಾಳ ಹೇಗೆ ಒಂದು ಗಿಡದಿಂದ ಮತ್ತೊಂದು ಗಿಡಕ್ಕೆ ಹಾರಿಹೋಗುವಂತೆ, ತಾನು ಪ್ರೀತಿಸಿದ ಹುಡುಗಿ ತನ್ನ ಮನಸ್ಸಿನಿಂದ ದೂರವಾದ ಸಂದರ್ಭದಲ್ಲಿ, ತನ್ನ ಮನಸ್ಸಿನಲ್ಲಿ ಉಂಟಾದ ಯಾತನೆಗಳನ್ನು ತಿಳಿಯಪಡಿಸುವ ಸಂದರ್ಭವಿದು. ಕುಂತರು ನಿಂತರು ನಿನ್ನದೆ ನೆನಪು ಬರತೈತಿ ಎಲ್ಲಿ ನೋಡಿದರು ನಿನ್ನ ರೂಪವೇ ಕಣ್ಣಿಗೆ ಕಾಣತೈತಿ, ಹೊಟ್ಟಿ ಹಸ್ಯುದಿಲ್ಲಾ ನಿದ್ದಿ

ಹೆಂಗ ಹತ್ತತೈತಿ ಎಂಬ ತನ್ನ ಮನಸ್ಸಿನ ಯಾತನೆಗಳನ್ನು ವಿಡಂಬಿಸಿದ್ದಾನೆ. ಹೀಗೆ ಹೆಣ್ಣನ್ನು ಕುರಿತು ಮೌಖಿಕದಿಂದ ನವಮೌಖಿಕದವರೆಗೆ ರಚನೆಗೊಳ್ಳುತ್ತ ಬಂದ ಹಾಡುಗಳು ಇಂದು ಎಲ್ಲರ ಮೆಚ್ಚುಗೆ ಪಡೆಯುತ್ತಿವೆ.

**ಅಣ್ಣ-ತಂಗಿ**

ಜನಪದ ಸಾಹಿತ್ಯದಲ್ಲಿ ಮೂಡಿಬಂದ ಹಲವಾರು ಹಾಡುಗಳಲ್ಲಿ ಅಣ್ಣ-ತಂಗಿಯ ಪ್ರೀತಿ, ಮಮತೆ, ವಾತ್ಸಲ್ಯದ ಕುರಿತಾದ ಹಾಡುಗಳನ್ನು ನೋಡುತ್ತೇವೆ. ಮದುವೆಯಾದ ಹೆಣ್ಣುಮಗಳಿಗೆ ತನ್ನ ತಂದೆ-ತಾಯಿಯ ಮೇಲೆ ಇರುವಷ್ಟೇ ಪ್ರೀತಿಯನ್ನು ತನ್ನ ಅಣ್ಣನ ಮೇಲೆ ಇಟ್ಟಿರುತ್ತಾಳೆ. ತನ್ನ ಜೊತೆ ಜೊತೆಗೆ ಬೆಳೆದಂತಹ ಅಣ್ಣನ ಪ್ರೀತಿಯನ್ನು ಜೀವನದ ಕೊನೆಯವರೆಗೂ ಇಟ್ಟುಕೊಂಡು ಬಂದ ನಿದರ್ಶನಗಳನ್ನು ಸಮಾಜದಲ್ಲಿ ಕಾಣುತ್ತೇವೆ. ತಂದೆ-ತಾಯಿಯ ಕೊಡುವ ಪ್ರೀತಿಯಷ್ಟೇ ಪ್ರೀತಿಯನ್ನು ಕೊಡುತ್ತಾ ಅವಳಿಗೆ ಶ್ರೀರಕ್ಷೆಯಾಗಿ ನಿಲ್ಲುವನೇ ಅಣ್ಣ. ತನ್ನ ತವರಿನಲ್ಲಿ ತಂದೆ-ತಾಯಿ ತೀರಿ ಹೋದರೂ ಅವರನ್ನು ತನ್ನ ಅಣ್ಣನಲ್ಲಿ ಕಾಣುತ್ತಾ, ಅಣ್ಣನ ಶ್ರೀರಕ್ಷೆಯಲ್ಲೇ ತವರಿನಲ್ಲಿ ಕಾಲಕಳೆಯುತ್ತಾಳೆ. ಅಣ್ಣನಾದವನು ಪ್ರತಿಯೊಂದು ಹಬ್ಬ-ಹರಿದಿನಗಳಲ್ಲಿ ತಂಗಿಯನ್ನು ಗಂಡನ ಮನೆಯಿಂದ ಕರೆದುಕೊಂಡು ಬಂದು ಅವಳನ್ನು ಹಬ್ಬದ ಸಂಭ್ರಮದಲ್ಲಿ ಸಂತೋಷಪಡಿಸುತ್ತ ಅವಳ ಖುಷಿಯನ್ನೇ ತನ್ನ ಖುಷಿಯೆಂಬಂತೆ ಸಂಭ್ರಮಿಸುತ್ತಾ ಇರುತ್ತಾನೆ. ತನ್ನ ತಂಗಿಗೆ ಗಂಡನ ಮನೆಯಲ್ಲಿ ಹೇಗೆ ಇರಬೇಕೆಂಬ ತಿಳುವಳಿಕೆಯ ಮಾತುಗಳನ್ನು ಸಹ ಹೇಳುತ್ತಾನೆ. ಇಂತಹ ವಿಷಯಗಳನ್ನ ಇಟ್ಟುಕೊಂಡು ಮೌಖಿಕದಿಂದ ಇಂದಿನ ನವಮೌಖಿಕದವರೆಗೆ ಸಾಕಷ್ಟು ಹಾಡುಗಳು ರಚನೆಗೊಂಡು ಇಂದು ಬಿತ್ತರಗೊಳ್ಳುತ್ತಿವೆ.

ಅಡುಗೆ ಮನೆಯಲ್ಲಿ  
ತಾಯಿಯ ಹಾಗೆ ಊಟ ಬಡಿಸಬೇಕು  
ಮೈದುನರಿಗೆ ಅವರವ್ವನಕ್ಕಿಂತ ಹೆಚ್ಚಾಗಿರಬೇಕು  
ದುಡಿಮೆ ನಿನ್ನ ತಾಯಿ ಅನಬೇಕು  
ಬದುಕೆ ನಿನ್ನ ತಂದೆ ಎನಬೇಕು  
ಆಳಾಗಿ ದುಡಿದು ಅರಸನಾಗಿ ಉಣಬೇಕು[೧೧]...

ತನ್ನ ಶ್ರೀರಕ್ಷೆಯಲ್ಲೇ ಬೆಳೆದ ತನ್ನ ತಂಗಿ ಗಂಡನ ಮನೆಗೆ ಹೋಗಿ, ಗಂಡನ ಮನೆಯಲ್ಲಿರುವ ಅತ್ತೆ ಮಾವಂದಿರನ್ನು ತಾಯಿಯ ಹಾಗೆ ಹಾಗೂ ಮೈದುನರನ್ನು ತನ್ನ ಮಕ್ಕಳಂತೆ ಸಾಕಿ ಸಲುಹಬೇಕು. ತನ್ನ ತವರಿನ ಮೇಲೆ ಇದ್ದಷ್ಟೇ ಪ್ರೀತಿಯನ್ನು ಗಂಡನ ಮನೆಯವರ ಮೇಲು ಇಡಬೇಕು ಎಂಬ ಅಣ್ಣನ ನಿಲುವನ್ನು ಈ ಗೀತೆಯಲ್ಲಿ ಕಾಣುತ್ತೇವೆ.

**ಬಡತನ**

ಭಾರತೀಯ ಸಂಸ್ಕೃತಿಯಲ್ಲಿ ನಾಲ್ಕು ಗೋಡೆಗಳಿಗೆ ಮಾತ್ರ ಸೀಮಿತವಾಗಿದ್ದ ಹೆಣ್ಣು ಇಂದು ಎಲ್ಲ ರಂಗಗಳಲ್ಲಿಯೂ ತನ್ನನ್ನು ತಾನು ಗುರುತಿಸಿಕೊಂಡಿದ್ದಾಳೆ. ಆದರೆ ದೇಶದ

ಎಲ್ಲೆಡೆ ಮಾರಕವಾಗಿರುವ ವರದಕ್ಷಿಣೆ ಪಿಡುಗುಗಳಿಗೆ ಒಳಗಾದ ಹೆಣ್ಣು ಯಾವ ರೀತಿಯಾಗಿ ಕಷ್ಟಗಳನ್ನು ಅನುಭವಿಸುತ್ತಿದ್ದಾಳೆಂಬ ವಿಷಯಗಳನ್ನು ಜನಪದರು ತಮ್ಮ ಹಾಡಿನ ಮೂಲಕ ವ್ಯಕ್ತಪಡಿಸಿದ್ದಾರೆ. ಬಡತನದ ಮನೆಯಲ್ಲಿ ಹುಟ್ಟಿದ ಹೆಣ್ಣು, ಹುಟ್ಟಿನಿಂದಲೇ ಕಷ್ಟಗಳನ್ನು ಅನುಭವಿಸುತ್ತಾ, ಕಷ್ಟದಲ್ಲೇ ಬೆಳೆಯುತ್ತಾ, ಮದುವೆಯ ವಯಸ್ಸಿಗೆ ಬಂದ ನಂತರ ಮತ್ತು ಮದುವೆಯಾದ ನಂತರ ಕಷ್ಟದಲ್ಲಿ ಜೀವನವನ್ನು ಸಾಗಿಸಿ, ಕಣ್ಣೀರಿನಲ್ಲಿ ಕೈತೊಳೆಯುವಂತಹ ಸನ್ನಿವೇಶಗಳನ್ನು ಎಳೆ ಎಳೆಯಾಗಿ ಜನಪದರು ತಮ್ಮ ಹಾಡುಗಳಲ್ಲಿ ಮನಮುಟ್ಟುವಂತೆ ಹಾಡಿದ್ದಾರೆ. ಇಂದು ಮಾಧ್ಯಮಗಳಲ್ಲಿಯೂ ಸಹ ವರದಕ್ಷಿಣೆ ಕುರಿತ ಹಾಡುಗಳು ಹಲವು ಬಗೆಯ ರೂಪ ಪಡೆದುಕೊಂಡು ಬಿತ್ತರಗೊಳ್ಳುತ್ತಿವೆ.

ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು...
ಬಡವನ ಮಗಳಾದರೂ
ಕಪ್ಪಾಗಿರ ಬಾರದು[೧೨]...

ಇಲ್ಲಿ ಬಡತನದ ಮನೆಯಲ್ಲಿ ಹೆಣ್ಣು ಹುಟ್ಟಬಾರದೆಂಬ ಕಲ್ಪನೆಯನ್ನು ಇಟ್ಟುಕೊಂಡು ಈ ಕವನ ರಚನೆಗೊಂಡಿದೆ. ಕಡು ಬಡತನದಲ್ಲಿ ಜೀವನ ಸಾಗಿಸುತ್ತಿರುವ ಕುಟುಂಬದಲ್ಲಿ ಹೆಣ್ಣು ಹುಟ್ಟಬಾರದು. ಹುಟ್ಟಿದರು ಸಹ ಅವಳು ಕಪ್ಪಾಗಿ ಇರಬಾರದು, ಇದ್ದರೆ ಮತ್ತೆ ಕಷ್ಟ ತಪ್ಪಲಾರದು ಎಂಬ ಭಾವ ಈ ಗೀತೆಯಲ್ಲಿ ಮೂಡಿಬಂದಿದೆ. ಬಡತನದಿಂದಾಗುವ ತೊಂದರೆಗಳನ್ನು ಇಲ್ಲಿ ಒಂದು ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ಚಿತ್ರಿಸಿದ್ದಾರೆ.

**ನೀತಿ**

ಮನುಷ್ಯನ ಏಳ್ಗೆಯಾದರೆ ಸಮಾಜದ ಏಳ್ಗೆಯಾದಂತೆ, ಹಾಗೆಯೇ ಸಮಾಜದ ಏಳ್ಗೆಯಾದರೆ ದೇಶದ ಏಳ್ಗೆಯಾದಂತೆ. ಇಂದು ದೇಶ ಸದೃಢವಾಗಬೇಕಾದರೆ ಜನರ ಮನಸ್ಥಿತಿ ಚೆನ್ನಾಗಿರಬೇಕು. ಹಾಗೆ ಈ ಮಾನವಕುಲ ಇವತ್ತು ಮೂಲ ಸಂಸ್ಕೃತಿಯನ್ನೇ ಮರೆತು ಪಾಶ್ಚಾತ್ಯ ಸಂಸ್ಕೃತಿಯತ್ತ ಮುಖ ಮಾಡಿರುವುದು ದುರಂತ. ಹಿಂದೆ ಮೂಲ ಸಂಸ್ಕೃತಿಯಲ್ಲಿಯ ಹಬ್ಬ-ಹರಿದಿನ, ಜಾತ್ರೆ, ಸಂತೆಗಳಲ್ಲಿ ಒಬ್ಬರಿಗೊಬ್ಬರು ಸಂತೋಷವನ್ನು ಹಂಚಿ ಖುಷಿಯಿಂದ ಜೀವನ ಸಾಗಿಸುತ್ತಿದ್ದರು. ಆದರೆ ಇವತ್ತು ಪ್ರತಿಶತ ೮೦ರಷ್ಟು ಜನ ಮೂಲ ಸಂಸ್ಕೃತಿಯನ್ನೇ ಮರೆತು ಸಂಬಂಧಗಳಿಗೆ ಬೆಲೆ ಕೊಡದೆ ಸ್ವಾರ್ಥ ಜೀವನ ನಡೆಸುತ್ತಿದ್ದಾರೆ. ಇವತ್ತು ಹೆಣ್ಣು-ಹೊನ್ನು-ಮಣ್ಣು ಎಂಬುದರ ಹಿಂದೆ ಹೋಗುತ್ತಿರುವ ಜನರಿಗೆ ಹಾಗೂ ಈ ಅಡ್ಡದಾರಿಯಲ್ಲಿಯೇ ಸಾಗುವ ಮನುಷ್ಯ ಕುಲಕ್ಕೆ ಜೀವನ ಎಂದರೆನೆಂಬ ಭಾವನೆಯನ್ನು, ತಿಳಿಯಪಡಿಸುವ ಹಾಡುಗಳನ್ನು ಇಂದು ನವಮೌಖಿಕ ಸಾಹಿತ್ಯದಲ್ಲಿ ಕಾಣುತ್ತಿದ್ದೇವೆ.

ಈ ಮಾನುಷ್ಯ ಕುಲ ದುಡ್ಡೆಂಬುದೇ ದೊಡ್ಡಪ್ಪಾ ಎಂಬ ತತ್ವದಡಿಯಲ್ಲಿ ಜೀವನ ಸಾಗಿಸುತ್ತಿರುವುದನ್ನು ನೋಡಿದರೆ ಇವತ್ತು ಮಾನವೀಯ ಮೌಲ್ಯಗಳೇ ಕಾಣದಾಗಿವೆ.

ಬಸವಣ್ಣ, ಗೌತಮ ಬುದ್ಧ, ಏಸು ಹೀಗೆ ಹಲವಾರು ಮಹನೀಯರು ಸಮಾಜೋದ್ಧಾರಕ್ಕಾಗಿ ತಮ್ಮ ಜೀವನವನ್ನು ಸವೆಸಿದ್ದಾರೆ. ಇವರ ವಚನಗಳು, ಹೇಳಿಕೆಗಳು, ಆದರ್ಶಮಯವಾದ ಅವರ ಜೀವನವನ್ನು ಇಂದಿನ ಯುವಪೀಳಿಗೆ ಅನುಸರಿಸದೆ ಸಾಗುತ್ತಿರುವುದು ದುರಂತವೇ ಸರಿ. ಶರೀಫ್‌ರು, ಕನಕದಾಸರು, ಪುರಂದರದಾಸರು ಮುಂತಾದವರ ತತ್ವಪದಗಳು ಮಾನವೀಯ ಮೌಲ್ಯಗಳನ್ನು ತಿಳಿಸುತ್ತವೆ. ಹಾಗೆಯೇ ಇವತ್ತಿನ ದಿನಗಳಲ್ಲಿ ನವಮೌಖಿಕ ಹಾಡುಗಳಲ್ಲಿಯೂ ಸಹ ಮಾನವೀಯ ಮೌಲ್ಯಗಳನ್ನು ಕಾಣುತ್ತಿದ್ದೇವೆ.

ದುಡ್ಡು ದಾರಿ ಬಿಡಿಸೈತಿ ಅಡ್ಡಹಾದಿ ಹಿಡಿಸೈತಿ
ಮನುಷ್ಯನಲ್ಲಿ ಇರುವಂತಾ ಮನುಷ್ಯತ್ವ ಕೆಡಿಸೈತಿ
ಮಾಡಬಾರದಂತಾ ಕೆಲಸ ದುಡ್ಡು ಮಾಡಾಕ ಹಚ್ಚೈತಿ
ದುಡ್ಡಿನಾಸೆಕಾಗಿ ಮನುಷ್ಯ ಬೇಕಾದ್ದ ಮಾಡತೈತಿ

ದುಡ್ಡಿಗಾಗಿ ಮಾನವ ಜನ್ಮ ದೊಡ್ಡ ಕೆಲಸ ನಡೆಸೆತಿ
ಕೆಲವು ಜನ ದುಡ್ಡಿಗಾಗಿ ಹೆಂಡರ ಮಕ್ಕಳ ಮಾರೈತಿ
ಹಣದಾಸೆಕ್ಕಾಗಿ ಮನುಷ್ಯ ಗುಣ ಕೆಡಸಿಕೊಂಡೈತಿ
ದುಡ್ಡು ಒಂದೆ ಇದ್ದರು ಸಾಕು ಬೇಕಾದ್ದ ನಡಿತೈತಿ[೧೩]...

ಮನುಷ್ಯ ಇವತ್ತು ಪ್ರೀತಿ, ವಿಶ್ವಾಸ, ನಂಬಿಕೆ ಅನ್ನೋದನ್ನ ಮರೆತಂತಿದೆ. ನಾವು ಅನ್ನುವ ಬದಲು ನಾನೆಂಬ ಅಹಂಕಾರ ದೇಹದ ತುಂಬೆಲ್ಲಾ ತುಂಬಿಕೊಂಡಿದೆ. ದುಡ್ಡಿನ ಹುಚ್ಚುತನ ದಾರಿ ಬಿಡಿಸಿ ಅಡ್ಡದಾರಿಯಲ್ಲಿ ಸಾಗುವ ಹಾಗೆ ಮಾಡಿದೆ. ಇಂದು ಮನುಷ್ಯ ಮನುಷ್ಯನನ್ನು ತಿಂದು ಬದುಕುತ್ತಿದ್ದಾನೆ. ಹಣದ ಆಸೆಗಾಗಿ ಸಂಬಂಧಗಳನ್ನು ಹಾಳು ಮಾಡಿಕೊಳ್ಳುತ್ತ, ಹಣಕ್ಕಾಗಿ ಕೊಲೆ, ಸುಲಿಗೆ, ದರೋಡೆಗಳನ್ನು ಮಾಡುತ್ತ, ವೈಯಕ್ತಿಕವಾದ ವಿಜೃಂಭಣೆಯನ್ನು ಅನುಸರಿಸುತ್ತ ಸಾಗುತ್ತಿದ್ದಾನೆ. ಅದಕ್ಕಾಗಿ ಇಂದಿನ ಯುವ ಕವಿಗಳು, ಭಜನಾಕಾರರು ದಾರಿ ತಪ್ಪುತ್ತಿರುವ ಯುವ ಸಮೂಹಕ್ಕೆ ನೀತಿ ಬೋಧನೆಯನ್ನು ತಮ್ಮ ಹಾಡುಗಳ ಮೂಲಕ ಮಾಡುತ್ತ ಬರುತ್ತಿರುವುದನ್ನು ಇಲ್ಲಿ ಕಾಣುತ್ತೇವೆ.

ಹೊಂಚು ಹಾಕಿ ನೀ ಲಂಚಾವ ತಿಂತಿ
ಲಾಭಕ್ಕಾಗಿ ನೀ ಲಡಾಯಿ ಮಾಡತಿ
ಅಣ್ಣ ತಮ್ಮರಿಗೆ ಮೋಸಮಾಡತಿ
ಸತ್ತಮ್ಯಾಲ ಯಾರ ಹೆಗಲಮ್ಯಾಲ ಹೋಗತಿ[೧೪]...

ಎಷ್ಟು ದಿನಾ ಇಲ್ಲೇ ಇರತಿ ನಿನ್ನ ಮನೆ ಬ್ಯಾರೆ ಐತಿ ಎಂಬ ಗೀತೆಯು ವಾಸ್ತವವಾಗಿ ಮನುಷ್ಯ ಇನ್ನೊಬ್ಬರನ್ನು ತುಳಿದು ವಿಜೃಂಭಿಸುವುದು ತಪ್ಪು ಎಂಬ ಸಂದೇಶವನ್ನು ಈ ಹಾಡು ಪ್ರತಿಪಾದಿಸುತ್ತದೆ. ಎಲ್ಲ ಇದ್ದರೂ ದಾನ, ಧರ್ಮ ಎಂಬುದಿಲ್ಲ, ಬಡವರ ಬಗ್ಗೆ ಕನಿಕರವಿಲ್ಲ, ಅಣ್ಣ ತಮ್ಮಂದಿರಿಗೆ ಮೋಸ ಮಾಡಿ ಬದುಕುವುದನ್ನು ವಿರೋಧಿಸುವ ನಿಲುವನ್ನು ಇಟ್ಟುಕೊಂಡು ಈ ಹಾಡು ರಚನೆಗೊಂಡಿದೆ.

**ಅನುಭವದ ನುಡಿಗಳು**

ಪ್ರತಿಯೊಬ್ಬ ವ್ಯಕ್ತಿಯು ಮುಂದೆ ಒಂದು ಗುರಿಯನ್ನು ಹಿಂದೆ ಒಬ್ಬ ಗುರುವನ್ನು ಹೊಂದಿ ಯಶಸ್ವಿ ಜೀವನವನ್ನು ಕಟ್ಟಿಕೊಳ್ಳಬೇಕು. ಪ್ರತಿಯೊಬ್ಬ ವ್ಯಕ್ತಿಗೂ ಗುರುಹಿರಿಯರ ಅನುಭವದ ಮಾತುಗಳು ಅತ್ಯಗತ್ಯವಾಗಿವೆ. ಇಂತಹ ಅನುಭವದ ಮಾತುಗಳು ಹಿಂದಿನಿಂದ ಇಂದಿನವರೆಗೂ ಹಾಡಿನ ಮೂಲಕ ಹಾಗೂ ಮಾತುಗಳ ಮೂಲಕ ಬಿತ್ತರಗೊಂಡು, ನಮ್ಮ ಜೀವನವನ್ನು ಉಜ್ವಲಗೊಳಿಸಿಕೊಳ್ಳಲು ಇವು ಅತ್ಯಂತ ಸಹಾಯಕಾರಿಯಾಗಿವೆ.

ಮುತ್ತಿನಂಥ ಮಾತು ಹೇಳತೀನಿ ತಂಗಿ
ನೀತಿವಂತಳಾಗಿ ಬಾಳಬೇಕು ತಂಗಿ
ಮಾತು ಹೇಳತೀನಿ ಅಂತ ಬೈದು ಬುದ್ಧಿ ಹೇಳಿ
ದಾರಿ ತೋರಿಸೋ ಮಾತು ಕೇಳಿ ಸಿಟ್ಟಿಗಿ ಬದಲು
ನುಡಿಯ ಬೇಡಾ ಕೆಟ್ಟದೆಲ್ಲ ಸುಟ್ಟು ಹಾಕು ದಿಟ್ಟತನದಿ
ಬಾಳಬೇಕು ಕೆಟ್ಟ ಜನರ ಸಹವಾಸ ಮಾಡಬೇಡಾ[೧೫]...

ಗಂಡನ ಮನೆಗೆ ಹೋಗಬೇಕಾದ ಸಂದರ್ಭದಲ್ಲಿ ಹಿರಿಯ ಜೀವಿ ತನ್ನ ಅನುಭವದ ಪಾಠವನ್ನು ಉಣಬಡಿಸುವ ಪರಿಯನ್ನು ಈ ಹಾಡಿನ ಮೂಲಕ ನೋಡಬಹುದು. ಬಡತನದಲ್ಲಿ ತುಂಡು ರೊಟ್ಟಿಯಾದರೂ ತಿಂದು ಬದುಕಬೇಕು. ಆದರೆ ಯಾರ ಚಾಡಿಮಾತನ್ನು ಕೇಳಬೇಡ ಎಂಬ ಅನುಭವದ ಮಾತುಗಳು ಈ ಪದ್ಯದಲ್ಲಿ ಮೂಡಿ ಬಂದಿವೆ.

ಚೆಲುವ ಚೆಲುವನೆಂದು ಹಲವ ಹಂಬಲಿಸ ಬ್ಯಾಡ
ಚೆಲುವಿದ್ದರೇನು ಗುಣವಿಲ್ಲದವಗೆ
ಚೆಲುವಿದ್ದರೇನು ಗುಣವಿಲ್ಲದವಗೆ ಗುಂಡದ ನೀರ
ತಿಳಿಯಿದ್ದರೇನು ರುಚಿಯಿಲ್ದನಕ[೧೬]...

ಪ್ರತಿಯೊಬ್ಬರಲ್ಲಿಯೂ ಬಾಹ್ಯ ಸೌಂದರ್ಯಕ್ಕಿಂತ ಅಂತರಂಗದ ಸೌಂದರ್ಯ ಮುಖ್ಯವೆಂಬುದು ಇಲ್ಲಿನ ಆಶಯ. ಚೆಲುವು ಮುಖ್ಯವಲ್ಲ ಇರಬೇಕಾದದ್ದು ಅಂತರಂಗದಲ್ಲಿ ಒಳ್ಳೆಯ ಗುಣಗಳು, ಹೊರಗಡೆ ಹೋಗುವಾಗ ಬಹಳ ಜಾಗರೂಕರಾಗಿರಿ ತಂಗಿ ಎಂದು ಅಜ್ಜಿಯು ಬೆಳೆದು ನಿಂತ ತನ್ನ ಮೊಮ್ಮಗಳಿಗೆ ಹೇಳುವ ವಿಚಾರಗಳನ್ನು ಈ ಪದ್ಯ ಭಾಗದಲ್ಲಿ ಕಾಣುತ್ತೇವೆ.

**ಸಂಗೀತದ ಆಯಾಮ**

ಪ್ರಪಂಚದಲ್ಲಿ ಹಲವಾರು ಜೀವರಾಶಿಗಳಿವೆ. ಅದರಲ್ಲಿ ಕೇವಲ ಮಾನವ ಕುಲಕೋಟಿಗೆ ಮಾತ್ರ ಪರಮಾತ್ಮನು ಕರುಣಿಸಿರುವ ವರಪ್ರಸಾದವೇ ಸಂಗೀತವಾಗಿದೆ. ಮಾನವನ ಆನಂದಕ್ಕೆ ಕಲೆಯೇ ಸಾಧನವಾಗಿದೆ. ಕಲೆಗಳಲ್ಲಿ ಸಂಗೀತಕ್ಕೆ ಮೊದಲನೆಯ ಸ್ಥಾನ. ಸಂಗೀತ ಹೃದಯದ ಭಾಷೆಯಾಗಿದೆ. ಪಂಡಿತರಿಂದ ಪಾಮರರಿಗೂ, ಮುದುಕರಿಂದ

ಮಕ್ಕಳಿಗೂ, ಮನುಷ್ಯ-ಪ್ರಾಣಿಗಳಿಗೂ ಅಲ್ಲದೇ ಸಮಸ್ತ ಜೀವಿಗಳಿಗೂ ಸಂಗೀತವು ಪ್ರಿಯವಾದುದು. ಆದುದರಿಂದಲೇ "ಶಿಶುರ್ವೇತ್ತಿ ಪಶುರ್ವೇತಿ ಛೇತ್ತಿಗಾರ ರಸಂಘಣೀ"[೧೭] ಎಂಬ ನಾಣ್ನುಡಿಯುಂಟು.

"ಸಂಗೀತವು ದೇವ ಭಾಷೆಯಾಗಿದೆ. ಶಿವನು ಡಮರುಗವನ್ನು ನುಡಿಸುತ್ತಾನೆ. ಕೃಷ್ಣನು ಕೊಳಲನ್ನೂದುತ್ತಾನೆ. ಸರಸ್ವತಿಯು ವೀಣೆಯನ್ನು ನುಡಿಸುತ್ತಾಳೆ. ನಾರದ ಮತ್ತು ತುಂಬುರು ಮುಂತಾದವರು ಒಳ್ಳೆಯ ಗಾಯಕರು.

ಸಂಗೀತ ಎಂಬ ಪದಕ್ಕೆ ಸುಷ್ಠುಗೀತಂ ಸಂಗೀತಂ, ಸಮ್ಯಕ್ ಗೀತಂ, ಸಂಗೀತಂ ಎಂದು ಅರ್ಥೈಸಿದ್ದಾರೆ. ಅಂದರೆ ಕರ್ಣಾನಂದವನ್ನು ಉಂಟು ಮಾಡುವ ಗೀತೆಗೆ ಸಂಗೀತವೆಂದು ಹೆಸರು. ಮಾನವನ ಶೀಲ ಸ್ವಭಾವಗಳ ಮೇಲೆ ಸಂಗೀತವು ಪ್ರಭಾವವನ್ನು ಬೀರಿ ಆ ಸ್ವಭಾವವನ್ನು ಮತ್ತಷ್ಟು ನಯಗೊಳಿಸುವುದು".[೧೮] ಸಂಗೀತದ ಮಾಧುರ್ಯವು ಮಾನವನಲ್ಲಿರುವ ಸಂಕುಚಿತ ಸ್ವಭಾವವನ್ನು ಹೋಗಲಾಡಿಸಿ ಹೃದಯ ವೈಶಾಲ್ಯವನ್ನುಂಟು ಮಾಡುತ್ತದೆ. ಅದಕ್ಕೆ ಒಂದೆಡೆ ಹೇಳುತ್ತಾರೆ ಸಂಗೀತಕ್ಕೆ ತಲೆಬಾಗದವನು ಎಲ್ಲವನ್ನು ತ್ಯಜಿಸಿದ ಜ್ಞಾನಿ ಆಗಿರುತ್ತಾನೆ, ಇಲ್ಲವೇ ಒಬ್ಬ ಹುಚ್ಚನಾಗಿರುತ್ತಾನೆ. ಸಂಗೀತಕ್ಕೆ ಅಂತಹ ಅದ್ಭುತ ಶಕ್ತಿಯಿದೆ.

ಇಂದು ಬಳಕೆಗೊಳ್ಳುತ್ತಿರುವ ನವಮೌಖಿಕ ಸಂಗೀತವು ಮನೋರಂಜನೆಯನ್ನು ಉಂಟು ಮಾಡಿ ಮನಸ್ಸಿನ ಬೇಸರವನ್ನು ಕಳೆಯುತ್ತದೆ. ಈ ಸಂಗೀತವನ್ನು ಕೇಳುವುದರಿಂದ ಮೇಲು-ಕೀಳು ಎಂಬ ಭಾವನೆಗಳು ದೂರವಾಗುತ್ತವೆ. ಮಾನವನ ಸಂಸ್ಕೃತಿಗೆ ಸಂಗೀತವು ಬೆಳಕಿದ್ದ ಹಾಗೆ. ಸಂಗೀತವನ್ನು ಅಭ್ಯಾಸ ಮಾಡುತ್ತಾ ಹೋದಂತೆ ಮನೋಧರ್ಮವು ಬೆಳೆಯುತ್ತಾ ಹೋಗುತ್ತದೆ. ಸಂಗೀತವನ್ನು ನಾವು ಕಲಿಯುವುದರಿಂದ ದುರ್ನಡತೆಯು ಸನ್ನಡತೆಯಾಗುತ್ತದೆ ಸ್ವಭಾವವೂ ಕೂಡಾ ಮೃದುವಾಗುತ್ತದೆ. ಆದ್ದರಿಂದಲೇ ಸಮಾಜದಲ್ಲಿ ಸಂಗೀತಕ್ಕೆ ಮಹತ್ವವಾದ ಸ್ಥಾನವಿದೆ. ಉತ್ಸವ ಸಮಾರಂಭಗಳು, ಮಂಗಳ ಕಾರ್ಯಗಳಲ್ಲಿ ಸಂಗೀತಕ್ಕೆ ಸ್ಥಾನವಿರುವುದು ಈ ಉದ್ದೇಶದಿಂದಲೇ, ಸಂಗೀತಾಮೃತ ಪಾನದಿಂದ ಹೃದ್ರೋಗಗಳ ಆಯಾಸವು ಪರಿಹಾರವಾಗುವುದೆಂದು ಮನಃಶಾಸ್ತ್ರಜ್ಞರು ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸಂಗೀತದ ಬಗ್ಗೆ ಇನ್ನೂ ಹೇಳಬೇಕೆಂದರೆ ಬಡವ, ಬಲ್ಲಿದರು, ಮೇಲು-ಕೀಳೆಂಬ ಭಾವನೆಗಳಿಲ್ಲದೆ, ದೇವರನ್ನು ಭಜನಾ ಗಾನದಿಂದ ಮೆಚ್ಚಿಸಬಹುದು. ತ್ಯಾಗರಾಜರು 'ನಾ ಜೀವಾಧಾರ' ಎಂಬ ಬಿಲಹರಿ ರಾಗದ ಕೃತಿಯನ್ನು ಹಾಡಿ, ಮೃತನಾದವನಿಗೆ ಪ್ರಾಣದಾನ ಮಾಡಿದರೆಂಬ ಪ್ರತೀತಿ ಇದೆ. ಜಗತ್ತಿನ ಸಮಸ್ತ ಜೀವ ಕೋಟಿಗಳಿಗೂ ಸಂಗೀತವೂ ಪ್ರಿಯವಾದುದು. ಗಾನವನ್ನು ಕೇಳುತ್ತ ಅದರ ಆನಂದವನ್ನು ಅನುಭವಿಸುತ್ತಾ ಹಸುವು ಹೆಚ್ಚು ಹಾಲನ್ನು ಕೊಡುತ್ತದೆ. ಕೃಷ್ಣನು ವೇಣುಗಾನದಿಂದಲ್ಲವೇ ಹಸುಗಳನ್ನೆಲ್ಲಾ ಆಕರ್ಷಿಸಿ ಕಾಯುತ್ತಿದುದ್ದು, ಹಾವಾಡಿಗನು ಪುಂಗಿಯನ್ನು ಊದುವಾಗ ಸರ್ಪವು ಆನಂದಿಸುತ್ತಾ

ನಲಿಯುವುದನ್ನು ನೋಡಿಲ್ಲವೇ! ವಸಂತಕಾಲದ ಮುಂಜಾನೆಯಲ್ಲಿ ದಂಪತಿ ಕೋಗಿಲೆಗಳು ಸಪ್ತಸ್ವರಗಳನ್ನು ಆರೋಹಣ ಕ್ರಮದಲ್ಲಿ ಒಂದೊಂದು ಸ್ವರ ಸ್ಥಾನದಲ್ಲೂ ನಿಂತು ನಿಂತು ಕೂಗುವುದನ್ನು ಕೇಳಿ ಆನಂದಿಸಬಹುದು. ಈಚೆಗೆ ನಡೆಸಿರುವ ಪ್ರಯೋಗಗಳಿಂದ ಒಳ್ಳೆಯ ಸಂಗೀತವನ್ನು ಕೇಳಿಸುವುದರ ಮೂಲಕ ಸಸ್ಯಗಳು ಹೆಚ್ಚಿನ ಫಲವನ್ನು ಕೊಡುತ್ತವೆ ಎಂಬುದು ತಿಳಿದುಬಂದಿದೆ. ಒಟ್ಟಿನಲ್ಲಿ ಸಂಗೀತವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಮುಖ್ಯ ಪಾತ್ರವನ್ನು ವಹಿಸುತ್ತದೆ.

ಇಂದು ನವಮೌಖಿಕ ಸಂಗೀತದ ಬಗ್ಗೆ ಮಾತನಾಡುವುದಾದರೆ ಎಲ್ಲೆಡೆ ಸಂಗೀತವು ಆನಂದದ ಜೊತೆಗೆ ಹಳೆಯ ಪರಂಪರೆಯನ್ನು ಹೊಸರೂಪದಲ್ಲಿ ಪರಿಚಯಿಸುತ್ತಿದೆ. ಆಧುನಿಕ ಮಾಧ್ಯಮಗಳಲ್ಲಿ ಬಳಕೆಗೊಂಡ ಜನಪದ ಹಾಡುಗಳು ಏಕಕಾಲದಲ್ಲಿ ಲಕ್ಷಾಂತರ ಜನರಿಗೆ ತಲುಪುವುದಲ್ಲದೇ ಹೊಸ ಹೊಸ ಲಯಗಳಲ್ಲಿ ಪ್ರಸಾರಗೊಂಡು, ಕೇಳುಗನ ಆಸಕ್ತಿಯನ್ನು ಹೆಚ್ಚಿಸುತ್ತಿವೆ. ನಾವು ಯೂಟ್ಯೂಬ್‌ನಲ್ಲಿ ಹಾಡನ್ನು ಆಲಿಸುವ ಸಂದರ್ಭದಲ್ಲಿ ಲೈಕ್ ಬಟನ್ ಕ್ಲಿಕ್ ಮಾಡಿದರೆ ಸಾಕು. ಆ ಹಾಡನ್ನು ಹಾಡಿದ ವ್ಯಕ್ತಿಗೆ ತನ್ನ ಹಾಡನ್ನು ಎಷ್ಟು ಜನರು ಇಷ್ಟ ಪಟ್ಟಿದ್ದಾರೆ ಎಂಬ ಸಂದೇಶ ರವಾನೆಯಾಗುತ್ತದೆ.

ಇಂದು ನವಮೌಖಿಕ ಸಂಗೀತವು ಹಾಡುಗನ ಮನಸ್ಸು ಮತ್ತು ಕೇಳುಗನ ಮನಸ್ಸಿನ ಮಧ್ಯ ಒಂದು ರೀತಿಯಾಗಿ ಸೇತುವೆಯಂತೆ ಕೆಲಸ ಮಾಡುತ್ತಿದ್ದು, ಜನಪದ ಹಾಡುಗಳಿಗೆ ಒಂದು ರೀತಿಯಲ್ಲಿ ಹೊಸ ಹುಟ್ಟಿನಂತೆ ಹಾಡುಗಳು ರಚನೆಗೊಳ್ಳುತ್ತಿವೆ. ಹೀಗೆ ತನ್ನದೇ ಆದ ಒಂದು ಹೊಸಲೋಕವನ್ನು ಈ ನವಮೌಖಿಕ ಸಂಗೀತ ಸೃಷ್ಟಿಸುತ್ತಿದೆ. ಅಲ್ಲದೇ ಈ ಸಂಗೀತ ಕಾಲವನ್ನು ಮೀರಿ ಹೊಸತನವನ್ನು ನೀಡುತ್ತಿದೆ.

ಇಂದು ಜನಪದ ಸಂಗೀತವನ್ನು ನೋಡುವುದಾದರೆ, ಜನಪದ ಸಂಗೀತವು ನಾಡಿನ ಸಂಸ್ಕೃತಿ, ಜನಜೀವನದ ಅಮೂಲ್ಯ ಸೊತ್ತಾಗಿದೆ. ಜನಪದ ಸಂಗೀತವು ಸಾಮಾನ್ಯ ಮಾನವನ ಸೊತ್ತಾಗಿದ್ದು, ಅದು ಆತನ ನಿತ್ಯ ಜೀವನದ ವಿವಿಧ ರಂಗಗಳಲ್ಲಿ ಹರಡಿದ್ದು, ಅನುಭವದ ಅಣಿಮುತ್ತುಗಳಾಗಿವೆ. ನಾಗರಿಕತೆಯ ನಯ ನಾಜೂಕುಗಳಿಲ್ಲದ ಹಳ್ಳಿಯ ಅಶಿಕ್ಷಿತ, ಮುಗ್ಧ ಮಗುವಿನ ನಿಷ್ಕಳಂಕ ನಗುವಿನಂತೆ, ಜನಪದ ಸಂಗೀತವು ಜನಸಾಮಾನ್ಯರ ನಿತ್ಯ ಜೀವನದ ಒಂದು ಘಟಕವಾಗಿದೆ.

**ನವಮೌಖಿಕ ಸಂಗೀತ**

ಒಂದು ನಾಡಿನ ಕಲೆಯು ಆ ನಾಡಿನ ನೈಜ ಸಂಸ್ಕೃತಿಯ ಪ್ರತಿಬಿಂಬವಾಗಿದ್ದು, ಅದು ತನ್ನ ನಾಡಿನ ಘನತೆ, ಗೌರವಗಳನ್ನು ಹೆಚ್ಚಿಸುವುದಕ್ಕಾಗಿ ಸದಾಕಾಲ ಶ್ರಮಿಸುತ್ತದೆ. ಲಲಿತಕಲೆಗಳಲ್ಲೆಲ್ಲ ಸಂಗೀತ ಕಲೆಯು ಶ್ರೇಷ್ಠ ಕಲೆಯಾಗಿದ್ದುದರಿಂದ ಈ ದಿಸೆಯಲ್ಲಿ ಅದರ ಉದ್ದೇಶವು ಗಣನೀಯವೂ ಅತ್ಯಂತ ಮಹತ್ವದ್ದೂ ಆಗಿದೆ. ಜನಪದ ಸಂಗೀತವು ನಿತ್ಯ ಜೀವನದಲ್ಲಿ ಮಾನವನ ವಿವಿಧ ಭಾವನೆಗಳನ್ನು ಅತ್ಯಂತ ಸರಳವಾಗಿ, ಬಹಳ ಪರಿಣಾಮಕಾರಿಯಾಗಿ ಅಭಿವ್ಯಕ್ತಪಡಿಸುತ್ತದೆ. ಶತಮಾನಗಳಿಂದ, ಬಾಯಿಂದ ಬಾಯಿಗೆ

ಬಂದ ಹಳ್ಳಿಹಾಡು ಸರಳ, ಅತಿ ಮನೋಹರ, ಕಲಿಯಲು ಸುಲಭ. ಶಾಸ್ತ್ರೀಯ ಸಂಗೀತದಷ್ಟು ಕಷ್ಟದ ಹಾಡುಗಳು ಇವಲ್ಲ. ನಾಲ್ಕು ಬಾರಿ ಕೇಳಿದಲ್ಲಿ ಬಂದೇ ಬಿಡುವವು. ಜನಸಾಮಾನ್ಯರು ಆಡುವ ಮಾತು, ಬಳಕೆಯಲ್ಲಿರುವ ಪದಗಳನ್ನೇ ಸೇರಿಸಿ ಮಲ್ಲಿಗೆ ಮೊಗ್ಗು ಕಟ್ಟಿದಂತೆ ಇವುಗಳನ್ನು ಕಟ್ಟಿರುತ್ತಾರೆ.

ಜನಪದ ಗೀತೆಗಳು ಅತ್ಯಂತ ವೈವಿಧ್ಯಮಯವಾಗಿ ನಾಡಿನ ವಿವಿಧ ಪ್ರದೇಶಗಳ ಪ್ರಾದೇಶಿಕ ಸೊಗಡುಗಳನ್ನು ನಮ್ಮ ಮುಂದಿನ ಪೀಳಿಗೆಗೆ ಜೋಪಾನ ಮಾಡಿವೆ. ಇಂದಿನ ಪಾಶ್ಚಾತ್ಯ ಶೈಲಿಯ ಮಧ್ಯ ಜನಪದ ಸಂಗೀತವು ಸಿಕ್ಕಿ ಹಾಕಿಕೊಂಡು ತನ್ನ ಹಿಂದಿನ ವೈಭವವನ್ನು ಸ್ವಲ್ಪಮಟ್ಟಿಗೆ ಕಳೆದುಕೊಂಡಿದೆ. ಆದರೆ ಮೂಲ ನೆಲೆಯಾದ ಹಳ್ಳಿಗಳಲ್ಲಿ ಇನ್ನೂ ತನ್ನ ನೆಲೆಯನ್ನು ಭದ್ರವಾಗಿ ಉಳಿಸಿಕೊಂಡಿರುವುದು ಸಂತೋಷದ ವಿಷಯವಾಗಿದೆ.

ಜನಪದ ಗೀತೆಗಳಾದ ಸೋಬಾನೆ ಪದ, ಹಂತಿ ಪದ, ಮೊಹರಂ ಪದ, ಸುಗ್ಗಿ ಹಾಡುಗಳು ಹೀಗೆ ಹಲವು ಪ್ರಕಾರದ ಹಾಡುಗಳು ಆಯಾ ಪ್ರದೇಶದ ಜನರ ದೈನಂದಿನ ಚಟುವಟಿಕೆಗಳನ್ನು ಜೀವನ ಶೈಲಿ, ಕೌಟುಂಬಿಕ ಜೀವನವನ್ನು, ದೇವರು ಮತ್ತು ಧಾರ್ಮಿಕ ಆಚರಣೆಗಳನ್ನು ನಮ್ಮ ಮುಂದೆ ತೆರೆದಿಡುತ್ತವೆ. ಇವು ಹಳ್ಳಿಯ ಜನಸಾಮಾನ್ಯರ ಬಾಯಿಂದ ಬಾಯಿಗೆ ಹರಿದು ಬಂದಿರುವ ನುಡಿಮುತ್ತುಗಳಾಗಿವೆ.

ತೊಟ್ಟಿಲು ಹೋತ್ಕೊಂಡು ತವರ್ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡ್ಕೊಂಡು । ತೌರೂರ
ಬೆಟ್ಟಹತ್ತಿ ತಿರುಗಿ ನೋಡ್ಯಾಳೋ[೧೯]...

ಈ ಹೂ ಮಾಲಿಯಂಥ ಸಾಲುಗಳನ್ನು ಯಾರು ಯಾವಾಗ ಬರೆದರೋ ಗೊತ್ತಿಲ್ಲ. ಇವು ನೂರಾರು ವರ್ಷಗಳಿಂದ ಸಾವಿರಾರು ಜನಗಳ ಬಾಯಿಂದ ಬಾಯಿಗೆ ಹರಿದು ಬಂದ ನುಡಿಗಳು. ನಮ್ಮ ನಾಡಿನ ಜನರ ಕಲೋಪಾಸಕತ್ವವನ್ನು ಸೃಜನಶೀಲತೆಯನ್ನು ಮತ್ತು ಮಾಧುರ್ಯವನ್ನು ಹಳ್ಳಿಗರಿಗೆ ತಿಳಿಯದಂತೆ ಅವರ ಜೀವನ ವಿಧಾನವನ್ನಾಗಿ ಪರಿವರ್ತಿಸಿದ ಸಂಸ್ಕೃತಿಯೊಂದರ ಹೆಜ್ಜೆಗುರುತುಗಳು ಎಂದು ಹೇಳಬಹುದು.

ಇಂದು ಯೂಟ್ಯೂಬ್, ಮೊಬೈಲ್‌ನಂತಹ ಆಧುನಿಕ ಮಾಧ್ಯಮಗಳಲ್ಲಿ ಜನಪದ ಗೀತೆಗಳು ಹಾಸುಹೊಕ್ಕಾಗಿ ಬೆಳೆಯುತ್ತಿರುವುದು, ಹಳೆ ಬೇರಿಗೆ ಹೊಸ ಚಿಗುರನ್ನು ತೊಡಿಸಿದಂತಾಗಿದೆ. ಜನಪದರ ಬಾಯಿಂದ ಬಂದ ಅಂದಿನ ಹಾಡುಗಳು ಇಂದು ಏಕಕಾಲಕ್ಕೆ ಲಕ್ಷಾಂತರ ಜನ ಕೇಳುವ ಒಂದು ಮಹತ್ತರ ಸಾಧನೆಯಾಗಿದೆ. ಕ್ಷಣಾರ್ಧದಲ್ಲಿ ಬೇರೆಯವರಿಗೆ ಹಾಡುಗಳನ್ನು ಕೇಳಿಸುವ, ಕಳಿಸುವ, ಆಧುನಿಕ ಮಾಧ್ಯಮಗಳು ಈಗ ನಮ್ಮ ಮುಂದೆ ಇವೆ.

ನಿಂಬಿಯಾ ಬನದ ಮ್ಯಾಗಳ
ಚಂದ್ರಮ ಚೆಂಡಾಡಿದ[೨೦]...

ಈ ಜನಪದ ಹಾಡನ್ನು ವೀಕ್ಷಿಸಲು ನಾವು ಇಂದು ಯೂಟ್ಯೂಬ್‌ನಲ್ಲಿ https://youtu.be/ZDJwSnJWBBs ಅಂತಾ ಟೈಪ್ ಮಾಡಿದರೆ ಸಾಕು 'ನಿಂಬಿಯ ಬನದ ಮ್ಯಾಗಳ' ಎಂಬ ಹಾಡು ಪ್ರಸಾರವಾಗುತ್ತದೆ. ಅಂದಿನ ಕಾಲದಲ್ಲಿ ರಚನೆಗೊಂಡ ಜನಪದ ಗೀತೆಗಳು ಬಾಯಿಂದ ಬಾಯಿಗೆ ವರ್ಗಾವಣೆಗೊಂಡು ಇಂದು ಆಧುನಿಕ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುವುದರ ಮೂಲಕ ಗಟ್ಟಿಗೊಳ್ಳುತ್ತಿವೆ. ಹಾಡಿನ ಧಾಟಿ ಬದಲಾದರೂ ಅದರಲ್ಲಿರುವ ಸತ್ವ ಎಂದಿಗೂ ಬದಲಾಗದು. ಪರಿಸರದ ಸೌಂದರ್ಯವನ್ನು ದೇವರಿಗೆ ಹಾಗೂ ಚಂದಿರನಿಗೂ ಹೋಲಿಸಿ ಹೇಳಿರುವ ನಮ್ಮ ಜನಪದರ ಈ ಗೀತೆಯು ನಾಡಿನಾದ್ಯಾಂತ ಪ್ರಸಿದ್ಧವಾಗಿದೆ. ಈ ಹಾಡನ್ನು ಹಾಡಿರುವಂತಹವರು ಮಹಿಳೆಯರು, ಪುರುಷನನ್ನು ವಿನೋದವಾಗಿ ಬಿಂಬಿಸುತ್ತಾರೆ. ಅದಕ್ಕೆ ಪೂರಕವಾಗಿ ಇನ್ನೊಂದು ಜನಪದ ತ್ರಿಪದಿಯನ್ನು ಇಲ್ಲಿ ಗಮನಿಸಬಹುದು.

ಕಾಗೆಗೆ ಕಣ್ಣಿಟ್ಟ ಕರಿಯ ಹುಬ್ಬಿನ ಜಾಣ
ಮಾವಿನ ಹಣ್ಣು ಮನೆಯಾಗೆ ಇಟ್ಟುಕೊಂಡು
ಅತ್ತಿ ಹಣ್ಣಿಗ್ಯಾಕೆ ಮನಸಿಟ್ಟೆ[೨೧]...

ಗಂಡನು ಪರಸ್ತ್ರೀಯರೊಂದಿಗೆ ಅನೈತಿಕ ಸಂಬಂಧ ಹೊಂದಿದಾಗ ಹೆಂಡತಿ ತನ್ನ ಗಂಡನನ್ನು ನಯವಾಗಿ ಬಯ್ಯುವ ರೀತಿ ಮೇಲಿನ ತ್ರಿಪದಿಯಲ್ಲಿ ಬಿಂಬಿತವಾಗಿದೆ. ಅನೈತಿಕ ಸಂಬಂಧವನ್ನು ಹೊಂದಿದ ಹೆಣ್ಣನ್ನು ಜನಪದ ಮಹಿಳೆ ಒಂದು ಕಾಗೆಗೆ ರೂಪಕವಾಗಿ ಹೋಲಿಸಿರುವಂತದ್ದು. ಕಾಗೆಯನ್ನು ಬಹುಪಾಲರು ಶನಿ, ಶನೇಶ್ವರನ ವಾಹನವೆಂದೆಲ್ಲಾ ಬಿಂಬಿಸಿದ್ದರಿಂದ, ಯಾರೂ ಅದನ್ನು ಇಷ್ಟ ಪಡುವುದಿಲ್ಲ. ಹಾಗಾಗಿ ಅಂತಹ ವೇಶ್ಯೆಯ ಮೇಲೆ ನನ್ನ ಗಂಡ ಮನಸ್ಸು ಮಾಡಿದ್ದಾನೆ. ಅಂತವನು ಕಣ್ಣಿನಲ್ಲೇ ಸನ್ನೆ ಮಾಡುವ ಮನೋಭಾವನೆ ಅವನದ್ದು ಎನ್ನುವ ಆಂತರಿಕ ಮನೋಧರ್ಮ. "ಮಾವಿನ ಹಣ್ಣು ಮನೆಯಾಗ ಇಟ್ಟುಕೊಂಡು ಅತ್ತಿ ಹಣ್ಣು ತಿಂದಾನೋ ನನ್ನ ಜಾಣ" ಮಾವಿನ ಹಣ್ಣನ್ನು ತನಗೆ ಹೋಲಿಕೆ ಮಾಡಿ, ಅತ್ತಿ ಹಣ್ಣನ್ನು ಅನೈಕತೆಗೆ ಒಳಪಟ್ಟ ಹೆಣ್ಣಿಗೆ ಹೋಲಿಸಿದ್ದಾರೆ. ಮಾವಿನ ಹಣ್ಣು ತಿಂದರೆ ಬಾಯಿ ಘಮಘಮ ಎನ್ನುತ್ತದೆ. ಆದರೆ ಅತ್ತಿ ಹಣ್ಣು ತಿನ್ನಲು ಹೋದರೆ ಅದರಲ್ಲಿ ಹುಳಗಳು ತುಂಬಿರುತ್ತವೆ. ಹೀಗೆ ತನ್ನ ನೋವನ್ನು ಬಾಹ್ಯವಾಗಿ, ನೇರವಾಗಿ ಪ್ರತಿಭಟಿಸದೇ ಈ ತ್ರಿಪದಿಯ ಮೂಲಕ ಗಂಡನಿಗೆ ಆತನ ತಪ್ಪನ್ನು ಮನವರಿಕೆ ಮಾಡಿಕೊಡುವಳು.

ಉತ್ತರ ಕರ್ನಾಟಕದಲ್ಲಿ ಜನಪ್ರಿಯತೆ ಪಡೆದ ಜನಪದ ಗೀತೆಗಳು, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುತ್ತಿವೆ. ಈ ಭಾಗದಲ್ಲಿ ರಚನೆಯಾಗುತ್ತಿರುವ ಜನಪದ ಗೀತೆಗಳು ನೈಜತೆ, ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ, ತಾಯಿ-ಮಗ, ರೈತನ ಕುರಿತು, ಶೃಂಗಾರ ಗೀತೆಗಳು ಹೀಗೆ ಹತ್ತು ಹಲವು ಪ್ರಕಾರಗಳಲ್ಲಿ ರಚನೆಗೊಂಡಿರುವುದನ್ನು ನಾವು

ಕಾಣುತ್ತೇವೆ. ತಾಯಿ-ಮಗನ ಕುರಿತು ರಚನೆಗೊಂಡಿರುವ ಒಂದು ಹಾಡನ್ನು ಇಲ್ಲಿ ಉದಾಹರಣೆಯಾಗಿ ನೋಡಬಹುದು.

ಸೊಸಿ ಬಂದು ಒಂದು ವರುಷದಾಗ
ನನ್ನ ಮಗಾ ಬ್ಯಾರೆ ಆದ
ಮಾರಿ ಚಂದಕ್ಕ ಮರುಳಾಗಿ
ತನ್ನ ತಾಯಿ ಕರುಳ ಕೋದ
ಅತ್ತಿ ಅನ್ನುವ ಕಬರಿಲ್ಲ ಈಕಿಗೆ ।
ಕಾಸಿನ ಕಿಮ್ಮತ್ತ
ತುತ್ತು ಕೂಳಿಗೆ ಹಂಗಸಾಕೀಕಿ ।
ಕಳಿಲ್ಯಾಂಗ ಹೊತ್ತ?
ಮುಪ್ಪಾನ ಮುದುಕಿ ಕಟ್ಟಿದ ಕನಸ ।
ಹಾಳಾಗಿ ಹರಿದೋತಾ
ಸೊಸಿ ಬರುತಾಳು ಸುಖ ತರತಾಳು ।
ಗಾಳ್ಯಾಗಿನ ಮಾತ॥[೨]...

ಗುರುರಾಜ ಹೊಸಕೋಟಿ ಹಾಡಿರುವ ಈ ಗೀತೆಯಲ್ಲಿ ಅತ್ತೆ ಮತ್ತು ಸೊಸೆಯ ನಡುವಿನ ಮಾತ್ಸರ್ಯ ಮುಖ್ಯ ಕಥಾವಸ್ತುವಾಗಿದೆ. ಇಲ್ಲಿ ಮಗ ಗೌಣನಾಗಿದ್ದಂತೆ ಕಂಡುಬರುತ್ತದೆ. ಆದರೂ ಸಾಹಿತ್ಯ ರಚನೆಕಾರರು ಪುರುಷನಾದ್ದರಿಂದಲೂ ಅಥವಾ ಮಗನೆಂಬ ಮಮತೆಯಿಂದಲೂ ಅವನ ಬಗ್ಗೆ ಹೆಚ್ಚಾಗಿ ಮೂಡಿಬಂದಿಲ್ಲ. ಮಗನ ಅಸಹಾಯಕತೆ ಎದ್ದು ಕಾಣುತ್ತದೆ. ಮಗನಾದವನು ಈಗ ಬಂದಿರುವ ಹೆಂಡತಿಗಿಂತಲೂ ತಾಯಿ ಶ್ರೇಷ್ಠ ಎಂಬುದನ್ನು ಬಿಂಬಿಸಬೇಕಾಗಿತ್ತು. ಸೊಸೆ ಬಂದ ಕೆಲವೇ ದಿನಗಳಲ್ಲಿ ಸೊಸೆ ತನ್ನ ತಾಯಿಯ ಬಗ್ಗೆ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಾ, ತಾಯಿ-ಮಗನ ಮಧ್ಯ ಕಲಹ ಎಬ್ಬಿಸಿ ಮಗನಿಂದ ತಾಯಿಯನ್ನು ದೂರ ಮಾಡುವ ಸಂದರ್ಭ. ವಯಸ್ಸಾದ ತಾಯಿ ಬೇರೆ ಗತಿಯಿಲ್ಲದೆ ಅನಾಥವಾಗಿ ಪ್ರಾಣತ್ಯಾಗ ಮಾಡುವಂತದ್ದು.

ಮೇಲಿನ ಹಾಡನ್ನು ಕೇಳಲು-ನೋಡಲು ಇಂದು ಆಧುನಿಕ ಮಾಧ್ಯಮಗಳಲ್ಲಿ ಒಂದಾದ ಯೂಟ್ಯೂಬ್‌ನಲ್ಲಿ https://youtu.be/yob4Sk27bzw ಎಂದು ಟೈಪ್ ಮಾಡಿದರೆ ಸಾಕು ಹಾಡುನ್ನು ವೀಕ್ಷಿಸಬಹುದು. ಇಲ್ಲಿ ರಚನೆಗೊಂಡ ಸಾಹಿತ್ಯ ಕೇವಲ ಕೇಳುಗನಿಗೆ ಹಾಡನ್ನು ಮಾತ್ರ ನೀಡದೆ, ಜೊತೆಗೆ ಸಂಗೀತದ ಧಾಟಿಯಲ್ಲಿ ಬಿತ್ತರಗೊಳ್ಳುವ ಮೂಲಕ ಕೇಳುಗನಲ್ಲಿ ಹೊಸದೊಂದು ಭಾವನೆಯನ್ನು ಹುಟ್ಟು ಹಾಕುತ್ತದೆ. ಇಂದು ಹಾಡನ್ನು ಆಲಿಸುವ ಜನಸಂಖ್ಯೆಯಲ್ಲಿ ಬದಲಾವಣೆಯನ್ನು ತಂದಿದೆ. ಕೆಲವು ಹಾಡುಗಾರರಿಗೆ ಇದು ವ್ಯಾಪಾರ ಮನೋಭಾವನೆ ಮೂಡಿಸಿದರೆ ಕೆಲವರಿಗೆ ಆಸಕ್ತಿಯ ಕ್ಷೇತ್ರ, ಜೀವಾಳ ಎನಿಸಿದೆ.

ದುಡ್ಡು ಕೊಟ್ಟರೆ ಬೇಕಾದ್ದು ಸಿಗುತೈತೆ ಈ ಜಗದಲ್ಲಿ ಕಾಣೋ
ಹಡೆದ ತಾಯಿಯನು ಕಳಕೊಂಡ ಮ್ಯಾಲ್
ಮತ್ತೆ ಸಿಗುವಳೇನೋ, ತಮ್ಮಾ ಮರಳಿ ಬರುವಳೇನೋ[೨೩]...

ಪ್ರಸಿದ್ಧವಾದ ಈ ನವಜನಪದ ಗೀತೆ ನಾಡಿನಾದ್ಯಾಂತ ಪಸರಿಸಿದೆ. ಈ ಗೀತೆ ಕೇಳುಗರ ಕಣ್ಣಿನಲ್ಲಿ ನೀರು ತರಿಸುತ್ತದೆ. ತಾಯಿಯ ಮಹತ್ವವನ್ನು ಸಾರುತ್ತದೆ. ಬಾಲ್ಯದಲ್ಲಿ ತನ್ನ ತಾಯಿಯನ್ನು ಕಳೆದುಕೊಂಡ ಬಾಲಕ ತಾನು ಅನುಭವಿಸಿದ ವಾಸ್ತವಿಕತೆಗೆ ಪೂರಕ ಘಟನೆಗಳನ್ನು ಆಧರಿಸಿ ಪುರುಷ ರಚಿಸಿರುವಂತಹ ಗೀತೆ ಇದು.

ಚಂದ್ರಕಾಳಿ ಸೀರೆ ಉಟ್ಟ
ಸಿಂದರದಲ್ಲಿ ನೆಲದಮ್ಯಾಲ
ದಂಗಡ ಬಂಗಡಾ ಎದ್ದು
ನೀನು ಹೊಂಟಿಯೆಲ್ಲಾ
ನನ್ನ ಚಿತ್ತದಾಗ ಆಗಿ ಗ್ವಾದಿ ದಾಖಲ್ಲಾ
ಹೆಂತಾ ಹುಡುಗಿ ಮ್ಯಾಲ ಬಿದ್ದಾವ ನಮ್ಮ ಖ್ಯಾಲ
ಸುತ್ತ ಮುತ್ತ ಯಾರು ಇಲ್ಲ ಹೆಂಗ ಬಿಲ್ ಕುಲ್
ಹೆಂಗಾ ಬಾರಾ ಹುಡುಗಿ ಕಂಗಾಲಾಗೇನಿ[೨೪]...

ಈ ನವಜನಪದ ಗೀತೆ ಬೇರೆ ಬೇರೆ ಸನ್ನಿವೇಶ, ವಿಷಯಗಳನ್ನು, ಜನಜೀವನ, ಹೆತ್ತವರ ಸಂಬಂಧ, ತಂದೆ–ತಾಯಿ, ಅಕ್ಕ–ತಮ್ಮ, ಗಂಡ–ಹೆಂಡತಿ, ಅಣ್ಣ–ತಂಗಿ ಹಾಗೂ ಜನಪದ ಹಾಡುಗಳಲ್ಲಿ ಬಳಸಿರುವ ಭಾಷೆ ಮರಾಠಿ ಮಿಶ್ರಣದಿಂದ ಕೂಡಿದೆ. ಬಹುಶಃ ಸಾಹಿತ್ಯ ರಚಿಸಿರುವವರು ಮಹಾರಾಷ್ಟ್ರ ಗಡಿಭಾಗದವರು ಆಗಿರಬೇಕು. ಹೆಣ್ಣು ಮಗಳ ಅಂದ, ಚೆಂದದ ವರ್ಣನೆ ಕೂಡ ಹಾಡಿನಲ್ಲಿ ಮೂಡಿಬಂದಿದೆ. ನಾಡಿನ ಉಡುಗೆ–ತೊಡುಗೆ ಮೇಲೆ ಒತ್ತುಕೊಟ್ಟು ರಚಿಸಿದ್ದಾರೆ. ಜಾಗತೀಕರಣ, ಆಧುನೀಕರಣ ಎಷ್ಟೇ ಪ್ರಭಾವವಿದ್ದರೂ ಮೂಲ ಸಂಸ್ಕೃತಿಯನ್ನು ಉಳಿಸುವಂತಹ ಮನೋಧರ್ಮ ಜನಪದ ಕವಿಗಳದ್ದಾಗಿದೆ. ಇಂದು ಜನಪದ ಗೀತೆಗಳು ಆಧುನಿಕತೆಯ ಪ್ರವೇಶ ಪಡೆದುಕೊಂಡು ಜನರನ್ನು ಆಕರ್ಷಿಸುತ್ತ, ನವಮೌಖಿಕದತ್ತ ವಾಲುತ್ತಿರುವುದು ಜನಪದ ಗೀತೆಗಳ ಒಂದು ಮೈಲಿಗಲ್ಲಾಗಿದೆ.

**ಹಾಡುಗಾರನ ಮನಸ್ಸು**

ಸಂಗೀತ ಮತ್ತು ಹಾಡುಗಾರರ ಮನಸ್ಸಿಗೆ ಒಂದು ಅವಿನಾಭಾವ ಸಂಬಂಧವಿದೆ. ಸಂಗೀತದಲ್ಲಿಯ ಪಂಡಿತರ ಭಾಷೆ, ಭಾಷ್ಯವೇ ಬೇರೆ ತೆರನಾದದ್ದು, ಅವರ ರಚನೆಗಳನ್ನು ಅವರಿಂದ ಕಲಿಯುವಾಗ ಅಲ್ಲೊಂದು ಶಿಲ್ಪ ಕಲಾಕೃತಿ, ಸುಂದರವಾದ ಬಣ್ಣಗಳಿಂದ ರಚಿತವಾದ ವರ್ಣರಂಜಿತ ಚಿತ್ರಕಲಾಕೃತಿ, ನೃತ್ಯದ ವಿಶಿಷ್ಟ ಭಂಗಿಗಳು, ಸೃಜನಾತ್ಮಕ ಸಾಹಿತ್ಯದ ತುಣುಕುಗಳು ಇತ್ಯಾದಿಗಳು ಇಣುಕುತ್ತವೆ. ಮಾನವ ಸೌಂದರ್ಯವನ್ನು ವಿವಿಧ

ಬಾಹ್ಯ ವಸ್ತುಗಳಲ್ಲಿ ಕಾಣುವ ಪ್ರಯತ್ನ ಮಾಡುತ್ತಾನೆ. ಆದರೆ ನಿಜವಾದ ಸೌಂದರ್ಯ ಆತನ ಹೃದಯದಾಳದಲ್ಲಿ ಇರುವುದು.

"ಸಂಗೀತವು ಹರಿಯುವ ನೀರಿನಂತೆ ಹೇಗೆ ನೀರನ್ನು ಮುಷ್ಟಿಯಲ್ಲಿ ಹಿಡಿಯಲಾಗದೆ, ಅದರ ತೇವಾಂಶವನ್ನು ಅನುಭವಿಸಬಹುದೋ ಹಾಗೆಯೇ ಸಂಗೀತವನ್ನು ಅನುಭವಿಸಬೇಕು. ಅದನ್ನು ಶಬ್ದಗಳಲ್ಲಿ ಹಿಡಿಯಲಾಗದು. ನಾವು ಮಾತನಾಡುವಾಗ ಒಂದೇ ಸ್ತರದಲ್ಲಿ ಯಾವುದೇ ಏರಿಳಿತಗಳಿಲ್ಲದೇ ಮಾತನಾಡುತ್ತೇವೆಯೇ?. ಒಂದು ರಾಗವನ್ನು ಅದು ಇದ್ದಂತೆ, ಸಾಂಪ್ರದಾಯಿಕವಾಗಿ ನಾವು ಕಲಿತಂತೆ ಇಡುವುದು ಪ್ರಾಮಾಣಿಕತೆಯೇ ಆದರೂ, ಅಂದಿನ ನಮ್ಮ ಮೂಡಿಗೆ ತಕ್ಕಂತೆ ಇಟ್ಟರೆ ಪ್ರಾಮಾಣಿಕತೆಯ ಜೊತೆ ಉತ್ಸಾಹ ಇರುತ್ತದೆ. ಪ್ರತಿಯೊಂದು ರಾಗದಲ್ಲೂ ಜಾನಪದದ ಒಂದು ಟೋನ್ ಇದೆ. ಅದಕ್ಕೆ ಬೇರೆ ಬೇರೆ ಬಣ್ಣಗಳ ಶೇಡ್ಸ್ ಕೊಟ್ಟು ರಾಗ ಮಾಡಿರುತ್ತಾರೆ."[೨೫]

ಇಲ್ಲಿ ಒಬ್ಬ ಸಂಗೀತಗಾರ ಹಾಡನ್ನು ಹಾಡುವ ಸಂದರ್ಭದಲ್ಲಿ ಹಾಡಿನಲ್ಲಿರುವ ಸಾಹಿತ್ಯ ಕೇಳುಗನಿಗೆ ಯಾವ ರೀತಿಯ ಸಂದೇಶ ಕೊಡಬಹುದು ಎಂಬುದನ್ನು ಗಮನಿಸಬೇಕಾಗುತ್ತದೆ. ಆತ ತಾನು ಮಾಡುವ ಕಾಯಕದ ಕುರಿತು ಹಾಡುಗಳನ್ನು ಹಾಡಿದರೆ ಹೆಚ್ಚು ಅರ್ಥಪೂರ್ಣವಾಗಿರುತ್ತವೆ ಎಂಬುದನ್ನು ಹಾಡುಗಾರ ತಿಳಿದಿರಬೇಕು. ಅಲ್ಲದೇ ಹಾಡುಗಾರ ತನಗೆ ಹಾಡನ್ನು ಹಾಡಬೇಕು ಅನಿಸಿದಾಗ ಮಾತ್ರ ಹಾಡಬೇಕು. ಬೇರೆಯವರ ಒತ್ತಾಯಕ್ಕೆ ಹಾಡಬಾರದು. ಅಂದಾಗ ಮಾತ್ರ ಹಾಡು ವಿಶೇಷತೆಯಿಂದ ಕೂಡಿರಲು ಸಾಧ್ಯವಾಗುತ್ತದೆ.

ಒಟ್ಟಾರೆಯಾಗಿ ಸಂಗೀತವನ್ನು ಮೂರು ಸ್ತರಗಳಲ್ಲಿ ಹಾಡುವುದನ್ನು ನಾವು ಕಾಣುತ್ತೇವೆ. ಒಂದು ಸಾಹಿತ್ಯದ್ದು, ಇನ್ನೊಂದು ತಾಳದ್ದು, ಮತ್ತೊಂದು ಸ್ವರದ್ದು. ಹೀಗೆ ಹಾಡುಗಾರ ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕೆಂಬುದು ಅನುಭವಿ ಹಾಡುಗಾರರ ಅಭಿಪ್ರಾಯ.

ನಾವು ಸಂಗೀತದ ಜೊತೆಗೆ ಹಾಡುಗಾರನ ಮನಸ್ಸನ್ನು ಕೂಡ ಇಂದು ನೋಡಬೇಕಾಗುತ್ತದೆ. ಏಕೆಂದರೆ ಕೇಳುಗ ಕೇವಲ ಹಾಡು ಹಾಡಿದರೆ ಮಾತ್ರ ಕೇಳಲು ಸಿದ್ಧನಾಗಲಾರ. ಹಾಡಿದವರು ಯಾರು? ಯಾವ ರೀತಿಯ ಹಾಡು ಇದಾಗಿದೆ? ಹೀಗೆ ಹಲವು ಪ್ರಶ್ನೆಗಳು ಕೇಳುಗನಲ್ಲಿ ಹುಟ್ಟುತ್ತವೆ. ಅದಕ್ಕಾಗಿಯೇ ಹಾಡನ್ನು ಹಾಡುವ ವ್ಯಕ್ತಿ ತನ್ನಲ್ಲಿ ಕೆಲವೊಂದು ಬದಲಾವಣೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಅಂದಾಗ ಮಾತ್ರ ಆತನ ಹಾಡು ಪರಿಣಾಮಕಾರಿ ಅನಿಸಿಕೊಳ್ಳಲು ಸಾಧ್ಯವಾಗುತ್ತದೆ.

ಇಂದು ನಾವು ಹಾಡನ್ನು ಹಾಡಬೇಕೆಂದುಕೊಂಡು ಆ ಹಾಡಿನ ಹೆಸರನ್ನು ಯೂಟ್ಯೂಬ್‌ನಲ್ಲಿ ಸಾಂಗ್ ಲಿರಿಕ್ ಅಂತಾ ಟೈಪ್ ಮಾಡಿದರೆ ಸಾಕು ಆ ಹಾಡಿನ ಸಾಹಿತ್ಯ ಪರದೆಯ ಮೇಲೆ ಬರುತ್ತದೆ. ಅದನ್ನು ನೋಡಿ ಸಂಗೀತಕ್ಕೆ ಅನುಗುಣವಾಗಿ ಹಾಡುತ್ತ ಹೋದರೆ ನಾವು ಒಬ್ಬ ಸಂಗೀತಗಾರನಿಗಿಂತ ಕಡಿಮೆ ಇಲ್ಲಾ ಎಂಬುದು ಅನುಭವಕ್ಕೆ

ಬರುತ್ತದೆ. ಅಷ್ಟೊಂದು ಆಧುನಿಕ ತಂತ್ರಜ್ಞಾನ ಮುಂದುವರೆದಿದೆ. ಹಿಂದಿನ ಕಾಲದ ವಾದ್ಯಗಳ ಬದಲಾಗಿ ಇಂದು ಸಾಕಷ್ಟು ವಾದ್ಯಗಳು ಬದಲಾದ ರೂಪ ಪಡೆದುಕೊಂಡಿವೆ.

ಜನಪದ ಮೂಲ ಹಾಡುಗಳು ಇಂದು ಕಣ್ಮರೆಯಾಗುತ್ತಿರುವುದಕ್ಕೆ ಹಲವು ಕಾರಣಗಳಿವೆ. ಪಾರಂಪರಿಕ ನಾಟಕ, ಜನಪದ ಹಾಡುಗಳು, ಬಳಸುವ ವಾದ್ಯ ಪರಿಕರಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಆಧುನೀಕರಣ, ಜಾಗತೀಕರಣ, ನಗರೀಕರಣದ ಪ್ರಭಾವ ಅವುಗಳ ಮೇಲೆ ಪರಿಣಾಮ ಬೀರಿವೆ. ಸಂಗೀತದ ಮಟ್ಟು(ರೀತಿ) ಒಂದೇ ಆದರೂ ಸಾಹಿತ್ಯ ಮಾತ್ರ ತಿರುಚಿ ರಚನೆಯಾಗಿರುವಂತದ್ದು. ಇಂದಿನ ಟ್ರ್ಯಾಕ್ಟರ್ ಹಾಡುಗಳು, ಡ್ರೈವರ್ ಕೇಳುವ ಹಾಡುಗಳು ಉದಾಹರಣೆಯಾಗಿವೆ. ಅಲ್ಲದೇ ಮೊಬೈಲ್, ಸಿನೆಮಾ, ಕಂಪ್ಯೂಟರ್, ಇಂಟರ್‌ನೆಟ್‌ಗಳ ಬಳಕೆ ಕಾರಣವಾಗಿವೆ. ಬೆಳಿಗ್ಗೆ ಎದ್ದ ಕೂಡಲೆ ನಮ್ಮ ಮನೆಬಾಗಿಲಿಗೆ ಬರುವ ಮುನ್ಸಿಪಾಲ್ಟಿ ಗಾಡಿಗಳು ಕಸ ತೆಗೆದುಕೊಂಡು ಹೋಗುವಾಗ ಮೂಲ ಜನಪದವನ್ನು ಅಥವಾ ಮೂಲ ಸಿನೆಮಾ ಹಾಡುಗಳನ್ನು ಡಬ್ಬಿಂಗ್ ಮಾಡಿದ ಹಾಡು ಹಾಕಿಕೊಂಡು ಬರುವುದನ್ನು ಕಂಡಿದ್ದೇನೆ. ಹಾಗೆಯೇ ನಮ್ಮ ಜನಪದರು ಮೂಲ ಹಾಡುಗಳಿಗೆ ಒಗ್ಗಿಕೊಂಡಿರುವ ಸಂದರ್ಭದಲ್ಲಿ ಕೆಲವು ಫೇಕ್ ಹಾಡುಗಳನ್ನು ಡಬ್ಬಿಂಗ್ ಮಾಡಿ ಫೇಸ್‌ಬುಕ್, ಯೂಟ್ಯೂಬ್‌ಗಳಲ್ಲಿ ಅಫ್‌ಲೋಡ್ ಮಾಡಿರುವಂತದ್ದು. ಹೀಗೆ ಮಾಡಿದರೆ ಮುಂದೊಂದು ದಿನ ಮೂಲ ಜನಪದ ಹಾಡುಗಳು ಕಣ್ಮರೆಯಾಗುವುದರಲ್ಲಿ ಸಂಶಯವೇ ಇಲ್ಲ. ನಮ್ಮ ಮೂಲ ಕಲಾವಿದರಿಗೆ ಸರ್ಕಾರ ಸರಿಯಾದ ಕ್ರಮದಲ್ಲಿ ಕಾರ್ಯಕ್ರಮ ಸಂಭಾವನೆ, ಮಾಶಾಸನ ನೀಡಿದರೆ ಮೂಲ ಜನಪದ ಗೀತೆಗಳನ್ನು, ಕಲೆಗಳನ್ನು ಉಳಿಸಿಕೊಳ್ಳಬಹುದು.

**ಆಧುನಿಕ ವಾದ್ಯ ಯಂತ್ರಗಳು**

ಇಂದು ಆಧುನಿಕತೆಯಲ್ಲಿ ಫೈಬರ್ ಲೋಹದಂತಹ ವಾದ್ಯ ಪರಿಕರಗಳು ಬಂದ ನಂತರ ಮೂಲ ವಾದ್ಯ ಪರಿಕರಗಳಿಗೆ ಜಾಗವಿಲ್ಲದಂತಾಗಿದೆ. ಉದಾ: ಡೊಳ್ಳಿನ ಜಾಗದಲ್ಲಿ ಫೈಬರ್ ಡೊಳ್ಳು, ತಮಟೆ ಜಾಗದಲ್ಲಿ ಫೈಬರ್ ತಮಟೆ, ಹಾರ್ಮೋನಿಯಂ ಜಾಗದಲ್ಲಿ ಕಾಂಗೋ, ವೀಣೆ ಜಾಗದಲ್ಲಿ ಗಿಟಾರ್ ಹೀಗೆ ಇತ್ಯಾದಿಗಳ ಜಾಗದಲ್ಲಿ ಮಗದೊಂದು ಬಂದು ತಮ್ಮ ಸ್ಥಾನ ಗಟ್ಟಿಗೊಳಿಸಿಕೊಂಡಿವೆ. ಈ ರೀತಿಯಾಗಿ ಬದಲಾವಣೆಯಾದರೆ ವಾದ್ಯ ಪರಿಕರಗಳನ್ನು ತಯಾರಿಸುವ ಮತ್ತು ನುಡಿಸುವ ಕಲಾವಿದರ ಕಲೆಯನ್ನು ಹಾಳು ಮಾಡಿದಂತಾಗುತ್ತದೆ. ಆ ಹಿನ್ನೆಲೆಯಲ್ಲಿ ಮೂಲ ಕಲಾವಿದರು ತಯಾರಿಸಿದ ಕಲಾವಿದರ ವಾದ್ಯ ಪರಿಕರಗಳಿಗೆ ಹಾಗೂ ಜನಪದ ಹಾಡುಗಳಿಗೆ ಉತ್ತೇಜನ ನೀಡಬೇಕು. ಆದಾಗ ಮಾತ್ರ ಮೂಲ ಜನಪದವನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಂದು ಬದಲಾದ ವಾದ್ಯ ಪರಿಕರಗಳ ಚಿತ್ರಣವನ್ನು ಇಲ್ಲಿ ನೋಡಬಹುದು.



**ಹಳೆಯ ಕಾಲದಿಂದಲೂ ಬಳಸುತ್ತಿರುವ ವಾದ್ಯ ಪರಿಕರಗಳು**




**ಆಧುನಿಕ ಸಂದರ್ಭದಲ್ಲಿ ಬಳಕೆಗೊಳ್ಳುತ್ತಿರುವ ವಾದ್ಯ ಪರಿಕರಗಳು**

ಹೀಗೆ ಇಂದು ಜನಪದ ಸಂಗೀತ ವಾದ್ಯಗಳಲ್ಲಿ ಬಹಳಷ್ಟು ಬದಲಾವಣೆ ಆಗಿರುವುದನ್ನು ಕಾಣುತ್ತೇವೆ. ಆದರೂ ಸಹ ಇದು ಆಧುನಿಕತೆಯ ಮುನ್ನಡೆ ಎಂದೇ ಇಲ್ಲಿ ಬಿಂಬಿತವಾಗಿದೆ.

## ನವಮೌಖಿಕ ಸಾಹಿತ್ಯದ ರೂಪ

ಜನಪದ ಗೀತೆಗಳು ಯಾರಿಂದ, ಯಾವಾಗ ಹುಟ್ಟಿದವು ಎಂಬ ಪ್ರಶ್ನೆಗೆ ನಾವು ಖಚಿತವಾದ ಉತ್ತರ ಕಂಡುಕೊಳ್ಳುವುದು ಕಷ್ಟ. ಅಲ್ಲದೇ ಅವು ಅನಕ್ಷರಸ್ಥ ಸಮಾಜದಲ್ಲಿ ಮೌಖಿಕ ಪರಂಪರೆಯಲ್ಲಿ ಹುಟ್ಟಿ ಬೆಳೆದು ಬಂದವು ಎಂಬುದು ಸಾಮಾನ್ಯ ಗ್ರಹಿಕೆಯಾಗಿದೆ. ಅಷ್ಟೇ ಅಲ್ಲ ಹಿಂದಿನ ಕಾಲದಿಂದ ಅವು ಮಾನವ ಸಂಸ್ಕೃತಿಯ ಅಂಗವಾಗಿ ಉಳಿದು, ಬೆಳೆದು ಬಂದಿವೆ. ಶಿಷ್ಟ ಕವಿಗಳು ತಮ್ಮ ಕಾವ್ಯ ರಚನೆಯಲ್ಲಿ ಜನಪದ ಕಾವ್ಯದ ಛಂದೋರೂಪಗಳಾದ ತ್ರಿಪದಿ, ಷಟ್ಪದಿ ಮತ್ತು ರಗಳೆಗಳನ್ನು ಬಳಸಿಕೊಂಡಿದ್ದಾರೆ.



ಜನಪದ ಗೀತೆ ಎಂಬುದು ಒಂದು ರಚನೆಯಲ್ಲ, ಅದೊಂದು ಅಭಿವ್ಯಕ್ತಿಯಾಗಿದೆ. ಭಾಷೆಯಲ್ಲಿ ಅದರ ವೈಶಿಷ್ಟ್ಯ ವ್ಯಾಕರಣವಾಗಿರುವಂತೆ, ಮಾತಿನ ವೈಶಿಷ್ಟ್ಯ ತನ್ನನ್ನೇ ಸೃಷ್ಟಿಸಿಕೊಳ್ಳುವುದನ್ನು ಗೀತೆ ಎಂದು ಕರೆಯುತ್ತೇವೆ. ಕೆಲವರು ಭಾವಿಸಿರುವಂತೆ ಕಾವ್ಯಕ್ಕೇ ಪ್ರತ್ಯೇಕವಾದ ಭಾಷೆ ಎಂಬುದಿಲ್ಲ. ಇಲ್ಲಿ ಪ್ರಾಸ, ಛಂದಸ್ಸುಗಳು ಕೂಡ ರೂಢಿಯ ಕಟ್ಟಳೆಯಾಗಿ ಪರಿಣಮಿಸಿದೊಡನೆ ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ.

ಇನ್ನೂ ರೂಪಗಳ ಬಗ್ಗೆ ಮಾತನಾಡುವುದಾದರೆ ಜನಪದ ಗೀತೆಗಳು ಅನೇಕ ರೀತಿಯ ಪದ್ಯರೂಪಗಳನ್ನು ಒಳಗೊಂಡಿವೆ. ತ್ರಿಪದಿ, ಸೋಬಾನೆ ಪದಗಳು, ಡೊಳ್ಳಿನ ಪದಗಳು, ಕೋಲಾಟದ ಪದಗಳು, ಮೊಹರಂ ಪದಗಳು, ಲಾವಣಿಗಳು, ಬಯಲಾಟದ ಹಾಡುಗಳು ಹೀಗೆ ಅನೇಕ ಪ್ರಕಾರದ ಹಾಡುಗಳು ಇಂದು ನವಮೌಖಿಕ ಪ್ರವೇಶವನ್ನು ಪಡೆದುಕೊಂಡಿವೆ. ಈ ಪ್ರಕಾರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆಯುವಂತಹವು ತ್ರಿಪದಿಗಳು. ಹಳ್ಳಿಯ ಜನರ ಬದುಕನ್ನು ತೆರದಿಟ್ಟ ಪುಸ್ತಕದಂತಿರುವ ಈ ಹಾಡುಗಳಲ್ಲಿ ಒಂದು ಜನಾಂಗದ ಮನಸ್ಸೇ ಮಾತನಾಡುವಂತೆ ಕಾಣುತ್ತದೆ. ಇವು ಜನರ ಬಾಯಲ್ಲಿ ಹಾಡಿನಿಂದಲೇ ಪುನಃ ಸೃಷ್ಟಿಗೊಂಡು ಬಂದವುಗಳಾಗಿವೆ. ಸಾಹಿತ್ಯಕ ದೃಷ್ಟಿಯಿಂದ ಅಳೆಯುವ ಬಗೆ ಬೇರೆಯಾಗಿರಬಹುದು. ಆದರೆ ಮಹತ್ವದ ಹಿನ್ನೆಲೆಯಲ್ಲಿ ಕಾಣುವುದಾದರೆ ಇವು ಮಾನವೀಯ ಮೌಲ್ಯಗಳನ್ನು ನಿರಂತರವಾಗಿ ಉಳಿಸಿಕೊಂಡು ಬಂದಿವೆ. ಈ ಒಂದು ಅಂಶದಿಂದಲೇ ಜನಪದ ಗೀತೆಗಳು ಹೆಚ್ಚಿನ ಲವಲವಿಕೆಯನ್ನು ಸಹಾನುಭೂತಿಯನ್ನು ಇಂದು ಪಡೆದುಕೊಂಡಿದೆ.

ಇವು ಒಂದೊಂದು ಬೇರೆ ಬೇರೆ ಸಮಯ ಸನ್ನಿವೇಶಗಳಲ್ಲಿ ಆಯಾ ಭಾವ, ರಾಗಗಳನ್ನು ಒಳಗೊಂಡ ಮುಕ್ತಕಗಳಾಗಿವೆ. ಇವುಗಳ ವ್ಯಾಪ್ತಿ ಚಿಕ್ಕದು. ಆದರೆ ಈ ಪರಿಮಿತಿಯಲ್ಲಿ ಕವಿಗಳ ಜೀವನದ ಅನುಭವ, ಅಂತಃಕರಣದ ಮಿಡಿತ, ಸೌಂದರ್ಯ ದೃಷ್ಟಿಕೋನ, ಲೋಕ ನಿರೀಕ್ಷಣೆ ಎಲ್ಲವೂ ಅಲ್ಲಲ್ಲಿ ಜ್ವಲಂತವಾದ ಪ್ರತಿಮೆ, ರೂಪಕಗಳನ್ನು ನಿರಾಯಾಸವಾಗಿ ನಿರ್ಮಿಸುತ್ತ ನಿಜವಾದ ಗೀತೆಗಳ ಅಂಶಗಳನ್ನು ಬಿಡಿ ಬಿಡಿಯಾಗಿ ನೀಡುತ್ತವೆ. ಇಂತಹ ವಿಶಿಷ್ಟವಾದ ರೂಪವನ್ನು ಈ ಗೀತೆಗಳು ಹೊಂದಿರುತ್ತವೆ.

ಈ ಗೀತೆಗಳು ಹಳ್ಳಿಯ ಜೀವನ ಪರಿಸರದಲ್ಲಿ, ಒಂದು ವಿಶಿಷ್ಟ ಸಂಸ್ಕೃತಿಯಲ್ಲಿ ಮೂಡಿಬಂದವುಗಳು. ಇಲ್ಲಿ ಭಾಷೆ, ಲಯ, ಧಾಟಿ, ಧೋರಣೆಗಳಲ್ಲಿ ಅದರ ಸಂಸ್ಕಾರಗಳು ಬೆಳೆದಿವೆ. ಅಲ್ಲಿಯ ಆಡುಮಾತಿನ ಲಯ, ಶಬ್ದ ಸಂಪತ್ತು, ಧ್ವನಿ ಶಕ್ತಿಗೆ ವಿಶಿಷ್ಟವಾದ ಸಂವೇದನೆಯಿದೆ. ಜನಪದ ಭಾಷೆ ಇದೆಲ್ಲವನ್ನೂ ಒಳಗೊಂಡು ಜನಪದ ಪ್ರಜ್ಞೆಯ ಪ್ರತೀಕವಾಗಿರುತ್ತದೆ. "ಮಿತವಾದ ಮಾತುಗಳಲ್ಲಿ ಸೂಚ್ಯತೆಯನ್ನು ತರುವದು ಉತ್ತಮ ಕಾವ್ಯದ ಲಕ್ಷಣ. 'ಹಾಗಲ್ಹಣ್ಣೀನಂಥ ಕಾವಿಯ ಧರಿಸ್ಯಾರ' ಎಂಬ ಒಂದೇ ಸಾಲಿನಲ್ಲಿ ಸ್ವಾಮಿಗಳೊಬ್ಬರ ವ್ಯಕ್ತಿತ್ವವನ್ನು ಚಿತ್ರಿಸಲಾಗಿದೆ. ಅವರು ಧರಿಸಿದ ಕಾವಿ ಬಟ್ಟೆಯ ಬಣ್ಣ, ಮುಪ್ಪಿನ ವಯಸ್ಸು, ಆದರೂ ಎದ್ದು ಕಾಣುವ ಮುಖದ ಕಾಂತಿ, ಅನುಭವದ ಪರಿಣತಿ

ಇವೆಲ್ಲವನ್ನು ಹಾಗಲ್ಲಣ್ಣಿನ ಪ್ರತಿಮೆ ಲಕ್ಷಣವಾಗಿ ಸೂಚಿಸುತ್ತದೆ. ಭಾಷೆ ಹೀಗೆ ತನ್ನ ಪರಿಚಿತತೆಯನ್ನು ಕಳೆದುಕೊಂಡು ಕವಿ ನೀಡುವ ಅಪರಿಚಿತ ಭಾವದ ಸಂವೇದನೆ ಗೀಡಾದಾಗ ಅದು ಕಾವ್ಯಭಾಷೆಯಾಗುತ್ತದೆ."[೨೬]

ಕವಿಗಳು ತಮ್ಮ ಒಳನೋಟದಿಂದ ಸುತ್ತಣ ಜಗತ್ತನ್ನು ಕಂಡವರು, ತಮ್ಮ ಕಿವಿಗಳಿಂದ ಜೀವನ ಸಂಗೀತವನ್ನು ಕೇಳಿದವರು. ಹಾಗಾಗಿ ಅವರು ಹಾಡುವುದೆಲ್ಲ ಅವರ ಜೀವನದ ಅಂಗವಾಗಿ ಮೂಡಿಬಂದಿವೆ. ಬದುಕಿನಿಂದಲೇ ನೇರವಾಗಿ ಎತ್ತಿಕೊಂಡ ವಿಷಯಗಳಾದ ಉಪಮೆ, ರೂಪಕಗಳಿಗೆ ಈ ಗೀತೆಗಳು ಗಣಿಯಾಗಿವೆ. ಅಂದಿನಿಂದ ಇಂದಿನವರೆಗೂ ಸುಂದರವಾದ ರೂಪಕಗಳನ್ನು ಪಡೆದುಕೊಂಡು ಬಿತ್ತರಗೊಳ್ಳುತ್ತಿವೆ.

ಇಲ್ಲಿ ಭಾವ ಮತ್ತು ಭಾಷೆಗಳ ಹೊಂದಾಣಿಕೆ ಕಾವ್ಯದಲ್ಲಿ ಮುಖ್ಯವಾದದ್ದು. ಭಾವಕ್ಕೆ ತಕ್ಕ ಪದಗಳು ಎಲ್ಲೆಲ್ಲಿಂದಲೋ, ಯಾವ್ಯಾವ ಮೂಲೆಯಿಂದಲೋ ತಕ್ಷಣ ಬಂದು ಕೂಡಿಕೊಳ್ಳುವಂತೆ ಈ ಪದ್ಯಗಳು ರಚನೆಗೊಂಡಿರುತ್ತವೆ. ಉದಾಹರಣೆಯಾಗಿ ಈ ಕೆಳಗಿನ ತ್ರಿಪದಿಯನ್ನು ನೋಡಬಹುದು.

ಕಾಚಿನ ಕರಿ ಏಟು? ಅಡಕೀಯ ವಗರೇಟು?
ಸೇರೆ ಬಳ್ಳೊಳ್ಳಿ ಸೆದಿ ಏಟು? ನನಕೂಟ
ಮಾತು ಬಿಟ್ಟಾಳ ಬಿಗುವೇಟು?॥[೨೭]...

ತನ್ನೊಂದಿಗೆ ಮಾತು ಬಿಟ್ಟವಳು ಬಿಗುವಿನಿಂದ ಇದ್ದರೂ ಅದು ಬಹಳ ಹೊತ್ತು ಉಳಿಯುವಂಥದಲ್ಲ, ಉದಾಸೀನಕ್ಕೆ, ಉಪೇಕ್ಷೆಗೆ ಯೋಗ್ಯವಾದದ್ದು ಎನ್ನುವ ಭಾವ ಇಲ್ಲಿ ಮೂಡಿಬಂದಿದೆ. ಕಾಚಿನ ಕರಿ ಬಣ್ಣವಾಗಲಿ, ಅಡಕೆಯ ಒಗರಾಗಲಿ ತಾಂಬೂಲದಲ್ಲಿ ಬಹಳ ಹೊತ್ತು ಉಳಿಯಲಾರದು. ಅದು ಸಮರಸವಾಗಿ ಬಿಡುತ್ತದೆ. ಈ ದೃಷ್ಟಾಂತದಂತೆ ಇವರ ಸೇಡು ಬಹಳ ಹೊತ್ತು ಇರಲಾರದು, ಮತ್ತೆ ಇವರ ಮನಸ್ಸುಗಳು ಕೂಡುತ್ತವೆ ಎಂಬುದು ಈ ಪದ್ಯದ ಆಶಯವಾಗಿದೆ.

ಈ ಹಾಡುಗಳಲ್ಲಿ ಬಳಸಿರುವ ಭಾಷೆ ಗ್ರಾಮೀಣರು ಬದುಕಿನಲ್ಲಿ ಬಳಸುವಂಥ ದಿನನಿತ್ಯದ ಸಂಪರ್ಕ ಭಾಷೆಯಾಗಿದೆ. ತನಗೆ ತಾನೇ ಅರ್ಥವನ್ನು ಮುತ್ತುಗಳಂತೆ ಬಿಚ್ಚಿಬೀಳುವ ಆಕರ್ಷಣೆ ಈ ಹಾಡುಗಳಿಗಿವೆ. ಸಾಮಾನ್ಯವಾಗಿ ಮೌಖಿಕ ಹಾಗೂ ನವಮೌಖಿಕ ಗೀತೆಗಳಲ್ಲಿ ಜನಪದರು ತಮ್ಮ ಸಾಮಾಜಿಕ ಹಾಗೂ ವೈಯಕ್ತಿಕ ಬದುಕಿನ ಅನುಭವಗಳನ್ನೇ ಭಾಷೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಜೀವನದ ಆದರ್ಶ, ಕಲ್ಪನೆ, ನೀತಿ ಮುಂತಾದ ಅನೇಕ ವಸ್ತುವನ್ನು ಇಟ್ಟುಕೊಂಡು ರಚಿಸಿದ ಈ ಹಾಡುಗಳು ವಿಷಯದ ದೃಷ್ಟಿಯಿಂದಲೂ ವಿಶೇಷವಾದವುಗಳಾಗಿವೆ. ಹಾಡುಗಳಲ್ಲಿ ಬಳಸಿರುವ ಶಬ್ದ ರೂಪಗಳು ಕೇವಲ ಪದಗಳಾಗಿರದೆ ಅವು ತಮ್ಮದೇ ಆದ ಜೀವಶಕ್ತಿ ಹೊಂದಿವೆ. ಹೀಗೆ ನವಮೌಖಿಕ ಸ್ವರೂಪವನ್ನು ಗೀತೆಗಳ ಹಿನ್ನೆಲೆಯಲ್ಲಿ ಕಾಣುತ್ತೇವೆ.

ಇಂದು ನವಮೌಖಿಕ ಸಾಹಿತ್ಯವನ್ನು ಹಾಡುಗಾರರು, ಗೀತೆಗಳ ರಚನಾಕಾರರು ತಮ್ಮದೇ ಶೈಲಿಯ ಹಾಡುಗಳನ್ನು ರಚನೆ ಮಾಡಿ ಹಾಡುತ್ತಾ ಜನರ ಮನಸ್ಸನ್ನು ತಮ್ಮತ್ತ ಸೆಳೆಯುತ್ತಿದ್ದಾರೆ. ಇದು ನವಮೌಖಿಕದ ಮುನ್ನಡೆ ಆಗಿ ಬಿಂಬಿತಗೊಳ್ಳುತ್ತಿದೆ. ನವಮೌಖಿಕ ಗೀತೆಗಳನ್ನು ರಚಿಸುವ ಕವಿಗಳು ಹಾಗೂ ಹಾಡುಗಾರರು, ಜನಪದ ಪ್ರಕಾರಗಳನ್ನು ಚೆನ್ನಾಗಿ ದುಡಿಸಿಕೊಳ್ಳುತ್ತಿದ್ದಾರೆ. ಅವರ ಹಾಡುಗಳಲ್ಲಿ ಜನಪದ ಹಾಡುಸಾಹಿತ್ಯದಲ್ಲಿ ಇರುವ ತ್ರಿಪದಿ, ಲಾವಣಿ, ಕೋಲಾಟ ಪದದ ರೂಪಗಳು, ಜೋಗಿತಿ ಹಾಡಿನ ರೂಪಗಳು, ಹೊಸ ರೂಪಾಂತರದಲ್ಲಿ ಪ್ರಯೋಗಗೊಳ್ಳುವುದನ್ನು ಗಮನಿಸಬಹುದು. ಮೈಸೂರು ಭಾಗದ ಕ್ಯಾಸೆಟ್ ಜನಪದ ಕವಿಗಳು ಮತ್ತು ಹಾಡುಗಾರರು, ಆ ಭಾಗದ ಮಂಟೆಸ್ವಾಮಿ ಮಾದೇಶ್ವರ ಕಾವ್ಯದ ಹಾಡುಗಳ ರೂಪ ಛಂದಸ್ಸು ಧಾಟಿ ಹಾಗೂ ರಾಗಗಳನ್ನು ಬಳಸುತ್ತಿರುವರು. ಕ್ಯಾಸೆಟ್ ಜನಪದ ಕವಿಗಳ ಮತ್ತು ಹಾಡುಗಾರರು, ಪ್ರಧಾನ ಕೇಳುಗರು ಗ್ರಾಮೀಣ ಪ್ರದೇಶದ ರೈತಾಪಿ ವಲಯದವರೇ ಆಗಿದ್ದಾರೆ. ಹೀಗಾಗಿ ಈ ಕವಿಗಳು ಶಿಷ್ಟಕಾವ್ಯದ ಛಂದಸ್ಸು ಮತ್ತು ರೂಪಗಳಿಗೆ ಬದಲಾಗಿ, ತಮ್ಮ ಕೇಳುಗರಿಗೆ ಪರಿಚಿತವಿರುವ ಸ್ಥಳೀಯ ದೇಶೀಯ ಜನಪದ ಸಾಹಿತ್ಯದ ರೂಪಗಳನ್ನೇ ಪಳಗಿಸಿ, ಅದರಲ್ಲಿ ತಮ್ಮ ಆಶಯವನ್ನು ಅಳವಡಿಸುತ್ತಿದ್ದಾರೆ. ಜನಪದ ಸಾಹಿತ್ಯದ ಜನಪ್ರಿಯ ರೂಪಗಳ ಜತೆಗೆ ಅವರು ತಮ್ಮ ಕೇಳುಗರಿಗೆ ಪರಿಚಿತವಿರುವ ಸಿನಿಮಾ ಹಾಡಿನ ರೂಪ ಮತ್ತು ಧಾಟಿಗಳನ್ನು ಸಹ ಬಳಸುತ್ತಿರುವುದನ್ನು ಗಮನಿಸಬಹುದು. ಇದನ್ನು ಜನಪದ ಹಾಡುಸಾಹಿತ್ಯದ ರೂಪಗಳ ಡಿಜಿಟಲ್ ಮರುಹುಟ್ಟು ಎಂದು ಕೂಡ ಕರೆಯಬಹುದು.



**ಕೊನೆ ಟಿಪ್ಪಣಿಗಳು**

೧. ನಾಗೇಶ ಹೊನ್ನೂರ, ಜಾನಪದ ಗೀತೆಗಳು, ಪುಟ: ೧೪.
೨. ಅದೇ, ಪುಟ: ೧೭.
೩. ಶ್ರೀ ಎಸ್.ವಿಜಯಕುಮಾರ, ಜಾನಪದ ಗೀತೆಗಳು, ಪುಟ: ೨೨.
೪. ನಾಗೇಶ ಹೊನ್ನೂರ, ಜಾನಪದ ಗೀತೆಗಳು, ಪುಟ: ೫೨.
೫. ಜಿ.ಜಿ.ಸಾಗರ್, ಜನಪದ ಗೀತೆಗಳು, ಪುಟ: ೫೭.
೬. ಅದೇ, ಪುಟ: ೬೧.
೭. https://youtu.be/0ha47lZ_H2Y.
೮. https://youtu.be/WMMfi9rjR84.
೯. http://youtu.be/7rc5ltYeZpc.
೧೦. https://youtu.be/en2bx4lVtsg.
೧೧. https://youtu.be/i5F2mS20-c4.
೧೨. https://youtu.be/J3eChaYnqyA.

೧೩. https://youtu.be/IUw-A129wNg.

೧೪. https://youtu.be/aJg7JwLliGl.

೧೫. ನಾಗೇಶ ಹೊನ್ನೂರ, ಜಾನಪದ ಗೀತೆಗಳು, ಪುಟ: ೧೭.

೧೬. ಅದೇ, ಪುಟ: ೫೨.

೧೭. ತಿರುಮಲೈ ಸೋದರಿಯರು, ಕರ್ನಾಟಕ ಸಂಗೀತ ದರ್ಪಣ, ಪುಟ: ೧.

೧೮. ಅದೇ, ಪುಟ.

೧೯. https://kn.wikiredia.org/wiki/%EO.

೨೦. https://youtu.be/ZDJwSnJWBBs.

೨೧. https://books.google.com/books/about/KANNADA_SUKHI_DAMPATYA_NIMMADAGUVUDU_HEG.html?id=3lqaAwAAQBAJ.

೨೨. https://youtu.be/yob4Sk27bzw.

೨೩. https://youtu.be/krZ31rUUl_A.

೨೪. https://youtu.be/NTy8AK8w3z4.

೨೫. ತಿರುಮಲೈ ಸೋದರಿಯರು, ಕರ್ನಾಟಕ ಸಂಗೀತ ದರ್ಪಣ, ಪುಟ: x.

೨೬. ಆರ್.ಸಿ.ಹಿರೇಮಠ, ಜಾನಪದ ಸಾಹಿತ್ಯ ದರ್ಶನ, ಪುಟ: ೧೩೨.

೨೭. ಅದೇ, ಪುಟ: ೧೩೩.

# ಅಧ್ಯಾಯ : ನಾಲ್ಕು

## ಜನಪದ ಹಾಡಿನ ಕವಿಗಳ ಲೋಕ

೪.೧ ಜನಪದ ಹಾಡುಗಳ ರಚನೆ ಮಾಡುವ ಸಮುದಾಯ

೪.೨ ಜನಪದ ಹಾಡುಗಳ ಪ್ರಕಾರ

# ಅಧ್ಯಾಯ : ನಾಲ್ಕು

# ಜನಪದ ಹಾಡಿನ ಕವಿಗಳ ಲೋಕ

## ೪.೧ ಜನಪದ ಹಾಡುಗಳ ರಚನೆ ಮಾಡುವ ಸಮುದಾಯ

ಇಂದು ಸಮೂಹ ಸಂವಹನ ಮಾಧ್ಯಮಗಳ ಮೂಲಕ ಜನಪದ ಹಾಡುಗಳು ಹೆಚ್ಚು ಜನಪ್ರಿಯತೆಯನ್ನು ಪಡೆಯುತ್ತಿವೆ. ಪ್ರಸ್ತುತ ಅಧ್ಯಯನವು ಉತ್ತರ ಕರ್ನಾಟಕದ ಪ್ರಾದೇಶಿಕ ವ್ಯಾಪ್ತಿಯನ್ನು ಹೊಂದಿದ್ದು. ಈ ಭಾಗದಲ್ಲಿ ಬರುವ ಜನಪದ ಹಾಡುಗಳ ರಚನಾಕಾರರನ್ನು ಭೇಟಿಯಾಗಿ ಅವರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಮೌಖಿಕ ಸಂವಹನ ಇಂದು ಮಾಧ್ಯಮಗಳ ಮೂಲಕ ಪ್ರಸಾರವಾಗುತ್ತಿದೆ. ನಾವಿಂದು ಸಮೂಹ ಸಂವಹನದ ಪ್ರಭಾವವನ್ನು ವಿವರಿಸುವ ಮೂಲಕ ನವಮೌಖಿಕ ಚರ್ಚೆ ಆರಂಭಿಸಬೇಕಿದೆ. ಹಾಗಾಗಿ ಈ ಪ್ರದೇಶಗಳಲ್ಲಿ ಇರುವ ಜನಪದ ಹಾಡುಗಳ ರಚನೆ ಮಾಡುವುದಷ್ಟೇ ಅಲ್ಲದೇ ಕೆಲವರು ಹಾಡುಗಾರರಾಗಿದ್ದಾರೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಜನಪದ ಕಲಾವಿದರು ಮೊದಲು ಹಾಡುಗಳನ್ನು ಮೌಖಿಕ ನೆಲೆಯಲ್ಲಿ ರಚನೆ ಮಾಡಿ ನಂತರದಲ್ಲಿ ಆ ಹಾಡುಗಳು ನವಮೌಖಿಕತೆ ಪ್ರವೇಶವನ್ನು ಪಡೆದುಕೊಂಡಿರುವ ಕಲಾವಿದರ ಕುರಿತು ಮಾತ್ರ ಇಲ್ಲಿ ಅಧ್ಯಯನ ಮಾಡಲಾಗಿದೆ.

### ಕಲ್ಲಪ್ಪ ಗೋಸೆನಟ್ಟಿ

ಕಲ್ಲಪ್ಪ ಗೋಸನಟ್ಟಿ ಶ್ರೇಷ್ಠ ಗೀಗೀ ಪದಗಳ ಹಾಡುಗಾರರು ಹಾಗೂ ಲಾವಣಿಕಾರರು ಆಗಿದ್ದಾರೆ. ಇವರ ಹುಟ್ಟೂರು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಮುಗಳಿಹಾಳ. ಮೂಲತಃ ಕೃಷಿ ಕುಟುಂಬದವರಾದ ಕಲ್ಲಪ್ಪ ಹಳ್ಳಿಗಾಡಿನ ಸೊಗಸನ್ನು ಸವಿದು ಬೆಳೆದವರು. ರೈತಮಕ್ಕಳ ಮನದಾಳದ ಮಾತುಗಳನ್ನು ಗೀಗೀ ಪದಗಳಲ್ಲಿ ಬಿಂಬಿಸಿ ಹತ್ತು ಹಲವು ಕಾರ್ಯಕ್ರಮಗಳನ್ನು ನೀಡಿರುವ ಇವರು ಎಂದೂ ಹಣದ ಕಡೆ ಗಮನ ಕೊಟ್ಟವರಲ್ಲ. ಒಕ್ಕಲುತನವನ್ನು ತಮ್ಮ ಮೂಲ ವೃತ್ತಿಯಾಗಿಸಿಕೊಂಡು, ಹಳ್ಳಿಯ ಕಲಾತಂಡಗಳೊಂದಿಗೆ ಸೇರಿ ಸಂಗೀತದ ಸವಿಯನ್ನು ತಾನುಂಡು ಜನರಿಗೂ ಉಣಿಸಿ ಸಂತಸ ಪಟ್ಟವರು. ಭಜನೆ, ದಿಂಡಿ ಮುಂತಾದ ಸಾಂಪ್ರದಾಯಗಳನ್ನು ಮೈಗೂಡಿಸಿಕೊಂಡವರು. ಮರಾಠಿ ಸಂಪ್ರದಾಯ, ಕರ್ನಾಟಕದ ಸಂಪ್ರದಾಯ ಎರಡು ಬಗೆಯ ಸಂಪ್ರದಾಯಗಳಲ್ಲಿ ಸಮ್ಮಿಲಿತಗೊಂಡು ಬೆಳೆದವರು. ತಮ್ಮ ಹಾಡಿನ ಮೂಲಕ ಉತ್ತರ ಕರ್ನಾಟಕ ಭಾಗದಲ್ಲಿ ವಿಶೇಷವಾಗಿ ಬೆಳಗಾವಿಯ ಭಾಷೆಯ ಗತ್ತುಗಾರಿಕೆಯನ್ನು ಹಾಡಿನ ಮೂಲಕ ಹೊರ ಹೊಮ್ಮಿಸಿದವರು. ಈ ರೀತಿಯ ಗೀಗೀ ಪದಗಳಾಗಲಿ,

ಲಾವಣಿಗಳಾಗಲಿ ಅಥವಾ ಇನ್ನಾವುದೇ ಜನಪದ ಪ್ರಕಾರಗಳಾಗಲಿ ಇವು ನವಮೌಖಿಕ ಸಾಹಿತ್ಯದ ಬುನಾದಿಗಳಾಗಿವೆ. ಈ ಬುನಾದಿಯ ಹಿನ್ನಲೆಯಲ್ಲಿ ನವಮೌಖಿಕತೆಯ ಹೊಚ್ಚ ಹೊಸ ಕವಲುಗಳು ಗರಿಗೆದರಿವೆ.

ಕಲ್ಲಪ್ಪನವರು ಹಲವಾರು ಲಾವಣಿಗಳನ್ನು ಹಾಡುತ್ತಿದ್ದರು. ಪ್ರಮುಖವಾಗಿ ಕಿತ್ತೂರು ಚನ್ನಮ್ಮ, ಸಂಗೊಳ್ಳಿ ರಾಯಣ್ಣನ ಲಾವಣಿಗಳು ಪ್ರಸಿದ್ಧ ಲಾವಣಿಗಳಾಗಿವೆ. ಗೀಗೀ ಪದಗಳನ್ನು ಹಾಡುತ್ತ ವಿಶೇಷ ರೀತಿಯ ಭಾವಭಂಗಿಗಳೊಂದಿಗೆ, ಹಾಡಿನ ಮಧ್ಯ ಮಧ್ಯ ಆಕರ್ಷಕ ಮಾತುಗಾರಿಕೆಯಿಂದ, ತಾಳಗಳಿಂದ ಜನರಲ್ಲಿ ಸಂತಸದ ಹೊನಲು ಹೊಮ್ಮಿಸುವ ವಿಶೇಷ ಕಲೆ ಕಲ್ಲಪ್ಪನವರಿಗೆ ಒಲಿದಿತ್ತು. ಹಾಡಲು ಹೋದಾಗ ಸ್ಥಾನಿಕ ವಿಶೇಷತೆಯನ್ನು ಹೇಳುವುದರ ಮೂಲಕ, ವರ್ಣಿಸುವುದರ ಮೂಲಕ ಕಾರ್ಯಕ್ರಮಗಳಿಗೆ ಕಳೆ ತುಂಬುತ್ತಿದ್ದರು.

ಸೊಸಿ ಇದ್ರ ಇರಬೇಕು ಹೆಂತಾಕಿ
ಹೇಮರಡ್ಡಿ ಮಲ್ಲಮ್ಮನಂತಾಕಿ...

ಈ ಹಾಡಿಗೆ ಕಾರ್ಯಕ್ರಮದಲ್ಲಿ ಇದ್ದ ಜನರೆಲ್ಲ ಎದ್ದನಿಂತು ಚಪ್ಪಾಳೆ ಹಾಕುತ್ತ ಕಲಾವಿದನಿಗೆ ಗೌರವ ಸಂತೋಷದ ಔತಣವನ್ನು ಉಣಬಡಿಸುತ್ತಿದ್ದರು. ಕಲ್ಲಪ್ಪನವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸೌಂಡ್ ಆ್ಯಂಡ್ ಡ್ರಮ್ ಇಲಾಖೆಯಲ್ಲಿ ಕಲಾವಿದರಾಗಿ ಸೇವೆಗೈದಿದ್ದಾರೆ. ಹಬ್ಬ ಹರಿದಿನಗಳಲ್ಲಿ, ಜಾತ್ರೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಏರ್ಪಡಿಸಿದ 'ಕಾಂಕ್ರಿಟ್ ಕಾಡಿನಲ್ಲಿ ಜಾನಪದ ಝೇಂಕಾರ' ಎಂಬ ಕಾರ್ಯಕ್ರಮದಲ್ಲಿ ಹಾಡಿದಾಗ ಇವರ ಗೀಗೀ ಹಾಡುಗಾರಿಕೆಯನ್ನು ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಇವರು ತಮ್ಮ ಗಾನಗಂಗೆ ಮೂಲಕ ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

**ಕಡಣಿ ಕಲ್ಲಪ್ಪ**

ಕನ್ನಡ ನಾಡಿನ ಸಾಂಸ್ಕೃತಿಕ ಲೋಕಕ್ಕೆ ವಿಜಯಪುರದ ಕೊಡುಗೆ ಅಪಾರ. ವಿಶೇಷವಾಗಿ ಜನಪದ ಲೋಕಕ್ಕೆ ಕೊಡುಗೆಯನ್ನು ವಿಜಯಪುರ ನೀಡಿದೆ ಎಂದರೆ ತಪ್ಪಾಗಲಾರದು. ಎಣಿಕೆಗೆ ಬರುವ ಕಲಾವಿದರು ಕೆಲವರಾದರೂ ಎಣಿಕೆ ಇಲ್ಲದಷ್ಟು ಎಲೆಮರೆಯ ಕಾಯಿಯಂತೆ ಉಳಿದ ಕಲಾವಿದರು ಅಸಂಖ್ಯಾತ. ಅವರ ಸಾಲಿನಲ್ಲಿ ಕಡಣಿ ಕಲ್ಲಪ್ಪ ಒಬ್ಬರಾಗಿದ್ದಾರೆ. ಕಲ್ಲಪ್ಪನವರು ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಭೀಮಾ ತೀರದ ಪುಟ್ಟ ಹಳ್ಳಿ ಕಡಣಿ ಎಂಬಲ್ಲಿ ಗಂಗಣ್ಣ ಮತ್ತು ಲಕ್ಷ್ಮೀಬಾಯಿಯರ ಮಗನಾಗಿ ೧೯೧೦ರಲ್ಲಿ ಜನಿಸಿದರು. ಇವರು ಕಲಿತದ್ದು ಕೇವಲ ಮೂರನೇ ತರಗತಿ. ಆದರೂ ಸಹ ಇವರಿಗೆ ಚಿಕ್ಕವನಿರುವಾಗಲೇ ಸರಸ್ವತಿಯ ಕೃಪೆ ಇರುವ ಕಾರಣ, ಎಂಟನೇ ವಯಸ್ಸಿನಲ್ಲಿ

ಹಾಡುವ ಹವ್ಯಾಸ ಅವರನ್ನು ಬೆಸೆದುಕೊಂಡಿತು. ನಂತರ ದಿನಗಳಲ್ಲಿ ಸ್ವತಃ ಪದಕಟ್ಟಿ ಹಾಡುವ ಗತ್ತು ಅವರದಾಯಿತು.

ಇವರ ಆಶುಕವಿತ್ವ ಎಷ್ಟಿತ್ತೆಂದರೆ ಯಾವುದೇ ವಿಷಯದ ಮೇಲೆ ಕ್ಷಣ ಮಾತ್ರದಲ್ಲಿ ಪ್ರಾಸಬದ್ಧವಾಗಿ ಗೀತೆಗಳನ್ನು ರಚಿಸುವ ಕಲೆಯನ್ನು ಹೊಂದಿದ್ದರು. ಇವರು ಕೇವಲ ಜನಪದ ಗೀತೆಗಳನ್ನು ಅಷ್ಟೇ ಅಲ್ಲದೇ ರಾಮಾಯಣ, ಮಹಾಭಾರತ ಅಂತಹ ಕಥಾ ಪ್ರಸಂಗಗಳನ್ನು ಕಾವ್ಯದಲ್ಲಿ ಕಟ್ಟಿ ಜನರನ್ನು ಆಕರ್ಷಿಸುವ ರೀತಿಯಲ್ಲಿ ಹಾಡುತ್ತಿದ್ದರು. ಹಾಗೆ ಕಲಬುರಗಿಯ ಶರಣ ಬಸವೇಶ್ವರರ ಕುರಿತು, ಖಾಜಾ ಬಂದೇನವಾಜರ ಕುರಿತು ಮತ್ತು ಶರಣರ ಕುರಿತಾದ ಗೀತೆಗಳನ್ನು ರಚಿಸಿದ್ದಾರೆ. ಮೊದಮೊದಲು ಇವರು ಗ್ರಾಮ ದೇವತೆಯಾದ ಇವರ ಆರಾಧ್ಯ ದೈವ ಈಶ್ವರನ ಹೆಸರಿನಲ್ಲಿ ಕವನ ಬರೆಯುತ್ತಿದರು. ಮುಂದೆ ಕ್ರಮೇಣ ಕಡಣಿ ಕಲ್ಲಪ್ಪ ಎಂಬ ಕಾವ್ಯನಾಮದಿಂದ ಗುರುತಿಸಿಕೊಂಡರು. ಇವರ ಮೇಲೆ ಸರಸ್ವತಿಯ ಕೃಪೆ ಎಷ್ಟಿದೆ ಎಂದರೆ ಕೇಳುಗರ ಮನದಲ್ಲಿ ಇವರ ನಾಲಿಗೆಯ ಮೇಲೆ ಸರಸ್ವತಿ ನಲಿದಾಡುತ್ತಿರುವಂತೆ ಭಾಸವಾಗುತ್ತಿತ್ತು.

ಕಲ್ಲಪ್ಪನವರ ಪ್ರತಿಭೆಗೆ ಪೂರಕವಾದ ಒಂದು ಘಟನೆ ಇಲ್ಲಿ ನೆನಪಿಸಿಕೊಳ್ಳಬಹುದು. ೧೯೫೫ರಲ್ಲಿ ಜಿಲ್ಲಾಧಿಕಾರಿಗಳು ಇವರ ಗ್ರಾಮಕ್ಕೆ ಆಗಮಿಸಿದ್ದರು. ಆ ಸಂದರ್ಭದಲ್ಲಿ ಅವರು ಒಡ್ಡಿನ ಸಾಲದ ದುರುಪಯೋಗದ ಕುರಿತಾಗಿ ಜನರಿಗೆ ಮಾಹಿತಿ ಕೊಡಬೇಕಾಗಿತ್ತು. ಅವರು ಹೇಳುವ ಪೂರ್ವದಲ್ಲಿಯೇ ಕಲ್ಲಪ್ಪ ತನ್ನ ಕಾವ್ಯ ಕಲೆಯ ಮೂಲಕ ಜನರಿಗೆ ಮನದಟ್ಟಾಗುವಂತೆ ಮಾಹಿತಿಯನ್ನು ಮುಟ್ಟಿಸಿದರು. ಇದನ್ನು ನೋಡಿದ ಜಿಲ್ಲಾಧಿಕಾರಿಗಳು ನಾನು ಏನು ಹೇಳುವುದು ಉಳಿದಿದೆ. ಕಲ್ಲಪ್ಪ ಎಲ್ಲವನ್ನು ಹೇಳಿ ಬಿಟ್ಟಿದ್ದಾನೆ ಎಂದು ಕಲ್ಲಪ್ಪರ ಬೆನ್ನು ತಟ್ಟಿ ಪ್ರಶಂಸಿಸಿ ಕೈಮುಗಿದು ಹೋದರಂತೆ.

ಕಲ್ಲಪ್ಪನವರು ಒಬ್ಬ ಅನುಭಾವಿ ಕವಿ ಇವರ ಹಾಡುಗಳನ್ನು ಊರಿನ ಜನ ಮೈಮರೆತು ಆಲಿಸುತ್ತಿದ್ದರಂತೆ.

> ನಾ ಗರತಿ, ನೀ ಗರತಿ ಹಾಕ್ಯಾರೆಡೋ ಮಂದಿಬಾಳಾ ಐತಿ
> ಮೂರು ಲೋಕದಲ್ಲಿ ಯಾರೂ ಇಲ್ಲ ಗುಣವಂತಿ
> ಪತಿವ್ರತಾ ನಮ್ಮ ಲೀಲಾವತಿ॥...

ಈ ಕವನ ಸಮಾಜದಲ್ಲಿ ಓರ್ವ ಗಂಡನೊಬ್ಬ ತನ್ನ ಮಡದಿಯ ಶೀಲದ ಮೇಲೆ ಶಂಕೆ, ಸತ್ಯಾಂಶ ತಿಳಿದ ಮೇಲೆ ಅವಳೊಂದಿಗೆ ಮತ್ತೆ ಒಂದಾಗುತ್ತಾನೆ. ಈ ತುಣುಕು ಸಮಾಜದ ಸತ್ಯ ಘಟನೆಗಳ ಮೇಲೆ ಬೆಳಕು ಚೆಲ್ಲುವ ಕೆಲಸ ಮಾಡುತ್ತದೆ.

> ಶುದ್ಧ ಖಾದಿ ಧರಿಸಿದಂಥ
> ಯೋಧರಿಂದ ಯುದ್ಧ ಮಾಡಿ
> ಗೆದ್ದ ಭೂಪ ಗಾಂಧೀಜಿ ಜಗದೊಳಗ
> ಕಲಿ ಕಾಲದೊಳಗೆ॥...

ಈ ರೀತಿಯಾಗಿ ಆಗಿನ ಕಾಲದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುನ್ನುಗ್ಗುತ್ತಿರುವ ಗಾಂಧೀಜಿಯವರನ್ನು ಮೆಚ್ಚಿಕೊಂಡು ಬರೆದ ಗೀತೆಯಾಗಿದೆ.

ನಮ್ಮ ನಾಡು ಇತ್ತು ಹೆಂಗೆ
ಇಂಗ್ಲಿಷರು ಬರುವ ಮುನ್ನ
ಜೋಡ ದಡಿಯ ಧೋತರ ಪಾಠ
ಮ್ಯಾಂಚೆಸ್ಟರ ಧೋತರ ಹೊರಗ ದೂಡ॥...

ಹೀಗೆ ಅನೇಕ ಪದಗಳನ್ನು ಕಟ್ಟಿ ಭಾರತೀಯರ ಹೃದಯದಲ್ಲಿ ಕಿಚ್ಚು ಹಚ್ಚಿ ಸ್ವತಂತ್ರದ ಕುರಿತು ಆರ್ಭಟಿಸುವಂತೆ ಮಾಡಿದ ಕೀರ್ತಿ ಕಲ್ಲಪ್ಪನವರಿಗೆ ಸಲ್ಲುತ್ತದೆ. ಈ ಪೂರ್ವ ಪ್ರಜ್ಞಾವಂತ ಕಲಾವಿದ ಏನೆಲ್ಲ ಮಾಡಬಲ್ಲ ಎಂತ ಜಾಗೃತಿ ತರಬಲ್ಲ ಎಂಬುದಕ್ಕೆ ಕೆಳಗಿನ ಸಾಲುಗಳು ಸಾಕ್ಷಿಯಾಗಿವೆ.

ಚೀನಾ ದೇಶದ ಕುನ್ನಿಗಳು ದಂಡೆತ್ತಿ ಬರತಾರ
ದೊಣ್ಣಿಲೇ ಹೊಡಿಬೇಕು ಅವರಿಗೆ ಅಂಜ ಬಾರದ[೩]...

ದೇಶ ಪ್ರೇಮದ ದ್ಯೋತಕವಾಗಿ ಕಟ್ಟಿದ ಕಲಾವಿದರ ಕವನಗಳು ಮುಂದೆ ಅಲ್ಪ ಸ್ವಲ್ಪ ಬದಲಾವಣೆಯಾಗುತ್ತಾ, ತಮ್ಮ ತಮ್ಮ ಮೂಲ ಧಾಟಿಯನ್ನು ಮೂಡಿಸಿಕೊಂಡು ಬಂದು, ಅವರವರ ಅಭಿರುಚಿಗೆ ತಕ್ಕಂತೆ ಅಲ್ಪಸ್ವಲ್ಪ ರೂಪರೇಷೆಗಳನ್ನು ಬದಲಿಸಿದವು. ದೇಶ ಪ್ರೇಮದಂಥ ಉತ್ಕಟೇಚ್ಛೆಯನ್ನು ಉಕ್ಕಿಸುವುದಕ್ಕೆ ಭಯದಂತಹ ಲಾವಣಿಪದಗಳು ಕೂಡ, ಮೂಲ ಧಾಟಿಯ ಜೊತೆಗೆ ಸ್ವಲ್ಪ ಬದಲಾವಣೆಯನ್ನು ಹೊಂದಿದ್ದು ಕಾಣಬಹುದು. ಉದಾಹರಣೆಗೆ ಸಂಗೊಳ್ಳಿ ರಾಯಣ್ಣನಂಥ ಶೂರರ ಮೇಲೆ ರಚಿತವಾದ ಲಾವಣಿಗಳು, ರಾಷ್ಟ್ರಾಭಿಮಾನದ ವಿಷಯ ವಸ್ತುವನ್ನೇ ಮುಂದುವರಿಸಿಕೊಂಡು ಬಂದವು. ಆದರೆ ಅವುಗಳನ್ನು ಬಳಸುವ ಧಾಟಿ ರೂಪಗಳ ಬದಲಾಗಿ ಆಧುನಿಕ ಮಾಧ್ಯಮಗಳೊಂದಿಗೆ ಬಿತ್ತರಗೊಂಡವು. ಬಿತ್ತರಗೊಂಡ ಈ ಕವನ ಸಂಪತ್ತನ್ನು ನವಮೌಖಿಕ ಅಧ್ಯಯನ ಕ್ಷೇತ್ರದ ಒಂದು ಅವಶ್ಯಕ ಅಂಶವಾಗಿ ಪರಿಗಣಿಸಬಹುದಾಗಿದೆ.

ಸ್ವಾತಂತ್ರ ಸಂದರ್ಭದಲ್ಲಿ ಕಲ್ಲಪ್ಪನವರನ್ನು ಬ್ರಿಟಿಷರು ನೀನು ಬೇಡಿದ್ದನ್ನು ಕೊಡುತ್ತೇವೆ. ಸ್ವದೇಶಿ ವಿರುದ್ಧ ಮತ್ತು ಕಾಂಗ್ರೆಸ್ ವಿರುದ್ಧ ಕವನಗಳನ್ನು ಕಟ್ಟಿ ಹಾಡಬೇಕು ಎಂದಾಗ ಕಲ್ಲಪ್ಪ ಕೊಟ್ಟ ಕಲಿತನದ ಮಾತುಗಳು, 'ಸಾಹೇಬರ ತಾಯಿ ನೆಲ್ಲಕ್ಕ ದ್ರೋಹ ಮಾಡಿ ಹಾಡುವುದು, ಜೀವಂತ ಶವ ಆಗಿ ಬದುಕುವುದು ಒಂದ ನೋಡ್ರಿ.'[೪] ಇಂಥ ರಾಷ್ಟ್ರಾಭಿಮಾನದ ಆಗರವಾಗಿದ್ದ ಕಲ್ಲಪ್ಪನವರು ನಾಡಿನ ಎಲ್ಲ ನಗರಗಳಿಗೆ ಸಂಚರಿಸಿ ರಾಷ್ಟ್ರಾಭಿಮಾನವನ್ನು ಜನಪದ ಗಂಗೆಯ ಮೂಲಕ ಮಾಡಿದ್ದಾರೆ. ೧೯೭೫ರಲ್ಲಿ ತಮ್ಮ ಸ್ವಗ್ರಾಮ ಕಡಣಿಯಲ್ಲಿ ಮರಣ ಹೊಂದಿದರು. ಆದರೆ ಇಂದು ಆಧುನಿಕ ಮಾಧ್ಯಮಗಳಲ್ಲಿ ಬಿತ್ತರಗೊಂಡ ಇವರ ಹಾಡುಗಳು ಇವರನ್ನು ಇನ್ನೂ ಜೀವಂತವಾಗಿಸಿವೆ.

## ಜಿ. ಮಹಾಂತೇಶ

ಜಿ.ಮಹಾಂತೇಶ ಅವರು ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ನಾಲತ್ತವಾಡದಲ್ಲಿ ೧೯೩೩ ಅಕ್ಟೋಬರ್, ೨೬ ರಂದು ದಿ.ವೀರನಗೌಡ ಪಾಟೀಲ ಹಾಗೂ ಮಲ್ಲಮ್ಮ ದಂಪತಿಗಳ ಮಗನಾಗಿ ಜನಿಸಿದರು. ಬರದ ನಾಡಾದ ವಿಜಯಪುರದಿಂದ ದಾವಣಗೆರೆಗೆ ವಲಸೆ ಬಂದು ಜೀವನೋಪಾಯಕ್ಕಾಗಿ ಕಿರ್ಲೋಸ್ಕರ ಕಂಪನಿಗೆ ಸೇರಿ ನಂತರದ ದಿನಗಳಲ್ಲಿ ಆಕಸ್ಮಿಕ ಅಪಘಾತವಾದ ಕಾರಣ ಕೆಲಸ ತೊರೆದು ಹಾಡುಗಾರಿಕೆಯ ಮೂಲಕ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು.

ಇವರ ಹಾಡುಗಳನ್ನು ಕೇಳಿದ ಜನ ಕರ್ಣಾನಂದ ಹೊಂದಿದ್ದಾರೆ. ಇವರು ವಾದ್ಯ ನುಡಿಸುತ್ತ ಧ್ವನಿಗೂಡಿಸಿಬಿಟ್ಟರೆ ಹಾಲಿಗೆ ತುಪ್ಪ ಬೆರೆಸಿದಂತಾಗುತಿತ್ತು. ಕಂಪು, ಇಂಪು, ಸೊಂಪು, ಮೃದು ಮಧುರ, ರಸಮಾಧುರ್ಯದ ಹಾಡುಗಾರಿಕೆಯನ್ನು ಕೇಳಿದರೆ ಜಾನಪದ ಸಿರಿಯ ಕೃಪೆಯೇ ಮೈವೆತ್ತಿ ಬಂದಂತೆ ಭಾಸವಾಗುತ್ತದೆ. ಹಿರಿಯರಲ್ಲಿ ಹಿರಿಯರಾಗಿ, ಕಿರಿಯರಲ್ಲಿ ಕಿರಿಯರಾಗಿರುವ ಹಾಸ್ಯಭರಿತ ಆತ್ಮೀಯ ವ್ಯಕ್ತಿತ್ವ ಇವರದಾಗಿದ್ದು, ಇವರು ಜನಪದ ಮೋಡಿಯ ಗಾರುಡಿಗರಾಗಿ ಐದು ದಶಕಗಳಿಗೂ ಹೆಚ್ಚು ಕಾಲ ತಮ್ಮ ಕಂಠಸಿರಿಯಿಂದ ಕನ್ನಡಿಗರನ್ನು ರಂಜಿಸಿದ್ದಾರೆ. ಇವರಿಗೆ ಅಪಾರ ಶಿಷ್ಯರ ಮತ್ತು ಸ್ನೇಹಿತರ ಬಳಗವಿದೆ. ಜನಪದ ಗಾನಗಂಗೆಯಲ್ಲಿ ಶ್ರೋತೃಗಳನ್ನು ಮಿಂದಿಸುತ್ತಾ ಸಭಿಕರಲ್ಲಿ ಆನಂದದ ತರಂಗಗಳನ್ನು ಉಕ್ಕೇರಿಸುವ ಅದ್ಭುತ, ಅಪರೂಪದ ಗಾಯಕರಾಗಿದ್ದಾರೆ.

ಜಿ.ಮಹಾಂತೇಶ ಅವರು ಜಾನಪದ ಅಕಾಡೆಮಿಯ ಸದಸ್ಯರಾಗಿ, ಹಲವು ಸಂಘ ಸಂಸ್ಥೆಗಳ ಗೌರವ ಸದಸ್ಯರಾಗಿ ಸೇವೆಗೈದಿದ್ದಾರೆ. ಹಲವಾರು ಪತ್ರಿಕೆಗಳಲ್ಲಿ ಇವರು ತಮ್ಮ ಕ್ಷೇತ್ರದಲ್ಲಿ ಸಾಧನೆ ಗೈದ ಬಗ್ಗೆ ಬರಹಗಳು ಪ್ರಕಟವಾಗಿವೆ. ಅಲ್ಲದೇ ಈಟಿವಿ, ಉದಯ ಟಿವಿ, ಚಂದನ ವಾಹಿನಿಗಳಲ್ಲಿ ಇವರ ಕಾರ್ಯಕ್ರಮಗಳು ಪ್ರಸಾರಗೊಂಡಿವೆ. 'ಸಿರಿಗಂಧ' ಧಾರಾವಾಹಿಯಲ್ಲಿ ಇವರ ಗಾನ ಗಂಗೆ ಬಿತ್ತರಗೊಂಡಿದೆ.

ಇವರ ಬಾಳಸಂಗಾತಿ ಮುರಿಗೆಮ್ಮ. ಇವರ ಕೊನೆಯ ಸುಪುತ್ರಿ ಸುಜಾತಾ, ತಂದೆಯಂತೆಯೇ ತಾವು ಸಹ ಗಾನಗಂಗೆಯನ್ನು ಅನುಸರಿಸಿದ್ದಾರೆ. ಬೆಂಗಳೂರಿನಲ್ಲಿ ಇವರು 'ಸುಜಾತಾ ಮೆಲೋಡಿಸ್'ನ ಮಾಲಕಿಯಾಗಿದ್ದಾರೆ. ಮಹಾಂತೇಶ ಅವರ ಸೇವೆ ಗುರುತಿಸಿ, ೧೯೯೧ರಲ್ಲಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ೨೦೦೩ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದ ಪ್ರದರ್ಶನ ಪ್ರಶಸ್ತಿ ಪಡೆದಿದ್ದಾರೆ. ೧೯೭೮ರಲ್ಲಿ ದೆಹಲಿಯಲ್ಲಿ ನಡೆದ ಅಖಿಲಭಾರತ ಕೃಷಿ ಸಮ್ಮೇಳನದಲ್ಲಿ, ಮುರಾರ್ಜಿ ದೇಸಾಯಿಯವರ ಸಮ್ಮುಖದಲ್ಲಿ ಹಾಡಿದ್ದಾರೆ. ಇಂತಹ ಅನೇಕ ಮಾನ ಸಮ್ಮಾನಗಳು ಇವರ ಮುಡಿಗೇರಿವೆ.

**ಬಸವರಾಜ ಕೊಣ್ಣೂರು**

ಇವರು ಬಾಗಕೋಟ ಜಿಲ್ಲೆಯ ಬೀಳಗಿ ತಾಲೂಕಿನ ಗಿರಿಸಾಗರದವರು. ಬಸವರಾಜ ಕೊಣ್ಣೂರು ಅವರು ೬೦೦ ಹಾಡುಗಳನ್ನು ಬರೆದು ಧ್ವನಿಸುರುಳಿಗಳನ್ನು ಬಿಡುಗಡೆ ಮಾಡುವ ಮೂಲಕ 'ಕ್ಯಾಸೆಟ್ ರಾಜ' ಎಂದೇ ಪ್ರಸಿದ್ಧಿ ಪಡೆದಿದ್ದಾರೆ. ಕನ್ನಡ ಧ್ವನಿಸುರುಳಿಗಳ ಇತಿಹಾಸದಲ್ಲೇ ಒಂದು ದಾಖಲೆಯನ್ನು ಸೃಷ್ಟಿಸಿದ್ದಾರೆ. ಚಿಕ್ಕಂದಿನಲ್ಲೇ ಕವನಗಳನ್ನು ಬರೆಯುವ ಹವ್ಯಾಸ ಬೆಳೆಸಿಕೊಂಡು ಬಂದವರು.

ಇಂದು ಯಾರೇ ಆಗಲಿ ಒಂದು ಹಾಡನ್ನು ನಮ್ಮ ಊರಿನ ದೇವಾಲಯ, ಮಠಗಳ ಮೇಲೆ ಅಥವಾ ಯಾವುದೇ ವಿಷಯದ ಮೇಲೆ ರಚನೆ ಮಾಡಲು ಮತ್ತು ಧ್ವನಿಸುರುಳಿಗಳನ್ನು ಬಿಡುಗಡೆ ಮಾಡಬೇಕಾದರೆ, ಬಸವರಾಜ ಕೊಣ್ಣೂರು ಅವರನ್ನು ಸಂಪರ್ಕಿಸಬೇಕೆಂದು, ಎಲ್ಲರೂ ಹೇಳುವ ಮಟ್ಟಕ್ಕೆ ಬೆಳೆದು ನಿಂತಿರುವುದು ಗಮನಾರ್ಹ ಸಂಗತಿ. ಇವರು ರಚಿಸಿದ ಹಾಡುಗಳು ಇಂದು ರಾಜ್ಯದ ಮೂಲೆ ಮೂಲೆಗಳಲ್ಲಿ ಜನ ಕೇಳಿ ಆನಂದಿಸುತ್ತಿದ್ದಾರೆ.

**ಉದಾಹರಣೆ : ಪೌಂವ್ ಪೌಂವ್ ಅಂತೈತಿ ಜೀವಾ**

ಓಣಿಗೆ ಒಂದು ಪಾರ್ಟಿ ಊರಿಗೆ ನೂರು ಪಾರ್ಟಿ
ಮೇಲೊಂದು ಪಾರ್ಟಿ ಕೆಳಗೊಂದು ಪಾರ್ಟಿ
ಕಟ್ಟುದೊಂದು ಪಾರ್ಟಿ ಕೆಡುವುದೊಂದು ಪಾರ್ಟಿ
ಎಲ್ಲಿ ನೋಡಿದರು ಎಲ್ಲಿ ಕೇಳಿದರು
ಬರೆ ಪಾರ್ಟಿಗಳು ತುಂಬ್ಯಾಂವ ಹೆಜ್ಜೆ ಹೆಜ್ಜೆಗೆ
ಜಗಳ ಹಚ್ಚುತಾವ ಪಾರ್ಟಿ ಮಾತು ಮಾತಿಗಿ
ಪಾರ್ಟಿಕಟ್ಟಿದವ ಪಾರ್ಟಿ ಹಾಕಿತು ಹೊರಗೆ...

ಇಂದಿನ ರಾಜಕಾರಣದ ಕುರಿತು, ರಾಜಕೀಯ ಪಕ್ಷಗಳು ಸಮಾಜದಲ್ಲಿ ಇಂದು ಯಾವ ಪಾತ್ರವನ್ನು ವಹಿಸುತ್ತಿವೆ. ಪಕ್ಷ ಕಟ್ಟಿದವರ ಸ್ಥಿತಿ ಏನಾಗುತ್ತಿದೆ. ಜನ ಮತ್ತು ರಾಜಕೀಯ ಪಕ್ಷಗಳ ನಡುವೆ ಇರುವ ಸಂಬಂಧವನ್ನು ಈ ಗೀತೆಯಲ್ಲಿ ಚಿತ್ರಿಸಿದ್ದಾರೆ.

ಹುಟ್ಟಿದ ಮನೆ ಬಿಟ್ಟು ಮೆಟ್ಟಿದ ಮನೆ ಬೆಳಗಾಕ
ವರದಕ್ಷಿಣೆ ತುಂಬಿಕೊಂಡು ಚಂದಾನ ಸೊಸೆ ಬಂದಾಳೊ...
ಬಂದ ಸೊಸೆ ಮುಂದ ಅತ್ತಿ ತನ್ನ ಆಟ ತೋರಿಸ್ಯಾಳೊ
ನಿಂತಲೇ ಕುಂತಲ್ಲೇ ಏನೇನೋ ನೆವತಗೆದ ದಿನಾ ಹೊತ್ತ
ಹೊಂಟ್ರ ಅತ್ತಿ ಸೊಸೆನ ಬೈದಾಳೊ
ಅತ್ತಿಯ ಸೊಕ್ಕ ಮುರಿಲಾಕ ಸೊಸೆ ಜಿತ ಮಾಡ್ಯಾಳ
ಇಂದ ರಾತ್ರಿ ಮಲಗುವಾಗ ತನ್ನ ಗಂಡನ ಮುಂದ ಅತ್ತಿ

ಕೊಡುವ ಕಾಟದ ಕಥೆಯನೆಲ್ಲಾ ಹೇಳ್ಯಾಳೊ
ಬ್ಯಾರೆ ಆಗೋ ಹಂಗ ಗಂಡನ ತಲೆ ತುಂಬ್ಯಾಳೊ"...

ಇಲ್ಲಿ ಅತ್ತೆ ಸೊಸೆಯರು ಯಾವ ರೀತಿಯಲ್ಲಿ ತಮ್ಮ ತಮ್ಮ ಗುಣಗಳಿಂದ ಮನೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಅವರಲ್ಲಿ ಹೊಂದಾಣಿಕೆ ಇಲ್ಲದೆ ಇದ್ದರೆ ಯಾವ ರೀತಿಯ ಸಮಸ್ಯೆಗಳು ಮನೆಯಲ್ಲಿ ಕಾಣಿಸಿಕೊಳ್ಳುತ್ತವೆ ಎಂಬುದನ್ನು ಈ ಹಾಡಿನ ಮೂಲಕ ಸ್ಪಷ್ಟಪಡಿಸಿದ್ದಾರೆ.

ಕೊಣ್ಣೂರು ಅವರಿಗೆ ತಮ್ಮ ಈ ರೀತಿಯ ಹಾಡುಗಳಿಗೆ ಏನು ಪ್ರೇರಣೆ ಅಂದಾಗ ಮೊದಲು ನಾನು ಪ್ರೇಮಗೀತೆಗಳನ್ನು ಬರೆದು ಕವಿಗೋಷ್ಠಿಗಳಲ್ಲಿ ಗೆಳೆಯರೆದುರಿಗೆ ಓದುತ್ತಿದ್ದೆ. ೧೯೭೮ರಲ್ಲಿ ಸಿಲೋನ ಆಕಾಶವಾಣಿಯಲ್ಲಿ ಬರುತ್ತಿದ್ದ ಏಸುಕ್ರಿಸ್ತನ ಕುರಿತ ಕಾರ್ಯಕ್ರಮಗಳು ನನಗೆ ಹಾಡು ಬರೆಯಲು ಪ್ರೇರಣೆ ನೀಡಿದವು ಎನ್ನುತ್ತಾರೆ. ೧೯೯೦ರಲ್ಲಿ ಬೆಂಗಳೂರಿನ ವಿಕ್ರಂ ಕ್ಯಾಸೆಟ್ ಕಂಪನಿ 'ಶ್ರೀ ಯಲ್ಲಾಲಿಂಗ ಶರಣಾರ್ಥಿ' ಎಂಬ ಧ್ವನಿಸುರುಳಿಗೆ ಹಾಡು ಬರೆಯಲು ನನಗೆ ಅವಕಾಶ ಸಿಕ್ಕಿತು. ನಂತರದಲ್ಲಿ ಬಾಗಲಕೋಟೆಯ ಕಮತಗಿ ರೇಕಾರ್ಡಿಂಗದಲ್ಲಿ ಬಸವರಾಜ ಕಮತಗಿ ಅವರು ಕ್ಯಾಸೆಟ್‌ಗಾಗಿ ಜನಪದ ಹಾಡನ್ನು ಬರೆಯಲು ಅವಕಾಶ ನೀಡಿದ್ದರಿಂದ, ಅಂದು ಪ್ರಾರಂಭವಾದ ಗೀತೆಗಳ ಸಾಹಿತ್ಯ ಇಂದಿಗೂ ನಡೆಯುತ್ತಿದೆ. ಹೀಗೆ ತಾವು ಸಾಹಿತ್ಯ ಸೇವೆ ಮಾಡುತ್ತಿರುವುದರ ಬಗ್ಗೆ ಹೇಳುತ್ತಾರೆ.

೧) ಜನಪದ ಗೀತೆಗಳು
೨) ಪ್ರೇಮಗೀತೆಗಳು
೩) ಭಕ್ತಿಗೀತೆಗಳು
೪) ತುಳಸಿಗಿರಿ ಆಂಜನೇಯ
೫) ಸಂತ ಮಹಾತ್ಮರ ಕುರಿತಾದ ಹಾಡುಗಳು.

ಹೀಗೆ ಹತ್ತು ಹಲವು ಪ್ರಕಾರದ ಹಾಡುಗಳ ರಚನೆಯನ್ನು ಮಾಡಿದ್ದಾರೆ. ಉತ್ತರ ಕರ್ನಾಟಕದಲ್ಲಿ ಅಂದಾಜು ೩೦೦ಕ್ಕೂ ಅಧಿಕ ದೇಗುಲ ಮತ್ತು ಮಠಗಳಿಗೆ ಸಂಬಂಧಿಸಿದ ಧ್ವನಿ ಮುದ್ರಣಕ್ಕೆ ಸಾಹಿತ್ಯ ಬರೆದಿರುವ ಹೆಗ್ಗಳಿಕೆ ಬಸವರಾಜ ಕೊಣ್ಣೂರ ಅವರಿಗೆ ಸಲ್ಲುತ್ತದೆ.

**ಶಿರಬೂರ ಜಕ್ಕವ್ವ**

ಹೆಣ್ಣು ಗಂಡಿಗಿಂತ ಯಾವುದರಲ್ಲೂ ಕಡಿಮೆಯಿಲ್ಲ. ಅವಳು ಅಬಲೆಯಲ್ಲ ಸಬಲೆ. ಗಂಡಿಗೆ ಸರಿಸಮಾನವಾಗಿ ನಿಲ್ಲಬಲ್ಲ ಶಕ್ತಿ ಹೆಣ್ಣಿನಲ್ಲಿದೆ ಎಂಬುವುದನ್ನು ಹಲವಾರು ಮಹಿಳಾ ಮಣಿಯರು ಸಾಧಿಸಿ ತೋರಿಸಿದ್ದಾರೆ. ಅದರಲ್ಲೂ ವಿಶೇಷವಾಗಿ ಕನ್ನಡ ಜನಪದ ಲೋಕಕ್ಕೆ ಮಹಿಳೆಯರ ಕೊಡುಗೆ ಪುರುಷರಷ್ಟೇ ಸಮಾನವಾದದ್ದು, ಎಂಬುದನ್ನು ಅನೇಕ

ನಾರಿಮಣಿಯರು ಸಿದ್ಧಮಾಡಿದ್ದಾರೆ. ಅವರಲ್ಲಿ ಶಿರಬೂರ ಜಕ್ಕವ್ವ ಕೂಡ ಒಬ್ಬರಾಗಿದ್ದಾರೆ. ಅನಕ್ಷರಸ್ಥೆಯಾಗಿದ್ದರೂ ಸ್ಪಷ್ಟವಾಗಿ ಉಚ್ಚಾರಣೆಯನ್ನು ಮಾಡಬಲ್ಲ ಶಬ್ದದ ಹಿಡಿತ ಅವರಲ್ಲಿತ್ತು. ಇವರ ಕಾರ್ಯಕ್ರಮಕ್ಕೆ ಜನ ತಂಡತಂಡವಾಗಿ ಚಕ್ಕಡಿ ಕಟ್ಟಿಕೊಂಡು ಬರುತ್ತಿದ್ದರು.

ಮನರಂಜನೆಯೇ ಇಲ್ಲದ ಆಗಿನ ವೇಳೆಯಲ್ಲಿ ಜಕ್ಕವ್ವರ ಹಾಡು, ಎಷ್ಟೋ ಹಳ್ಳಿಯ ಜನರಿಗೆ ಮನರಂಜನೆಯ ದಾಹ ನೀಗಿಸಿ, ಜನರ ಮನಸ್ಸನ್ನು ಸಂತೃಪ್ತಿ ಪಡಿಸುತ್ತಿತ್ತು. ಮುಂಬಯಿ, ಕಲಬುರಗಿ, ವಿಜಯಪುರ, ಹುಬ್ಬಳ್ಳಿ, ಧಾರವಾಡ, ದಾಂಡೇಲಿ ಮುಂತಾದ ಪ್ರದೇಶಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರ ಇನ್ನೊಂದು ವಿಶೇಷತೆಯೇನೆಂದರೆ ಜಕ್ಕವ್ವನವರು ಹರದೇಸಿ ಹಾಡುಗಳನ್ನೇ ಹೆಚ್ಚಾಗಿ ಹಾಡುತ್ತಿದ್ದರು. ಅಂದರೆ ಗೀಗೀ ಪದಗಳಲ್ಲಿ ಎರಡು ಪ್ರಕಾರಗಳಿವೆ. ಹರದೇಸಿ ಮತ್ತು ನಾಗೇಸಿ. ಹರದೇಸಿ ಎಂದರೆ ಗಂಡು ಮಕ್ಕಳು ಹೆಚ್ಚೆಂದು ಹಾಡುವುದು, ನಾಗೇಸಿ ಎಂದರೆ ಹೆಣ್ಣುಮಕ್ಕಳು ಹೆಚ್ಚೆಂದು ಹಾಡುವುದು. ಹೀಗಿರುವಾಗ ಜಕ್ಕವ್ವ ಒಬ್ಬ ಹೆಣ್ಣುಮಗಳಾಗಿ ಗಂಡಿನ ಪರವಾಗಿ ಹಾಡಿದ್ದರು ಏಕೆ ಎಂಬುದಕ್ಕೆ ಈ ಮುಂದಿನ ಘಟನೆ ಕಾರಣವಾಗಿದೆ. ಜಕ್ಕವ್ವ ಹುಟ್ಟಿದ್ದು ಬಾಗಲಕೋಟ ಜಿಲ್ಲೆಯ ಬೀಳಗಿ ತಾಲೂಕಿನ ಸಿದ್ದಾಪುರ ಎಂಬ ಚಿಕ್ಕ ಹಳ್ಳಿಯಲ್ಲಿ. ಇದು ಇವರ ತಾಯಿಯ ತವರುಮನೆ. ಆದರೆ ಇವರ ತಂದೆಯ ಊರು ಶಿರಬೂರು. ಅವರು ಹಾಡು ಕಲಿತದ್ದು ಅದೇ ಊರಲ್ಲಿ. ಕಾಲಕ್ರಮೇಣ ಅವರು ತಾಯಿಯ ಊರಾದ ಸಿದ್ದಾಪುರಕ್ಕೆ ಬಂದರು. ಮುಂದೆ ಅವರು ಶಿರಬೂರ ಜಕ್ಕವ್ವ ಆದರು. ಶಿರಬೂರಿನಲ್ಲಿ ಇವರ ತಂದೆಗೆ ಆಗಾಗ ಹರದೇಸಿ ಹಾಡುಗಳನ್ನು ಹಾಡುವ ಹವ್ಯಾಸವಿತ್ತು. ಇವರಿಗೆ ಹಾಡು ಕಲಿಸಲು ಗಲಗಲಿಯ ಈಶ್ವರಪ್ಪ ಮಾಸ್ತರ ಎಂಬುವವರು ಬರುತ್ತಿದ್ದರು. ಜಕ್ಕವ್ವ ಕಾಳಜಿಯಿಂದ ಹಾಡನ್ನು ಕಲಿಯುತಿದ್ದರು. ತಂದೆಗೆ ಹಾಡು ಬೇಗನೆ ಒಲಿಯಲಿಲ್ಲ, ಬದಲಾಗಿ ಹಾಡುಗಳನ್ನು ಕೇಳುತಿದ್ದ ಮಗಳಿಗೆ ಒಲಿಯಿತು. ಹೀಗಾಗಿ ಈಶ್ವರಪ್ಪ ಮಾಸ್ತರ ಇವರಿಗೇನೆ ಹಾಡು ಕಲಿಸಿದರು.

ಮುಂದೆ ಆಗಿನ ಕಾಲದ ಪ್ರಸಿದ್ಧ ಹರದೇಸಿ ಹಾಡುಗಾರ ಯಂಕ್ಕಂಚಿ ರಾಮಚಂದ್ರಪ್ಪನಿಗೆ ನಾಲ್ಕು ತಿಂಗಳು, ತಿಂಗಳಿಗೆ ನೂರು ರೂಪಾಯಿ ಕೊಟ್ಟು ಹಾಡು ಕಲಿತರು. ಇವರಲ್ಲಿ ಎಷ್ಟು ಕಲೆಯ ಅರ್ಪಣಾಭಾವ ಮತ್ತು ಬದ್ಧತೆಯಿತ್ತೆಂದರೆ ನಿರಂತರವಾಗಿ ಒಂಬತ್ತು ದಿನ ಕಾರ್ಯಕ್ರಮಗಳಾದರೂ ಹಾಡುವುದನ್ನು ಮಾತ್ರ ನಿಲ್ಲಿಸಿರಲಿಲ್ಲ. ಡಪ್ಪ ಹಿಡಿದು ಬಡಿದು ಕೈ ಒಡೆದು ರಕ್ತ ಸುರಿಯುತ್ತಿತ್ತು. ಇವರ ಹರದೇಸಿ ಗೀತೆಯನ್ನು ಕೇಳಿ ಒಂದು ಹಳ್ಳಿಯ ಜನ ಇವರಿಗೆ ಪೇಟ, ಧೋತ್ರ, ಅಂಗಿ, ಟಾವೆಲ್‌ಗಳನ್ನು ಪ್ರೀತಿಯಿಂದ ಉಡುಗೊರೆಯಾಗಿ ನೀಡಿದರೆಂದು ಜಕ್ಕವ್ವ ಪ್ರೀತಿಯಿಂದ ನೆನಪಿಸಿಕೊಳ್ಳುತ್ತಾರೆ. ತನ್ನ ಈ ಕಲೆ ತನ್ನೊಂದಿಗೆ ಹೋಗದೆ ಮುಂದಿನ ಪೀಳಿಗೆಗೆ ಬಿಟ್ಟುಹೋಗಲು ತವಕದಿಂದ ತಯಾರಿದ್ದಾರೆ. ಆದರೆ ಕಲಿಯಲು ಯಾರೂ ಮುಂದೆ

ಬರುತ್ತಿಲ್ಲ ಎಂಬುದು ಅವಳ ಬೇಸರ. ಹೀಗೆ ಜನಪದ ಸಾಹಿತ್ಯವು ನಶಿಸಿ ಹೋಗುತ್ತಿರುವುದನ್ನು ನೋಡಿದಾಗ ಇದು ಆಧುನಿಕ ಮಾಧ್ಯಮಗಳಲ್ಲಿ ಬಳಕೆಗೊಂಡರೆ ಒಳ್ಳೆಯದು ಎಂಬ ನಿರ್ಧಾರಕ್ಕೆ ಬರುವಂತಾಗಿದೆ. ಇಂದು ತಂತ್ರಜ್ಞಾನ ಮಾಧ್ಯಮಗಳಲ್ಲಿ ಒಂದಾದ ಯೂಟ್ಯೂಬ್‌ನಲ್ಲಿ ಇವರ ಹಾಡುಗಳು ಬೇರೆಯವರ ಧ್ವನಿಯಲ್ಲಿ ಬಿತ್ತರಗೊಳ್ಳುತ್ತಿವೆ.

**ಫಕ್ಕಿರವ್ವ ಗುಡಿಸಾಗರ**

ಕನ್ನಡ ನಾಡು ಸಂಗೀತ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಘಟಾನುಘಟಿಗಳಾದ ಪುರುಷರತ್ನರನ್ನಷ್ಟೇ ಹೊಂದಿಲ್ಲ. ಮಹಿಳಾ ರತ್ನಗಳನ್ನು ತನ್ನಲ್ಲಿ ಗರ್ಭೀಕರಿಸಿ ಕೊಂಡಿದೆ. ಆದರೆ ಕೆಲವರು ಬೆಳಕಿಗೆ ಬಂದರೆ, ಕೆಲವರು ಎಲೆಮರೆಯ ಕಾಯಂತೆ ಸಂಗೀತ ಸರಸ್ವತಿಯ ಸೇವೆಯನ್ನು ಮಾಡಿ ಸದ್ದಿಲ್ಲದೆ ಸಾಗಿ ಹೋಗಿರುವುದನ್ನು ನಾವು ಕಾಣುತ್ತೇವೆ. ಒಂದಲ್ಲ, ನೂರಲ್ಲ, ಒಂಬತ್ತು ಸಾವಿರಕ್ಕೂ ಹೆಚ್ಚು ಹಾಡನ್ನು ಹಾಡಬಲ್ಲೆ ಎಂಬ ಮಾತನ್ನು ಅತಿ ವಿಶ್ವಾಸದಿಂದ, ಅತಿ ವಿನಯಶೀಲಳಾಗಿ ಹೇಳಿದಂತ ಮಹಿಳೆಯೇ ಈ ಫಕ್ಕಿರವ್ವ ಗುಡಿಸಾಗರ. ಈ ಮುಗ್ಧ ಹಳ್ಳಿಯ ನಾರಿಮಣಿಯು ಹುಟ್ಟಿದ್ದು ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನ ಹೆಬ್ಬಾಳ ಎಂಬ ಚಿಕ್ಕ ಹಳ್ಳಿಯಲ್ಲಿ. ಹರಿಜನ ಮರಿಯಪ್ಪ–ನೀಲವ್ವ ಅವರ ಮಗಳಾಗಿ ಜನಿಸಿದ ಫಕ್ಕಿರವ್ವ ಬಾಲ್ಯದಲ್ಲಿಯೇ ತನ್ನ ಜನಾಂಗದಲ್ಲಿ ಹಾಸುಹೊಕ್ಕಾಗಿರುವ ಸಂಗೀತ ಸುಧೆಗೆ, ಗಾಯನದ ಗಂಧಕ್ಕೆ ಹಾಡಿನ ಮೋಡಿಗೆ ಮರುಳಾಗಿದ್ದರು. ಹೀಗೊಂದು ದಿನ ಫಕ್ಕಿರವ್ವ ಹತ್ತು ವರುಷದ ಬಾಲೆಯಾಗಿರುವಾಗ ತನ್ನ ತಾಯಿಯ ತವರೂರಾದ ಹೆಬ್ಬಾಳಕ್ಕೆ ಹೋಗಿದ್ದಳು. ಅಲ್ಲಿ ಮನ್ನಿಕಟ್ಟಿ ಗಂಗೂಬಾಯಿ ಎಂಬುವವರ ಮುಖೇನ ಕೇಳಿದ ಹಾಡಿನ ಮೋಡಿಗೆ ಮನಸೋತು, ತಾನು ಹಾಡಬೇಕೆಂಬ ಅದಮ್ಯ ಉತ್ಸಾಹ ಅವಳಲ್ಲಿ ತುಡಿಯತೊಡಗಿತು. ತಾನು ಹಾಗೆಯೇ ಹಾಡಬೇಕೆಂದು ಛಲತೊಟ್ಟ ಬಾಲೆಯ ಬಲವಾದ ಆಸೆಗೆ, ಅವಳ ಸೋದರಮಾವನಾದ ಹೆಬ್ಬಾಳದ ಹನುಮಂತಪ್ಪ ವಿದ್ಯೆಯನ್ನು ಧಾರೆ ಎರೆದು, ಗುರುವಾಗಿ ಅವಳಿಗೆ ಮಾರ್ಗದರ್ಶನ ಮಾಡಿದರು. ಮುಂದೆ ಫಕ್ಕಿರವ್ವ ಸಾವಳಿಗೆ ಶಿವಲಿಂಗೇಶ್ವರನ ಕೃಪೆಯಿಂದ ಪದಗಳಲ್ಲಿ ಪಾರಂಗತಳಾದಳು.

ಶಾಸ್ತ್ರೀಯ ಸಂಗೀತದ ಸೋಂಕು ತಾಕದ ಶ್ರೀಸಾಮಾನ್ಯ ಮಹಿಳೆ, ಅನಕ್ಷರಸ್ಥೆ ಆದರೇನಾಯಿತು ಆಶುಕವಿತ್ವ ಪ್ರವೀಣೆ, ಸಂಗೀತ ಶಾರದೆಯ ಮುದ್ದಿನ ಮಗಳು, ಡಪ್ಪು ಹಿಡಿದು ವೇದಿಕೆ ಏರಿ ಡಪ್ಪು ನುಡಿಸುತ್ತ ನಿಂತರೆ ಪದಗಳು ತಾಮುಂದು ನಾಮುಂದು ಎಂಬಂತೆ ಫಕ್ಕಿರವ್ವನ ಅಂತರಂಗದಿಂದ ಹೊರಹೊಮ್ಮಿ ಪದಗಳು ಬರುತ್ತಿದ್ದವು. ಫಕ್ಕಿರವ್ವನ ಹಾಡಿನ ಮೋಡಿ ಜನರ ಮನಸ್ಸನ್ನು ಕೊಳ್ಳೆ ಹೊಡೆಯದೆ ಇರಲಾರದು. ಆಶುಕವಿತ್ವದ ಅಪಾರ ಶಕ್ತಿಯನ್ನು ಹೊಂದಿರುವ ಈಕೆಯು ಅನಕ್ಷರಸ್ಥೆ ಎಂಬುವುದನ್ನು ಮರೆಸುವಂತಿತ್ತು.

ಇವರ ಜನಪದ ಧಾಟಿಗೆ, ಹಾಡಿನ ಮೋಡಿಗೆ ಮರುಳಾಗಿ ಮೂಕವಿಸ್ಮಿತರಾಗದೆ ಇರುವವರು ಬಹಳ ಕಡಿಮೆ. ಭಾರತೀಯ ಅನಿಷ್ಠ ಪದ್ಧತಿಗಳಲ್ಲಿ ಒಂದಾದ ದೇವದಾಸಿ ಪದ್ಧತಿಗೆ ಫಕ್ಕಿರವ್ವ ತುತ್ತಾಗಬೇಕಾಯಿತು. ಆದರೆ ಫಕ್ಕಿರವ್ವ ಆ ಪದ್ಧತಿಯನ್ನು ಧೈರ್ಯವಾಗಿ ಧಿಕ್ಕರಿಸಿ ಮುನ್ನಡೆದು, ಸದ್ಗುರು ಸಿದ್ಧಾರೂಢರ ಸಮಕಾಲೀನರಾದ ಮತ್ತೊಬ್ಬ ಮಹಾನ್ ಯೋಗಿ ಗದುಗಿನ ಶಿವಾನಂದರಿಂದ ಲಿಂಗದೀಕ್ಷೆ ಪಡೆದರು. ಮದುವೆಯಾಗದ ಇವರಿಗೆ ಸಂಗೀತವೇ ಜೀವನದುದ್ದಕ್ಕೂ ಜೊತೆಯಾಯಿತು.

ಜನಪದ ಗಂಗೆಯೊಂದಿಗೆ ಸೇರಿಕೊಂಡ ಇವರು ಮಾಡಿರುವ ಸಮಾಜಮುಖಿ ಸೇವೆಗಳು, ಕಾರ್ಯ ಚಟುವಟಿಕೆಗಳು ಅನೇಕ. ಇವರು ಸ್ವಾತಂತ್ರ್ಯ ಪೂರ್ವದಲ್ಲಿ ತಮ್ಮ ಸೋದರಮಾವನೊಂದಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಅಷ್ಟೇ ಅಲ್ಲ ಸ್ವಾತಂತ್ರ್ಯ ನಂತರ ಸಮಾಜ ಸೇವೆಯನ್ನು ಸಂಕ್ಷಿಪ್ತಗೊಳಿಸಲಿಲ್ಲ. ಭಾರತ ಸರಕಾರದ ಪ್ರಗತಿಪರ ರಾಷ್ಟ್ರೀಯ ವಿಚಾರಧಾರೆಗಳನ್ನು, ಕಾರ್ಯಕ್ರಮಗಳನ್ನು, ಯೋಜನೆಗಳನ್ನು, ತಮ್ಮ ಜನಪದ ಧಾರೆಯ ಮೂಲಕ ಜನರಿಗೆ ಮುಟ್ಟಿಸುವಂತ ಮಹತ್ತರವಾದ ಸೇವೆಯನ್ನು ಮಾಡಿದ್ದಾರೆ. ಮುಖ್ಯವಾಗಿ ಜನಜಾಗೃತಿ ಕಾರ್ಯಕ್ರಮಗಳು, ೨೦ ಅಂಶಗಳ ಕಾರ್ಯಕ್ರಮ, ಕುಟುಂಬ ಕಲ್ಯಾಣ ಯೋಜನೆ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ಮತ್ತು ಧೂಮಪಾನ ನಿಷೇಧ ಮುಂತಾದ ಹತ್ತು ಹಲವು ಕಾರ್ಯಕ್ರಮಗಳಲ್ಲಿ ತೊಡಗಿಕೊಂಡವರು. ಇವರು ತಮ್ಮ ಕ್ಷೇತ್ರಕ್ಕೆ ಮಾತ್ರ ಸೀಮಿತರಾದವರಲ್ಲ. ಯಾರಾದರೂ ಕಾರ್ಯಕ್ರಮ ಏರ್ಪಡಿಸಿ ಆಹ್ವಾನ ನೀಡಿದರೆ, ಅಲ್ಲಿ ಹೋಗಿ ಭಕ್ತಿಯಿಂದ ಸೇವೆಗೈದು ಜನ ಪ್ರೀತಿಯಿಂದ ನೀಡಿದಷ್ಟನ್ನು ಬಲು ಅಕ್ಕರೆಯಿಂದ ಸ್ವೀಕರಿಸಿ, ಕೈಮುಗಿದು ಬಂದ ಅನೇಕ ನಿದರ್ಶನಗಳಿವೆ. ಇವರ ಕೈಂಕರ್ಯಕ್ಕೆ ಜಾನಪದ ಅಕಾಡಮಿ ಪ್ರಶಸ್ತಿ(೧೯೮೪), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ(೧೯೯೪), ಜಾನಪದಶ್ರೀ ಪ್ರಶಸ್ತಿ(೧೯೯೮) ಹೀಗೆ ಹಲವಾರು ಗೌರವಗಳು ಇವರಿಗೆ ಸಂದಿವೆ.

ನೋವುಂಟು ಮಾಡುವ ಸಂಗತಿಯೇನೆಂದರೆ ಬದುಕಿನುದ್ದಕ್ಕೂ ಸಮಾಜಕ್ಕಾಗಿಯೇ ತಮ್ಮ ಜೀವವನ್ನು ಸವೆಸಿದ ಕಲಾವಿದರ, ಸಾಹಿತಿಗಳ ಬದುಕು ಆರ್ಥಿಕ ಮುಗ್ಗಟ್ಟಿನಿಂದ ಮುಕ್ತವಾಗಿಲ್ಲ. ಅಂತೆ ಫಕ್ಕಿರವ್ವನ ಪರಿಸ್ಥಿತಿಯೂ ಕೂಡಾ ಹಾಗೆ ಇದೆ. ಈ ಕಲಾವಿದೆಯ ಆರೋಗ್ಯ ಕೆಟ್ಟಾಗ ರಾಜ್ಯ ಸರಕಾರ ಪ್ರಶಸ್ತಿ ರೂಪದಲ್ಲಿ ನೀಡಿದ ಬಂಗಾರದ ಪದಕವನ್ನು ಮಾರಿ ಔಷಧಿ ಕೊಳ್ಳಬೇಕಾಯಿತು ಎಂದು ತಮ್ಮ ಅಳಲನ್ನು ತೊಡಿಕೊಳ್ಳುತ್ತಾರೆ.

ಅಂತರಂಗದಲ್ಲಿ ಉದ್ಭವಿಸಿದ ಕಲಾದೇವತೆಯನ್ನು ತನ್ನಲ್ಲಿಯೇ ಇಟ್ಟುಕೊಂಡು ಇವರು ಮರೆಯಾಗಲಿಲ್ಲ. ಜನಪದ ಪರಂಪರೆಯನ್ನು ಉಳಿಸಿ ಮುಂದುವರೆಸುವ ದೃಷ್ಟಿಯಿಂದ ಹಲವರಿಗೆ ತಮ್ಮ ಜನಪದದ ಗೀಗೀ ಪದಗಳನ್ನು ಕಲಿಸಿದ್ದು ಗಮನಾರ್ಹ ಸಂಗತಿ. ಕಲಿತವರ ಜನಪದ ಗೀತೆಗಳಲ್ಲಿ ಫಕ್ಕೀರವ್ವ ಇಂದಿಗೂ ಪುನೀತಳಾಗಿ ತಮ್ಮನ್ನು

ತಾವು ಗುರುತಿಸಿಕೊಂಡಿದ್ದಾರೆ. ಇವರ ಗೀಗೀ ಪದಗಳು ಇಂದಿಗೂ ಆಧುನಿಕ ಮಾಧ್ಯಮಗಳಲ್ಲಿ ಬಳಕೆಗೊಳ್ಳುತ್ತ ಜೀವಂತಿಕೆ ಪಡೆದುಕೊಂಡಿವೆ.

ಎಷ್ಟು ಬಡತನವಿದ್ದರೂ ಸುಮ್ಮನೆ ಸಹಿಸಿಕೊಂಡು ಹೋದರು. "ರೊಕ್ಕಾ ಹೆಚ್ಚು ಮಾಡಿ ಅಂತಾ ನಾನು ಸರಕಾರಕ್ಕೆ ಯಾವತ್ತೂ ಕೇಳಿಲ್ಲ" ಎಂಬ ಮಾತು ಇವರದಾಗಿದೆ. ಸ್ವಾಭಿಮಾನದ ಶ್ರೀನಿಧಿ. ಇಂದು ಇವರು ಇಲ್ಲವಾದರು ಸಹ ಜಾನಪದ ಲೋಕಕ್ಕೆ ಗೀಗೀ ಪದಗಳ ಶ್ರೀಮಂತಿಕೆಯನ್ನು ತುಂಬುವ ಮೂಲಕ ತಮ್ಮ ನೆನಪನ್ನು ಬಿಟ್ಟು ಹೋಗಿದ್ದಾರೆ.

**ಹಾಲಕ್ಕಿ ಹಾಲೇಶ**

ನಿತ್ಯ ಜೀವನದ ಬದುಕಿನಲ್ಲಿ ಬಡತನವನ್ನು ಹೊಂದಿದ್ದರೂ ಕೂಡಾ ಕಲಾ ಪ್ರಕಾರಗಳಲ್ಲಿ ಸಿರಿವಂತನಾಗಿದ್ದ ಎಷ್ಟೋ ಕಲಾವಿದರು ಕನ್ನಡ ನಾಡಿನಲ್ಲಿದ್ದಾರೆ. ಬಡತನದ ಸುಳಿಯಲ್ಲಿ ಬಂದರೂ ಕೂಡ ಕಲಾ ದೇವತೆಯನ್ನು ಒಲಿಸಿಕೊಂಡ ವ್ಯಕ್ತಿತ್ವ ಹಾಲಕ್ಕಿ ಹಾಲೇಶ್ ಅವರದು. ಜನಪದ ಕಲಾ ಪ್ರಕಾರಗಳಾದ ಗೀತೆ, ಗೀಗೀ, ಲಾವಣಿ, ತತ್ವಪದ, ಭಜನೆ, ಕೋಲಾಟ, ನೃತ್ಯ, ಡೊಳ್ಳು ಕುಣಿತ, ಸುಗ್ಗಿ ಹಾಡು, ಹಾಸ್ಯ ಮುಂತಾದ ಸಕಲ ಕಲೆಗಳನ್ನು ಇವರು ಕರಗತ ಮಾಡಿಕೊಂಡು ಗ್ರಾಮೀಣ, ತಾಲೂಕು ಮಟ್ಟದಿಂದ ಹಿಡಿದು ರಾಜ್ಯ ರಾಷ್ಟ್ರಮಟ್ಟದವರೆಗೂ ಜನಪದ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ಜನರ ಮನಸ್ಸನ್ನು ಗೆದ್ದವರು. ಅಲ್ಲದೇ ಹಲವು ಪ್ರಶಸ್ತಿಗಳನ್ನು ಸಹ ಪಡೆದುಕೊಂಡಿದ್ದಾರೆ. ಬಡತನದಿಂದಾಗಿ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ ಮರ ಕೊರೆಯುವ ಕೆಲಸಕ್ಕೆ ಮುಂದಾಗಬೇಕಾಯಿತು. ಬದುಕಿನಲ್ಲಿ ಬಡತನವಿದ್ದರೂ ಸಹ ಇವರ ಕಲಾ ಪ್ರಪಂಚಕ್ಕೆ ಯಾವ ಕೊರತೆಯೂ ಇರಲಿಲ್ಲ. ಇವರು ಹಾವೇರಿ ಜಿಲ್ಲೆಯ ರಾಣೇಬೆನ್ನೂರು ತಾಲೂಕಿನ ಅರೇಮಲ್ಲಾಪುರ ಎಂಬ ಗ್ರಾಮದಲ್ಲಿ ಜನಿಸಿದ್ದಾರೆ.

ಹಾಲೇಶ್ ಅವರ ಹಾಡುಗಳು ಇಂದು ಆಧುನಿಕ ಮಾಧ್ಯಮಗಳಲ್ಲಿ ಬಳಕೆಯಾಗಿವೆ. ವಿಶೇಷವಾಗಿ ಯೂಟ್ಯೂಬ್‌ಗಳಲ್ಲಿ ಜನರಿಗೆ ನೋಡಲು ಸಿಗುತ್ತವೆ. ಹೀಗಾಗಿ ಹಾಲೇಶ್ ಅವರ ಸಾಹಿತ್ಯ, ಗೀತೆ, ನೃತ್ಯಗಳು ನವಮೌಖಿಕ ಸಾಹಿತ್ಯಕ್ಕೆ ಅನುರೂಪವಾದ ಆಕರಗಳಾಗಿ ಕಂಡು ಬರುತ್ತವೆ.

ಹಾಲೇಶ್ ಅವರಿಗೆ ಕಲಾ ಜ್ಞಾನ ತಂದೆ–ತಾಯಿಯಿಂದಲೇ ಕೊಡುಗೆಯಾಗಿ ಬಂದದ್ದಾಗಿದೆ. ಮನೆಯಲ್ಲಿ ತಾಯಿ ಮುಗ್ಧ ಮಹಿಳೆ ಆದರೂ ಕೂಡಾ ಸೋಬಾನೆ ಪದಗಳನ್ನು ಸುಶ್ರಾವ್ಯವಾಗಿ ಹಾಡುವಂಥವರು. ತಂದೆ ಜನಪದ ಭಜನಾಕಾರ ಇವರಿಬ್ಬರ ಕಲೆಯ ಕೃಪೆ ಹಾಲೇಶ್ ಅವರ ಮೇಲೆ ಸಹಜವಾಗಿಯೇ ಪರಿಣಾಮ ಬೀರಿತು. ಸಾಯಂಕಾಲವಾದರೆ ಸಾಕು ಹಾಲೇಶ ತಂದೆಯೊಂದಿಗೆ ಗುಡಿಗೆ ಭಜನೆ ಮಾಡಲು ಹೋಗುತ್ತಿರುವ ಸಂದರ್ಭದಲ್ಲಿ ತಂದೆಯ ತೊಡೆಯ ಮೇಲೆ ಕುಳಿತುಕೊಂಡು ಎತ್ತರದ

ಧ್ವನಿಯಲ್ಲಿ ತಾವು ಭಜನೆಯನ್ನು ಹಾಡುತ್ತಿದ್ದರು. ಹೀಗೆ ಅವರಲ್ಲಿ ಈ ಜನಪದ ಕಲೆ ಕರಗತಗೊಂಡಿತು.

ಇವರು ಚಿಕ್ಕವರಿರುವಾಗಲೇ ತಮ್ಮ ಒಂದು ಹಾಡು ಹೇಳು ಅಂದರೆ ಸಾಕು ಶ್ರದ್ಧೆ ಭಕ್ತಿ ಭಾವಾಭಿನಯಗಳೊಂದಿಗೆ ಹಾಡಲು ಆರಂಭಿಸುತ್ತಿದ್ದರು. ಇವರ ಹಾಡನ್ನು ಕೇಳಿ ಜನ ಮಂತ್ರಮುಗ್ಧರಾಗಿ ಭೇಷ್ ಎಂದು ಹೇಳುತ್ತಿದ್ದರು. ನಡಕ್ಕೆ ಡೊಳ್ಳು ಕಟ್ಟಿಕೊಂಡು ಡೊಳ್ಳು ಬಾರಿಸುತ್ತ ಕುಣಿಯುತ್ತ ಹಾಡನ್ನು ಹಾಡುತ್ತಿದ್ದರೆ ಸಾಕ್ಷಾತ್ ಬೀರಪ್ಪ ದೇವರೇ ಧರೆಗಿಳಿದು ಬಂದು ಕುಣಿಯುತ್ತಿದ್ದಾನೆ ಎಂದು ಭಾಸವಾಗುತಿತ್ತು. ಎಲ್ಲ ರೀತಿಯ ಉತ್ಸವಗಳಲ್ಲಿ ಭಾಗವಹಿಸಿ ಹೌದು ಎನ್ನಿಸಿಕೊಂಡ ಇವರು ಸರಕಾರದಿಂದ ಲಖನೌದಲ್ಲಿ ನಡೆಯುವ ಸಾಂಸ್ಕೃತಿಕ ಕಲಾಮೇಳಕ್ಕೆ ಆಯ್ಕೆಯಾಗಿದ್ದರು. ಲಕ್ನೋದಲ್ಲಿ ಡೊಳ್ಳು ಕುಣಿತ ಮುಂತಾದ ಜನಪದ ಕಲಾ ಪ್ರದರ್ಶನಕ್ಕೆ ಪ್ರಶಸ್ತಿ ಸನ್ಮಾನಗಳನ್ನು ಪಡೆದುಕೊಂಡರು.

ಈಗಲೂ ಕೂಡ ಸ್ಥಾನಿಕ ಶಾಲಾ ಕಾಲೇಜುಗಳಲ್ಲಿ ಮತ್ತು ಪರಸ್ಥಳದ ಶಾಲಾ ಕಾಲೇಜುಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದರೆ, ಹಾಲೇಶ್ ಅವರನ್ನು ಕರೆಯಿಸಿ ಅವರಿಗೆ ಅದರ ಮುಂದಾಳತ್ವವನ್ನು ನೀಡುತ್ತಾರೆ. ಹಾಲೇಶ್ ಅವರು ಸ್ವಲ್ಪವೂ ಬೇಸರಗೊಳ್ಳದೆ ಆ ಕಾರ್ಯಕ್ರಮವನ್ನು ಅತ್ಯಂತ ಕಾಳಜಿಪೂರ್ವಕವಾಗಿ ನಿಷ್ಠೆಯಿಂದ ಮಾಡಿ ಮುಗಿಸುತ್ತಾರೆ. ಶಾಲಾ ಕಾಲೇಜುಗಳಲ್ಲಿ ತಾವು ಶಾಲಾ ಮಕ್ಕಳಂತೆ ಅವರೊಂದಿಗೆ ಸೇರಿಕೊಂಡು ಅವರಿಗೆ ನಾಯಕನಾಗಿ ಕಲೆಯನ್ನು ಕಲಿಸುತ್ತಾರೆ.

ಒಂದು ದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳಾದ ಶ್ರೀ ಬಿ.ಡಿ.ಹಿರೇಗೌಡರು, ಹಾಲೇಶ್ ಅವರ ಪ್ರತಿಭೆಯನ್ನು ಗುರುತಿಸಿ ಇಲಾಖೆಯ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟರು. ಕಲೆಗೆ ವೇದಿಕೆಯನ್ನು ಒದಗಿಸಿಕೊಟ್ಟರು ಎಂಬುದನ್ನು ಹಾಲಕ್ಕಿ ಹಾಲೇಶ ಅವರು ಕೃತಜ್ಞತಾ ಭಾವದಿಂದ ಸ್ಮರಿಸಿಕೊಳ್ಳುತ್ತಾರೆ. ನಮ್ಮ ಸಮಾಜದಲ್ಲಿ ನಮ್ಮಂತಹ ಜನಪದ ಕಲಾವಿದರನ್ನು, ಕಲೆಗಳನ್ನು ಗುರುತಿಸುವ ಮನಸ್ಸುಗಳಿವೆ ಎಂದು ಹೆಮ್ಮೆ ಪಡುತ್ತಾರೆ. ಅಲ್ಲದೇ ಜನಪದ ಕಲೆಯನ್ನು ನಮ್ಮ ದೇಶದ ತಾಯಿಬೇರು, ಜನಪದ ಜೀವನದ ತವರು ಮನೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಇವರ ಅವಿರತ ಕಲಾ ಸೇವೆಯನ್ನು ಗುರುತಿಸಿ ಹತ್ತು ಹಲವು ಸನ್ಮಾನಗಳು, ಪುರಸ್ಕಾರಗಳು, ಪ್ರಶಸ್ತಿಗಳು ಸಂದಿವೆ. ರಾಣೇಬೆನ್ನೂರು ರತ್ನ, ಜಾನಪದ ಜಾಣ, ಜಾನಪದ ಹಾಡಿನ ಸರದಾರ ಹೀಗೆ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಸರಕಾರ ಇವರ ಸೇವೆಗೆ ಕೊಡಗಿನ ಪ್ರವಾಸ ಧಾಮದಲ್ಲಿ ಜಾನಪದ ನಿರ್ದೇಶಕರೆಂದು ಆಯ್ಕೆ ಮಾಡಿದ್ದು, ಅಲ್ಲಿಯೂ ಕೂಡ ತಮ್ಮ ಅಪರೂಪದ ಸೇವೆಯನ್ನು ಇವರು ಸಲ್ಲಿಸಿದ್ದಾರೆ. ಸತಿ–ಪತಿಗಳು ಒಂದಾದ ಭಕ್ತಿ ಹಿತ ಒಪ್ಪುವುದು ಶಿವಂಗೆ ಎಂಬಂತೆ ಹಾಲೇಶ್ ಅವರ ಧರ್ಮ ಪತ್ನಿ

ಆಶಾ ಅವರು ತಮ್ಮ ಪತಿ ಕಲಾ ರಥಕ್ಕೆ ಸಾರಥಿಯಾಗಿ ಮುನ್ನಡೆಯುತ್ತಿದ್ದಾರೆ. ಇವರು ಕೂಡ ನೃತ್ಯಗಾರ್ತಿಯಾಗಿದ್ದಾರೆ. ಹಾಲೇಶ್ ಅವರ ಬಹುದಿನದ ಕನಸು ಎಂದರೆ ಒಂದು ಕಲಾಕ್ಷೇತ್ರವನ್ನು ಸ್ಥಾಪಿಸುವುದು ಕನ್ನಡ ನಾಡಿನ ಕಲೆಯು ಮರೆಯಾಗದಂತೆ ಅದನ್ನು ಶಾಶ್ವತವಾಗಿ ಉಳಿಸುವುದೇ ಅವರ ಉದ್ದೇಶವಾಗಿತ್ತು. ಹೀಗಾಗಿ ಅವರು ಹಾಲಕ್ಕಿ ಬಳಗ ಜನಪದ ಸಂಗೀತ ನೃತ್ಯ ಕಲಾಕೇಂದ್ರ ಅರೇಮಲ್ಲಾಪುರ ಎಂಬ ಸಂಸ್ಥೆಯನ್ನು ಸ್ವಗ್ರಾಮದಲ್ಲಿ ಪ್ರಾರಂಭಿಸಿದ್ದಾರೆ. ಇದರ ಮೇಲ್ವಿಚಾರಣೆಯ ಕಾರ್ಯವನ್ನು ಅವರ ಬಾಳ ಸಂಗಾತಿ ಆಶಾ ಅವರು ನೋಡಿಕೊಳ್ಳುತ್ತಾರೆ. ಮಕ್ಕಳಂತೂ ಇವರ ಹೆಮ್ಮೆಯ ಕಲಾಕುಸುಮಗಳಾಗಿದ್ದಾರೆ.

ಜನಪದ ಗೀತೆಗಳ ಜೊತೆಗೆ ಇವರು ಶಿಶುನಾಳ ಶರೀಫರಂತಹ ಸಂತರ ತತ್ವಪದಗಳನ್ನು ಹಾಡುತ್ತಾರೆ.

ನಾನೇ ನಂದಿಲ್ಲ ಬಾರು
ಶಿವ ಶಂಭೋಲಿಂಗ
ನಾನೇ ನಂದಿಲ್ಲ ಬಾರೋ
ನಾನೇ ನಂದಿಲ್ಲ ಬಾರೋ ಇಂದು ನಿನಗೆ ಆಗೆಲ್ಲ ಗೈರು
ತಂದೆ ನಿನ್ನ ಪಾದವ ತೋರೋ
ನಾನೇ ನಂದಿಲ್ಲ ಬಾರೋ...

ಎಂದು ತಲೆಗೆ ಕೇಸರಿಯ ರುಮಾಲು, ಖಾದಿ ಜುಬ್ಬಾ ಧರಿಸಿಕೊಂಡು ಹಾಲೇಶ ಹಾಡಲಾರಂಭಿಸಿದರೆ ಕೇಳುಗರ ಮನದಲ್ಲಿ ಜನಪದ ಸಂತಸದ ಸೆಲೆ ಉಕ್ಕುತ್ತದೆ. ಇವರು ಹಾಡುಗಳನ್ನು ಹಾಡುವಾಗ ಕೆಲವೊಂದು ಸಾರಿ ತಮ್ಮ ಧರ್ಮ ಪತ್ನಿಯಾದ ಆಶಾಳನ್ನು ಕೂಡ ಸಾಥ ನೀಡಲು ಸೇರಿಸಿಕೊಂಡಿರುತ್ತಾರೆ. ಆಶಾ ಅವರು ಕೂಡ ಗಂಡನ ಹಾಡಿನ ಸೊಗಡಿಗೆ ತನ್ನ ಧ್ವನಿಯನ್ನು ಸೇರಿಸಿ ಇನ್ನಷ್ಟು ಮಧುರಗೊಳಿಸುತ್ತಾರೆ. ಹಾಲೇಶ್ ಅವರು ತಾವೊಬ್ಬ ಶ್ರೇಷ್ಠ ಜನಪದ ಕಲಾ ಪ್ರವೀಣರಾಗಿದ್ದರೂ ಕೂಡ ಅತ್ಯಂತ ಸೌಜನ್ಯ, ಶಾಂತಿ, ಸದ್ಗುಣಗಳನ್ನು ರೂಢಿಸಿಕೊಂಡವರು. ಕಷ್ಟಗಳ ಮಳೆಯಲ್ಲಿಯೂ ಕೂಡ ಶಾಂತಿಯಿಂದ ಸಹಿಸಿ ಮನೆಗೆ ಮಲ್ಲಿಗೆಯಾಗಿ ಕಲಾಪ್ರೇಮಿಗಳಿಗೆ ಬೆಲ್ಲ ಸಕ್ಕರೆಯಾಗಿ ಎಲ್ಲರೊಳಗೊಂದಾಗಿ, ಕನ್ನಡ ಸಾಂಸ್ಕೃತಿಕ ಲೋಕದ ಸೇವೆಗೆ ಸದಾ ಸಿದ್ಧರಾಗಿದ್ದಾರೆ. ಇಂತಹ ಕಲಾವಿದರಿಗೆ ಸರಕಾರ ಮತ್ತು ಸಕಲರು ಸೇರಿ ಬೆನ್ನು ತಟ್ಟಿ, ಸಹಾಯ ಸಹಕಾರ ನೀಡಿದರೆ ಸಾಕು. ಕನ್ನಡ ಜನಪದ ಲೋಕ ಇನ್ನೂ ಸಮೃದ್ಧವಾಗಿ ಬೆಳೆಯುವುದರಲ್ಲಿ ಸಂಶಯವೇ ಇಲ್ಲ.

**ಎಂ.ಆರ್.ತೋಟಗಂಟಿ**

ಉತ್ತರ ಕರ್ನಾಟಕ ಭಾಗದ ಅತ್ಯುತ್ತಮ ಜನಪದ ಕಲಾವಿದರ ಸಾಲಿನಲ್ಲಿ ಎಂ.ಆರ್.ತೋಟಗಂಟಿಯವರು ಒಬ್ಬರಾಗಿದ್ದಾರೆ. ಇವರ ಪೂರ್ಣ ಹೆಸರು ಮಲ್ಲಯ್ಯಸ್ವಾಮಿ ರಾ ತೋಟಗಂಟಿ. ಮಲ್ಲಯ್ಯಸ್ವಾಮಿ ಅವರು ಗದಗ ಜಿಲ್ಲೆಯ ರೋಣ ತಾಲ್ಲೂಕಿನ

ಮಾಳವಾಡ ಗ್ರಾಮದಲ್ಲಿ ಮಾರ್ಚ್ ೮, ೧೯೫೭ರಂದು ಜನಿಸಿದರು. ಇವರ ಪ್ರಾಥಮಿಕ ಶಿಕ್ಷಣ ಸ್ವ-ಗ್ರಾಮದಲ್ಲಿ ಮುಗಿಸಿ. ನಂತರ ಪ್ರೌಢ ಶಿಕ್ಷಣ ಹೊಳೆ ಆಲೂರಿನಲ್ಲಿ ಮತ್ತು ಪದವಿ ಶಿಕ್ಷಣವನ್ನು ನರಗುಂದದ ಶ್ರೀ ಶಂಕರ ಕಲಾ ಮಹಾವಿದ್ಯಾಲಯದಲ್ಲಿ ಪೂರ್ಣಗೊಳಿಸಿ, ಮುಂದೆ ೧೯೮೫ರಲ್ಲಿ ಲೋಕಸೇವಾ ಆಯೋಗದಿಂದ ಕಲಘಟಗಿಯ ಸಹಾಯಕ ಶಿಕ್ಷಣಾಧಿಕಾರಿಗಳಾಗಿ ಸೇವೆಗೆ ಸೇರಿದರು.

ಮಲ್ಲಯ್ಯಸ್ವಾಮಿ ಅವರ ತಾಯಿಯು ಸಹ ಜನಪದ ಗೀತೆಗಳನ್ನು ಹಾಡುತ್ತಿದ್ದರು. ಆ ಜನಪದ ಗೀತೆಗಳ ಝೇಂಕಾರ ಮಲ್ಲಯ್ಯಸ್ವಾಮಿ ಅವರ ಮನದಾಳಕ್ಕೆ ಇಳಿದವು. ಸ್ವಗ್ರಾಮದಲ್ಲಿ ಯಾವುದೇ ಜನಪದ ಕಾರ್ಯಕ್ರಮಗಳಾದರೂ ಕೂಡ ಇವರು ಭಾಗವಹಿಸುವವರಲ್ಲಿ ಮೊದಲಿಗರು. ಹಳ್ಳಿಯ ಜನಪದ ಕಲೆಗಳಾದ ಭಜನಾ ಪದ, ನಾಟಕ ಮುಂತಾದವುಗಳಲ್ಲಿ ತಮ್ಮ ಪಾಲುದಾರಿಕೆಯನ್ನು ತೆಗೆದುಕೊಳ್ಳುತ್ತಿದ್ದರು. ಅಲ್ಲದೇ ತಮ್ಮ ಗೆಳೆಯರ ಬಳಗದೊಂದಿಗೆ ಸೇರಿಕೊಂಡು ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಧಾರವಾಡ ಜಿಲ್ಲೆಯ ಯುವಜನ ಮೇಳದಲ್ಲಿ ೧೯೮೧ರಲ್ಲಿ ಉತ್ತಮ ಕಲಾ ತಂಡವೆಂಬ ಪ್ರಶಸ್ತಿಯನ್ನು ಪಡೆದುಕೊಂಡರು. ೧೯೮೧-೮೨ನೇ ಸಾಲಿನ ರಾಜ್ಯಮಟ್ಟದ ಯುವಜನ ಮೇಳದಲ್ಲಿ ಅತ್ಯಂತ ಯಶಸ್ವಿಯಾಗಿ ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಮೂಲಕ ಪ್ರಶಸ್ತಿ, ಪುರಸ್ಕಾರಗಳನ್ನು ಪಡೆದಿದ್ದಾರೆ. ಸರಳ, ಸಜ್ಜನ, ಸಹೃಯದ ಮಲ್ಲಯ್ಯಸ್ವಾಮಿ ಅವರು ನಿರಂತರವಾಗಿ ಜನಪದದ ಅಭಿವೃದ್ಧಿ, ಝೇಂಕಾರವನ್ನು ಬೆಳೆಸುವುದಕ್ಕೆ ಸದಾ ಸಿದ್ಧರಾಗಿದ್ದಾರೆ. ಜನಪದ ಗೀತೆ, ಲಾವಣಿ, ಭಕ್ತಿಗೀತೆಗಳು ಮುಂತಾದ ಕಲಾ ಪ್ರಕಾರಗಳನ್ನು ಹಾಡುತ್ತಾರೆ. ಇವರ ಕಾರ್ಯಕ್ರಮ ಆರಂಭವಾಯಿತೆಂದರೆ ಜನರು ಎಲ್ಲವನ್ನೂ ಮರೆತು ತದೇಕ ಚಿತ್ತದಿಂದ ಇವರ ನಾದಮಾಧುರ್ಯದ ಆನಂದ ಸವಿಯುತ್ತಿರುತ್ತಾರೆ. ಮಧ್ಯೆ ಮಧ್ಯೆ ಮಹಿಳೆಯರಿಗೆ ಸಂಬಂಧಿಸಿದಂತೆ ಹಾಡುಗಳನ್ನು ಹಾಡುತ್ತಾರೆ. ದೇಶಿ ಹಬ್ಬಗಳಾದ ನಾಗರ ಪಂಚಮಿ ಅಂತಹ ಹಬ್ಬ ಹರಿದಿನಗಳಿಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾರೆ. ನಾಗರ ಪಂಚಮಿ ದೊಡ್ಡದು ನಾಡಿಗೆ ವಾರಿಗೆ ಗೆಳತ್ಯಾರ ಬರ್ತಾರು ತವರೂರಿಗೆ ಮುಂತಾದ ಗೀತೆಗಳನ್ನು ಹಾಡುವಾಗ ಮಹಿಳೆಯರಷ್ಟೇ ಅಲ್ಲದೇ, ಎಲ್ಲರೂ ಕೂಡ ಕಿವಿಗೊಟ್ಟು ಕೇಳಿ ನಮ್ಮ ಸಂಸ್ಕೃತಿಯ ಸೊಬಗನ್ನು ಸವಿದು ಸಂತಸ ಪಡುತ್ತಾರೆ.

ತೋಟಗಂಟಿ ಅವರು ಅಪಾರವಾದ ಸಾಮಾಜಿಕ ಕಳಕಳಿಯನ್ನು ಹೊಂದಿದ್ದಾರೆ. ಇವರು ಜನಪದ ಕಾರ್ಯಕ್ರಮಗಳ ಮುಖಾಂತರ ಸಮಾಜಮುಖಿ ಕಾರ್ಯಗಳನ್ನು ಮಾಡಿದ್ದಾರೆ. ಜನತೆಯ ಸಾಕ್ಷರತಾ ಆಂದೋಲನಕ್ಕಾಗಿ ಶ್ರಮಿಸಿದ್ದಾರೆ. ಮೂಢನಂಬಿಕೆ ಅನ್ನು ಮುರಿದು ಹಾಕುವಲ್ಲಿ ಮುಂದಾಗಿದ್ದಾರೆ. ಆಗಾಗ ಜನ ಜಾಗೃತಿ ಗೀತೆಗಳನ್ನು ರಚಿಸಿ ಜನರಲ್ಲಿರುವ ಅಜ್ಞಾನವನ್ನು ತೊಡೆದು ಹಾಕಿ ಅವರಿಗೆ ತಿಳುವಳಿಗೆ ಬರುವಂತಹ ಕಾರ್ಯಗಳನ್ನು ಸದಾ ಮಾಡುತ್ತಲೇ ಇರುತ್ತಾರೆ. ಅಲ್ಲದೇ ಕುಂದಗೋಳ ಕ್ಷೇತ್ರ

ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಪತ್ರಾಂಕಿತ ಅಧಿಕಾರಿಗಳಾಗಿ ಸೇವೆ ಸಲ್ಲಿಸಿ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದಾರೆ. ಇವರು ಸರಕಾರಿ ಸೇವೆಯಲ್ಲಿದ್ದರೂ ಕೂಡ ತಮ್ಮ ಜನಪದ ಸೇವೆಯನ್ನು ಬಿಟ್ಟವರಲ್ಲ. ತಮ್ಮ ಸರಕಾರಿ ಕೆಲಸಕ್ಕೆ ಯಾವುದೇ ಚ್ಯುತಿಬಾರದಂತೆ ನೋಡಿಕೊಂಡು ತಮ್ಮ ಜನಪದದ ಕೈಂಕರ್ಯವನ್ನು ಮುಂದುವರಿಸಿಕೊಂಡು ಹೋಗಿದ್ದಾರೆ. ಇವರು ಜನಪದ ಹಾಡುಗಾರಿಕೆ ಜೊತೆಗೆ ರಂಗಭೂಮಿಯ ಕಲಾವಿದರು ಆಗಿದ್ದಾರೆ. ರಕ್ತರಾತ್ರಿ ನಾಟಕದಲ್ಲಿ ಅಭಿನಯಿಸಿ ಸೈ ಎನ್ನಿಸಿಕೊಂಡಿದ್ದಾರೆ. ಈ ಮೂಲಕ ತಾವೊಬ್ಬ ಜನಪದರ ಪರ ಕಾಳಜಿಯುಳ್ಳ ವ್ಯಕ್ತಿ ಎಂದು ಜನರಿಂದ ಗುರುತಿಸಿಕೊಂಡಿದ್ದಾರೆ.

ಇವರ ಸ್ವರಚಿತ ಕವನಗಳು ಅದೆಷ್ಟು ಆಕರ್ಷಕ ಎಂದರೆ ಹಾಡುಗಳನ್ನು ಕೇಳಿದವರು ಅವುಗಳನ್ನು ಬರೆದುಕೊಡಿ ಎಂದು ಇವರನ್ನು ಒತ್ತಾಯಿಸಿರುವುದು ಉಂಟು. ಜನಪದ ಝೇಂಕಾರ ಎಂಬ ಧ್ವನಿಸುರಳಿ ಬಿಡುಗಡೆ ಮಾಡಿದ್ದಾರೆ. ಇಂತಹ ಹಲವಾರು ಸಂಗತಿಗಳು ನವಮೌಖಿಕ ಸಾಹಿತ್ಯ ಅಧ್ಯಯನಕ್ಕೆ ಸೂಕ್ತ ಸಂಪನ್ಮೂಲವನ್ನು ಒದಗಿಸುತ್ತವೆ. ಏಕೆಂದರೆ ಆ ಧ್ವನಿಸುರುಳಿಯ ಗೀತೆಗಳು ನವಮೌಖಿಕ ಛಾಯೆಯನ್ನು ಬಿಂಬಿಸುತ್ತವೆ. ಹೀಗಾಗಿ ಇಲ್ಲಿ ತೋಟಗಂಟಿಯವರ ಕಾವ್ಯಗಳನ್ನು ನಾವು ನವಮೌಖಿಕತೆ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಕಲಘಟಗಿಯಲ್ಲಿ ಶ್ರೀ ಸೋಮಲಿಂಗೇಶ್ವರ ನಾಟ್ಯ ಸಂಘವನ್ನು ಇವರು ಹುಟ್ಟು ಹಾಕಿದ್ದಾರೆ. ಆ ಮೂಲಕ ಹಲವಾರು ಗ್ರಾಮಗಳಲ್ಲಿ ಹಲವಾರು ನಾಟಕಗಳನ್ನು ಆಡಿ, ಜನರಿಗೆ ಮನರಂಜನೆ ನೀಡುವ ಮೂಲಕ ಅವರ ಪ್ರೀತಿಗೆ ಪಾತ್ರರಾಗಿದ್ದಾರೆ. ಇವರು ರಂಗ ಕಲಾವಿದರಾಗಿ ಅಭಿನಯಿಸಿದ ನಾಟಕಗಳು, ಶ್ರೀ ರೈಲು ರಕ್ತರಾತ್ರಿ, ಶ್ರೀ ರೇಣುಕಾದೇವಿ ಮಹಾತ್ಮೆ, ವೀರ ಸಿಂಧೂರ ಲಕ್ಷ್ಮಣ, ಬಸ್ ಹಮಾಲ, ಚಿನ್ನದ ಗೊಂಬೆ, ಶ್ರೀ ಬಾಲ ಸಂಗಮೇಶ್ವರ ಮಹಿಮೆ ಮುಂತಾದವುಗಳು. ಪ್ರತಿಭಾ ಕಾರಂಜಿಯಂತಹ ಶೈಕ್ಷಣಿಕ ಕಾರ್ಯಗಳಲ್ಲಿಯೂ ಕೂಡ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜೊತೆಗೆ ಕಲಘಟಗಿ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾಗಿಯೂ ಕೂಡ ಯಶಸ್ವಿಯಾಗಿ ಕೆಲಸವನ್ನು ನಿರ್ವಹಿಸಿದ್ದಾರೆ.

೧೯೮೮ರಂದು ಆಕಾಶವಾಣಿ ಧಾರವಾಡದಲ್ಲಿ "ಸಾಮಾಜಿಕ ಸೇವೆಯಲ್ಲಿ ಶಿಕ್ಷಣದ ಪಾತ್ರ" ಎಂಬ ವಿಷಯದ ಕುರಿತು ಭಾಷಣ ಪ್ರಸಾರವಾಗಿದೆ. ಇವರ ಶ್ರೀ ಸಂಗಮೇಶ್ವರ ಕಲಾ ಸಂಘದ ಗೀತೆಗಳು ಆಕಾಶವಾಣಿಯಲ್ಲಿ ಪ್ರಸಾರಗೊಂಡಿವೆ. ಇವರು ಕೇವಲ ಹಾಡುಗಾರ ಅಷ್ಟೇ ಅಲ್ಲ, ಸ್ವತಃ ಕವಿಯೂ ಆಗಿದ್ದಾರೆ. ಹಾಡೋಣ ಜನಪದ ಎಂಬ ಸ್ವರಚಿತ ಕವನ ಸಂಕಲನವನ್ನು ರಚಿಸಿದ್ದಾರೆ. ತಮ್ಮ ಉತ್ತಮ ವಿಚಾರಗಳ ಮೂಲಕ ಜನರ ಬಾಳನ್ನು ತಿಳಿಯಾಗಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಇಂದಿಗೂ ಇವರು ಕಲಾ ದೇವಿಯ ಆರಾಧನೆಯನ್ನು ಮಾಡುತ್ತಿರುವುದು ಅತ್ಯಂತ ಪ್ರಶಂಸನೀಯ. ಒಟ್ಟಾರೆಯಾಗಿ ಮಲ್ಲಯ್ಯಸ್ವಾಮಿ ತೋಟಗಂಟಿ ಅವರ ಸೇವೆ ಕನ್ನಡ ನಾಡಿನ ಜಾನಪದ ಲೋಕಕ್ಕೆ ಅಪಾರವಾಗಿದೆ.

ಹೀಗೆ ಜನಪದ ಹಾಡುಗಾರರು ಅಂದು ಮೌಖಿಕವಾಗಿ ರಚನೆ ಮಾಡಿದ ಹಾಡುಗಳು, ಇಂದು ಆಧುನಿಕ ಮಾಧ್ಯಮಗಳಲ್ಲಿ ಬಳಕೆಗೊಳ್ಳುತ್ತ ಜನಪದ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಮೌಖಿಕ ಎಂಬುದು ಕಾಲಾಂತರದಲ್ಲಿ ಬದಲಾವಣೆಯಾಗುವ ಮೂಲಕ ಇಂದು ನವಮೌಖಿಕ ರೂಪವನ್ನು ಪಡೆದುಕೊಂಡಿದೆ.

**೪.೨. ಜನಪದ ಹಾಡುಗಳ ಪ್ರಕಾರ**

ಕನ್ನಡ ಜನಪದ ಸಂಸ್ಕೃತಿಯ ಒಂದು ಭಾಗವಾದ ಜನಪದ ಗೀತೆಗಳು ವೈವಿಧ್ಯಮಯವಾಗಿ, ಕನ್ನಡ ನಾಡಿನ ವಿವಿಧ ಪ್ರದೇಶಗಳಲ್ಲಿ ಪ್ರಾದೇಶಿಕ ಸೊಗಡನ್ನು, ಮುಂದಿನ ಪೀಳಿಗೆಗೆ ಜೋಪಾನ ಮಾಡಿ ಉಡುಗೊರೆ ನೀಡುತ್ತಿವೆ ಎಂದರೆ ತಪ್ಪಾಗಲಾರದು. ಬಿ.ಎಂ.ಶ್ರೀಕಂಠಯ್ಯನವರು ಗರತಿಯ ಹಾಡಿನ ತ್ರಿಪದಿ ಸಂಗ್ರಹಕ್ಕೆ ಬರೆದಿರುವ ಪ್ರಸ್ತಾವನೆಯಲ್ಲಿ ಜನಪದ ಸಾಹಿತ್ಯದ ಕುರಿತು 'ಜನವಾಣಿ ಬೇರು; ಕವಿವಾಣಿ ಹೂವು' ಎಂದು ಹೇಳಿದ್ದಾರೆ. ಇದು ಜನಪದ ಸ್ವರೂಪದ ಅರ್ಥಗರ್ಭಿತ ಮಾತಾಗಿದೆ. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳಿಂದ ರಚಿತವಾದ ಜನಪದವು ತುಂಬಾ ಪ್ರಾಚೀನವೂ, ಆಧುನಿಕ ಬದುಕಿಗೆ ಪ್ರೇರಕವೂ ಆಗಿದೆ. ಜನಪದವು ಅನೇಕರ ಜೀವನಾನುಭವದ ಮೊತ್ತವಾಗಿ, ಅನುಭವ ಸೇರಿಕೊಂಡು ಒಬ್ಬನ ಜಾಣ್ಮೆಯಿಂದ ಕಲಾತ್ಮಕ ರೂಪವನ್ನು ಪಡೆದು ಇಂದು ಎಲ್ಲರ ಸೊತ್ತಾಗಿದೆ. ಕೆಲವು ಸಂದರ್ಭಗಳಲ್ಲಿ ಜನಪದ ಸಾಹಿತ್ಯ ರೂಪವು ಸಂಸ್ಕೃತಿಯಲ್ಲಿ ರೂಪಗೊಂಡು ಪರಿಪಕ್ವತೆಯನ್ನು ಪಡೆದು ಕೊಂಡಿದೆ. ಹಾಗೆ ಜನಪದ ಸಾಹಿತ್ಯವು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು, ಅದರಲ್ಲಿ ಹಲವು ಪ್ರಕಾರಗಳನ್ನು ನೋಡುತ್ತೇವೆ. ಗಾದೆ, ಒಗಟು, ಒಡಪು, ಕಥೆ, ಗೀತೆ ಇತ್ಯಾದಿ ಪ್ರಮುಖ ಪ್ರಕಾರಗಳನ್ನು ಕಾಣುತ್ತೇವೆ.

ಆದರೆ ಇಲ್ಲಿ ಗೀತೆಗಳಿಗೆ ಅಗ್ರಸ್ಥಾನವಿದೆ. ಗೀತೆಗಳ ಬಗ್ಗೆ ಹೇಳುವುದಾದರೆ ಜನಸಮೂಹದ ನಡುವೆ ವಾಕ್ಯ ಸಂಪ್ರದಾಯದ ಮೂಲಕ ಹರಿದು ಬಂದಿರುವ ಕಾವ್ಯ ಮತ್ತು ಸಂಗೀತಗಳ ಸಮಾವೇಶವೇ ಜನಪದ ಗೀತೆಗಳಾಗಿವೆ. ಯಾವುದೋ ಒಂದು ಕ್ಷಣದಲ್ಲಿ ಆನಂದ ತುಂಬಿ ತುಳಿಕಿದಾಗ ನೋವು ಮನಸ್ಸನ್ನು ಕಾಡಿದಾಗ ಆ ಸ್ಥಿತಿಯೇ ಹಾಡಾಗುತ್ತದೆ. ಬಾಯಿಂದ ಬಾಯಿಗೆ ಹರಿಯುವ ಗುಣ ಈ ಕಾವ್ಯದ ಪ್ರಮುಖ ಲಕ್ಷಣವಾಗಿದೆ. ಅದು ಕಾಲಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ರೂಪಾಂತರಗೊಳ್ಳುತ್ತದೆ. ಸಾವಿರಾರು ಜನ ಅದನ್ನು ಹಾಡುತ್ತ ಬದಲಾಯಿಸುತ್ತ ಬರುವುದರಿಂದ ಅದು ಸಾಮುದಾಯಿಕ ಸೃಷ್ಟಿಯಾಗುತ್ತದೆ. ಇಂತಹ ಹಾಡುಗಳ ಶಿಲ್ಪ ಸರಳವಾಗಿರುದಲ್ಲದೆ ಶೈಲಿ ಸಹಜವಾಗಿರುತ್ತದೆ. ಜನರ ನಿತ್ಯ ಬದುಕಿನ ಒಂದು ಅನುಭವ ಜೊತೆಗೆ ಮಾರ್ಗದರ್ಶನ ನೀಡುವ ಒಂದು ಹಂತಕ್ಕೆ ತಲುಪಿವೆ.

**ಜನಪದ ಗೀತೆಗಳು**

ಜನಪದ ಗೀತೆಗಳು ಹಿಂದಿನಿಂದಲೂ ಒಂದು ವಿಶಿಷ್ಟವಾದ ಅನುಭವವನ್ನು ಪಡೆದುಕೊಂಡು ರಚನೆಗೊಂಡಿವೆ. ಜನಪದ ಗೀತೆಗಳಲ್ಲಿ ಜೋಗುಳ ಹಾಡುಗಳು, ಸೋಬಾನೆ ಪದಗಳು, ಹಂತಿ ಪದಗಳು, ಹೋಳಿ ಹಾಡುಗಳು, ಬೀಸುವ ಹಾಡುಗಳು, ಸುಗ್ಗಿಯ ಹಾಡುಗಳು, ಕೋಲಾಟದ ಹಾಡುಗಳು, ಮೊಹರಂ ಪದಗಳು, ಡೊಳ್ಳಿನ ಪದಗಳು, ಭಜನಾ ಪದಗಳು ಹೀಗೆ ಹಲವು ಪ್ರಕಾರಗಳನ್ನು ಕಾಣುತ್ತೇವೆ.

ಈ ಗೀತೆಗಳು ಇಂದು ಆಧುನಿಕ ಮಾಧ್ಯಮಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಆದರೆ ಮೂಲ ಹಾಡುವವರ ಸಂಖ್ಯೆ ಕಡಿಮೆ ಆಗಿದೆ. ಇಂದು ಹಲವಾರು ರೀತಿಯ ಹಾಡುಗಾರರನ್ನು ನಾವು ನೋಡುತ್ತೇವೆ. ಆದರೆ ಮೂಲ ಜನಪದ ಧಾಟಿ ಆಗಲಿ ಅಥವಾ ಮೂಲ ಹಾಡಿನ ಸತ್ಯವನ್ನು ನಾವು ಕಾಣುತ್ತಿಲ್ಲ. ಮೇಲೆ ಹೇಳಿದಂತೆ ಜನಪದ ಗೀತೆಗಳ ಪ್ರಕಾರಗಳನ್ನು ಇಲ್ಲಿ ಹಾಡುಗಳ ಉದಾಹರಣೆಯೊಂದಿಗೆ ವಿಶ್ಲೇಷಣೆ ಮಾಡಲಾಗಿದೆ.

**ಜೋಗುಳ ಹಾಡು**

ಜೋಗುಳ ಹಾಡು ಎನ್ನುವುದು ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಜೋ... ಜೋ...ಎಂಬ ಪಲ್ಲವಿಯೊಡನೆ ತೂಗುತ್ತಾ ಹಾಡುವ ಹಾಡು. ಮಕ್ಕಳನ್ನು ಮಲಗಿಸುವ ಕ್ರಿಯೆ ಭಾವನಾತ್ಮಕವಾದುದು, ನವಿರಾದುದು. ಏಕೆಂದರೆ ಮಗುವಿನ ಪರಿಕಲ್ಪನೆಯು ಬಹಳ ಸೂಕ್ಷ್ಮ ಸ್ವರೂಪದ್ದಾಗಿದೆ. ತಾಯಿ ತನ್ನ ಮಗುವನ್ನು ಅಕ್ಕರೆಯಿಂದ ಮಲಗಿಸುವ ಕ್ರಮಕ್ಕೆ ಜೋಗುಳ, ಲಾಲಿಪದ, ತೊಟ್ಟಿಲ ಹಾಡುಗಳೆಂದು ಕರೆಯುತ್ತಾರೆ. ತಾಯಿ ತನ್ನ ಮಗುವನ್ನು ಮತ್ತು ಅದರ ಸೌಂದರ್ಯವನ್ನು ನಾನಾ ಬಗೆಯಲ್ಲಿ ವರ್ಣಿಸುತ್ತಾಳೆ. ಹಾಡಿನ ಮೂಲಕ ಮಗುವನ್ನು ಸೂರ್ಯ, ಚಂದ್ರ, ನಕ್ಷತ್ರ, ಪಕ್ಷಿ, ಆಕಾಶ, ಭೂಮಿ ಹೀಗೆ ಇಡೀ ಪ್ರಕೃತಿಯನ್ನೇ ಹೋಲಿಕೆ ಮಾಡಿ ಮಗುವನ್ನು ಲಾಲಿಸುತ್ತಾಳೆ.

**ಉದಾಹರಣೆ :**

ಹಸರಂಗಿ ತೊಡೆಸಿದ ಹಾಲ್ಗಡಗ ಇಡಸಿದ
ಹಳ್ಳಕ್ಕೆ ನೀನು ಬರಬೇಡ। ನನ ಕಂದಯ್ಯ
ಬೆಳ್ಳಕ್ಕಿ ಹಿಂಡು ಬೆದರ್ಯಾವೆ.

ಅತ್ತರೆ ಅಳಲವ್ವ ಈಕೂಸು ನನಗಿರಲಿ
ಕೆಟ್ಟರೆ ಕೆಡಲಿ ಮನೆಗೆಲಸ। ಕಂದನಂತ
ಮಕ್ಕಳಿರಲವ್ವ ಮನೆತುಂಬ॥[೭]...

ಇಲ್ಲಿ ತಾಯಿ ತನ್ನ ಕಂದನ ಕುರಿತು ವರ್ಣಿಸುವ ಸಂದರ್ಭ. ತಾಯಿಗೆ ಕಂದನೇ ಎಲ್ಲ ಮನೆಯ ಕೆಲಸ ನಿಂತರೂ ಸರಿ, ನನ್ನ ಕಂದ ಸಂತೋಷದಿಂದ ಇರಬೇಕು ಎಂಬ

ತಾಯಿಯ ನಿಲುವು ಎಂಬುದು ಈ ಪದ್ಯ ಭಾಗದಲ್ಲಿ ಮೂಡಿಬಂದಿದೆ. ಇಂದು ಆಧುನಿಕ ಮಾಧ್ಯಮಗಳಲ್ಲಿ ಬಳಕೆಯಾಗುತ್ತಿರುವ ಜೋಗುಳ ಹಾಡನ್ನು ಇಲ್ಲಿ ನೋಡಬಹುದು.

ಜೋಗುಳ ತೂಗಿರಿ ಎಳೆಯ ಗೋವಿಂದ
ಮುತ್ತೆ ಮುತ್ತೆ ಹೊನ್ನಿನ ಕೊಡವೇ..ಓಕಣ್ಣಾ ಮುಚ್ಚೆ
ಹೊನ್ನೆ ಮನಸ್ಸು ರಾರೀ ರಾರೀ ರಾರಾ ರೋ...ಮಗುವೆ
ಕೇಳುತಿದಿಯೋ ಗಿಳಿಗಳು ಹಾಡುವ ಜೋಗುಳವ...

ಇಂತಹ ಹಾಡುಗಳನ್ನು ಯಾರು ರಚಿಸಿದರೋ ಗೊತ್ತಿಲ್ಲ. ಇಂದಿಗೂ ಈ ಹಾಡುಗಳು ಶಾಶ್ವತ ಎಂಬಂತೆ ಜೀವಂತಿಕೆ ಪಡೆದುಕೊಂಡಿವೆ. ಈ ಜೋಗುಳದ ಹಾಡುಗಳಿಗೆ ಸಂಗೀತವೇ ಬೇಕಿಲ್ಲ ಹಾಡುಗಾರರ ಪರಿಸರ, ಕಲ್ಪನೆಗಳಿಗನುಗುಣವಾಗಿ ಹಾಡು ಬೆಳೆಯುತ್ತಾ ಸಾಗುತ್ತಿವೆ. ಇಂದು ಆಧುನಿಕ ಮಾಧ್ಯಮಗಳ ಮೂಲಕ ಪ್ರಸಾರಗೊಳ್ಳುತ್ತಿರುವ ಹಾಡುಗಳು ಹೊಸದೊಂದು ಆಯಾಮವನ್ನೇ ಒದಗಿಸಿದಂತಾಗಿದೆ.

**ಸೋಬಾನೆ ಪದಗಳು**

ಸೋಬಾನೆ ಪದಗಳನ್ನು ಮದುವೆ ಮುಂತಾದ ಶುಭ ಪ್ರಸಂಗಗಳಲ್ಲಿ ಹಾಡುತ್ತಾರೆ. ಮದುವೆ ಎಂಬುದು ಜೀವನದಲ್ಲಿ ಬರುವ ಒಂದು ದೊಡ್ಡ ಸಂಕೀರ್ಣವಾದ ಸಂಭ್ರಮ ಎಂದೇ ಹೇಳಬಹುದು. ಈ ಮದುವೆ ಕಾರ್ಯಕ್ರಮವು ಹಳ್ಳಿಗಳಲ್ಲಿ ತಿಂಗಳಾನುಗಟ್ಟಲೇ ಸಾಗುತ್ತದೆ. ಹಳ್ಳಿಯ ಜನರು ತಮ್ಮ ಮನೆಯಲ್ಲಿ ಮದುವೆ ಕಾರ್ಯವಿದ್ದಾಗ ಊರಿನ ಎಲ್ಲ ಜನರಿಗೂ ಔತಣದ ವ್ಯವಸ್ಥೆ ಮಾಡಿರುತ್ತಾರೆ. ಮದುವೆಗೆ ಸಂಬಂಧಿಸಿದಂತೆ ಕಾರ್ಯಕ್ರಮ ಹಾಡುಗಳಾದ ಬಸ್ವಗಿ ಹಾಡು, ಒಳಕಲ್ಲು ಪೂಜೆ, ನೂಲಿನ ಹಾಡು, ಅರಿಸಿನ ಹಚ್ಚುವ ಹಾಡು ಇತ್ಯಾದಿ ಸಂದರ್ಭದಲ್ಲಿ ಹೆಣ್ಣು ಮಕ್ಕಳು ಗುಂಪು ಗುಂಪಾಗಿ ಸೇರಿ ಪದಗಳನ್ನು ಹೇಳುತ್ತಾರೆ. ಈ ಎಲ್ಲ ಪ್ರಕಾರದ ಪದಗಳೆ ಸೋಬಾನೆ ಪದಗಳು. ಇಂದಿಗೂ ಹಳ್ಳಿಗಳಲ್ಲಿ ಮದುವೆ ಸಂದರ್ಭದಲ್ಲಿ ಸೋಬಾನೆ ಪದ ಹಾಡುವುದನ್ನು ಕೇಳುತ್ತೇವೆ.

**ಉದಾಹರಣೆ :**

ಸೋಬಾನ ಸುಖದಿಂದ ಸೋಬಾನವೇ।
ಅಣ್ಣಾ ಮದಲಿಂಗ ಅಣ್ಣಯ್ಯ ಮದಲಿಂಗ।
ಅಣ್ಣಾ ನನ್ನಯ್ಯ ಮದಲಿಂಗ ಸೋಬಾನವೇ॥
ಅಣ್ಣಾ ನನ್ನಯ್ಯ ಮದಲಿಂಗನಾದರೆ।
ಹೆಣ್ಣಾ ಕೊಡಿರಮ್ಮ ಸುಖದಿಂದ ಸೋಬಾನವೇ॥
..............................................................
..............................................................
ಅತ್ತಿಯ ಮರದೂರ ಹತ್ತೇಳು ಕೆರೆದೂರ।

ಹೆತ್ತೂ ಮದುವಣ್ಣ ಕುದುರೆಯ ಸೋಬಾನವೇ॥
ನಿಮ್ಮತ್ತೇ ಕಾಲಿಗೆ ಶರಣೆನ್ನೋ ಸೋಬಾನವೇ।
ಶರಣೆಂದು ಕಾಲಿಗೆ ಸಾಸಿರೀಳ್ಯವ ಕೊಟ್ಟು
ಶ್ರೀಗೌರಿ ಎಂಬ ಮಗಳ ಕೊಟ್ಟು ಸೇಬಾನವೇ॥[೯]...

ಇದೇ ರೀತಿ ಇನ್ನೊಂದು ಹಾಡನ್ನು ನೋಡುವುದಾದರೆ, ದೊಡ್ಡವರ ಮಗಳೆಂದು ಒಡ್ಡೀಲಿ...ನನ ಮಗಳೆ ದೊಡ್ಡೊರಿಗೆ ಅಶುಭ ತರಬ್ಯಾಡ. ಈ ಹಾಡು ಸಹ ಹೆತ್ತ ತಾಯಿ ತನ್ನ ಮಗಳು ಮದುವೆ ಆದ ನಂತರ ಬೀಗರ ಮನೆಗೆ ಹೋಗುವಾಗ ಅವಳಿಗೆ ಬೀಗರ ಮನೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ತಿಳಿಸುವ ಸಂದರ್ಭದ ಚಿತ್ರಣವಿದೆ. ಇಲ್ಲಿ ಮಗಳ ಜೀವನ ಸುಖಕರವಾಗಿರಲೆಂದು ತಾಯಿ ಎಲ್ಲ ರೀತಿಯ ಬುದ್ಧಿವಾದಗಳನ್ನು ಹೇಳುತ್ತಾ ಅವಳನ್ನು ಬೀಳ್ಕೊಡುತ್ತಾಳೆ.

ಇಂದು ನವಮಾಧ್ಯಮಗಳಲ್ಲಿ ಬಿತ್ತರಗೊಳ್ಳುವ ಸೋಬಾನೆ ಪದಗಳು ಕೇಳುಗರಿಗೆ ಹಳೆಯ ಸಂಪ್ರದಾಯಗಳನ್ನು ಕಟ್ಟಿಕೊಡುತ್ತಿವೆ. ಉದಾಹರಣೆಗೆ: ಗುರುರಾಜ ಕೆಂಧೂಳಿ ಅವರು ರಚಿಸಿದ ಗೀತೆಯನ್ನು ಇಲ್ಲಿ ನೋಡಬಹುದು.

ರಬಕವಿ ಹೆಣ್ಣ ಚಂದಂತ ಈ ನಾಡಿನ್ಯಾಗ
ಗೋಕಾಕದ ಬಣ್ಣ ಚಂದಂತ
ಯಾ ಹಾಡ ಊರಿನ ಸುಣ್ಣ...
ಹುಬ್ಬಳ್ಳಿ ಊರಿನವರು ಹಿರಿಯರು ಕೂಡಿಕೊಂಡು
ರಬಕವಿ ಊರಿಗೆ ಬಂದ್ರಂತ
ವರನಿಗೆ ಕನ್ಯಾ ತೋರಿಸಿ ಉಡಿಯಾಗ
ಹಣ್ಣು ಹಾಕಿ ಕುಂಕುಮ ಹಚ್ಚಿ ಹೋದ್ರಂತ ಅ...
ರಬಕವಿ ಹೆಣ್ಣ ಚಂದಂತ ಈ ನಾಡಿನ್ಯಾಗ
ಗೋಕಾಕದ ಬಣ್ಣ ಚಂದಂತ[೧೦]...

ಪ್ರಾದೇಶಿಕ ಹಿನ್ನಲೆ ಇಟ್ಟುಕೊಂಡು ರಚನೆಯಾದ ಈ ಗೀತೆ, ಹೆಣ್ಣಿನ ಕುರಿತಾದ ವರ್ಣನೆಯನ್ನು ಮಾಡುತ್ತದೆ. ಮದುವೆಯ ಮುಂಚೆ ವರನ ಮನೆಯವರು ವಧುವಿನ ಮನೆಗೆ ಹೋಗುವುದು. ಅಲ್ಲಿ ನಡೆಯುವ ಸಂಪ್ರದಾಯವನ್ನು ಈ ಪದ್ಯ ಕಟ್ಟಿಕೊಟ್ಟಿದೆ.

**ಹಂತಿ ಪದ**

ನಮ್ಮ ದೇಶದ ಬೆನ್ನೆಲುಬು ರೈತ. ಇತನ ಜೀವನವೇ ಹಳ್ಳಿಯ ಜೀವನವಾಗಿದೆ. ರೈತನಿಗೆ ಜಾತಿ, ಧರ್ಮಗಳ ಬಗ್ಗೆ ಅರಿವಿದ್ದರೂ ಅವನಿಗೆ ಕುಲವೆಂಬ ಭಾವನೆ ಅವನಲ್ಲಿ ಇರುವುದಿಲ್ಲ. ಅವನಿಗೆ ನಾಡಿನ ಮೇಲೆ, ನಾಡಿನಲ್ಲಿರುವ ಶರಣರ ಮೇಲೆ ಭಕ್ತಿಯಿದೆ, ಹಾಗೆಯೇ ಕಾಯಕದಲ್ಲಿ ದೃಢವಾದ ಶ್ರದ್ಧೆಯಿದೆ. ಜನಾಂಗದ ಜೀವಾಳವಾಗಿ ಕಾಣುತ್ತಾನೆ.

ನಮ್ಮ ಹಳ್ಳಿಗರ ಸಂಸ್ಕೃತಿಯು ಒಡಮೂಡಿದ್ದು ಪಂಡಿತರ ಕಾವ್ಯ, ಶಿಲಾಶಾಸನ, ಗ್ರಂಥಗಳಲ್ಲಿ ಅಲ್ಲ. ಬದಲಾಗಿ ಜನಪದ ಸಾಹಿತ್ಯದಲ್ಲಿ ಮಾತ್ರ ಎಂಬುದು ಸ್ಪಷ್ಟವಾಗುತ್ತದೆ.

ಹಿಂದಿನ ಕಾಲದಲ್ಲಿ ರೈತ ತನ್ನ ಹೊಲದಲ್ಲಿ ಎಲ್ಲಾ ಧಾನ್ಯಗಳನ್ನು ರಾಶಿ ಮಾಡುವ ಸಂದರ್ಭದಲ್ಲಿ, ಕೆಲಸದ ಬೇಜಾರು ಕಳೆಯಲು ತಮ್ಮದೇ ಆದ ಧಾಟಿಯಲ್ಲಿ, ಮುಂಜಾನೆಯ ಸಮಯದಲ್ಲಿ ಎತ್ತುಗಳಿಂದ ಧಾನ್ಯಗಳ ತೆನೆಗಳನ್ನು ತುಳಿಸಿ ರಾಶಿ ಮಾಡುವ ಸಂದರ್ಭದಲ್ಲಿ ಹಾಡುಗಳನ್ನು ಹೇಳುತ್ತಿದ್ದ. ಆ ಹಾಡುಗಳನ್ನೇ ನಾವು ಹಂತಿಪದ ಎಂದು ಕರೆಯುತ್ತೇವೆ.

**ಉದಾಹರಣೆ :**

ಹಂತಿ ಹೊಡೆಯುತ, ಎಂತವನ ನೆನಿಬೇಕು
ದಂತಪಿತನಾದ ಗಣಪನ। ದಂತಪಿತನಾದ ಗಣಪನ
ನೆನೆದರೆ ತಪ್ಪತ್ತಿನ ಹಂತಿ ತುಳದಾವ್ರೊ॥[೧೧]...

ರೈತ ತನ್ನ ಕೆಲಸ ಕಾರ್ಯಗಳಲ್ಲಿ ಯಾವುದೇ ರೀತಿಯ ವಿಘ್ನ ಬರಬಾರದೆಂದು, ವಿಘ್ನವಿನಾಶಕನಾದ ಗಣಪನನ್ನು ಸ್ಮರಿಸುವ ಮೂಲಕ ತನ್ನ ಕೆಲಸವನ್ನು ಪ್ರಾರಂಭಿಸುವ ಒಂದು ಪರಿಪಾಠ ರೈತನದಾಗಿತ್ತು ಎಂಬುದು ಈ ಪದ್ಯಭಾಗದಿಂದ ತಿಳಿದು ಬರುತ್ತದೆ.

ಹಂತಿಯ ಹೊಡೆದೆತ್ತು, ಹಂತೇಲಿ ಬಂದಾಗ
ಸುಮಕ ಜಾಡಿಸಿದ ಸೆರಗಿಲೆ। ಕಂದನಿಗೆ
ಹಂತಿಯ ಎತ್ತು ಹದಿನೆಂಟು॥[೧೨]...

ರೈತನ ತಾಯಿ ತನ್ನ ಮಗನ ಸಂಪತ್ತನ್ನು ನೋಡಿ ತುಂಬಾ ಆನಂದ ಪಡುವಳು. ತನ್ನ ಮಗನು ಈ ರೀತಿಯಾಗಿ ಬೆಳೆಯನ್ನು ತೆಗೆದ ಎಂಬ ತೃಪ್ತಿ ತಾಯಿಯದು. ಮಗನ ಏಳಿಗೆಯನ್ನೇ ತಾಯಿ ಯಾವಾಗಲು ಬಯಸುತ್ತಾಳೆ.

ಇಂದು ಆಧುನಿಕ ಪ್ರಭಾವಕ್ಕೆ ಒಳಗಾದ ರೈತ, ತನ್ನ ಕಾಯಕದ ರೀತಿ–ನೀತಿಯಲ್ಲೂ ಹಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾನೆ. ಮೊದಲು ಎತ್ತನ್ನು ಬಸವಣ್ಣನೆಂದು ಅದರ ಮೂಲಕ ಹೊಲದ ಕೆಲಸ ಮಾಡುತಿದ್ದ. ಇಂದು ಎತ್ತುಗಳ ಬದಲಿಗೆ ಟ್ರಾಕ್ಟರ್ ಬಂದಿವೆ. ರೈತ ಅಂದು ಹಾಡನ್ನು ಹಾಡುತ್ತಿದ್ದ. ಇಂದು ಮೌಖಿಕದ ಬದಲಾಗಿ ನವಮೌಖಿಕ ಹಾಡುಗಳನ್ನು ಆಧುನಿಕ ಮಾಧ್ಯಮಗಳ ಮೂಲಕ ಕೇಳುತ್ತಾ ತನ್ನ ಹೊಲದ ಕೆಲಸಗಳನ್ನು ಮಾಡುತ್ತಿದ್ದಾನೆ.

**ಹೋಳಿ ಹಾಡು**

ನಮ್ಮ ಸಂಸ್ಕೃತಿಯಲ್ಲಿ ಆಚರಿಸುವ ಹಬ್ಬಗಳಲ್ಲಿ ಹೋಳಿ ಹಬ್ಬವು ಒಂದಾಗಿದೆ. ಇದಕ್ಕೆ ಕಾಮನ ಹಬ್ಬವೆಂತಲೂ ಕರೆಯುತ್ತಾರೆ. ನಮ್ಮ ಹೆಣ್ಣು ಮಕ್ಕಳಿಗಾಗಿ ಹಲವಾರು ಹಬ್ಬಗಳಿವೆ. ಆದರೆ ಗಂಡು ಮಕ್ಕಳಿಗೆ ಯಾವುದೇ ಹಬ್ಬ ಇಲ್ಲದ ಕಾರಣ ಅವರು ದೇವರ

ಮುಂದೆ ಹೇಳಿಕೊಂಡಾಗ, ಆಗ ದೇವರು ವರ್ಷದಲ್ಲಿ ಒಂದು ಸಲವಾದರೂ ಗಂಡು ಮಕ್ಕಳು ಸಂತೋಷದಿಂದ ಈ ಪ್ರಪಂಚವನ್ನೇ ಮರೆಯುವಂತೆ, ಪುರಾತನ ಕಥೆಗಳಲ್ಲಿ ಇದರ ಉಲ್ಲೇಖನವನ್ನು ಮಾಡಿದ್ದಾರೆ. ಅಂದಿನಿಂದ ಹೋಳಿ ಹಬ್ಬವನ್ನು ಆಚರಿಸುವ ಒಂದು ಸಂಪ್ರದಾಯ ಬೆಳೆದು ಬಂದಿದೆ. ಕೆಲವೊಂದು ಹಳ್ಳಿಯ ಕಡೆಗೆ ಹೆಣ್ಣು ಮಕ್ಕಳು ಕೂಡ ಈ ಹಬ್ಬದಲ್ಲಿ ಭಾಗವಹಿಸಿ ಸಂತೋಷ ಪಡುತ್ತಾರೆ. ವಸಂತ ಕಾಲದ ಪ್ರಾರಂಭದಲ್ಲಿ ಬರುವ ಈ ಹೋಳಿ ಹಬ್ಬವು ಕಾಮನನ್ನು ದಹಿಸುವ ಹಾಗೂ ಹಲಿಗೆಯನ್ನು ಬಡೆದುಕೊಂಡು ಮೈಗೆ ಬಣ್ಣವನ್ನು ಹಚ್ಚಿಕೊಂಡು ಸಂಭ್ರಮಿಸುವುದಾಗಿದೆ. ಈ ಹಬ್ಬದಲ್ಲಿ ಮುದುಕರು ಸಹ ನವ ತರುಣರಂತೆ ಬಹಳ ಹರುಷದಿಂದ ಭಾಗವಹಿಸಿ ಸಂಭ್ರಮಿಸುತ್ತಾರೆ. ಈ ಸಂದರ್ಭದಲ್ಲಿ ಹಾಡಿರುವ ಹಾಡುಗಳನ್ನು ಹೋಳಿ ಹಾಡುಗಳೆಂದು ಕರೆಯುತ್ತಾರೆ.

**ಉದಾಹರಣೆ :**

ಅಳುವ ಬಾಲಿಯ ಕಂಡು, ಕಳಕಳವೊ ಸಭದಾಗೊ
ಅಳಬ್ಯಾಡ ರತಿಯೆ ಮನಿಸೊಸಿಯೇ। ಕಾಮಣ್ಣ
ಮನದಾಗ ಮೂಡಿ ಬರತಾನ॥
ಹೊರಳಾಡಿ ಅಳಬ್ಯಾಡ, ಎರವಾದ ಕಿಚ್ಚೀಗಿ
...........................................................
...........................................................
ಮಳಲ ಬಿಂದಿಗಿ ಕರಗಿ, ಸುಳಿದು ಸಿಂಬಿಯ ಹಾವು
ಜಳತಾಕಿ ಕಾಮ ಸುಡುತಿರಲು। ಎಳದೇರು
ಅಳು ಅಳುಕಿ ಕಳಚಿ ಕೈಬಿಟ್ಟ॥[೧೩]...

ಈ ಬೆಡಗಿನ ಹಾಡಿನಲ್ಲಿ ಹರೆಯದ ಹುಡುಗಿಯರ ಕಾಮವು ತುಂಬಿದ ಮಳಲ ಬಿಂದಿಗೆಯಾಗಿದೆ. ಹಾದಿಯನ್ನು ತುಳಿದು ಬರುವಾಗ ಕಾಮದಹನದ ಜಳ ತಾಕಲು ಜುಳಕ ಹಾವಿಗೆ ಸಿಂಬಿ ಸುಳಿದು, ಮಳಲ ಬಿಂದಿಗೆಯೇ ಕರಗಲು ಎಳದೆಯರ ತುಂಬಿದ ಕಾಯಕೊಡವು, ಕಾಮ ಸುಳಿದಾಡಿ ಕಳಚದಿರುವುದೇ? ಇಂತಹ ಕಾಮನ ಸ್ಮಾರಕವೇ ಇಂದು ಹೋಳಿಯಾಗಿದೆ. ಇಂದಿಗೂ ಸಂಪ್ರದಾಯವಾಗಿ ಉಳಿದು ಬಂದಿದೆ. ಇನ್ನೊಂದೆಡೆ ರೈತನ ಸಂದೇಶ ನೋಡುವುದಾದರೆ.

ಹೋಳಿಯಾಡದ ನಾಡು, ನಾಳೆನದೆ ಕಾಡಾತೊ
ಗೋಳಾತೋ ಜನಕ ಮೂಲಾತೊ। ಮಳೆ ಹೋಗಿ
ಹಾಳಾತೊ ಪಿಡುಗೆದ್ದು ದಿನ ದಿನಕೊ॥[೧೪]...

ಹೀಗೆ ರೈತನೊಬ್ಬ ಹಳ್ಳಿಯಲ್ಲಿ ದೃಢವಾದ ನಂಬಿಕೆ ಇಟ್ಟು ಹಾಡಿದ್ದಾನೆ. ಈ ಪದ್ಯಭಾಗವೂ ಹೋಳಿ ಹಬ್ಬದ ಭವ್ಯ ಸಂದೇಶವಾಗಿದೆ. ಹೋಳಿ ಹಬ್ಬವನ್ನು ಆಚರಿಸಿ ಖುಷಿಪಡುವ ಜನರನ್ನು ನಾವು ಇಂದಿಗೂ ಹಳ್ಳಿಗಳಲ್ಲಿ ಕಾಣುತ್ತೇವೆ.

ಹೋಳಿ ಹುಣಿವ್ಯಾಗ ಬಣ್ಣಾ ಹಚ್ಚಾಕ ಬಂದಿಂದಿ ನೀ ಆಗ
ಗಲ್ಲಾಮುಟ್ಟಿ ಹೋಗಿದಿ ನೀ ಆಗ...
ಈ ವರ್ಷ ಯಾರ ಕೈಲಿ ಬಣ್ಣ ಹಚ್ಚಿಕೊಳಲಿ
ನನ್ನ ದೋಸ್ತ್‌ಗ ಹೇಳಿ ಎಲ್ಲ ಸುದ್ದಿನ ಮರತೆನ[೧೫]...

ಹೀಗೆ ಇಂದಿನ ಕಾಲದ ಹೋಳಿ ಹಾಡುಗಳನ್ನು ಗಂಡು–ಹೆಣ್ಣಿನ ಪ್ರೇಮದ ಹಿನ್ನಲೆಯಲ್ಲಿ ರಚನೆಗೊಂಡಿರುವುದನ್ನು ಕಾಣುತ್ತೇವೆ. ಅಲ್ಲದೇ ಇಂದು ಹಬ್ಬದ ಆಚರಣೆ ಹಾಗೂ ಸಂತೋಷವನ್ನು ಆಧುನಿಕ ಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯುಟ್ಯೂಬ್, ಇಂಟರ್‌ನೆಟ್‌ಗಳಲ್ಲಿ ನೋಡಿ ಖುಷಿಪಡುವ ವರ್ಗಗಳು ಸೃಷ್ಟಿಯಾಗಿವೆ.

**ಬೀಸುವ ಹಾಡು**

ಕೆಲಸದ ಹಾಡುಗಳ ಬಳಕೆ ಜನಪದರಲ್ಲಿ ಹಿಂದಿನಿಂದಲೂ ಬೆಳೆದು ಬಂದಿದೆ. ಆಯಾ ಕೆಲಸಕ್ಕನುಗುಣವಾಗಿ ಹಾಡುವ ಗೀತೆಗಳಿಗೆ ಆಯಾ ಕೆಲಸದ ಹೆಸರನ್ನೇ ಕೊಟ್ಟಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ರಾಗಿಬೀಸುವ ಸಮಯದಲ್ಲಿ ಹಾಡಿದ ಪದಗಳನ್ನು ರಾಗಿಬೀಸುವ ಪದಗಳೆಂದು ಕರೆಯುತ್ತಾರೆ. ಕೆಲಸದ ಒಂದು ಬ್ಯಾಸರಕೆಯನ್ನು ಕಳೆದುಕೊಳ್ಳಲು ಹುಟ್ಟಿಕೊಂಡ ಹಾಡುಗಳೆ ಜನಪದ ಗೀತೆಗಳಾಗಿವೆ. ಈ ಗೀತೆಗಳಲ್ಲಿ ಬೀಸುವ ಪದಗಳು ಒಂದು. ಹೆಣ್ಣು ಮಕ್ಕಳು ಮನೆಯಲ್ಲಿ ಬೀಸುವ ಕಲ್ಲಿನಲ್ಲಿ ಧಾನ್ಯಗಳನ್ನು ಹಾಕಿ ಬೀಸುತ್ತಿದ್ದರು. ಆ ಸಂದರ್ಭದಲ್ಲಿ ಪದಗಳನ್ನು ಕಟ್ಟಿ ಹಾಡುತ್ತಿದ್ದರು. ಆ ಹಾಡುಗಳನ್ನೇ ನಾವು ಬೀಸುವ ಹಾಡು ಎಂದು ಕರೆಯುತ್ತೇವೆ.

ಬೀಸುಕಲ್ಲಿಗಿ ಶರಣ, ಗೋಧಿ ಮುಕ್ಕಿಗಿ ಶರಣ
ಆಗು ಮಿಕ್ಕಿಗಿ ಶಿವಶರಣ ಬೀಸಾಕ ಕುಂತಿನಿ
ಚಂದಾನ ಬದುಕಲ್ಲ ಬಂಗಾರ ಬಿಳಿಜೋಳ
ತಾಸ ಹೊತ್ತಿನಾಗ ತರವಿನ ಬೀಸಾಕ ಕುಂತಿನಿ.[೧೬]...

ಯಾವುದೇ ಕೆಲಸ ಮಾಡಿದರು ಶ್ರದ್ಧೆ ಇರಬೇಕು ಎಂಬಂತೆ ಹೆಣ್ಣು ಮಗಳು ತಾನು ಬೀಸುಕಲ್ಲಿಗೆ, ಧಾನ್ಯಕ್ಕೆ ಶರಣು ಎಂದು ಹೇಳಿ ಬೀಸಲು ಪ್ರಾರಂಭಿಸುವಳು. ತಾನು ಬೀಸುವ ಕಾಳುಗಳು ಸರಿಯಾದ ರೀತಿಯಲ್ಲಿ ಬೀಸಲಿ ಎಂಬ ಆಶಯ ಈ ಪದ್ಯಭಾಗದಲ್ಲಿ ಮೂಡಿಬಂದಿದೆ.

ಆಕಳ ಹೆಂಡಿ ತಂದ ಅರಮನಿ ಸಾರಿಸಿ
ಗೋಪಿ ತಾಯಿಗಿ ತರಿ ಹೊಡೆದ ಬಿಸಾಕ ಕುಂತಿನಿ

ಆಕಳ ಹೊಟ್ಟಿಲಿ ಹುಟ್ಯಾನ್ರಿ ಬಸವಣ್ಣ
ತರಿಹೊಡೆದ ನೀರ ಕುಡಿಸಿ ಬಿಸಾಕ ಕುಂತಿನಿ.[೧೭]...

ನಮ್ಮ ಸಂಸ್ಕೃತಿ, ಆಚಾರ–ವಿಚಾರ, ಮನೆಯನ್ನು ಸ್ವಚ್ಛಂದವಾಗಿ ಇಡುವುದು ಹೆಣ್ಣು ಮಕ್ಕಳ ಜವಾಬ್ದಾರಿ. ಅದರಂತೆ ಹೆಣ್ಣು ಮಗಳು ಹಾಡುವ ಹಾಡುಗಳೆಲ್ಲವೂ ಅವಳು ಮಾಡುವ ಕೆಲಸದ ಪ್ರತೀಕವೇ ಆಗಿರುತ್ತವೆ.

ಇಂದು ಬೀಸುಕಲ್ಲಿನ ಬದಲಾಗಿ ಆಧುನಿಕ ಯಂತ್ರಗಳು ಬಂದಿರುವ ಕಾರಣ ಬೀಸುವ ಕೆಲಸವೇ ಹೆಣ್ಣು ಮಕ್ಕಳಿಗೆ ತಪ್ಪಿಹೋಗಿದೆ. ಇನ್ನೂ ಹಾಡುವ ವಿಷಯಕ್ಕೆ ಬಂದರೆ ಹಾಡುಗಳನ್ನು ಇಂಟರ್‌ನೆಟ್‌ಗಳಲ್ಲಿ ಮಾತ್ರ ನೋಡಬಹುದಾದ ಸ್ಥಿತಿಗೆ ಬಂದು ನಿಂತಿದೆ. ಆದರೂ ಸಹ ಮೌಖಿಕ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕೆಲಸವನ್ನು ಇಂದು ಆಧುನಿಕ ಮಾಧ್ಯಮಗಳು ಮಾಡುತ್ತಿವೆ.

**ಸುಗ್ಗಿಯ ಹಾಡು**

ಜನಪದ ಗೀತೆಗಳಲ್ಲಿ ಸುಗ್ಗಿಯ ಹಾಡುಗಳು ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿವೆ. ಏಕೆಂದರೆ ಈ ಹಾಡುಗಳು ಸಂಬಂಧಿಸಿದ್ದು ರೈತನಿಗೆ, ರೈತ ಸುಗ್ಗಿಯ ಸಮಯದಲ್ಲಿ ಹಾಡುವ ಹಾಡುಗಳೇ ಸುಗ್ಗಿಯ ಹಾಡುಗಳು. ತನ್ನ ಆಯಾಸವನ್ನು ಕಳೆದುಕೊಳ್ಳಲು, ಸುಗ್ಗಿಯ ಸಂತೋಷವನ್ನು ಹಂಚಿಕೊಳ್ಳಲು ಈ ಸುಗ್ಗಿಯ ಹಾಡುಗಳು ಹುಟ್ಟಿಕೊಂಡಿವೆ.

ಸುಗ್ಗಿಯು ಬಂದಿತು ಹಿಗ್ಗನು ತಂದಿತು
ನಮ್ಮಯ ನಾಡಿನ ಜನಕೆಲ್ಲ
ಸಗ್ಗದ ಸುಖವನು ನೀಡುತ ರೈತಗೆ
ದುಡಿಯಲು ಹಚ್ಚುತ ದಿನವೆಲ್ಲ ॥
ಬೆಳಸಿಯ ತಿನ್ನುತ ಮಜ್ಜಿಗೆ ಕುಡಿಯುತ
ಇರುವರು ರೈತರು ಹೊಲದಲ್ಲಿ
ಕಣವನು ಕಡಿಯುತ ನೀರನು ಹೊಡೆಯುತ
ಮೇಟಿಯ ಕುಣಿಯನು ಅಗೆಯುವರು ॥
ತೆನೆಯನು ಮುರಿಯುತ ಹೆಸರನು ಹೇಳುತ
ಗುಂಪಿಯ ಎಳೆಯುತ ಒಗೆಯುವರು
ಹಂತಿಯ ಹೊಡೆಯುತ ಕಂತಿಯ ತೆಗೆಯುತ
ಬೆಳಗಿನವರೆಗೂ ಹಾಡುವರು
ಕಾಳನು ತೂರುತ ಗಾಡಿಯ ಹೇರುತ
ಊರಿನ ಕಡೆಗೆ ಓಡುವರು[೧೮]...

ವಿಜಯಪುರ ಜಿಲ್ಲೆಯ ಸಾರವಾಡ ಗ್ರಾಮದವರಾದ ದ.ರಾ. ಬಳುರಗಿ ಅವರು ರೈತನ ಸುಗ್ಗಿಯ ಕುರಿತು ಸುಂದರವಾಗಿ ತಮ್ಮ ಪದಗಳನ್ನು ಕಟ್ಟಿ ಹಾಡಿನ ಮೂಲಕ ವರ್ಣಿಸಿದ್ದಾರೆ. ರೈತನಿಗೆ ಸುಗ್ಗಿ ಬಂತೆಂದರೆ ಬಿಡುವಿಲ್ಲದ ಕೆಲಸ. ಆತ ಒಂದು ರೀತಿಯ ಹಬ್ಬದ ಆಚರಣೆಯಂತೆ ಸಂತೋಷ ಪಡುತ್ತಾನೆ. ವರ್ಷದ ಬೆಳೆ ಬರುವುದರಿಂದ ರೈತನ ಕಷ್ಟಗಳೆಲ್ಲ ದೂರಾಗಿ, ಆರ್ಥಿಕವಾಗಿ ಬಲಿಷ್ಠನಾಗುತ್ತಾನೆ. ತನ್ನ ಪರಿಶ್ರಮಕ್ಕೆ ತಕ್ಕ ಫಲಸಿಕ್ಕಿತೆಂದು ಸಂತೋಷ ಪಡುತ್ತಾನೆ. ರೈತನ ಸಂತೋಷದಲ್ಲಿ ನಾಡಿನ ಸಂತೋಷವೂ ಅಡಗಿದೆ.

ಇಂದು ಸುಗ್ಗಿ ಮಾಡುವ ರೈತ ಹಿಂದಿನ ಪದ್ಧತಿಗಳನ್ನೇ ಮುಂದುವರಸದೆ ಆಧುನಿಕತೆಗೆ ಕಾಲಿಟ್ಟಿದ್ದಾನೆ. ಹಲವು ಬದಲಾವಣೆಗಳು ಕೂಡ ಆಗಿವೆ. ಅದೇ ರೀತಿ ಹಾಡುಗಳನ್ನು ಹಾಡುವ, ಕೇಳುವ ಸ್ಥಿತಿಯು ಬದಲಾಗಿದೆ. ಕಾಲ ಬದಲಾಗಿರುವುದರ ಜೊತೆಜೊತೆಗೆ ರೈತನು ಬದಲಾಗಿದ್ದಾನೆ. ಆತ ಮಾಡುವ ಕಾಯಕವೂ ಸಹ ತಕ್ಕ ಮಟ್ಟಿಗೆ ಬದಲಾಗಿದೆ. ಇಂದು ನಾವು ಸುಗ್ಗಿ ಹಾಡನ್ನು ಕೇಳಬೇಕಾದರೆ ಆಧುನಿಕ ಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯುಟ್ಯೂಬ್, ಅಂತರ್ಜಾಲ ಇತ್ಯಾದಿಗಳ ಮೊರೆ ಹೋಗಬೇಕಿದೆ.

**ಕೋಲಾಟದ ಹಾಡುಗಳು**

ಜನಪದ ಸಾಹಿತ್ಯದಲ್ಲಿ ಕುಣಿತದ ಹಾಡುಗಳ ಪ್ರಕಾರಕ್ಕೆ ಸೇರಿದ ಕೋಲಾಟವು ಒಂದು ತನ್ನದೇ ಆದ ವಿಶೇಷತೆಯಿಂದ ಕೂಡಿದೆ. ಕೋಲಾಟ ಒಂದು ಗಂಡು ಕಲೆಯಾಗಿದ್ದು, ಹಾಡು ಮತ್ತು ಕುಣಿತ ಎರಡು ಬೆರೆತಿರುವ ಕಲೆಯಾಗಿದೆ. ಕೋಲಾಟವನ್ನು ಹೆಣ್ಣು ಮಕ್ಕಳು ಆಡುತ್ತಾರೆ. ಆದರೆ ಅದು ಅಪರೂಪದಾಗಿರುವುದರಿಂದಲೇ ಈ ಕೋಲಾಟ ಗಂಡು ಮಕ್ಕಳ ಕಲೆಯಾಗಿದೆ. ಇತಿಹಾಸ ನೋಡಿದಾಗ ಗೋಕುಲದಲ್ಲಿ ಶ್ರೀಕೃಷ್ಣನ ಜನನವಾದಾಗ ಯಾದವರು ಕೋಲಾಟವಾಡುವ ಮೂಲಕ ತಮ್ಮಲ್ಲಿರುವ ಸಂತೋಷವನ್ನು ವ್ಯಕ್ತಪಡಿಸಿದರಂತೆ. ಗೋಪಿಕಾ ಸ್ತ್ರೀಯರು ಶ್ರೀಕೃಷ್ಣನೊಂದಿಗೆ ಬಣ್ಣದ ಕೋಲುಗಳನ್ನು ಅಂದು ಬಳಸಿ ಆಟವಾಡಿದ್ದರು ಎಂಬುದು ಕೋಲಾಟದ ಪ್ರಾಚೀನತೆಯನ್ನು ತಿಳಿಸುತ್ತದೆ.

ಹಬ್ಬ ಹರಿದಿನಗಳಲ್ಲಿ, ವಿಶೇಷ ಸಮಾರಂಭಗಳಂದು, ಉತ್ಸವಗಳಂದು, ಇತರೆ ಕಾರ್ಯಕ್ರಮಗಳಲ್ಲಿ ಕೋಲಾಟಗಳನ್ನು ಆಡುತ್ತಾರೆ. ಕೋಲಾಟ ಆಡಬೇಕಾದರೆ ಕನಿಷ್ಠ ಎಂಟು ಜನ, ಗರಿಷ್ಠ ಇಪ್ಪತ್ನಾಲ್ಕು ಜನರು ಇರಬೇಕು. ಎರಡು ಕೈಯಲ್ಲಿ ಒಂದೊಂದು ಕೋಲನ್ನು ಹಿಡಿದುಕೊಂಡು, ಕೋಲುಗಳನ್ನು ಬಡೆಯುತ್ತಾ ಹಾಡುತ್ತಿದ್ದರೆ ನೋಡುಗರಿಗೆ ಅತೀವ ಸಂತೋಷದ ಜೊತೆಗೆ ಕಿವಿ ಮತ್ತು ಮನಸ್ಸಿಗೆ ಆಹ್ಲಾದ ನೀಡುತ್ತದೆ. ಕೋಲಾಟದಲ್ಲಿ ಪ್ರಾಸ, ಚರಣ, ಪಲ್ಲವಿ ಎಲ್ಲವೂ ಮುಖ್ಯವಾಗಿರುತ್ತವೆ. ಅಲ್ಲದೇ ಕೋಲಾಟದಲ್ಲಿಯೂ ಸಹ ಸಾಲು ಕೋಲು, ಬಿಚ್ಚು ಕೋಲು, ಒನಿಕೆ ಆಟ, ಚಕ್ರದಾಟ, ಗೀಜಗನ ಕೋಲು ಇತ್ಯಾದಿ ಹಲವು ಪ್ರಕಾರಗಳನ್ನು ಕಾಣುತ್ತೇವೆ.

**ಉದಾಹರಣೆ :**

ಕೋಲು ಕೋಲಣ್ಣ ಕೋಲೆ
ಕೋಲು ಕೋಲಣ್ಣ ಕೋಲೆ ॥
ಮಲ್ಲಯ್ಯನಿರುವುದು ಇಲ್ಲಿಗೆ ಗಾವುದ
ಮಲ್ಲಯ್ಯ ಮಡದಿ ಮರಗಮ್ಮ ಇರುವುದು
ಕಲ್ಲು ಮಾಳಿಗೆ ಕೈಲಾಸ ॥
ಮಲ್ಲಯ್ಯ ಶಿವನೀ ವೆಲ್ಲಿಗಬಿಟ್ರೆ
ಮಲ್ಲೀಗೆ ಬೆಳೆಗೋ ಮತಿಘಟ್ಟನೆ ರಾಮಂದ್ರೆ
ಬೆಳಗಾಗಿ ಬಿಟ್ಟು ಪರುಸೆಯ ॥
ಒಕ್ಕಾಲ ಉರುಗೆಜ್ಜೆ ಒಕ್ಕಾಲ ಕಿರುಗೆಜ್ಜೆ
ಚೊಕ್ಕಾ ಬೆಳ್ಳಿ ಮಕರಂಭ
ಚೊಕ್ಕಾ ಬೆಳ್ಳೀಲಿ ಮಕರಂಭ ಕೀಲಕುದುರೆ
ಒಕ್ಕಾವು ಮಾರ್ನೋಮಿ ಪೌಜೀಗೆ ॥
ಆನೆ ಶೃಂಗಾರವಾಗಿ ಅಂಗಳಾದ ಗೈದಾವೆ
ಜಾಣ ತಾನೇಕೆ ಒರಟಾನೆ
ಜಾಣ ತಾನೇಕೆ ಒರಟಾನೆ ಲೋ ನಿನ್ನ
ಡೊಲು ಲಾಲಿಲಿ ಕರೆದಾವೆ ॥.[೧೯]

ಹೀಗೆ ಕೋಲಾಟ ಆಡುತ್ತಾ ಕೋಲಾಟ ತಂಡದವರು ಪದಗಳನ್ನು ಒಂದೊಂದಾಗಿ ಹೇಳುತ್ತಾ ಎದುರು ಇರುವ ಇನ್ನೊಂದು ತಂಡದವರು, ಆ ಹಾಡಿನ ಮುಂದಿನ ಭಾಗವನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ಒಂದು ವಿಷಯವನ್ನು ತೆಗೆದುಕೊಂಡು ಅದಕ್ಕೆ ಪೂರಕವಾದ ಮಾಹಿತಿಗಳನ್ನು ತಮ್ಮದೇ ಆದ ಶೈಲಿಯಲ್ಲಿ ಸೇರಿಸಿಕೊಂಡು ಕೋಲಾಟದ ಪದಗಳನ್ನು ರಚನೆ ಮಾಡುತ್ತಾರೆ. ಹಾಡಿನ ಜೊತೆಗೆ ಕೋಲುಗಳ ಶಬ್ದ ಸೇರಿದಾಗ ಹಾಲು ಮತ್ತು ಸಕ್ಕರೆ ಸೇರಿ ಹಾಲುಸಕ್ಕರೆ ಆಗುವಂತೆ ಕೋಲಾಟದ ಪದಗಳು ಒಂದು ವಿಶಿಷ್ಟವಾದ ಕ್ರಮದಲ್ಲಿ ರಚನೆಗೊಂಡಿವೆ. ವಿಷಯದ ವಿಶ್ಲೇಷಣೆಗಳನ್ನು ಸಹ ಈ ಹಾಡುಗಳ ಮೂಲಕ ನಾವು ತಿಳಿದುಕೊಳ್ಳುತ್ತೇವೆ. ಹಾಡುಗಳಲ್ಲಿ ತಾಳ, ಲಯ, ಧಾಟಿಯಲ್ಲಿ ಅನುಕ್ರಮವಾಗಿ ಬಳಕೆಗೊಂಡಿರುವುದನ್ನು ಕಾಣುತ್ತೇವೆ.

ಕೋಲಾಟದಲ್ಲಿ ಪುರಾಣ, ಇತಿಹಾಸ, ಸಾಮಾಜಿಕ ವಿಡಂಬನೆ, ಆಧ್ಯಾತ್ಮಿಕ ಪದಗಳನ್ನು, ಕುಟುಂಬ ಕಲ್ಯಾಣದ ಕುರಿತು ಹಾಗೂ ಗಂಡು–ಹೆಣ್ಣಿನ ಪ್ರೇಮ ನಿವೇದನೆ ಕುರಿತು ಜೊತೆಗೆ ಸಾಕ್ಷರತೆಗೆ ಸಂಬಂಧಿಸಿದ ಹಲವಾರು ವಿಷಯ ಮಾಹಿತಿಯ ಕುರಿತಾಗಿ ಹಾಡುಗಳನ್ನು ಹಾಡುತ್ತಾರೆ.

ಇಂದು ಕೋಲಾಟದ ಆಟಗಳು ಕಾರ್ಯಕ್ರಮಗಳಲ್ಲಿ ನಡೆಯುತ್ತಿದ್ದರೂ ಹಿಂದಿನ ಕಾಲದ ಪರಿಣಾಮ ಬೀರುವುದಿಲ್ಲ. ಕಾರಣ ಆಧುನಿಕ ಮಾಧ್ಯಮಗಳ ಮೂಲಕ ಹಾಡುಗಳನ್ನು ಹಾಡಿಸುವ, ಇಲ್ಲವೇ ದೃಶ್ಯಚಿತ್ರಣಗಳನ್ನು ಪರದೆಯ ಮೇಲೆ ತೋರಿಸುವ ಒಂದು ಹೊಸವಾಡಿಕೆಯಂತೆ ಸಂಪ್ರದಾಯಗಳು ಬೆಳೆದು ಬರುತ್ತಿವೆ. ಅದಕ್ಕೆ ಹೇಳುತ್ತಾರೆ ಕಾಲ ಬದಲಾದಂತೆ ನಾವು ಬದಲಾಗಬೇಕು, ಸಾಹಿತ್ಯವು ಬದಲಾಗುತ್ತದೆ. ಇಂದು ಆಧುನಿಕತೆ ನಮ್ಮೆಲ್ಲ ಜೀವನ ಶೈಲಿಯನ್ನು ಬದಲಿಸಿದೆ.

**ಮೊಹರಂ ಪದಗಳು**

ಜನಪದ ಗೀತೆಗಳಲ್ಲಿ ಮೊಹರಂ ಪದಗಳು ಒಂದು. ಹತ್ತು ದಿನಗಳ ಕಾಲ ನಡೆಯುವ ಮೊಹರಂ ಹಬ್ಬ ಮೂಲ ಕರ್ಬಲಾದ ಘಟನೆಗಳ ಸಾಂಕೇತಿಕ ರೂಪವಾಗಿದೆ. ಹಿಂದೂ ಮುಸ್ಲಿಂರು ಒಂದಾಗಿ ಭಾವೈಕ್ಯತೆಯಿಂದ ಮೊಹರಂ ಆಚರಣೆ ಮಾಡುವುದು ಇಂದಿಗೂ ನಡೆದುಕೊಂಡು ಬರುತ್ತಿರುವುದನ್ನು ನಾವು ಕಾಣುತ್ತೇವೆ.

ಮೊದಲಿಗಿ ನೆನೆದಿನೋ
ಅಲ್ಲಾನ ನಾಮಾ
ಪ್ರಾಥಮಿಕ ನೆನವೆನೋ ಶಿವನ ಧ್ಯಾನಾ
ಬಂತೋ ಮೋರಮ ರಾಜೇಕ ಪ್ರೇಮಾ
ಹಸನ ಹುಸೇನಿ ನಾಮಾ
ಆತೋ ಪಾವನಾ[೨೦]...

ಮೊಹರಂ ಪದಗಳನ್ನು ರಿವಾಯತ ಪದಗಳೆಂದು ಸಹ ಕರೆಯುತ್ತಾರೆ. ಈ ಪದಗಳನ್ನು ಹಾಡುವವರು ಮೊದಲು ಯಾರನ್ನು ನೆನೆಯಬೇಕು ಎಂಬುದನ್ನು ಸಹ ತಮ್ಮ ಹಾಡುಗಳ ಮುಖಾಂತರ ಹೇಳುತ್ತಾರೆ.

ಬಂದೀರಿ ಕರ್ಬಲದೊಳಗ
ನೀವು ಎಲ್ಲಾರು ಕೂಡಿ
ಬೆಳತನಕಾ ಆಗಿ ಹೋಗಲೋ
ಪದಕ ಪದಾ ಜೋಡಿ
ಅಲಾಯಿ ತಗೀತೀರಿ
ಬೆಂಕಿ ಹಾಕತೀರಿ ಏನ ಕಾರಣಾ
ಅಲಾಯಿ ಮುಚ್ಚತೀರಿ
ಟೊಂಗಿ ಹಚ್ಚತೀರಿ ಏನ ನಿಮ್ಮ ಕೂನಾ[೨೧]...

ಹೀಗೆ ಹಲವಾರು ಸವಾಲು ಪದಗಳನ್ನು ಇಂದಿಗೂ ನಾವು ಕಾಣುತ್ತೇವೆ. ಮೊಹರಂ ಸಂದರ್ಭದಲ್ಲಿ ಎದುರಾಳಿ ತಂಡಗಳು ಸವಾಲು ಜವಾಬು ರೀತಿಯ ಹಾಡುಗಳು, ಜನಪ್ರಿಯತೆಯನ್ನು ಪಡೆದುಕೊಂಡಿರುವುದು ಗಮನಾರ್ಹ ಸಂಗತಿ.

ಇಂದು ಆಧುನಿಕ ಮಾಧ್ಯಮಗಳಾದ ಇಂಟರ್‌ನೆಟ್, ಯುಟ್ಯೂಬ್, ಸಿಡಿಗಳಲ್ಲಿ ಇಂತಹ ಹಾಡುಗಳು ಶ್ರವ್ಯ ಮತ್ತು ದೃಶ್ಯಮಾಧ್ಯಮಗಳ ಮೂಲಕ ಮೂಡಿ ಬರುತ್ತಿರುವುದನ್ನು ಇಂದು ಕಾಣುತ್ತೇವೆ.

**ಡೊಳ್ಳಿನ ಪದಗಳು**

ಡೊಳ್ಳಿನ ಪದಗಳು ಎಂಬುದು ಡೊಳ್ಳನ್ನು ಬಾರಿಸಿಕೊಂಡು ಹಾಡುವ ಜನಪದ ಸಂಗೀತ ಮಾಧ್ಯಮವಾಗಿದೆ. ಡೊಳ್ಳ ಮೇಳ ಎಂಬುದು ಬರೀ 'ಹವ್ಯಾಸ' ಅಥವಾ 'ವೃತ್ತಿ' ಮಾರ್ಗದಲ್ಲಿ ಮಾಡಿರದೇ ಬದಲಾಗಿ ಅದೊಂದು ರಕ್ತಗತವಾಗಿ ಬಂದ ನಿರಂತರ ಪ್ರಕ್ರಿಯೆಯಾಗಿದೆ. ತಮಗೆ ಬೇಕಾದಾಗ ಬಿಡುವೆನಿಸಿದಾಗಲೆಲ್ಲ ಹಾಡುವ, ಸೇವೆ ಮಾಡುವ ಪ್ರವೃತ್ತಿಯನ್ನು ಇಲ್ಲಿ ಕಾಣುತ್ತೇವೆ.

ಡೊಳ್ಳಿನ ಪದಗಳನ್ನು ಸಾಮಾನ್ಯವಾಗಿ ಕುರುಬ ಜನಾಂಗದವರೇ ಹೆಚ್ಚಾಗಿ ಹಾಡುತ್ತಾರೆ. ಇವರ ಹಾಡುಗಳು ಪೌರಾಣಿಕ, ಐತಿಹಾಸಿಕ, ತತ್ವಪದಗಳು, ಗೀತಪದಗಳು, ಪತಿವೃತೆಯರ ಕುರಿತಾದ ಪದಗಳು, ಜನಸಂಖ್ಯಾ ನಿಯಂತ್ರಣ, ವಿದ್ಯುತ್ ಕಡಿತ ಹೀಗೆ ಅನೇಕ ಸಮಕಾಲೀನ ವಿಷಯಗಳ ಅಂಶಗಳನ್ನು ಗರ್ಭೀಕರಿಸಿಕೊಂಡು ರಚನೆಗೊಂಡಿವೆ.

ಗುರುವೆ ನಮ್ಮಯ ದೇವರೇ ಬಂದಾವ ಬನ್ನಿರೇ
ಗುರುವ ರೇವಣಸಿದ್ಧಗ ಶರಣೆನ್ನುವೆನೊ...
ದೇವಿಯ ನಮ್ಮಯ ದೇವರ ಬಂದಾವ ಬನ್ನಿರೆ
ಸ್ವಾಮಿ ನಮ್ಮ ದೇವರಿಗೆ ಶರಣೆನ್ನುವೆನೋ[31]...

ಇಲ್ಲಿ ವಿವಿಧ ಕಲಾಮೇಳಗಳು ದೇವರಿಗೆ ಸಂಬಂಧಿಸಿದ ಪದಗಳನ್ನು ಕಟ್ಟಿ ಹಾಡುತ್ತಾರೆ. 'ದೇವರ ಕರೆಯುವುದು' ಎಂದು ಈ ಹಾಡುಗಳ ಕುರಿತು ಹೇಳುತ್ತಾರೆ.

ಕಲಾವಿದರು ತಮ್ಮ ಹಾಡುಗಳನ್ನೆಲ್ಲ ರಾಮಾಯಣ, ಮಹಾಭಾರತ ಪುರಾಣಗಳ ಕುರಿತಂತೆ, ಅಲ್ಲದೇ ಗುರುವಿನ, ಮತಗಳ ಕುರಿತಂತೆ ಹೀಗೆ ಸಾಕಷ್ಟು ರೀತಿಯ ಹಾಡುಗಳನ್ನು ರಚಿಸಿದ್ದಾರೆ. ಪ್ರಸ್ತುತ ದಿನಗಳಲ್ಲಿ ಗಣೇಶೋತ್ಸವ, ಚುನಾವಣೆ ಪ್ರಚಾರ, ಕ್ರೀಡೆಗಳ ಉದ್ಘಾಟನೆ, ಮುಷ್ಕರ ಸಂದರ್ಭಗಳಲ್ಲಿ ಡೊಳ್ಳಿನ ಹಾಡುಗಳನ್ನು ಹಾಡಿಸುವುದರ ಮೂಲಕ ಆ ಕಾರ್ಯಕ್ರಮಗಳ ಚಾಲನೆ ನೀಡುತ್ತಾ ಬಂದಿರುವುದರ ಜೊತೆಗೆ, ಜನರಲ್ಲಿ ಪರಿಣಾಮಕಾರಿಯಾಗಿ ಅರಿವನ್ನು ಮೂಡಿಸುವ ಕೆಲಸ ಮಾಡುತ್ತಿರುವುದು ವಿಶೇಷ.

ಹೀಗೆ ಸಮಕಾಲೀನ ಪ್ರಜ್ಞೆಯುಳ್ಳ ಕುರುಬ ಜನಾಂಗದ ಜನಪದ ಕಲಾವಿದರು, ಒಂದು ಬಾರಿ ಹಾಡಿದ ಹಾಡನ್ನು ಮತ್ತೆ ಮತ್ತೆ ಹಾಡದೇ ಹೊಸ ಹಾಡುಗಳನ್ನು ಕಟ್ಟುವವರಾಗಿದ್ದಾರೆ. ಇಂದಿಗೂ ಪದಕಟ್ಟಿ ಹಾಡುವ ಜಾಣ್ಮೆ ಇವರಿಗಿದೆ. ಈ ಹಾಡುಗಾರರು ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ನಾವು ಕಾಣುತ್ತೇವೆ. ಇಂದು ಆಧುನಿಕ ಮಾಧ್ಯಮಗಳ ಮೂಲಕ ನಾವು ಡೊಳ್ಳಿನ ಹಾಡುಗಳನ್ನು ಕೇಳುವುದರ ಜೊತೆಗೆ ದೃಶ್ಯ ಮಾಧ್ಯಮಗಳಲ್ಲೂ ಕಾಣುತ್ತಿದ್ದೇವೆ. ಇದು ನವಮೌಖಿಕದ ಮುನ್ನಡೆಯಾಗಿದೆ.

**ಭಜನಾ ಪದಗಳು**

ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಭಜನೆ ಹಾಡಿನ ಸಂಪ್ರದಾಯ ಶರಣರಿಗಿಂತ ಮೊದಲು ಪ್ರಾರಂಭವಾದದ್ದು ಎಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಇಂದಿನ ಭಜನಾ ತಂಡಗಳು ಅಂದು ಇದ್ದುವೇ? ಎಂಬ ಪ್ರಶ್ನೆ. ಆರಾಧನೆ ಪದಗಳೆನೋ ಕಂಡು ಬರುತ್ತವೆ. ಆದರೆ ಆ ಪದಗಳನ್ನು 'ಭಜನೆ' ಪದಗಳೆಂದು ಹೇಳುವುದು ಕಷ್ಟ. ಯಾಕೆಂದರೆ ಭಜನೆಯಲ್ಲಿ 'ಭಕ್ತಿ' ಮತ್ತು 'ತತ್ವ' ಎರಡು ಮುಖ್ಯವಾಗಿರುತ್ತದೆ. ಆರಾಧನೆ ಪದಗಳಾದರೆ ಅವುಗಳೆಲ್ಲ ಭಾವುಕ ಭಕ್ತಿ ಮಾತ್ರ ಇರುತ್ತದೆ. 'ತತ್ವ' ಗೌಣವಾಗಿರುತ್ತದೆ ಎಂಬ ಸ್ಪಷ್ಟತೆಯನ್ನು ನಾವು ಇಲ್ಲಿ ಮನಗಾಣುತ್ತೇವೆ.

ಜ್ಞಾನಪೀಠ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರ ಅವರು ಭಜನೆ ಎಂದರೆ ಒಂಟಿಯಾಗಿ ಅಥವಾ ಗುಂಪಿನಲ್ಲಿ ದೇವರನ್ನು ಭಕ್ತಿಯಿಂದ ಸ್ತುತಿಸುವ ಕ್ರಮ ಎಂದು ಹೇಳಿದ್ದಾರೆ. ಇಂದು ಈ ವ್ಯಾಖ್ಯಾನವನ್ನು ಪುನರ ವ್ಯಾಖ್ಯಾನಿಸುವ ಅಗತ್ಯತೆಗಳ ಕುರಿತು ಚಿಂತಿಸಬೇಕಿದೆ. ಧಾರ್ಮಿಕ ಪರಿಧಿಯಲ್ಲಿ ಅಥವಾ ಅದನ್ನು ಮೀರಿ ನಿರ್ವಹಣೆಗೊಳ್ಳುವ ಮನರಂಜನೆ ಮತ್ತು ಹವ್ಯಾಸ ಎಂದು ಸಹ ಹೇಳಬಹುದಾಗಿದೆ. ಸಪ್ತಾಹ ಭಜನೆ, ತಿಂಗಳ ಭಜನೆ, ಹಬ್ಬ–ಹರಿದಿನ, ಜಾತ್ರೆ–ಉತ್ಸವಗಳಲ್ಲಿ ಭಜನೆಗಳನ್ನು ಮಾಡುತ್ತಾರೆ. ಅಲ್ಲದೇ ಇತರೆ ಸಂದರ್ಭಗಳಲ್ಲೂ ಭಜನೆಯನ್ನು ದುಃಖದ ದಿನಗಳಲ್ಲಿ ಅಂದರೆ ಸಾವಾದ ಮನೆಯಲ್ಲೂ ಸಹ ಮಾಡುತ್ತಾರೆ.

ಪ್ರಾರಂಭದಲ್ಲಿ ಗುರುಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರ,
ಗುರುವೇ ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ...

ಎನ್ನುವುದು. ರಾಗಾಲಾಪ ಮುಗಿದ ಕೂಡಲೇ ಶಿವಸ್ತುತಿ ಇರುತ್ತದೆ. ಭಿನ್ನ ಭಿನ್ನವಾಗಿ ಕಾಣಬಹುದು.

ಸಾಂಬಸದಾಶಿವ ಸಾಂಬಸದಾಶಿವ
ಸಾಂಬಸದಾಶಿವ ಸಾಂಬಸದಾಶಿವ
ಸಾಂಬಸದಾಶಿವ ಸಾಂಬಸದಾಶಿವ
ಕಂಚಿನ ತಾಳ ಕೆಂಪು ನಿಶಾನಿ

ಸಂಪಾಗಿ ಬರತ್ಕೈತಿ ಸಾಧುರಮ್ಯಾಳ ।ಪ। ಸಂಬಸದಾಶಿವ ।
ಶಿವಶರಣರು ನಮ್ಮ ಬಳಗದ ಮಂದಿ
ಶಿವಪಾರ್ವತಿ ನಮ್ಮ ತಾಯಿ ತಂದಿ । ಸಂಬಾಸದಾಶಿವ ।[೬]...

ಓಗೆ ಒಂದಿನ ಸಾಲುಗಳನ್ನೇ ಅಂದರೆ ಪಲ್ಲವಿಯನ್ನು ಹಾಡುತ್ತಾ ಪದಗಳನ್ನು ಬೆಳೆಸಿ ಭಜನೆಯನ್ನು ಪ್ರಾರಂಭಿಸುವುದರ ಜೊತೆಗೆ ನಾಂದಿ ಮುಗಿದ ತಕ್ಷಣ 'ಮಾರ್ಗ' ಪದಗಳ ಮೂಲಕ ಮುಂದುವರೆಸುತ್ತಾರೆ.

ಶಿವ ನಿನ್ನಲ್ಲಿಹಾನ ನೀ ನೋಡಿಲ್ಲ
ಎಲ್ಲೆಲ್ಲಿ ಹುಡುಕಿದರು ಇಲ್ಲಾ ಇಲ್ಲಾ
ಆರು ಶಾಸ್ತ್ರಗಳ ನೋಡಿದರಿಲ್ಲ
ನೂರಾರು ಪುರಾಣಗಳ ಮುಗಿಸಿದರಿಲ್ಲ
ತಲಿಯ ಕೆಳಗೆ ಮಾಡಿ ಕಾಲ ಮ್ಯಾಲಕ ಮಾಡಿ
ಜೋತಾಡಿದರಿಲ್ಲ ಇಲ್ಲ
..................................................
..................................................
ನಿನ್ನ ನಾಮಸ್ಮರಣೆಯ ಗಂಧವಿಲ್ಲದೆ[೭]...

ಈ ಮೇಲಿನ ಭಜನಾ ಪದಗಳು ಮನಸ್ಸು ಮತ್ತು ಬಯಕೆ ಒಂದಕ್ಕೊಂದು ಪೂರಕವಿದ್ದಾಗ, ಅದರ ಅನಿವಾರ್ಯತೆ ಅರ್ಥ ಮಾಡಿಕೊಳ್ಳದೇ ವ್ಯರ್ಥ ಕಾಲಹರಣ ಮಾಡಿ ಸಾಯುವುದು ಸರಿಯೇ? ಎಂಬುದನ್ನು ಪ್ರಶ್ನಿಸುವುದಾಗಿದೆ. ಮನಸ್ಸಿಲ್ಲದೆ ಮಾಡಿದ ಕ್ರಿಯೆ ಎಂದಿಗೂ ಅರ್ಥಪೂರ್ಣವಾಗಲಾರದು. ಕ್ರಿಯೆಯ ಯಾಂತ್ರಿಕತೆಯೊಂದರಿಂದಲೇ ಸಾಧನೆ ಸಿದ್ಧಿಸಲಾರದು, ಅದಕ್ಕೆ ತಳಹದಿ ಬಯಕೆಯಾಗಿರುತ್ತದೆ. ಈ ಬಯಕೆಯ ಇಚ್ಛೆಯಂತೆ ಕ್ರಿಯೆ ನಡೆದರೆ ಅದಕ್ಕೊಂದು ಅರ್ಥ, ಇಲ್ಲವಾದರೆ ಅನರ್ಥವಾಗುತ್ತದೆ. ಹಾಗಾಗಿ ಕ್ರಿಯೆ ಮತ್ತು ಬಯಕೆಗಳ ಮಧ್ಯದ ಕಂದಕವನ್ನು ಹೊಡೆದು ಹಾಕಿ ಎರಡು ಬೆಸೆದುಕೊಳ್ಳಬೇಕೆಂಬ ಆಶಯ ಇಲ್ಲಿ ವ್ಯಕ್ತವಾಗಿದೆ.

ಭಜನಾ ಪದಗಳನ್ನು ಹಾಡುವ ವರ್ಗದವರು ಇಂದಿಗೂ ಇದ್ದಾರೆ. ಕೆಲವರು ಹಾಡುವುದನ್ನು ಕಾಯಕ ಮಾಡಿಕೊಂಡಿದ್ದಾರೆ. ಇಂದು ಆಧುನಿಕ ಮಾಧ್ಯಮಗಳಲ್ಲಿ ಕೂಡ ನಾವು ಭಜನಾ ಪದಗಳು ಎಂದು ಹೆಸರನ್ನು ಜಾಲತಾಣಗಳಲ್ಲಿ ನಮೂದಿಸಿದರೆ ಸಾಕು ಹಲವು ಪ್ರಕಾರದ ಭಜನಾ ಪದಗಳು ಪರದೆಯ ಮೇಲೆ ಬರುತ್ತವೆ. ಇಂದು ಆಧುನಿಕ ಮಾಧ್ಯಮಗಳು ಜನಪದ ಸಾಹಿತ್ಯವನ್ನು ಬೆಳೆಸುವಲ್ಲಿ ಬಹುದೊಡ್ಡ ಪಾತ್ರ ವಹಿಸಿರುವುದು ಗಮನಾರ್ಹದ ಸಂಗತಿಯಾಗಿದೆ.

**ಇತರೆ ಹಾಡುಗಳು**

ಜನಪದ ಗೀತೆಗಳಲ್ಲಿ ಹಲವು ಪ್ರಕಾರದ ಹಾಡುಗಳನ್ನು ಕಾಣುತ್ತೇವೆ. ಈ ಮೇಲೆ ನೋಡಿದ ಹಾಡುಗಳನ್ನು ಹೊರತುಪಡಿಸಿ ಇನ್ನುಳಿದ ಪ್ರಕಾರಗಳೆಂದರೆ, ಕುಟ್ಟುವ ಪದಗಳು, ಗುಳ್ಳವ್ವನ ಪದಗಳು, ಗುರ್ಚಿ ಪದಗಳು, ಜೋಕುಮಾರನ ಹಾಡುಗಳು, ಬಾಲ್ಯ, ಯೌವನ, ಮದುವೆ ಸಂದರ್ಭಗಳಲ್ಲಿ ಹಾಡುವ ಹಾಡುಗಳು, ಮೃತ್ಯುವಿನ ದಿನಗಳಲ್ಲಿ ಹಾಡುವ ಹಾಡುಗಳು, ದೇವರ ಕುರಿತು ನಾಮಸ್ಮರಣೆ ಮಾಡುವ ಹಾಡುಗಳು ಹೀಗೆ ಹತ್ತು ಹಲವು ರೀತಿಯ ಜನಪದ ಗೀತೆಗಳು ರಚನೆಗೊಂಡಿವೆ.

**ಕುಟ್ಟುವ ಪದಗಳು**

ಓಂ ಎಂದು ಕಟ್ಟುವೆ । ಸೊಂ ಎಂದು ಬೀಸುವೆ
ಓಂ ಸೊಂ ಎರಡು ತಿಳಿಯಬೇಕ ನಾರಿ
ಹಾಕವ್ವ ಹೇರಿ
ಓಂ ಮನೆಂದು ಅಕ್ಕಿ ತರಿಸಿ
ಸೂಕ್ಷ್ಮನೆಂದು ಹಳ್ಳಗಳೆಂದು
ಓಂ ಸೊಂ ಅನ್ನ ಮಾಡಿ
ಗುರುವಿಗಿ ಎಡಿ ಮಾಡಿ ಹಾಕವ್ವ ಹೇರಿ[೨೫]...

ಈ ಪದಗಳನ್ನು ಹೆಣ್ಣು ಮಕ್ಕಳು ಭತ್ತ, ಅಕ್ಕಿ ಇತರೆ ಧಾನ್ಯಗಳನ್ನು ಕುಟ್ಟುವ ಸಂದರ್ಭದಲ್ಲಿ ಹಾಡುಗಳನ್ನು ಹೇಳುತ್ತಾರೆ. ಆ ಹಾಡುಗಳೇ ಕುಟ್ಟುವ ಪದಗಳಾಗಿವೆ.

**ಅಣ್ಣ-ತಂಗಿ**

ಪಂಚಮಿ ಹಬ್ಬ ಉಳಿದಾವ ದಿನ ನಾಕ
ಅಣ್ಣ ಬರಲಿಲ್ಲ ಯಾಕ ಕರಿಲಾಕ॥
ನನ್ನ ಪತಿ ಇರುವುದು ಗೋಕುಲ ನಗರಾ
ಅಲ್ಲಿ ಇರುವುದು ರಾಜ ಮಂದಿರಾ
ಯವ್ವ ಹ್ಯಾಂಗ ಇರಲಿ ತೌರಮನಿ ಮರತ
ಅಣ್ಣ ಬರಲಿಲ್ಲ ಯಾಕ ಕರಿಲಾಕ॥
ನನ್ನ ತೌರೂರು ಪಂಚಮಿ ಭಾರಿ
ವಾರಿಗೆ ಗೆಳತ್ಯಾರು ನಾವು ಕೂಡಿ
ಒಳ್ಳಿ ಸೊರಸೀತಿ ಜೋಕಾಲಿಯೇರಿ
ಅಣ್ಣ ಬರಲಿಲ್ಲ ಯಾಕ ಕರಿಲಾಕ॥
ಎಳ್ಳು ಅವಲಕ್ಕಿ ತಂಬಿಟ್ಟ ಕುಟ್ಟಿ
ನಾನು ತಿನುವಾಕಿ ಮನಕ ಬಂದ್ಹಾಂಗ

ಅಣ್ಣ ಬರಲಿಲ್ಲ ಯಾಕ ಕರಿಲಾಕ॥
ನನ್ನ ತೌರೂರು ದೇವಪುರನಗರ
ಅಲ್ಲಿ ನೆಲಸ್ಯಾನಿ ಬಸವಣ್ಣ ದೇವರ
ಯವ್ವ ಬೇಡುವೆ ನಾನೊಂದು ವರವ
ಅಣ್ಣ ಬರಲಿಲ್ಲ ಯಾಕ ಕರಿಲಾಕ॥.[೨೬]

ಅಣ್ಣ-ತಂಗಿಯರ ಕುರಿತು ಹೇಳುವ ಈ ಹಾಡು ತಂಗಿಯೂ ಅಣ್ಣನಿಗಾಗಿ ದಾರಿ ಕಾಯುತ್ತಿರುವುದು. ಹಬ್ಬಕ್ಕೆ ಹೆಣ್ಣು ಮಗಳು ತವರು ಮನೆಗೆ ಬರುವುದು ಒಂದು ಸಂಪ್ರದಾಯ. ಅದೇ ರೀತಿ ತಂಗಿಯರನ್ನು ಅಣ್ಣ ಹೋಗಿ ಕರೆದುಕೊಂಡು ಬರುವುದು. ಇದು ನಮ್ಮ ಗ್ರಾಮೀಣ ಪ್ರದೇಶದ ಸಂಸ್ಕೃತಿ ಮತ್ತು ಸಂಪ್ರದಾಯಗಳಿಗೆ ಹೆಸರಾಗಿದ್ದು, ಆ ಕಾರಣದಿಂದಲೇ ರಚನೆಯಾದ ಹಾಡುಗಳೆಲ್ಲವೂ ಈ ಚೌಕಟ್ಟಿನಲ್ಲೇ ಇರುತ್ತವೆ.

**ತಾಯಿಯ ಹಾರೈಕೆ**

ಒಳ್ಳೆಯವರ ಗೆಳೆತನ ಕಲ್ಲುಸಕ್ಕರಿ ಹಾಂಗ
ಕ್ಷುಲ್ಲಕರ ಗೆಳೆತನ ಮಾಡಿದರ। ನನಕಂದ
ಸಲ್ಲದ ಮಾತು ಬರತಾವ॥
ಮಂದಿ ಮಕ್ಕಳೊಳಗ ಚಂದಾಗಿ ಇರಬೇಕು
ನಂದೀಯ ಶಿವನ ದಯದಿಂದ। ಹೋಗಾಗ
ಮಂದಿ ಬಾಯಾಗ ಇರಬೇಕು॥
ಕೊಟ್ಟು ಕುದಿಯಲು ಬೇಡ ಇಟ್ಟು ಹಂಗಿಸಬೇಡ
ಎಷ್ಟುಂಡರೆಂದು ಅನಬೇಡ। ಈ ಮೂರು
ಮುಟ್ಯಾನ ಶಿವನ ಸದರೀಗಿ॥
ಹಿರಿಯರಿಗೆ ಹಿರಿಯರನ್ನು ಕಿರಿಯರಿಗೆ ಕಿರಿಯರನ್ನು
ನೆರೆಗಡ್ಡದ ಮುದುಕರ। ಕಂಡರ
ತಲೆಬಾಗಿ ನಡೆಯೋ ನನಕಂದ
ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲ್ಲಿ ಚೂಡಾಮಣಿಯಾಗು। ನನ ಕಂದ
ಜ್ಯೋತಿಯೆ ಆಗು ಜಗಕೆಲ್ಲ.[೨೭]

ನಮ್ಮ ನಾಡಿನಲ್ಲಿ ತಾಯಿಗೆ ಮೊದಲ ಸ್ಥಾನವಿದೆ. ತಾಯಿಯ ಕುರಿತಾಗಿ ರಚನೆಗೊಂಡ ಎಲ್ಲ ಹಾಡುಗಳನ್ನು ನೋಡಿದಾಗ ಆಕೆ ತನ್ನ ಮಕ್ಕಳಿಗಾಗಿ ಮಾಡುವ ತ್ಯಾಗದ ಕುರಿತ ಪದಗಳು ಹೆಚ್ಚಾಗಿ ರಚನೆಗೊಂಡಿವೆ. ಇಲ್ಲಿಯೂ ಸಹ ತಾಯಿಯೂ ಯಾವ ರೀತಿಯಾಗಿ ಹಾರೈಕೆ ಮಾಡುತ್ತಾಳೆ ಎಂಬುದನ್ನು ಈ ಪದ್ಯ ಭಾಗದಲ್ಲಿ

ತಿಳಿಯಬಹುದು. ಮಕ್ಕಳು ಯಾವ ರೀತಿಯಾಗಿ ಬದುಕನ್ನು ಸಾಗಿಸಬೇಕು, ಗೆಳೆತನ ಹೇಗಿರಬೇಕು. ಜನರ ಜೊತೆ ಬೆರೆಯುವ ಕ್ರಮ, ಹಿರಿಯರಿಗೆ ಹೇಗೆ ಗೌರವ ಕೂಡಬೇಕು. ಹೀಗೆ ಹಲವು ವಿಷಯಗಳನ್ನು ಈ ಮೇಲಿನ ಪದಗಳಲ್ಲಿ ತಾಯಿ, ಮಕ್ಕಳ ಕುರಿತಾಗಿ ವಿಶ್ಲೇಷಿಸಲಾಗಿದೆ.

**ಜ್ಞಾನ ಭಂಡಾರಿ**

ನೀ ಹುಟ್ಟಿದ್ದು ವಿಜಾಪುರ ನಾಡಿನ
ಮುದ್ದೇಬಿಹಾಳದ ತಾಲೂಕ ವೀರಾಪೂರ
ವೀರಭದ್ರಸ್ವಾಮಿ ಬಸವಾಂಬೆ ತಾಯಿಯ
ಉದರದಿ ಜನಿಸಿದ ಕುವರ।
ಜನಿಸಿದಾಗ ಮನೆಯಲ್ಲಿ ಸಂತೋಷ ಸಾಗರ
ಹುಣ್ಣಿಮೆ ಚಂದಿರನಂತೆ ಜಗವ ಬೆಳಗುವ ಚಂದಿರ
ತಂದೆ-ತಾಯಿಗಳ ಮನದಲ್ಲಿ ಅರಳಿದ ಸಂತೋಷ ಸಾಗರ।
ಕಂಡವರೆಲ್ಲ ಕರೆದರು ಜಗತ್ತಿಗೆ ಜ್ಞಾನ ನೀಡುವ ಆಗರ।
ಬಾಲ್ಯದಲ್ಲಿ ಗಳಿಸಿದರು ಜ್ಞಾನ ಭಂಡಾರ
ವಿದ್ಯೆಯಲ್ಲಿ ಅಧೋಪತಿಯಾದ ಕುವರ
ಗುರುಗಳೇ ಕಂಡು ಬೆರಗಾದರು ಇವರ ವಿದ್ಯಚತುರ।
ಇವನೊಬ್ಬ ಜಗಕ್ಕೆ ಜ್ಞಾನ ಭಂಡಾರ।.[೨೮]

ಜನಪದ ಗೀತೆಗಳು ಕೇವಲ ಒಂದೇ ವಿಷಯವನ್ನಿಟ್ಟುಕೊಂಡು ರಚನೆಯಾಗಿಲ್ಲ. ಭಕ್ತಿ ಭಂಡಾರಿಯಾದ ಶ್ರೀ ಅನ್ನದಾನೇಶ್ವರರ ಕುರಿತು ತಿಳಿಸುತ್ತವೆ. ಜನರಲ್ಲಿ ಇರುವ ಭಕ್ತಿ ಅದು ಯಾವ ರೀತಿಯಾಗಿ ಸಮಾಜದಲ್ಲಿ ಪರಿಣಮಿಸುತ್ತದೆ ಎಂಬುದನ್ನು ನಾವು ಶರಣರ ಹಾಡುಗಳ ಒಳತಿರುಹುಗಳನ್ನು ಗಮನಿಸಿದಾಗ, ಶರಣರು ಸಮಾಜದ ಸುಧಾರಕರು ಅವರಿಂದ ಸಮಾಜದ ಏಳಿಗೆ ಸಾಧ್ಯ. ಆದುದ್ದರಿಂದಲೇ ಬಹುತೇಕ ಹಾಡುಗಳು ಶರಣರು, ದೇವರುಗಳ ಮೇಲೆ ರಚನೆಗೊಂಡಿವೆ.

ಒಟ್ಟಾರೆ ಜನಪದ ಗೀತೆಗಳ ಪ್ರಕಾರಗಳನ್ನು ಆಲಿಸಿದಾಗ ಭಿನ್ನ-ಭಿನ್ನ ಪ್ರಕಾರದಲ್ಲಿ ತನ್ನದೇ ಆದ ಒಂದು ಸ್ಥಾನಮಾನವನ್ನು ಪಡೆದುಕೊಂಡಿವೆ. ಅಲ್ಲದೇ ಹಾಡುಗಳಲ್ಲಿ ಬಳಕೆಯಾದ ಎಲ್ಲ ಪದಗಳು ಸಮಾಜದಲ್ಲಿ ನಡೆಯುತ್ತಿರುವ ಕಾರ್ಯಚಟುವಟಿಕೆಗಳು, ಕೌಟುಂಬಿಕ ಜೀವನ, ರೈತ, ಸಂಪ್ರದಾಯಗಳು, ಆಚರಣೆಗಳು, ಸಂಸ್ಕೃತಿ ಹೀಗೆ ಹತ್ತು ಹಲವು ವಿಷಯಗಳನ್ನು ಒಳಗೊಂಡು ಹಾಡುಗಳು ರಚನೆಗೊಂಡಿವೆ. ಹಿಂದಿನಿಂದಲೂ ಬೆಳೆದು ಬಂದ ಸಂಪ್ರದಾಯಗಳು ಹೇಗಿವೆ ಎಂಬುದು ಕೆಲವೊಂದು ಹಾಡುಗಳ ಮೂಲಕ ತಿಳಿಯುತ್ತೇವೆ.

ಸಾಹಿತ್ಯ ಎಂಬುದು ಕಾಲದಿಂದ ಕಾಲಕ್ಕೆ ಬದಲಾಗುತ್ತದೆ. ಹಾಗೆ ಜನಪದ ಗೀತೆಗಳಲ್ಲಿ ಇಂದು ಹಲವಾರು ಬದಲಾವಣೆಗಳನ್ನು ನಾವು ಕಾಣುತ್ತೇವೆ. 'ಹಳೇ ಬೇರು ಹೊಸ ಚಿಗುರು' ಎಂಬಂತೆ ಹಳೆಯ ಜನಪದ ಗೀತೆಗಳನ್ನು ಆಧರಿಸಿ ಹಲವಾರು ರೀತಿಯ ಹಾಡುಗಳು ಹುಟ್ಟಿಕೊಂಡಿವೆ. ಆಧುನಿಕ ಮಾಧ್ಯಮಗಳ ಮೂಲಕ ಬಿತ್ತರಗೊಳ್ಳುತ್ತಿರುವ ಹಾಡುಗಳು ಜನಪದ ಗೀತೆಗಳ ಹೊಸ ಹುಟ್ಟು ಎಂಬಂತೆ ಬಿಂಬಿತವಾಗುತ್ತಿವೆ. ಹಾಡುಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳಾದರೂ ಸಹ ತನ್ನ ಮೂಲತನವನ್ನು ಎಂದಿಗೂ ಬಿಟ್ಟು ಕೊಡಲಾರವು. ಆಧುನಿಕ ಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯೂಟ್ಯೂಬ್, ಇಂಟರ್‌ನೆಟ್ ಇತ್ಯಾದಿ ಮಾಧ್ಯಮಗಳು ಹಾಡುಗಳನ್ನು ಕೇಳಿ ಆನಂದಿಸುವ ಮತ್ತು ರಚನೆ ಮಾಡುವ ವರ್ಗವನ್ನು ಹೆಚ್ಚು ಮಾಡುವುದರ ಮೂಲಕ, ಜನಪದ ಸಾಹಿತ್ಯವನ್ನು ಇಂದಿನ ದಿನಮಾನಗಳಲ್ಲಿ ಬೆಳೆಸುತ್ತಿರುವುದು ಜನಪದ ಗೀತೆಗಳ ಮುನ್ನಡೆಯಾಗಿದೆ.

**ಕೊನೆ ಟಿಪ್ಪಣಿಗಳು**

೧. ಬಾಳಣ್ಣ ಸೀಗೀಹಳ್ಳಿ, ಹಾಡ ತೂರ‍್ಯಾಡ್ಯಾವ, ಪುಟ: ೧೨೮.
೨. ಅದೇ, ಪುಟ: ೧೯೭.
೩. ಅದೇ, ಪುಟ.
೪. ಅದೇ, ಪುಟ: ೧೯೮.
೫. https://www.kannadaprabha.com/edition/printkp.aspx.
೬. https://youtu.be/K_S8be0rxOl.
೭. https://balavana.wordpress.com/2008.
೮. https://youtu.be/3_BqKKWSeOY.
೯. ಎಸ್.ಕೆ.ಕರೀಂಖಾನ್, ಜಾನಪದ ಗೀತೆಗಳು, ಪುಟ: ೪೮, ೪೯.
೧೦. https://youtu.be/KtV-Rsn6Me4.
೧೧. http://kanaja.in/?p=49190.
೧೨. ಬಿ.ಎಸ್.ಗದ್ದಗಿಮಠ, ಕನ್ನಡ ಜಾನಪದ ಗೀತೆಗಳು, ಪುಟ: ೧೩೬.
೧೩. ಅದೇ, ಪುಟ: ೧೭೬, ೧೭೭.
೧೪. ಅದೇ, ಪುಟ: ೧೭೮.
೧೫. https://youtu.be/G5BbeNLBLRO.
೧೬. https://kn.wikipedia.org/wiki/%EO.
೧೭. http://kanaja.in/?p=49190.
೧೮. https://sampada.net/blog/%EO.
೧೯. http://sahityasudha.blogspot.com/2017/08/blog-post_27.html.
೨೦. https://youtu.be/q8Tu3Gv1oX8.
೨೧. ಅದೇ.

೨೨. ಬಾಳಣ್ಣ ಸೀಗೀಹಳ್ಳಿ, ಹಾಡು ತೂರ್‍ಯಾಡ್ಯಾವ, ಪುಟ: ೨೭೨.

೨೩. ಅದೇ, ಪುಟ: ೨೯೯.

೨೪. ಅದೇ, ಪುಟ: ೩೦೧.

೨೫. http://kanaja.in/?p=49190.

೨೬. ಅದೇ.

೨೭. ಶ್ರೀ ಎಸ್. ವಿಜಯಕುಮಾರ, ಜಾನಪದ ಗೀತೆಗಳು, ಪುಟ: ೯.

೨೮. ನಾಗೇಶ ಹೊನ್ನೂರ, ಜಾನಪದ ಗೀತೆಗಳು, ಪುಟ: ೬೭.

# ಅಧ್ಯಾಯ : ಐದು

## ನವಮೌಖಿಕ ಹಾಡುಗಾರರ ಲೋಕ

೫.೧ ನವಮೌಖಿಕ ಹಾಡುಗಾರರು

೫.೨ ನವಮೌಖಿಕ ಹಾಡುಗಳು

# ಅಧ್ಯಾಯ : ಐದು

# ನವಮೌಖಿಕ ಹಾಡುಗಾರರ ಲೋಕ

## ೫.೧ ನವಮೌಖಿಕ ಹಾಡುಗಾರರು

ಇಂದು ಜನಪದ ಸಾಹಿತ್ಯವು ಹತ್ತು ಹಲವು ತಿರುವುಗಳನ್ನು ಪಡೆದುಕೊಂಡು ಬೆಳೆಯುತ್ತಿದೆ. ಮೂಲ ಜನಪದವು ಕೇವಲ ಬಾಯಿಂದ ಬಾಯಿಗೆ ಬಂದು ಬಾಯಲ್ಲಿಯೇ ಬೆಳಯುವಂತಿತ್ತು. ಕಾಲದ ಬದಲಾವಣೆಯೊಂದಿಗೆ ಬಾಯಿಗೆ ಮಾತ್ರ ಬದ್ಧವಾಗದೆ ಬಾಗಿಲ್ಲೊಂದನ್ನು ತೆರೆದುಕೊಂಡು ಬಯಲಿಗೆ ಬಿದ್ದಿತು. ಮೊದಲು ರೇಡಿಯೋ ಧ್ವನಿ ಮುದ್ರಣಗಳಲ್ಲಿ ಹರಿಯಿತು. ಕೊನೆಗೆ ಆಧುನಿಕದ ಅಂಚಿನಲ್ಲಿ ಆಗಮಿಸಿದಾಗ ಬಾಗಿಲಿನಿಂದ ಹೆಬ್ಬಾಗಿಲನ್ನು ಹೊಕ್ಕಿತು. ಇಲ್ಲಿ ಬಂದಾಗ ಜನಪದ ನಿತ್ಯನೂತನ ನವನವೀನವಾಯಿತು. ದಿನದಿನಕ್ಕೂ, ಕ್ಷಣಕ್ಷಣಕ್ಕೂ ಮೋಡದ ಮಿಂಚಂತೆ ಬದಲಾವಣೆಯನ್ನು ಹೊಂದುತ್ತಲೇ ಬರುತ್ತಿದೆ. ಇದಕ್ಕೆ ಕಾರಣ ಇಂದು ಬಳಕೆಗೊಳ್ಳುತ್ತಿರುವ ಆಧುನಿಕ ಮಾಧ್ಯಮಗಳು ಕ್ಯಾಸೆಟ್ ನಂತರ ಸಿಡಿ, ಮುಂದೆ ಯೂಟ್ಯೂಬ್ ಹೀಗೆ ಬದಲಾಗುತ್ತಿರುವ ವೇಗದ ಮಾಧ್ಯಮಗಳ ಜೊತೆಗೆ ಜನಪದ ಹಾಡುಗಳು ಬದಲಾಗುತ್ತಿವೆ. ಹಾಗಾದರೆ ಈ ಹಾಡುಗಳನ್ನು ಹಾಡುತ್ತಿರುವವರು ಯಾರು? ಎಂತಹ ಹಾಡುಗಳನ್ನು ಹಾಡುತ್ತಿದ್ದಾರೆ? ಕೇಳುವವರು ಯಾರು? ಇಂತಹ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಿದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಉತ್ತರ ಕರ್ನಾಟಕ ಭಾಗದ ಆಯ್ದ ಜಿಲ್ಲೆಗಳಾದ ಬೆಳಗಾವಿ, ವಿಜಯಪುರ, ಬಾಗಲಕೋಟ, ಧಾರವಾಡ, ಗದಗ ಹಾಗೂ ಹಾವೇರಿ ಈ ಪ್ರದೇಶಗಳಲ್ಲಿ ಬರುವ ಜನಪದ ಹಾಡುಗಾರರ ಕುರಿತು ಅವರು ಯಾವ ಪ್ರಕಾರದ ಹಾಡುಗಳನ್ನು ಹಾಡಿದ್ದಾರೆ. ಜೊತೆಗೆ ಕೆಲವು ಹಾಡುಗಾರರ ಹಾಡುಗಳ ವಿಷಯದ ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ಕಾಣುತ್ತೇವೆ.

### ೫.೧.೧. ಮೊದಲನೇ ತಲೆಮಾರಿನ ಹಾಡುಗಾರರು

ನವಮೌಖಿಕತೆಯಲ್ಲಿ ಬರುವ ಮೊದಲನೇ ತಲೆಮಾರಿನ ಹಾಡುಗಾರರು ಎಂದರೆ ಇವರು ನೇರವಾಗಿ ನವಮೌಖಿಕತೆಗೆ ಬರದೆ ಇವರು ರಚಿಸಿದ, ಹಾಡಿದ ಜನಪದ ಗೀತೆಗಳು ಕಾಲಾಂತರದಲ್ಲಿ ಅವು ನವಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯೂಟ್ಯೂಬ್ ಮುಂತಾದ ಮಾಧ್ಯಮಗಳಲ್ಲಿ ಪ್ರವೇಶ ಪಡೆದುಕೊಂಡ ಕವಿ, ಗಾಯಕರನ್ನು ಇಲ್ಲಿ ಮೊದಲನೇ ತಲೆಮಾರಿನ ಹಾಡುಗಾರರು ಎಂದು ಗುರುತಿಸುತ್ತೇವೆ. ಹೀಗೆ ಕವಿ, ಹಾಡುಗಾರರ ಕುರಿತಾದ ಅಧ್ಯಯನ ಈ ಭಾಗದಲ್ಲಿ ನೋಡಬಹುದು.

**ಬಾಳಪ್ಪ ಹುಕ್ಕೇರಿ**

ಉತ್ತರ ಕರ್ನಾಟಕ ಎಂದ ತಕ್ಷಣ ನೆನಪಾಗುವುದು ನಗುನಗುತ್ತಾ ಉತ್ಸಾಹದಿಂದ ಹಾಡುತ್ತಿದ್ದ ಸಾವಿರ ಹಾಡುಗಳ ಸರದಾರ ಬಾಳಪ್ಪ ಹುಕ್ಕೇರಿ. **ಬಾರಿಸು ಕನ್ನಡ ಡಿಂಡಿಮವಾ** ಎಂಬ ಹಾಡು ಇವರ ಧ್ವನಿಯಲ್ಲಿ ಪದ ಪದವೂ ತನ್ನ ಅರ್ಥ ವ್ಯಾಪ್ತಿಯನ್ನು ಹಬ್ಬಿಸುತ್ತಿದ್ದ ರೀತಿಯೂ ಅವಿಸ್ಮರಣೀಯ. ಇವರು ಆಗಸ್ಟ್ ೨೧, ೧೯೧೧ರಂದು ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಮುರಗೋಡ ಎಂಬ ಗ್ರಾಮದಲ್ಲಿ ವೀರಭದ್ರಪ್ಪ-ಚೆನ್ನವೀರಮ್ಮ ದಂಪತಿಗಳ ಉದರದಲ್ಲಿ ಜನಿಸಿದರು. ಮುಂದೆ ಪ್ರೌಢ ಶಿಕ್ಷಣ ಹಂತದಲ್ಲಿ ಕುಟುಂಬದ ಒತ್ತಡಕ್ಕೆ ಮಣಿದು ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ, ವ್ಯಾಪಾರಕ್ಕೆ ನಿಲ್ಲಬೇಕಾಯಿತು. ಆದರೆ ಇವರಲ್ಲಿದ್ದ ಸುಶ್ರಾವ್ಯ ಕಂಠದಿಂದ ಎಲ್ಲರ ಗಮನ ತಮ್ಮತ್ತ ಸೆಳೆಯುತ್ತಿದ್ದರು. ಒಂದು ದಿನ ಇವರ ಹಾಡನ್ನು ಕೇಳಿದ ಶ್ರೀ ಶಿವಲಿಂಗಯ್ಯ ಗವಾಯಿಗಳು ಬಾಲ್ಯವಸ್ಥೆಯಲ್ಲಿದ್ದ ಇವರನ್ನು ಕರೆದು ಶಿಷ್ಯತ್ವ ದಯಪಾಲಿಸಿದರು. ಆರ್ಥಿಕ ಸಮಸ್ಯೆಗಳು ಎದುರಾದ ಸಮಯದಲ್ಲಿ ಶಾಸ್ತ್ರೀಯ ಗಾಯನ ಕಲಿಯುವುದನ್ನು ಅರ್ಧಕ್ಕೆ ನಿಲ್ಲಿಸಬೇಕಾಯಿತು. ನಂತರದಲ್ಲಿ ಧಾರವಾಡ ಮುರುಘಾಮಠದ ಮೃತ್ಯುಂಜಯ ಸ್ವಾಮಿಗಳ ಸಲಹೆಯ ಮೇರೆಗೆ ಜನಪದ ಗೀತೆಗಳನ್ನು ಹಾಡಲಾರಂಭಿಸಿದರು.

ಹಾಡುಗಾರಿಕೆಯನ್ನೇ ಜೀವಾಳವಾಗಿಸಿಕೊಂಡಿದ್ದ ಬಾಳಪ್ಪ ಹುಕ್ಕೇರಿ ಅವರು ಕರ್ನಾಟಕದ ಎಲ್ಲೆಡೆ ಸಂಚರಿಸಿ, ಜನಪದ ಗೀತೆಗಳನ್ನಲ್ಲದೇ ವರಕವಿಯಾದ ದ.ರಾ.ಬೇಂದ್ರೆ, ಬೆಟಗೇರಿ ಕೃಷ್ಣಶರ್ಮ, ಕುವೆಂಪು ಮೊದಲಾದ ಸಾಹಿತಿಗಳ ಗೀತೆಗಳನ್ನು ಸಹ ಹಾಡಿದ್ದಾರೆ. ಅಲ್ಲದೇ ಸ್ವತಃ ತಾವೇ ಹಾಡುಗಳನ್ನು ರಚಿಸಿ ಹಾಡುವ ಮೂಲಕ ಜನರನ್ನು ಸಂತೋಷಗೊಳಿಸುತ್ತಿದ್ದರು. ನಾವು ಇಂದು ಇಂಟರ್‌ನೆಟ್‌ನಲ್ಲಿ ಬಾಳಪ್ಪ ಹುಕ್ಕೇರಿ ಅಂತಾ ಟೈಪ್ ಮಾಡಿದರೆ ಸಾಕು ಇವರು ಹಾಡಿದ ಹಾಡುಗಳು ಪರದೆ ಮೇಲೆ ಕಾಣಿಸಿಕೊಳ್ಳುತ್ತವೆ. ಇವರ ಸಾಧನೆಗೆ ಹಲವಾರು ಪ್ರಶಸ್ತಿಗಳು ಕೂಡ ಸಂದಿವೆ.

ಬಾಳಪ್ಪ ಹುಕ್ಕೇರಿ ಅವರ ಕುರಿತು 'ಜಾನಪದ ಸರದಾರ: ಹುಕ್ಕೇರಿ ಬಾಳಪ್ಪ.' ಎಂಬ ಅಭಿನಂದನಾ ಗ್ರಂಥ ಕೂಡ ರಚನೆಯಾಗಿದೆ. ಇವರು ಜಾನಪದ ಲೋಕಕ್ಕೆ ಒಂದು ವಿಶಿಷ್ಟವಾದ ಕೊಡುಗೆ ನೀಡಿದ್ದಾರೆ. ಇವರು ಎಲ್ಲ ವಿಷಯಗಳನ್ನು ಒಳಗೊಂಡ ಹಾಡುಗಳನ್ನು ರಚನೆ ಮಾಡಿ, ಹಾಡುವುದರ ಮೂಲಕ ಆ ವಿಷಯಗಳನ್ನು ಜನರಿಗೆ ತಿಳಿಸಿಕೊಟ್ಟಿದ್ದಾರೆ. 'ನಮ್ಮ ಹಳ್ಳಿ ಊರ ನಮಗ ಪಾಡ; ಯಾತಕವ್ವ ಹುಬ್ಬಳ್ಳಿ-ಧಾರವಾಡ...' ಹೀಗೆ ಹಲವು ಹಾಡುಗಳನ್ನು ರಚಿಸಿ ಜನರ ಮನಸ್ಸಿನಲ್ಲಿ ಇಂದಿಗೂ ನೆಲೆಸಿದ್ದಾರೆ. ಇವರು ಕರ್ನಾಟಕ ಕಂಡ ಅಪರೂಪದ ಕಲಾವಿದರು. ಇವರ ಹಾಡುಗಳು ಇಂದಿಗೂ ಕೇಳುಗ ವರ್ಗವನ್ನು ಸೆಳೆಯುತ್ತಿವೆ. ಉದಾಹರಣೆಗೆ ಇವರು ರಚಿಸಿದ ಹಾಡುಗಳನ್ನು ಇಲ್ಲಿ ನೋಡಬಹುದು.

**ಕಟ್ಟಿಮ್ಯಾಲ ನಡಯಿರೋ :**

ಕಟ್ಟಿಮ್ಯಾಲ ನಡೆಯಿರೋ ಅಣ್ಣಾ
ಕಟ್ಟಿಮ್ಯಾಲ ನಡೆಯಿರೋ
ಕಟ್ಟಿಬಿಟ್ಟ ತೆಳಗ ನಡೆದರ ನೀವು ಪೆಟ್ಟು ತಿನ್ನುವಿರೋ
ಒಟ್ಟಾಗಿ ಹೋಗತಿರಿ ಸಿನಿಮಾಕ ಬಿಟ್ಟ ಕೂಡಲೆ
ಬರ್ತಿರಿ ಸಿಟಿ ಮೋಟಾರಕ
ಮಟ್ಟಮೊದಲ ನೋಡಿರಿ ಎಡಬಲಕ
ಕಟ್ಟಿ ಹತ್ತಿ ನಡೆಯಿರಿ ಮುಂದೆ ಸಾಗುದಕ
ಸ್ಕೂಟರ ಹತ್ತಿ ಹೊಡೀತೀ ಸ್ಪೀಡಿನಲೆ
ಟ್ರಕ್ ಬರತಾವ ಬಲ ದೂರಿನಲಿ
ಮಕ್ಕಳ ಎತಗೊಂಡು ಹೆಂಡತಿ ಕುಂತಿರತಾಳ
ಪಕ್ಕನೆ ಸೈಯಿಡ್ ತಪ್ಪಿ ಬಿದ್ದರ
ಸಿಕ್ಕ ಸಾಯುವಿರಿ ಎಚ್ಚರಣ್ಣ
ತಳಕ ಬಿದ್ದ ಹೋಗ್ತಿರಿ ರಸ್ತೆಯ ಮೇಲೆ[೧]...

ಮನುಷ್ಯ ಕುಲದ ಜೀವನವೆಂದರೆ ನಿಂತ ನೀರಲ್ಲ, ಅದು ಹರಿಯುತ್ತಿರುವ ಪ್ರವಾಹ ನದಿ ಇದ್ದಂತೆ. ಹರಿಯುವ ನದಿಯಲ್ಲಿ ಬರುವ ಏರಿಳಿತಗಳನ್ನು, ಆಗುವ ಅಡಚಣೆಗಳನ್ನು ಯಾವ ರೀತಿಯಾಗಿ ಈಜಿ ದಡ ಸೇರಬೇಕೆಂಬ ಕಲ್ಪನೆಯನ್ನು ಈ ಪದ್ಯ ಕಟ್ಟಿಕೊಟ್ಟಿದೆ. ಆದ್ದರಿಂದ ಜೀವನ ಅರ್ಥಪೂರ್ಣವಾಗಿ ಪರಿಪೂರ್ಣತೆಯನ್ನು ಹೊಂದಲು ಯಾವ ರೀತಿಯಲ್ಲಿ ಮನುಷ್ಯ ಶಿಸ್ತು, ಶಾಂತಿ, ಸರಳತೆಯನ್ನು ರೂಢಿಸಿಕೊಳ್ಳಬೇಕೆಂಬುದನ್ನು ಬಾಳಪ್ಪ ಹುಕ್ಕೇರಿಯವರು ಈ ಗೀತೆಯ ಮೂಲಕ ತಿಳಿಸುತ್ತಾರೆ.

**ಶೃಂಗಾರ ಶೈಲಿಯ ಹಾಡು :**

ಯಾರವ್ವಾ ಇವ ಚೆಲುವಾ। ತನ್ನಷ್ಟಕ ತಾನೆ ನೋಡಿ ನಲಿವಾ
ನಗಿಯೊಂದು ಬಿಗಿಯೂಟ। ಕಣ್ಣು ಹಿಗ್ಗಿನ ತೋಟ
ಚವತಿ ಚಂದ್ರಮನೊಲವಾ॥
ಚವತಿ ಚಂದ್ರಮನ ಕೆಳಗ।
ಹೆಣಕಿ ಹಾಕಿದ್ದಂಗ ಹೊಲುವಾ ಹಣೆ॥
ಒಡೆದಿಲ್ಲಾ ಇನ್ನೂ ಮಕಮಿಸಿ ಒಡದಿಲ್ಲ।
ತೊಡದಿಲ್ಲ ಇನ್ನೂ ತುಟಿ ಹಾಲು ತೊಡದಿಲ್ಲ
ಹಿಡಿದಿಲ್ಲ ಕಣ್ಣಿಗೆ ಹೆಣ್ಣಚ್ಚು ಹಿಡಿದಿಲ್ಲ॥
ನಂಬಿ ಕೊಂಡಿರಲಾಕ ತುಪ್ಪಳ ತೆಲಿದಿಂಬು।
ಎಂಬೂತೊಳ್ಳಿದು ಬಲವಾ॥

ಕಂಡವರ ಕಣ್ಣಿನ್ ಸೋತಾಗ ಸೆರೆ ಹಿಡಿದು।
ಇರವಂಥ ಎದೆ ಹರವಾ ನೋಡವ್ವಾ॥
ಇದು ಆಗಿನ ಕಾಮಣ್ಣ ನೋಲು
ಕಾಣುವ ಯಾರವ್ವಾ ಇಂವ ಚೆಲುವಾ
ತನ್ನಷ್ಟಕ್ಕೆ ತಾನೆ ನೋಡಿ ನಲಿವಾ॥.[೨]

ಎಂದು ಹೇಳುತ್ತ ಶೃಂಗಾರ ಶೈಲಿಯಲ್ಲಿ ಹಾಡುಗಳ ರಚನೆ ಮಾಡಿರುವುದು ಅವರ ವೈಶಿಷ್ಟ್ಯಗಳಲ್ಲಿ ಒಂದಾಗಿದೆ.

ಬಾಳಪ್ಪನವರು ನಮ್ಮನ್ನು ಅಗಲಿದರೂ ನಮ್ಮ ಮನಸ್ಸಿನಲ್ಲಿ ಇಂದಿಗೂ ಸಹ ಮನೆ ಮಾಡಿದ್ದಾರೆ. ಕಾರಣ ಅವರು ಕೇವಲ ಹಾಡುಗಾರರು ಅಷ್ಟೇ ಆಗಿರಲಿಲ್ಲ. ಅವರದು ಪ್ರಾಮಾಣಿಕ ವ್ಯಕ್ತಿತ್ವ, ಸರಳತೆ, ನೇರ ನಡೆ-ನುಡಿಗಳಿಂದ ಜೊತೆಗೆ ಎಲ್ಲರಲ್ಲಿಯೂ ಅಂತಃಕರಣ ತೋರುವ ಮನೋಭಾವದಿಂದ ಜನಪ್ರಿಯತೆ ಪಡೆದವರು. ಅದಕ್ಕಾಗಿಯೇ ಜನರು ಇವರನ್ನು 'ಜಾನಪದ ಸರದಾರ' ಎಂದು ಕರೆಯುತ್ತಿದ್ದರು.

ಹುಕ್ಕೇರಿ ಬಾಳಪ್ಪ ಹಾಡಿದನೆಂದರೆ
ಉಕ್ಕೇರುವುದು ಕೇಳಲಿಕ್ಕೆ
ಸಕ್ಕರಿಯಾಗುವ ಗಾಯನವೆಂದರೆ
ತಕ್ಕ ಸಮಯವು ದೊರೆಯದಕೆ
ನಮ್ಮ ಊರೆಂಬುದು ಅಭಿಮಾನವನು
ಹೆಮ್ಮೆಯಿಂದಲೆ ಪಡೆದವನು
ಚಿಮ್ಮನೆ ಗಾನ ಲಹರಿಯಲವನು
ಚಿಮ್ಮಿಸಿ ಹೊಮ್ಮಿಸಿ ಕವನವನು
ಕನ್ನಡ ನಾಡಿನ ಕಲೆಗಾರನಿವನು
ಚನ್ನಮ್ಮ ರಾಜ್ಯದ ಕಲಿ ಇವನು
ಮುನ್ನಡೆ ಪಂದುತ ಕೀರ್ತಿಯನು
ಮನ್ನಣೆಯಿಂದಲೆ ಹೊಂದುವನು
ಶರಣ ವಚನಾಮೃತವನು ಸುರಿಸುತಿರುವನು
ನಾಡಿನಲಿ[೩]...

ಹೀಗೆ ಬಾಳಪ್ಪನವರ ಗಾಯನ, ಗಾನ, ಲಹರಿ, ಕಲೆ, ಶರಣ ವಚನಾಮೃತ ಮತ್ತು ವಿವಿಧ ಕ್ಷೇತ್ರಗಳಲ್ಲಿ ಅವರು ಸಲ್ಲಿಸಿದ ಸೇವೆಯನ್ನು ಬಸವರಾಜ ಅಂಗಡಿ ಅವರು "ಚೆನ್ನಮ್ಮ ರಾಜ್ಯದ ಕವಿ" ಎಂಬ ಕವನದಲ್ಲಿ ನೆನೆಸುತ್ತಾರೆ. ಬಾಳಪ್ಪನವರ ವ್ಯಕ್ತಿತ್ವ ಯಾವ ರೀತಿಯಲ್ಲಿ ಸಮಾಜ ಕಂಡಿತ್ತು ಎಂಬುದರ ಕುರಿತು ಇನ್ನೂ ಹಲವಾರು ಸಾಹಿತಿಗಳು ತಮ್ಮ ತಮ್ಮ

ಮಾತುಗಳಲ್ಲಿ, ಕವನದ ಮೂಲಕ ವಿವರಿಸಿದ್ದಾರೆ. ಇಂತಹ ಅಪರೂಪದ ವ್ಯಕ್ತಿತ್ವ ಬಾಳಪ್ಪ ಹುಕ್ಕೇರಿಯವರದು.

**ಫಕ್ಕೀರಪ್ಪ ಇಟಗಿ**

ಫಕ್ಕೀರಪ ಇಟಗಿ ಅವರು ಹುಟ್ಟಿದ್ದು ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನ ಬೈಲೂರು ಗ್ರಾಮದಲ್ಲಿ. ಈ ಗ್ರಾಮ ಒಬ್ಬರಲ್ಲ ಇಬ್ಬರು ಜಾನಪದ ದಿಗ್ಗಜರನ್ನು ಕನ್ನಡನಾಡಿಗೆ ಕೊಡುಗೆಯಾಗಿ ಇತ್ತ ಪುಣ್ಯಭೂಮಿಯೆಂದರೆ ತಪ್ಪಾಗಲಾರದು. ಒಬ್ಬರು ಫಕ್ಕೀರಪ್ಪ ಇಟಗಿ ಅವರಾದರೆ ಇನ್ನೋರ್ವರು ಬಸವಲಿಂಗಯ್ಯ ಹಿರೇಮಠ.

ಫಕ್ಕೀರಪ್ಪ ಇಟಗಿ ರೈತರ ಕುಟುಂಬದಿಂದ ಬಂದವರು. ತಂದೆ ದೇವಪ್ಪನಿಂದ ಕಲಾ ಸಂಪತ್ತನ್ನು ಬಳುವಳಿಯಾಗಿ ಪಡೆದುಕೊಂಡವರು. ಬಯಲಾಟಗಳಲ್ಲಿ ಹಾಡಿದವರು, ಹಾರ್ಮೋನಿಯಂ, ಕಾಲಪೆಟ್ಟಿಗೆ, ಕೈಪೆಟ್ಟಿಗೆ ಮತ್ತು ತಾಳವಾದ್ಯದಲ್ಲಿ ಪರಿಣಿತ ಕಲಾವಿದರು. ಭಕ್ತಿಗೀತೆಗಳು, ತತ್ವಪದಗಳು, ದಾಸರ ಪದಗಳು, ವಚನ ಸಂಗೀತ ಹಾಡುತ್ತ ಬೆಳೆದವರು. ಊರಲ್ಲಿ ನಡೆಯುವಂತ ಬಯಲಾಟಗಳಾದ ಪಾರಿಜಾತ, ಸಂಗ್ಯಾಬಾಳ್ಯಾ, ನಿಜಗುಣರ ಆಟ, ಸೋಮಪ್ರಭೆ ಮುಂತಾದ ಆಟಗಳಲ್ಲಿ ತಮ್ಮ ಸಂಗೀತ ಸೇವೆಯನ್ನು ನೀಡಿದ್ದಾರೆ. ಬಯಲಾಟ ಕಲಿಸುವುದಕ್ಕೆ, ಗುಂಡೇನಟ್ಟಿ, ಗೋಸೇನಟ್ಟಿ, ಗಂದಿಗವಾಡ, ಇಟಗೆ, ತೊಲಗೆ, ಕಾದರೊಳ್ಳಿ, ತಿಗಡೊಳ್ಳಿ ಮುಂತಾದ ಹಳ್ಳಿಗಳಿಗೂ ಹೋಗಿ ಕಲೆಯನ್ನು ಉಳಿಸಲು, ಬೆಳೆಸಲು ತನ್ನ ಜೀವವನ್ನೇ ಸವೆಸಿದ ಹಿರಿಯ ಜೀವಿ ಫಕ್ಕೀರಪ್ಪ.

ಫಕ್ಕೀರಪ್ಪರ ಕಲಾಸೇವೆ ಅಕ್ಷರಶಃ ಅನನ್ಯವಾದದ್ದು. ಕರ್ನಾಟಕದ ಜಿಲ್ಲೆಗಳು ಸೇರಿದಂತೆ ಭೂಪಾಲ, ದೆಹಲಿ ಮುಂತಾದ ಕಡೆ ಕಲಾ ಪ್ರದರ್ಶನ ನೀಡಿದ್ದಾರೆ. ಸತತವಾಗಿ ೫೦ ವರ್ಷದಲ್ಲಿ ೪೦೦ ಪ್ರಯೋಗಗಳಲ್ಲಿ ಭಾಗಿಯಾಗಿದ್ದಾರೆ. ಇವರು ಹಾಡಿದ ತತ್ವಪದಗಳು.

೧. ದೇವರ ಮನೆಯಿದು ಈ ಜಗವೆಲ್ಲ

೨. ತಂದೆ ತಾಯಿ ದೇವರೆಂದು ನಂಬಿ ಪಾದಪೂಜೆಯ ಮಾಡು

೩. ಏನೂ ಇಲ್ಲದ ಎರಡು ದಿನದ ಸಂಸಾರ

೪. ಕಾಲುಗಳೆರಡು ಗಾಲಿ ಕಂಡಯ್ಯ

೫. ತಾಳಿಬಾಳಿರಬೇಕೋ ತಮ್ಮಾ.

ಮುಂತಾದವುಗಳನ್ನು ಹಾಡಿ ಜನಮನ ಸೂರೆಗೊಳಿಸಿದ್ದಾರೆ. ಭಕ್ತಿಗೀತೆ, ದಾಸರ ಹಾಡುಗಳು ಮತ್ತು ವಚನ ಸಂಗೀತದಲ್ಲಿ ತಮ್ಮದೆಯಾದ ವಿಶೇಷ ಹಾಡುಗಾರಿಕೆಯನ್ನು ಹೊಂದಿದ್ದಾರೆ. ಆಕಾಶವಾಣಿ, ದೂರದರ್ಶನ, ನಾಟಕ ಅಕಾಡೆಮಿ, ಜನಪದ ಅಕಾಡೆಮಿ

ಶಿಬಿರಗಳಲ್ಲಿ ತಾಳವಾದ್ಯ ಮತ್ತು ಹಿಮ್ಮೇಳದ ತರಬೇತಿ ನೀಡಿದ್ದಾರೆ. ಫಕ್ಕೀರಪ್ಪ ತನ್ನ ಮಕ್ಕಳಿಗೂ ಕಲಾಸಂಸ್ಕಾರ ನೀಡಿದ್ದಾರೆ. ಇವರ ಮಡದಿ ತಾಯವ್ವ ನಿಜವಾಗಿಯೂ ತಾಯಿಯ ಪ್ರತೀಕ. ಮನೆತನದ ಜವಾಬ್ದಾರಿ ತಾನೇ ಹೊತ್ತು ಗಂಡನ ಕಲಾಸೇವೆಗೆ ಮುಡಿಪಾಗಿರುವಂತೆ ಅನುಕೂಲಿಣಿ ಆದವರು.

ಇವರಿಗೆ ಬೇರೆ ಬೇರೆ ಸಂಘ ಸಂಸ್ಥೆಗಳಿಂದ ಮಾನಸಮ್ಮಾನ ಗೌರವಗಳು ದೊರೆತಿವೆ. ಇವರ ಮಕ್ಕಳಾದ ಉಮೇಶ, ಮಹಾಂತೇಶ ಮತ್ತು ರುದ್ರಪ್ಪ ಕೂಡ ಫಕ್ಕೀರಪ್ಪರಿಂದ ಮಾರ್ಗದರ್ಶನ ಪಡೆದುಕೊಂಡು ಬೆಳೆದವರು. ಇವರ ಹಾಡುಗಳು ಬೇರೆ ಬೇರೆ ಧಾಟಿಗಳಲ್ಲಿ ಇಂದು ಆಧುನಿಕ ಮಾಧ್ಯಮಗಳ ಮೂಲಕ ಬಿತ್ತರಗೊಂಡಿವೆ.

**ಬೌರಮ್ಮ ಕೊಟ್ಟಲಗಿ**

ಇವರು ೧೯೫೮ ಜುಲೈ, ೮ರಂದು ಬೆಳಗಾವಿ ಜಿಲ್ಲೆ ಅಥಣಿ ತಾಲೂಕಿನ ಕೊಟ್ಟಲಗಿ ಗ್ರಾಮದಲ್ಲಿ ಜನಿಸಿದರು. ಬೌರಮ್ಮನಂತ ಕಲಾವಿದರು ನವಮೌಖಿಕ ಸಾಹಿತ್ಯದ ನೆಲೆಯಲ್ಲಿ ಎಲೆಮರೆಯ ಕಾಯಿಯಂತೆ ತಮ್ಮನ್ನು ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಬೌರಮ್ಮರ ಮನೆತನಕ್ಕೆನು ಹಾಡಿನ ಹಿನ್ನೆಲೆಯಿಲ್ಲ. ಇವರಿಗೆ ಹೆತ್ತವರ, ಗುರುಗಳ, ಗ್ರಾಮದವರ ಪ್ರೇರಣೆಯೇ ಅಭಿವೃದ್ಧಿಗೆ ಕಾರಣವಾಯಿತು. ಇವರು ಐದನೆಯ ವಯಸ್ಸಿನಲ್ಲಿ ಗೀಗೀ ಹಾಡಿನ ಹುಚ್ಚು ಹಚ್ಚಿಕೊಂಡವರು. ಕನಮಡಿಯ ದುರ್ಗಪ್ಪ ಹೊಸಮನಿ ಇವರಿಗೆ ಗೀಗೀ ಪದಗಳನ್ನು ಕಲಿಸಿದ ಗುರುಗಳು. ೧೦ನೇ ವಯಸ್ಸಿನಲ್ಲಿ ಹೊಸಮನಿ ಗುರುಗಳಿಂದ ಕೇವಲ ಆರು ತಿಂಗಳಲ್ಲಿ ಹಾಡುವುದನ್ನು ಕಲಿತರು. ಸಂಖ ಗ್ರಾಮದ ಹನಮಂತ ಕಲಾಲ ಇವರು ಸೂರು ಹಿಡಿಯುತ್ತಿದ್ದರು. ಹೀಗೆ ಇವರೆಲ್ಲ ಬೌರಮ್ಮಗೆ ಪ್ರೇರಣೆಯಾದರು. ಹತ್ತನೇ ವಯಸ್ಸಿನಲ್ಲಿ 'ಹರದೇಸಿ ನಾಗೇಸಿ' ಕಾರ್ಯಕ್ರಮವೊಂದರಲ್ಲಿ ಎದುರಾಳಿಯ ಪ್ರಶ್ನೆಗೆ ಹೆದರಿ ವೇದಿಕೆ ಬಿಟ್ಟು ಓಡಿ ಬಂದು ಹಾಡುವುದನ್ನು ಬಿಟ್ಟುಬಿಡಬೇಕೆಂಬ ನಿರ್ಧಾರಕ್ಕೆ ಬಂದ ಬೌರಮ್ಮರಿಗೆ ಮರು ಉತ್ಸಾಹ ತುಂಬಿ ಬೆಳೆಸಿದವರು ಹೊಸಮನಿ ಗುರುಗಳು. ಇವರಿಂದ ಪ್ರೇರಿತರಾಗಿ ೧೬ನೇ ವಯಸ್ಸಿನಲ್ಲಿ ಸಫಲ ಮಾಡುವ ಮತ್ತು ಜವಾಬ ಮಾಡುವ ಸಾಮರ್ಥ್ಯ ಬೆಳೆಸಿಕೊಂಡರು. ಹೀಗೆ ಐದು ದಶಕಗಳಿಗಿಂತಲೂ ಹೆಚ್ಚು ಕಾಲ ಸೇವೆ ಮಾಡಿ ಗೀಗೀ ಪ್ರಕಾರಕ್ಕೆ ಅಪರೂಪದ ಕೊಡುಗೆ ನೀಡಿದ್ದಾರೆ.

ಮಹಾರಾಷ್ಟ್ರದ ಸೊಲ್ಲಾಪುರ, ಸಂಖ, ಕರ್ನಾಟಕದ ಅಥಣಿ, ಬೆಳಗಾವಿ, ಬಾಗಲಕೋಟ, ಕಲಬುರಗಿ, ಮುಧೋಳ ಮುಂತಾದ ಕಡೆ ಇವರು ಜಾನಪದ ಸೇವೆಯನ್ನು ಮಾಡಿದ್ದಾರೆ. ಇವರ ಹಾಡುಗಳನ್ನೇ ಕೆಲವರು ಅಲ್ಪಸ್ವಲ್ಪ ಮಾರ್ಪಾಡುಗಳೊಂದಿಗೆ ನವಮೌಖಿಕ ಸಾಹಿತ್ಯ ಸ್ವರೂಪದಲ್ಲಿ ಬಳಸಿಕೊಂಡಿದ್ದಾರೆ. ಬೌರಮ್ಮರ ಅನನ್ಯ ಸೇವೆಗೆ ಗುಲ್ಬರ್ಗಾದ ಅಖಿಲ ಭಾರತ ಅನುಭವ ಮಂಟಪದ ಅಧ್ಯಕ್ಷರಿಂದ 'ಜಾನಪದ ಸಾಹಿತ್ಯ ದಾಸೋಹಿ' ಎಂಬ ಬಿರುದು ದೊರೆತಿದೆ. ಜಾತ್ರೆ, ಓಕುಳಿ ಮುಂತಾದ ಕಾರ್ಯಕ್ರಮಗಳಿಗೆ

ಬೌರಮ್ಮನಿಗೆ ಆಹ್ವಾನವಿರುತ್ತದೆ. ಇವರ ಜನಪದ ಗೀಗೀಯ ಸಾಥಿಗಳೆಂದರೆ ಸೂರು ಹಿಡಿಯುವವರಾಗಿ ಬಾಳಾಸಾಹೇಬ ಕಾಂಬಳೆ, ತಾಳ ಹಿಡಿಯುವವರು ಸದಾಶಿವ ಕೊಮೆನಳ್ಳಿ, ಜಾನಪದ ಕಲಾಮೇಳ, ಜಾನಪದ ಉತ್ಸವ, ಗಡಿನಾಡ ಉತ್ಸವಗಳಲ್ಲಿ ಕರ್ನಾಟಕ, ಮಹಾರಾಷ್ಟ್ರ ಮುಂತಾದ ಕಡೆ ಭಾಗವಹಿಸಿದ್ದಾರೆ. ಅಲ್ಲದೇ ಸರ್ಕಾರಿ ಕಾರ್ಯಕ್ರಮಗಳಲ್ಲೂ ಕಲಾಪ್ರದರ್ಶನ ನೀಡಿ ಕನ್ನಡ ಮನಸ್ಸುಗಳಿಗೆ ಮನರಂಜನೆ ನೀಡಿದ ಶ್ರೇಯಸ್ಸು ಬೌರಮ್ಮನವರಿಗೆ ಸಲ್ಲುತ್ತದೆ.

**ಗೌರಮ್ಮ ಚಲವಾದಿ**

ಕನ್ನಡ ಜಾನಪದ ಲೋಕವನ್ನು ಸೂಕ್ಷ್ಮವಾಗಿ ಅಧ್ಯಯನಕ್ಕೆ ಒಳಪಡಿಸಿದಾಗ ಮನದಟ್ಟಾಗುವ ಮುಖ್ಯ ಸಂಗತಿಯೇನೆಂದರೆ ಪುರುಷರಷ್ಟೇ ಸರಿಸಮನಾಗಿ ಮಹಿಳೆಯರೂ ಸಹ ಜಾನಪದ ಗಂಗೆಯ ಸೇವೆಯನ್ನು ಮಾಡಿದ್ದಾರೆ ಎಂಬುದು. ಅದರಲ್ಲೂ ಉತ್ತರ ಕರ್ನಾಟಕದ ಜಾನಪದ ಕ್ಷೇತ್ರದಲ್ಲಿ ಇದು ಅತ್ಯಂತ ಗಮನಾರ್ಹವಾದ ಸಂಗತಿಯಾಗಿದೆ. ಅಂತವರಲ್ಲಿ ಗೌರಮ್ಮ ಚಲವಾದಿಯವರು ಒಬ್ಬರು.

ಗುರು ಬೇಕಮ್ಮ ತಂಗಿ ಗುರುಬೇಕು
ನಿನ್ನ ಶಿರದೊಳು ಕರವಿಟ್ಟು
ಜನ್ಮ ಪವಿತ್ರ ಮಾಡುವ
ಗುರು ಬೇಕಮ್ಮ ತಂಗಿ ಗುರುಬೇಕು[9]...

ಎಂದು ಹಾಡಿದ ಕಂಚಿನ ಕಂಠದ ಗೌರಮ್ಮರ ಗಾಯನದ ಮೋಡಿಗೆ ಒಳಗಾಗದವರು ತುಂಬ ವಿರಳವೆಂದೇ ಹೇಳಬಹುದು. ಇವರ ಹಾಡುಗಳು ನವಮೌಖಿಕದ ಅಭಿವೃದ್ಧಿಗೆ ಬೆನ್ನೆಲುಬಿನಂತೆ ನಿಂತು ಕಾರ್ಯ ಮಾಡುತ್ತಿವೆ.

ಗೌರವ್ವ ಚಲವಾದಿಯವರು ಹೂವಣ್ಣ ಮತ್ತು ಯಲ್ಲವ್ವ ಇವರ ಏಳನೆಯ ಮಗಳಾಗಿ, ಗುಲಬರ್ಗಾ ಜಿಲ್ಲೆಯ ಅಪಝುಲಪುರ ತಾಲೂಕಿನ ಹರಮಣ್ಣೂರಿನಲ್ಲಿ ಜನಿಸಿದರು. ಬಡತನದಿಂದಾಗಿ ಅನಕ್ಷರಸ್ಥರಾಗಿ ಉಳಿಯಬೇಕಾಯಿತು. ಹುಟ್ಟೂರಲ್ಲೇ ಇರದೆ ಮುಂದೆ ಧಾರವಾಡ ಜಿಲ್ಲೆಯ ನವಲಗುಂದಕ್ಕೆ ವಲಸೆ ಬಂದು, ನಂತರದಲ್ಲಿ ತಮ್ಮ ಜೀವಿತಾವಧಿಯನ್ನು ಬಾಗಲಕೋಟೆಯಲ್ಲಿ ಕಳೆದರು.

ಅನಕ್ಷರಸ್ಥೆಯಾದ ಈ ಗೌರಮ್ಮ ಚಲವಾದಿ ಅವರ ಮೇಲೆ ಮೊದಮೊದಲು ಪ್ರಭಾವ ಬೀರಿದ್ದು ಹಳ್ಳಿಯ ಕುಟ್ಟುವ ಬೀಸುವ ಮತ್ತು ಸೋಬಾನೆ ಪದಗಳು. ಅನಂತರ ಮತ್ತೊಂದು ಪ್ರಭಾವವೆಂದರೆ ಇವರ ತಾಯಿಯದು. ಅಂದರೆ ಇವರ ತಾಯಿಯು ಕೂಡ ಉತ್ತಮ ಹಾಡುಗಾರ್ತಿಯಾಗಿದ್ದರು. ಗೌರಮ್ಮ ಎಂಟನೇ ವಯಸ್ಸಿನಲ್ಲಿ ಇರುವಾಗಲೇ ಈ ಕಲೆಯನ್ನು ಕರಗತ ಮಾಡಿಕೊಂಡವರು. ಬಾಲ್ಯದಲ್ಲಿ ಇವರಿಗೆ ಮದುವೆಯಾಯಿತು. ಗಂಡ ಬೇಗನೆ ತೀರಿಕೊಂಡ. ಮುಂದೆ ಸಾಲೋಟಗಿ ಶೆಟ್ಟೆಪ್ಪನೊಂದಿಗೆ ಎರಡನೇ ಮದುವೆಯಾಯಿತು.

ಸುಖಮಯ ಸಂಸಾರ ಸಾಗಿ ಮಲ್ಲಿಕಾರ್ಜುನ ಮತ್ತು ಶಾಂತಕ್ಕ ಎಂಬ ಮಕ್ಕಳಾದವು. ಮುಂದೆ ಆಕಸ್ಮಿಕವಾಗಿ ಗಂಡ ತೀರಿ ಸಂಸಾರದ ಭಾರ ಪೂರ್ಣ ಅವರ ಬೆನ್ನಿಗೆ ಬಿತ್ತು. ಮಕ್ಕಳೊಂದಿಗೆ ನವಲಗುಂದಕ್ಕೆ ವಲಸೆ ಹೋಗಬೇಕಾಯಿತು. ಅಲ್ಲಿ ಸಮಯ ಸಿಕ್ಕಾಗಲೆಲ್ಲ ನಿಜಗುಣ ಶಿವಯೋಗಿಗಳು, ಗರಗದ ಮಡಿವಾಳಪ್ಪ, ಶಿಶುನಾಳ ಶರೀಫ್‌ರು, ಕಡಕೋಳ ಮಡಿವಾಳಪ್ಪ, ಬಬಲಾದಿ ಚಿಕ್ಕಯ್ಯಪ್ಪ ಮುಂತಾದರ ಪದಗಳನ್ನು ಹಾಡುತ್ತಿದ್ದರು. ಗದಗಿನ ಪೂಜ್ಯ ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳಿಗೆ ಪರಿಚಯವಾಗಿ ಅವರ ಕೃಪೆಯಿಂದ ನಾಡಿನ ತುಂಬೆಲ್ಲ ಹಾಡುಗಾರ್ತಿ ಎಂದು ಪರಿಚಿತಳಾದವರು.

ಜಾನಪದ ಹಾಡುಗಳ ದೊರೆಸಾನಿ, ಶೋಷಿತ ವರ್ಗದಲ್ಲಿ ಉದಯಿಸಿದ ಶಾರದೆ, ದೀಡಸಾವಿರ ಹಾಡಿನ ಸರದಾರಿಣಿ ಮುಂತಾದ ಬಿರುದುಗಳು ಇವರಿಗೆ ಸಂದಿವೆ. ೧೯೯೮ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ೧೯೯೯ರಲ್ಲಿ ಬಿ.ಆರ್.ಅಂಬೇಡ್ಕರ್ ಪ್ರಶಸ್ತಿ, ಅಖಿಲ ಭಾರತ ೬೮ನೇ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ. "ಚಲವಾದಿ ಗೌರಮ್ಮನ ಕತೆಗಳು" ಎಂಬುದು ಸರೋಜಿನಿ ಪಾವಟೆಯವರಿಂದ ಸಂಗ್ರಹವಾಗಿದೆ. ಡಾ. ಪ್ರಕಾಶ ಖಾಡೆ ಅವರು ಗೌರಮ್ಮನವರ ಕುರಿತಾಗಿ ಸಂಕ್ಷಿಪ್ತ ಜೀವನ ಚರಿತ್ರೆ ಬರೆದಿದ್ದಾರೆ. ಹೀಗೆ ಅಪಾರ ಕಲಾಸೇವೆಯ ಮೂಲಕ ಕೊಡುಗೆ ನೀಡಿದ ಗೌರಮ್ಮ ಜೂನ್ ೧೨, ೨೦೦೨ರಲ್ಲಿ ಇಹಲೋಕ ಯಾತ್ರೆ ಮುಗಿಸಿದರು ಕೂಡ ಜನಮಾನಸದಲ್ಲಿ ಅಮರರಾಗಿದ್ದಾರೆ. ಇವರು ಹಾಡಿದ ಎಷ್ಟೋ ಹಾಡುಗಳು ಆಧುನಿಕ ಮಾಧ್ಯಮಗಳ ಮೂಲಕ ಬೇರೆಯವರ ಧ್ವನಿಗಳಲ್ಲಿ ಇಂದು ಬಿತ್ತರಗೊಳ್ಳುತ್ತಿವೆ.

**ಕಾಳವ್ವ ಹೊಂಗಲ**

ಕಲಾದೇವಿಯು ಕೆಲವರ ಮನೆಯಲ್ಲಿ ಒಬ್ಬರಿಗೆ ಒಲಿಯುತ್ತಾಳೆ. ಇಲ್ಲ ಕೆಲವರ ಮನೆಯಲ್ಲಿ ಇಬ್ಬರಿಗೆ ಅಥವಾ ಮೂವರಿಗೆ ಒಲಿಯುತ್ತಾಳೆ. ಆದರೆ ಹೆಚ್ಚು ಕಡಿಮೆ ಮನೆಮಂದಿಗೆಲ್ಲ ಕಲಾದೇವಿಯು ಕೃಪೆಯಾದಂತಹ ಕುಟುಂಬಗಳು ತುಂಬಾ ವಿರಳ. ಅಂತ ವಿರಳವಾದ ಕುಟುಂಬದಲ್ಲಿ ಕಾಳವ್ವ ಹೊಂಗಲ ಇವರ ಕುಟುಂಬವು ಒಂದು. ಕಾಳವ್ವನ ತಾಯಿ ಸಾವಂತ್ರೆವ್ವನಿಗೆ ಮತ್ತು ಕಾಳವ್ವನ ಅಜ್ಜಿಗೆ ಜೋಗುಳ, ಸೋಬಾನೆ ಪದಗಳನ್ನು ಹಾಡುವ ಕಲೆಯು ಕರಗತವಾಗಿತ್ತು. ಶ್ರೇಷ್ಠ ಹಾಡುಗಾರ್ತಿಯಾದ ಕಾಳವ್ವ ತನ್ನ ಸಹೋದರಿಯರಾದ ಮಲ್ಲಮ್ಮ, ಪಾರ್ವತಿ, ಚಂಬಮ್ಮ, ಈರವ್ವ, ದಾನವ್ವ ಇವರೆಲ್ಲರನ್ನು ಕರೆದುಕೊಂಡು ಹಾಡತೊಡಗಿದರು.

ಕಾಳವ್ವ ಹುಟ್ಟಿದ್ದು ಧಾರವಾಡ ತಾಲೂಕಿನ ದೇವರ ಹುಬ್ಬಳ್ಳಿಯಲ್ಲಿ. ಸಾವಂತ್ರೆವ್ವ ಬಸವಣ್ಣೆಪ್ಪ ದಂಪತಿಗಳ ಮಗಳಾಗಿ ಜನಿಸಿದ ಇವರು ಜಾನಪದ ಕ್ಷೇತ್ರಕ್ಕೆ ತಮ್ಮದೆಯಾದ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ದೇವರ ಮಂಗಳಾರುತಿ, ಜೋಗುಳ ಪದ, ಭತ್ತ ರಾಗಿ ಕುಟ್ಟುವ ಪದ, ಗರ್ಭಿಣಿ, ಬಾಣಂತಿಯರ ಪದ ಹೀಗೆ ಸಂದರ್ಭಕ್ಕೆ ತಕ್ಕಂತೆ ಹತ್ತಾರು

ಹಾಡುಗಳನ್ನು ಕಾಳವ್ವ ಹಾಡುತ್ತಿದ್ದರು. ಸಣ್ಣಪುಟ್ಟ ಕಾರ್ಯಕ್ರಮಗಳಲ್ಲಿ, ಆಕಾಶವಾಣಿಯಲ್ಲಿ ಹೀಗೆ ಮುಂತಾದ ಕಡೆಗಳಲ್ಲಿ ಹಾಡಿದ್ದಾರೆ. ದೇವರ ಹುಬ್ಬಳ್ಳಿಯಲ್ಲಿ ಯಾವುದೇ ಕಾರ್ಯಕ್ರಮ ಇರಲಿ ಕಾಳವ್ವನ ಮಧುರ ಸ್ವರದ ಹಾಡು ಕೇಳದೆ ಇರುತ್ತಿರಲಿಲ್ಲ. ಮದುವೆಯಲ್ಲಿ ಸೋಬಾನೆ ಪದಗಳನ್ನು ಹಾಡುತ್ತಿದ್ದರು.

ಮುಂದೆ ಸೋದರಮಾವ ರುದ್ರಪ್ಪ ಹೊಂಗಲರೊಂದಿಗೆ ಮದುವೆಯಾದ ನಂತರವೂ ಅವರ ಹಾಡಿನ ಬಂಡಿ ಮುಂದುವರೆಯುತ್ತಲೇ ಇತ್ತು. ಕಾಳಮ್ಮ ಸೋದರಿಯರೊಂದಿಗೆ ಸೇರಿ ನಿರಂತರವಾಗಿ ಜನಪದ ಸೇವೆಗೈದರು. ಹಣ ಪಡೆಯದೇ ತಮ್ಮ ಕಲಾ ಪ್ರದರ್ಶನ ನೀಡುತ್ತಿದ್ದರು ಎಂಬುದು ಮತ್ತೊಂದು ಮುಖ್ಯ ಸಂಗತಿಯಾಗಿದೆ. ಒಂದೇ ಗೂಡಿನ ಹಕ್ಕಿಗಳಾದ ಈ ಸಹೋದರಿಯರ ಹಾಡುಗಳು ನವಮೌಖಿಕ ಸಾಹಿತ್ಯದಲ್ಲಿಯೂ ಮೂಡಿಬಂದಿವೆ. ಅಕ್ಕ ಮಹಾದೇವಿ ಮಹಿಳಾ ಮಂಡಳ ಹಾಗೂ ಭಾರತ ಮಾತಾ ಸ್ವ-ಸಹಾಯ ಸಂಘ ಕಟ್ಟಿಕೊಂಡು ಸಾವಿರ ಸಾವಿರ ಸುಂದರ ಕಾರ್ಯಕ್ರಮಗಳನ್ನು ನೀಡಿದ ಕಾಳವ್ವರಿಗೆ, ೨೦೦೪ರಲ್ಲಿ ಜಾನಪದ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಕಾಳವ್ವ ತನ್ನ ಮಗ ಮಲ್ಲಪ್ಪನನ್ನು ರಂಗಭೂಮಿ ಸೇವೆಗೆ ತೊಡಗಿಸಿದ್ದಾರೆ ಎಂಬುದು ಅವರ ಕಲಾಸಕ್ತಿ, ಕಲಾ ಕಾಳಜಿಯನ್ನು ಎತ್ತಿ ಹಿಡಿಯುವಂತದ್ದಾಗಿದೆ.

**ರಾಮಣ್ಣ ಜೋಗೇರ**

ಜನಪದ ಎಂಬ ರತ್ನದ ಮಾಲೆಯಲ್ಲಿ ರಾಮಣ್ಣ ಜೋಗೇರ ಎಂಬುವವರು ಕೂಡ ಒಂದು ರತ್ನ. ಇವರು ಜನವರಿ ೧, ೧೯೪೭ರಂದು ಗದಗ ಜಿಲ್ಲೆಯ ಮುಳುಗುಂದ ಗ್ರಾಮದಲ್ಲಿ ಜನಿಸಿದರು. ರಾಮಣ್ಣ ಜೋಗೇರ ಅವರನ್ನು ಅವರ ಹಳ್ಳಿಯಲ್ಲಿ ಜನ ರವಾನಾಕಾರ ರಾಮಣ್ಣ, ಜೋಗಿ ರಾಮಣ್ಣ ಎಂದು ಕರೆಯುತ್ತಾರೆ. ರಾಮಣ್ಣ ಡೊಳ್ಳಿನ ಪದ ಮತ್ತು ಚೌಡಕಿ ಪದಗಳನ್ನು ಅತ್ಯಂತ ಸುಶ್ರಾವ್ಯವಾಗಿ ಜನರ ಮನಮುಟ್ಟುವಂತೆ ಹಾಡ ಬಲ್ಲವರಾಗಿದ್ದಾರೆ. ಅಷ್ಟೇ ಅಲ್ಲದೇ ಇವರು ಒಬ್ಬ ಅಭಿಜಾತ ಜನಪದ ಕಲಾವಿದರು ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಇವರಲ್ಲಿ ಭಾಗವತ ಪುರಾಣ, ರಾಮಾಯಣ, ಮಹಾಭಾರತದಂತಹ ಭಾರತೀಯ ಸಂಸ್ಕೃತಿಯ ಅನೇಕ ವಿಚಾರಧಾರೆಗಳು ಕಥೆಗಳು ಇವೆ. ಕಲಾವಿದರ ಬದುಕಿನಲ್ಲಿ ಬಡತನ ಎಂಬುವುದು ಅನಿವಾರ್ಯವೊ ಏನೋ ಯಾರಿಗೂ ತಿಳಿಯದು.

ರಾಮಣ್ಣನವರು ಬಾಲ್ಯದಲ್ಲಿ ನಾಲ್ಕನೆಯ ತರಗತಿಯವರೆಗೆ ಶಿಕ್ಷಣ ಪಡೆದು. ನಂತರದಲ್ಲಿ ಬಡತನದಿಂದಾಗಿ ಅವರ ತಂದೆ ಅವರನ್ನು ಶಾಲೆ ಬಿಡಿಸಿ, ಕುರಿ ಕಾಯುವ ಕೆಲಸಕ್ಕೆ ಹಚ್ಚಿದರು. ಕುರಿ ಕಾಯುವ ಕೆಲಸದಲ್ಲಿ ಮುಂದುವರಿದು ಕುರಿಯ ಹಿಂಡಿನಲ್ಲಿ ದೊಡ್ಡವರಾದರು. ಸಾಯಂಕಾಲ ಮನೆಗೆ ಬಂದ ನಂತರ ಮನೆಯ ಪಕ್ಕದಲ್ಲಿರುವ ಬೀರದೇವರ ದೇವಸ್ಥಾನದಲ್ಲಿ ದಿಮ್ಮಿಗಳನ್ನು ಬಾರಿಸುತ್ತಾ ಹಾಡುಗಳನ್ನು ಹಾಡುತ್ತಿದ್ದರು.

ಜನಪದದ ಕಡೆಗೆ, ಕಾಡಿನ ಕಡೆಗೆ ಸಹಜವಾದ ಆಸಕ್ತಿಯನ್ನು ಹೊಂದಿರುವ ರಾಮಣ್ಣ ಅಲ್ಲಿ ಹೋಗಿ ಎಲ್ಲಾ ಕಲೆಗಳನ್ನು ಅತ್ಯಂತ ಆಸಕ್ತಿಯಿಂದ ಆಲಿಸುತ್ತಿದ್ದರು. ದಿನ ಕಳೆದಂತೆ ತಾನು ದಿಮ್ಮಿಗಳನ್ನು ಬಾರಿಸುವುದು ಮತ್ತು ಹಾಡುಗಳನ್ನು ಹಾಡುವುದನ್ನು ಕರಗತ ಮಾಡಿಕೊಂಡು ಮುಂದೆ ಈ ಬಾಲಕನಲ್ಲಿ ಇರುವಂತಹ ಅತೀವ ಆಸಕ್ತಿಯನ್ನು ಕಂಡು ಡೊಳ್ಳುವಾದನದಲ್ಲಿ, ಹಾಡುಗಾರಿಕೆಯಲ್ಲಿ ಪಾಂಡಿತ್ಯವನ್ನು ಪಡೆದುಕೊಂಡಂತಹ ಎಲ್ಲಪ್ಪ ಪೂಜಾರಿ ಎಂಬುವರು ಇವರಿಗೆ ಎಲ್ಲ ಕಲೆಗಳನ್ನು ಕಲಿಸಲು ಆರಂಭಿಸಿದರು. ತಮಗೆ ತಿಳಿದಂತಹ ಡೊಳ್ಳಿನ ಹಾಡುಗಳನ್ನು ಅವರು ದಿನನಿತ್ಯ ರಾಮಣ್ಣನಿಗೆ ಕಲಿಸಲಾರಂಭಿಸಿದರು. ಅಷ್ಟೇ ಅಲ್ಲದೇ ಅವರನ್ನು ಶ್ರೇಷ್ಠ ಹಾಡುಗಾರನನ್ನಾಗಿ ಮಾಡಲು ನಿರಂತರವಾಗಿ ಎಲ್ಲಪ್ಪನವರು ಶ್ರಮಿಸಿದರು. ಅವರ ಆಶೀರ್ವಾದದ ಬಲದಿಂದ ರಾಮಣ್ಣ ಶ್ರೇಷ್ಠ ಗಾಯಕರಾಗಿ ಬೆಳೆದರು.

ಕಾಲ ಕಳೆದಂತೆ ರಾಮಣ್ಣನವರು ವಾಲಗ ಬಡಿಯುವುದರಲ್ಲಿ ನಿಪುಣರಾದರು ಜೊತೆಗೆ ಬೇರೆ ಬೇರೆ ರೀತಿಯ ಪದಗಳನ್ನು ಕಲಿತರು. ರಾಮಣ್ಣ ಮೊದಲು ಕಲಿಕೆ ಆರಂಭಿಸಿದ್ದು ಬೀರ ದೇವರ ಗುಡಿಯಲ್ಲಿ, ಹಾಗೆಯೇ ಅವರಿಗೆ ಅತ್ಯಂತ ಸೂಕ್ತವಾದ ವೇದಿಕೆ ಒದಗಿದ್ದು ಕೂಡ ಬೀರದೇವರ ಗುಡಿಯಲ್ಲೆ. ಪ್ರತಿ ರವಿವಾರ, ಗುರುವಾರ ಅಮಾವಾಸ್ಯೆ ಹುಣ್ಣಿಮೆಯಂದು ಮತ್ತು ಬೇರೆ-ಬೇರೆ ಹಬ್ಬ-ಹರಿದಿನಗಳಂದು ಗುಡಿಯ ಕಟ್ಟಿ ಮೇಲೆ ಒಂದು ಕಂಬಳಿಯನ್ನು ಹಾಸಿ ಅದರ ಮೇಲೆ ಎಲ್ಲ ದಿಮ್ಮಿಗಳನ್ನು ಬಿಟ್ಟು, ತಮ್ಮ ಎಲ್ಲ ಸಹಚರರಾದ ಸಿದ್ದಪ್ಪ ಪೂಜಾರಿ, ನೀಲಪ್ಪ ಜಂಪಾಲ, ನಿಂಗಪ್ಪ ಮಾವಿನಕಾಯಿ ಮತ್ತು ನೀಲಪ್ಪ ಹರ್ತಿ, ನಾಗಪ್ಪ ಜೋಗಿ ಮುಂತಾದ ಹಿಮ್ಮೇಳದವರು ಸೇರಿಕೊಂಡು ಒಂದು ಕೈ ದಿಮ್ಮಿ ಬಡಿದು ಸ್ವರದೊಂದಿಗೆ 'ಸ್ವಾಮಿ ನಮ್ಮ ದೇವರು ಬಂದಾವ ಬನ್ನಿರೆ, ಗುರು ರೇವಣಸಿದ್ದಂಗೆ ಶರಣೆನ್ನುವೆನೀ' ಎಂದು ಹಾಡನ್ನು ಆರಂಭಿಸುತ್ತಿದ್ದರು. ದೇವಸ್ಥಾನದಲ್ಲಿರುವ ಎಲ್ಲಾ ಭಕ್ತ ಸಮುದಾಯದವರು ರಾಮಣ್ಣನ ಎದುರಿಗೆ ಭಾವ ಪರವಶರಾಗಿ ಕುಳಿತು ತದೇಕಚಿತ್ತದಿಂದ ಹಾಡುಗಳನ್ನು ಆಲಿಸುತ್ತಿದ್ದರು. ಬೀರ ದೇವರ, ಭರಮ ದೇವರ ಹಾಡನ್ನು ಹಾಡುವ ಮೂಲಕ ಅವರ ಮನವನ್ನು ಸಂತೋಷ ಪಡಿಸುತ್ತಿದ್ದರು. ಇವರ ಒಂದು ಕಲಾ ಸಿರಿವಂತಿಕೆಗೆ ಆರಂಭವಾದದ್ದು ಈ ದೇವಸ್ಥಾನದಲ್ಲಿಯೇ. ಹೀಗೆ ಹಾಡುವ ಕಲೆ ಕುಡಿಯೊಡೆದು ಹಳ್ಳಿಯ ಜನರ ಮುಗ್ಧ ಮನಸ್ಸಿನ ನಿಷ್ಕಲ್ಮಶ ಪ್ರೋತ್ಸಾಹದಿಂದ ಎಂಬುವುದು ಸತ್ಯವಾದ ಮಾತು. ಈ ರೀತಿಯಾಗಿ ರಾಮಣ್ಣನಲ್ಲಿ ಮತ್ತು ಹಿಮ್ಮೇಳದವರಲ್ಲಿ ಆತ್ಮವಿಶ್ವಾಸ ಬೆಳೆದು ಪರಸ್ಥಳಗಳಲ್ಲಿ ಕೂಡ ಕಾರ್ಯಕ್ರಮಗಳನ್ನು ನೀಡಲು ಮುಂದಾದರು.

ಉತ್ತರ ಕರ್ನಾಟಕದಲ್ಲಿ ಬೇರೆ ಬೇರೆ ರೀತಿಯ ಸಂಪ್ರದಾಯಗಳನ್ನು ಕಾಣುತ್ತೇವೆ. ಈ ಸಂಪ್ರದಾಯಗಳು ಹಳ್ಳಿಯಿಂದ ಹಳ್ಳಿಗೆ ಬೇರೆ ಬೇರೆಯಾಗಿರುತ್ತವೆ. ಕೆಲವೊಂದು ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ಮಹಾಲಯ ಅಮಾವಾಸ್ಯೆಯ ಮರು ದಿನದಿಂದ ನಂದಾ ದೀಪವನ್ನು ಹಚ್ಚುತ್ತಾರೆ. ಒಂಬತ್ತು ದಿನಗಳು ನಂದಾದೀಪ ನಂದದಂತೆ ಶ್ರದ್ಧೆ ಭಕ್ತಿಯಿಂದ ಕಾಯುತ್ತಾರೆ. ಅದರಂತೆಯೇ ಮುಳುಗುಂದದಲ್ಲಿಯೂ ಕೂಡ ಕುರುಬ ಜನಾಂಗದಲ್ಲಿ

ಒಂದು ಸಂಪ್ರದಾಯವಿತ್ತು. ಏನೆಂದರೆ ಒಂದು ಪರ್ಯಾಣದಲ್ಲಿ ಮಣ್ಣು ತುಂಬಿ ಅದರಲ್ಲಿ ಪಂಚ ಧಾನ್ಯಗಳನ್ನು ಹಾಕಿ, ನೀರು ಸುರುವಿ ಅದನ್ನು ದೇವರ ಜಗುಲಿಯ ಮೇಲೆ ಇಡುತ್ತಾರೆ. ಇವರು ಕೂಡ ಒಂದು ನಂದಾ ದೀಪವನ್ನು ಹಚ್ಚುತ್ತಾರೆ. ಒಂಬತ್ತು ದಿನಗಳವರೆಗೆ ನಂದದಂತೆ ನೋಡಿಕೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ಡೊಳ್ಳಿನ ಮೇಳದವರನ್ನು ತಮ್ಮ ಮನೆಗೆ ಕರೆಸುತ್ತಾರೆ. ಅಹೋರಾತ್ರಿ ಹಾಡುಗಳನ್ನು ಅವರು ಹಾಡಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ರಾಮಣ್ಣ ಮತ್ತು ಅವರ ಮೇಳದವರಿಗೆ ಎಲ್ಲಿಲ್ಲದ ಬೇಡಿಕೆ. ಇವರನ್ನು ಕರೆದುಕೊಂಡು ಹೋಗುವ ಮನೆಯವರು ಇವರಿಗೆ ಮುಂಚಿತವಾಗಿಯೇ ವಿಳೆದೆಲೆಯನ್ನು ಕೊಟ್ಟು ಹೋಗಿರುತ್ತಾರೆ. ಅದರಂತೆ ರಾಮಣ್ಣ ಮತ್ತು ಹಿಮ್ಮೇಳದವರು ಅವರ ಮನೆಗೆ ಹೋಗಿ ಹಾಡುಗಳನ್ನು ಹಾಡುತ್ತಾರೆ. ವಿಶೇಷತೆ ಏನೆಂದರೆ ಒಂದು ಮನೆಯಲ್ಲಿ ಹಾಡಿದ ಹಾಡುಗಳನ್ನು ಮತ್ತೊಂದು ಮನೆಯಲ್ಲಿ ಹಾಡುವಂತಿಲ್ಲ. ಏಕೆಂದರೆ ಹಳ್ಳಿ ಚಿಕ್ಕದಾಗಿರುವುದರಿಂದ ಪಕ್ಕದ ಮನೆಯವರು, ಓಣಿಯವರು, ಊರಿನವರು ಎಲ್ಲರೂ ಅಲ್ಲೇ ಬಂದಿರುತ್ತಾರೆ. ಹಾಡಿದ ಹಾಡುಗಳನ್ನು ಹಾಡಿದರೆ ಕೇಳುಗರಿಗೆ ಬೇಸರವಾಗುತ್ತದೆ. ಆದ್ದರಿಂದ ಹಾಡಿದ ಹಾಡುಗಳನ್ನು ಹಾಡದಂತೆ ಹೊಸ ಹೊಸ ಹಾಡುಗಳನ್ನು ಹಾಡಿ ಕೇಳುಗರ ಮನಸ್ಸಿಗೆ ಸಂತೋಷವನ್ನು ನೀಡುತ್ತಿದ್ದರು. ಇಂದು ಇವರ ಎಷ್ಟೋ ಹಾಡುಗಳು ಆಧುನಿಕ ಮಾಧ್ಯಮಗಳಲ್ಲಿ ಸ್ವರೂಪ ಬದಲಾದ ರೀತಿಯಲ್ಲಿ ಬಳಕೆಗೊಳ್ಳುತ್ತಿವೆ.

ಕೆಲವೊಂದು ಸಾರಿ ಕೇಳುಗರ ಅಭಿರುಚಿಗೆ ತಕ್ಕಂತೆ ಹಾಡುಗಳನ್ನು ಹಾಡುತ್ತಿದ್ದರು. ಇದರಿಂದ ಉಲ್ಲಾಸಿತರಾಗಿ ಜನರು ಪ್ರೀತಿಯಿಂದ ರಾಮಣ್ಣರಿಗೆ ಮತ್ತು ಅವನ ಹಿಮ್ಮೇಳದವರಿಗೆ ಹಣ, ಬಟ್ಟೆಬರೆಗಳನ್ನು, ಮಾನ ಸನ್ಮಾನಗಳನ್ನು ನೀಡಿ ಗೌರವದಿಂದ ಬೀಳ್ಕೊಡುತ್ತಿದ್ದರು. ರಾಮಣ್ಣನವರ ಪ್ರತಿಭೆ ಬೆಳೆಯುತ್ತಾ ಹೋದಂತೆ ಗದಗ ಪಕ್ಕದ ಊರುಗಳಾದ ಅಣ್ಣಿಗೇರಿ, ಕುರ್ತುಕೋಟಿ, ಲಕ್ಕುಂಡಿ ಮುಂತಾದ ಊರುಗಳಿಗೆ ಹೋಗಿ ಕಾರ್ಯಕ್ರಮಗಳನ್ನು ಕೊಟ್ಟರು. ವರ್ಷಕ್ಕೊಮ್ಮೆ ಅಣ್ಣಿಗೇರಿಯಲ್ಲಿ ನಡೆಯುವ ಅಮೃತೇಶ್ವರ ಜಾತ್ರೆ ಮತ್ತು ದುರ್ಗಾ ದೇವಿಯ ಜಾತ್ರೆಗೆ ತಪ್ಪದೇ ಹೋಗುತ್ತಿದ್ದರು. ಹಾಡುವುದರ ಜೊತೆಗೆ ವಾಲಗ ಬಾರಿಸುವುದನ್ನು ಕಲಿತರು. ಮುಂದೆ ಬೇರೆ ಬೇರೆ ಊರುಗಳಿಂದಲೂ ವಾಲಗಗಳು ಬರುತ್ತಿದ್ದವು. ವಾಲಗಗಳ ಮಧ್ಯೆ ಸ್ಪರ್ಧೆ ಏರ್ಪಡುತಿತ್ತು. ತಾಮುಂದು ನಾಮುಂದು ಎಂದು ವಾಲಗಗಳನ್ನು ಬಾರಿಸುತ್ತಿದ್ದ ವರ್ಗದವರಲ್ಲಿ ಒಬ್ಬ ಡೊಳ್ಳನ್ನು ಬಡಿಯುತ್ತಾ ನೆಲದ ಮೇಲೆ ಇರುವ ನಾಣ್ಯವನ್ನು ಅಥವಾ ನೋಟನ್ನು ಇಟ್ಟು ಬಾಗಿ ತೆಗೆದುಕೊಳ್ಳುವ ಅಪರೂಪದ ಭಂಗಿಗಳನ್ನು ನೋಡಲು ಜನರು ಮುಗಿ ಬೀಳುತ್ತಿದ್ದರು. ಈ ಎಲ್ಲ ಕಲೆಗಳಲ್ಲಿಯೂ ಕೂಡ ರಾಮಣ್ಣ ಅತ್ಯಂತ ನಿಪುಣನಾಗಿದ್ದರು. ಪ್ರೇಕ್ಷಕ ವರ್ಗದಿಂದ ಯಾರೋ ಬಂದು ಒಂದು ನಾಣ್ಯವನ್ನು ನೆಲದಲ್ಲಿ ಬಗ್ಗಿ ತಗೆಯಲು ಇಡುತ್ತಿದ್ದರು. ರಾಮಣ್ಣ ರೋಚಕವಾಗಿ ಡೊಳ್ಳು

ಬಡಿಯುತ್ತಾ ತೆಗೆದುಕೊಳ್ಳುತ್ತಿದ್ದರು. ಕಲೆಗೆ ಯಾವ ಕುಲದ ಹಂಗಿಲ್ಲಾ ಜಾತಿಯ ಜಂಜಡವಿಲ್ಲ ಎಂಬುವುದಕ್ಕೆ ಒಂದು ಘಟನೆ ಇಲ್ಲಿ ಸಾಕ್ಷಿಯಾಗುತ್ತದೆ.

ದೇವಿ ಆರಾಧನೆಯ ಸಮಯದಲ್ಲಿ ಬ್ರಾಹ್ಮಣರು ರಾಮಣ್ಣನ ಮೇಳದವರನ್ನು ತಮ್ಮ ಮನೆಗೆ ಕರೆಯುತ್ತಿದ್ದರು. ರಾಮಣ್ಣನ ಮೇಳದವರು ಹೋಗಿ ಆ ದಿನ ಇಡೀ ರಾತ್ರಿ ಎಲ್ಲಮ್ಮ ದೇವಿಯ ಆರಾಧನೆಯ ಕುರಿತಾದ ಭಕ್ತಿ ಭಜನೆ, ಹಾಡುಗಳನ್ನು ಚೌಡಿಕೆ ಹಿಡಿದುಕೊಂಡು ಭಕ್ತಿ ಪರವಶರಾಗಿ ಹಾಡುತ್ತಿದ್ದರು. ಇವುಗಳ ಜೊತೆಗೆ ರಾಮಣ್ಣ ಹಾಡುಗಳನ್ನು ಕಟ್ಟುವುದು, ಒಡಪುಗಳನ್ನು ಕಟ್ಟುವುದರ ಮುಖಾಂತರ ಜನರನ್ನು ರಂಜಿಸಿ ಸಂತೋಷಪಡಿಸುವ ಸತ್ಕಾರ್ಯವನ್ನು ಜನಪದದ ಮುಖಾಂತರ ಮಾಡಿದ್ದಾರೆ. ಇವುಗಳೆಲ್ಲದರ ಜೊತೆಗೆ ವಿಷಾದನೀಯ ಸಂಗತಿ ಎಂದರೆ ಜನಪದವನ್ನು ತಮ್ಮ ಜೀವಾಳವಾಗಿಸಿಕೊಂಡ ಇಂತಹ ಎಷ್ಟೋ ಕಲಾವಿದರಿಗೆ ಇಂದು ಯಾವುದೇ ಪ್ರಶಸ್ತಿಗಳು ದೊರೆಯದೆ ಇರುವುದು. ಇದು ನಿಜಕ್ಕೂ ಜನಪದ ಕಲಾ ಮನಸ್ಸುಗಳಿಗೆ ಮತ್ತು ಕಲಾ ಪ್ರೇಮಿಗಳಿಗೆ ನೋವನ್ನುಂಟು ಮಾಡುವಂತಹ ಸಂಗತಿಯಾಗಿವೆ.

ಇಂತಹ ಅಪರೂಪದ ಕಲಾ ಪ್ರಕಾರಗಳು ಕಣ್ಮರೆಯಾಗಿ ಹೋದರೆ ಅವುಗಳನ್ನು ಮರಳಿ ನಮಗೆ ಯಾರು ಕೊಡಬೇಕು. ಮುಂದೊಂದು ದಿನ ಅವುಗಳು ಹೇಗಿದ್ದವು ಎಂದು ತೋರಿಸುವುದಕ್ಕೂ ಕೂಡ ನಮ್ಮಲ್ಲಿ ಉದಾಹರಣೆಗಳು ಉಳಿಯದಂತಹ ಸ್ಥಿತಿಯು ನಿರ್ಮಾಣವಾಗುತ್ತದೆ. ಅವುಗಳನ್ನು ಮುಂದಿನ ಪೀಳಿಗೆಗೆ ಉಳಿಸಬೇಕಾದರೆ ಬಹಳ ಕಾಳಜಿಯಿಂದ, ಜಾಗರೂಕತೆಯಿಂದ ರಕ್ಷಿಸುವ ಕರ್ತವ್ಯ ನಮ್ಮೆಲ್ಲರದಾಗಿದೆ.

**೫.೧.೨. ಎರಡನೇ ತಲೆಮಾರಿನ ಹಾಡುಗಾರರು**

ಎರಡನೇ ತಲೆಮಾರಿನ ಹಾಡುಗಾರರು ಮೌಖಿಕ ಸಾಹಿತ್ಯವನ್ನು ನೇರವಾಗಿ ನವಮೌಖಿಕತೆಗೆ ತಂದವರು. ತಾವೇ ಇಲ್ಲವೇ ಬೇರೆಯವರು ರಚಿಸಿದ ಸಾಹಿತ್ಯವನ್ನು ಇವರು ತಮ್ಮ ಕಂಠಸಿರಿಯಿಂದ ಅದಕ್ಕೆ ಜೀವತುಂಬುವ ಕೆಲಸ ಮಾಡಿದವರು. ಇವರು ನೇರವಾಗಿ ಕ್ಯಾಸೆಟ್ ಮತ್ತು ಸಿಡಿ ಸಂಸ್ಕೃತಿಗೆ ಒಳಪಟ್ಟವರು. ನಂತರದಲ್ಲಿ ಇವರು ಯೂಟ್ಯೂಬ್‌ನ ಪ್ರವೇಶ ಪಡೆದುಕೊಂಡು ಇಂದು ಜನಪ್ರಿಯತೆ ಪಡೆದವರು. ಇಂತಹ ಹಾಡುಗಾರರ ಕುರಿತಾದ ಅಧ್ಯಯನ ಇಲ್ಲಿ ಕಾಣುತ್ತೇವೆ.

**ಗುರುರಾಜ ಹೊಸಕೋಟಿ**

ಕನ್ನಡ ನಾಡು ಕಂಡ ಅಪರೂಪದ ಕಲಾವಿದರಲ್ಲಿ ಗುರುರಾಜ ಹೊಸಕೋಟಿ ಒಬ್ಬರಾಗಿದ್ದಾರೆ. ಹೊಸಕೋಟಿ ಅವರು ಜನಪದ ಗೀತೆಗಳ ರಚನಕಾರರು, ಹಾಡುಗಾರರು, ಸಂಗೀತಗಾರರು, ನಾಟಕಕಾರರು, ರಂಗಭೂಮಿಯ ಕಲಾವಿದರು, ಕವಿಗಳು ಹೀಗೆ ಬಹುಮುಖ ವ್ಯಕ್ತಿತ್ವವನ್ನು ಹೊಂದಿದ್ದ ಶ್ರೇಷ್ಠ ಜನಪದ ಕಲಾವಿದರು ಎಂದು

ಗುರುತಿಸಿಕೊಂಡಿದ್ದಾರೆ. ಹೊಸಕೋಟಿ ಅವರು ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪುರದಲ್ಲಿ ೨೬ ಮೇ, ೧೯೪೮ರಂದು ಜನಿಸಿದರು.

ಗುರುರಾಜ ಹೊಸಕೋಟಿಯವರಿಗೆ ಕಲಾಭಿರುಚಿ ಅವರ ವಂಶದಿಂದಲೇ ಅವರಿಗೆ ಬಳುವಳಿಯಾಗಿ ಬಂದಿದೆ. ಅಂದರೆ ಅವರ ತಂದೆ ರುದ್ರಪ್ಪ ಹರಿಕಥಾ ವಿದ್ವಾಂಸರಾಗಿದ್ದರು. ತಾಯಿ ಗೌರಮ್ಮ ಜನಪದ ಹಾಡುಗಾರ್ತಿಯಾಗಿದ್ದಳು. ಹೀಗೆ ತಂದೆಯ ಹರಿಕಥೆ ಮತ್ತು ತಾಯಿಯ ಜನಪದ ಹಾಡುಗಾರಿಕೆ ಒಂದುಗೂಡಿ ಹೊಸಕೋಟಿ ಅವರಲ್ಲಿ ಸಂಗೀತ ಸೆಲೆಯನ್ನು ಹುಟ್ಟಿಸುವುದಕ್ಕೆ ಸಹಾಯವಾಯಿತು. ಬಾಲ್ಯದ ಶಾಲಾ ದಿನಗಳಲ್ಲಿಯೇ ಇವರಿಗೆ ಜನಪದ ಕಲೆಯ ಬಗ್ಗೆ ಅಪಾರವಾದ ಒಲವು. ಜನಪದ ಹಾಡುಗಳನ್ನು ಹಾಡುವುದು, ರಚನೆ ಮಾಡುವುದು, ಸಂಯೋಜಿಸುವುದು ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಕೊಂಡು ಪ್ರಸಿದ್ಧರಾದರು. ಆದರೆ ಇವರ ಶಿಕ್ಷಣ ಪಿಯುಸಿವರೆಗೆ ಮಾತ್ರ. ಆದರೂ ಸಾಧನೆಗೆ ಯಾವುದೇ ಕೊರತೆ ಉಂಟಾಗಲಿಲ್ಲ. ಇವರ ಪ್ರಪ್ರಥಮ ಜಾನಪದ ಕಾರ್ಯಕ್ರಮ ವಿಘ್ನನಿವಾರಕ ವಿದ್ಯಾ ಅಧಿಪತಿಯ ಕೃಪಾಶೀರ್ವಾದದಿಂದ ಆರಂಭವಾಯಿತು. ಅಂದರೆ ೧೯೬೬ರಲ್ಲಿ ರಬಕವಿಯಲ್ಲಿ ನಡೆದ ಗಣೇಶ ಉತ್ಸವದಲ್ಲಿ ಪ್ರಥಮ ಕಾರ್ಯಕ್ರಮ ನಡೆಯಿತು. ಅದಾದ ನಂತರ ಅವರು ತಿರುಗಿ ನೋಡುವ ಪ್ರಮೇಯವೇ ಬರಲಿಲ್ಲ. ಮುಂದೆ ನೂರಾರು ಕಾರ್ಯಕ್ರಮಗಳನ್ನು ಕರ್ನಾಟಕದ ಪ್ರತಿ ಜಿಲ್ಲೆಯಲ್ಲಿಯೂ ನೀಡುತ್ತಾ, ಜನಪದ ಕೃಷಿ ಬೆಳಸುತ್ತಾ ಸಾಗಿದರು. ಅಷ್ಟೇ ಅಲ್ಲದೇ ಹೊರ ರಾಜ್ಯಗಳಾದಂತಹ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾಗಳಲ್ಲಿ ಅತ್ಯಂತ ಯಶಸ್ವಿಯಾಗಿ ಕಾರ್ಯಕ್ರಮಗಳನ್ನು ನಡೆಸಿಕೊಟ್ಟು ಜನರ ಮನಸ್ಸನ್ನು ಗೆದ್ದಿದ್ದಾರೆ. ಜಾನಪದ ಲೋಕದೊಂದಿಗೆ ತಮ್ಮ ವೃತ್ತಿಯನ್ನು ಕಂಡುಕೊಂಡು ಸಂತೃಪ್ತಿಯನ್ನು ಹೊಂದಿದ ಇವರ ಸೇವೆಯು ಕನ್ನಡ ಜಾನಪದ ಲೋಕಕ್ಕೆ ಅಪರೂಪದ ಕೊಡುಗೆಯಾಗಿದೆ.

ಜಾನಪದ ಝೇಂಕಾರ ಕಾರ್ಯಕ್ರಮದ ಮೂಲಕ ನಾಡಿನ ಪ್ರತಿ ಹಳ್ಳಿಯಲ್ಲಿಯೂ ಕೂಡ ಸಂಚರಿಸಿ ಕಾರ್ಯಕ್ರಮಗಳನ್ನು ನೀಡಿ ಇವರು ಖ್ಯಾತರಾಗಿದ್ದಾರೆ. ಹೊಸಕೋಟಿ ಅವರ ಪ್ರಸಿದ್ಧ ಗೀತೆಗಳು ಈ ಕೆಳಗಿನಂತಿವೆ.

೧. ಅವತ್ತು...ಇವತ್ತು...

೨. ಕಣ್ಣೀರಿನ ಕಥೆ

೩. ಕಲಿತ ಹುಡುಗಿ ಕುದುರಿ ನಡಿಗಿ

೪. ದುಡ್ಡು ಕೊಟ್ಟರೆ ಬೇಕಾದ್ದು ಸಿಗತೈತಿ

೫. ಗುರ್ಚಿ ಗುರ್ಚಿ

೬. ಚಂದ್ರಕಾಳಿ ಸೀರೆ ಉಟ್ಟು

೭. ನನ್ನ ಕರುಳಿನ ಕುಡಿ ನೀನು

೮. ಮಾವ ನಿನ್ನ ಮಗಳ ನಾನಂದ್ರೆ

೯. ಎಂಥಾ ಪ್ರೀತಿ ಗಂಡ ಹೆಂಡತಿ

೧೦. ಯಾರ್ ಹೆಂಡ್ತಿ ಏನಾದರೂ ಆಗಲಿ.

ಹೀಗೆ ಹಲವಾರು ಗೀತೆಗಳಲ್ಲಿ ಹೊಸಕೋಟೆ ಅವರು ಭಾವಗಳಿಗೆ ಎಳೆ ಎಳೆಯಾಗಿ ಬೆಳಕು ನೀಡಿದ್ದಾರೆ. ಭಾವಗಳನ್ನು ಹರಿಯುವ ಇವರ ಶಕ್ತಿ ಅರಿವು ನಿಜಕ್ಕೂ ಅಪರೂಪವಾದದ್ದು. ಇವರ ಪ್ರಸಿದ್ಧ ಕಥನ ಕವನಗಳು.

೧. ಹೆಣ್ಣಿನ ಜನ್ಮ

೨. ಕಣ್ಣೀರಿನ ಕಥೆಯು

೩. ಅಣ್ಣ ತಮ್ಮ.....ಇತ್ಯಾದಿ.

ಈ ಎಲ್ಲ ಕಥೆಗಳನ್ನು ಕೇಳುತ್ತ ಕುಳಿತವರ ಮನಸ್ಸಿನಲ್ಲಿ ಕರುಣಾರಸ ಉತ್ಪತ್ತಿಯಾಗದೆ ಇರಲಾರದು. ಏಕೆಂದರೆ ಹೊಸಕೋಟಿ ಅವರು ಅಭಿವ್ಯಕ್ತಪಡಿಸುವ ಕ್ರಮವೇ ಅಂತಹದ್ದು. ಕೇಳುಗರನ್ನು ಕರುಣಾರಸದಲ್ಲಿ ಮುಳುಗಿಸಿ ಎಬ್ಬಿಸುವ ಶಕ್ತಿ ಇವರಿಗಿದೆ. ಕೇಳುವವರು ಕೊನೆಗೆ ಎದ್ದು ಹೋಗುವಾಗ ಕಣ್ಣೀರು ಒರಸಿಕೊಂಡು ಹೋಗುವಂತಹ ನಿದರ್ಶನಗಳು ಕೂಡ ಇವೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಗುರುರಾಜ ಹೊಸಕೋಟಿ ಜನರ ಹೃದಯ ಮನಗಳನ್ನು ತನ್ನ ಕಾವ್ಯಶಕ್ತಿಯಿಂದ ಗೆದ್ದ ಏಕೈಕ ಮೇರು ಕಲಾ ಪ್ರತಿಭೆ. ಜನಪ್ರಿಯತೆ ತಂದು ಕೊಟ್ಟ ಇವರ–ತಾಯಿಯ ಚಿತ್ರಣವನ್ನು ಸೊಗಸಾಗಿ ಬಿಂಬಿಸಿದ ಪದ್ಯವನ್ನು ಇಲ್ಲಿ ನೋಡಬಹುದು.

**ದುಡ್ಡು ಕೊಟ್ಟರೆ ಬೇಕ್ಕಾದ್ದು ಸಿಗತೈತಿ :**

ದುಡ್ಡು ಕೊಟ್ಟರೆ ಬೇಕ್ಕಾದ್ದು ಸಿಗತೈತಿ ಈ ಜಗದಲಿ ಕಾಣೋ
ಹಡೆದ ತಾಯಿಯನು ಕಳ ಕೊಂಡ ಮ್ಯಾಲ ಮತ್ತೆ ಸಿಗುವಳೇನೊ
ತಮ್ಮ ಮರಳಿ ಬರುವಳೇನೋ ॥
ಒಂಬತ್ತು ತಿಂಗಳ ಸಂಕಟ ನೀಡಿ ಹೊಟ್ಟ್ಯಾಗ ಬೆಳೆದಲ್ಲೋ
ಹುಟ್ಟಿ ಬರುವ ಮುನ್ನ ಜೀವಕ್ಕ ಎಷ್ಟೋ ಕಷ್ಟ ಕೊಟ್ಟಿಯಲ್ಲೋ
ಬರುವ ಕಷ್ಟಗಳ ಸಹಿಸಿದ ತಾಯಿ ನಿನ್ನ ನಂಬಿತಲ್ಲೋ
ತಾನು ಕೊರಗಿ ನಿನ್ನ ಕೋಣ ಬೆಳಸಿದಂಗೇ ಬೆಳಸಿ ಬಿಟ್ಟಳಲ್ಲೋ
ಒಬ್ಬ ಮಗ ನೀ ಆಸರಾದಿ ಅಂತ ತಾಯಿ ತಿಳದಿತಲ್ಲೋ
ಜೀವ ಇಟ್ಟಿತ್ತು ನಿನ ಮ್ಯಾಲೋ ॥ದುಡ್ಡು॥
ಕೂಲಿ ನಾಲಿ ಮಾಡಿ ಶಾಲೆ ಕಲಿಸಿದಳು ಜಾಣನಾಗಲೆಂತ
ಚೆನ್ನದಂತ ಒಂದು ಹೆಣ್ಣು ನೋಡ್ಯಾಳು ನಿನ್ನ ಮದುವಿಗಂತ...
ಸಾಲ ಶೂಲ ಮಾಡಿ ಮದುವಿ ಮಾಡಿದಳು ಬಳ್ಳಿ ಹಬ್ಬಲೆಂತ
ಮೊಮ್ಮಕ್ಕಳನು ಎತ್ತಿ ಆಡಿಸುವ ಚಿಂತಿಯೊಳಗ ಇತ್ತ

ಮುಪ್ಪಿನ ತಾಯಿ ಏನೇನೋ ಕನಸ ಕಟಕೊಂಡು ಕುಂತಿತ್ತ
ಕನಸು ಕನಸಾಗಿ ಉಳಿತಾ ॥ದುಡ್ಡು॥
ಮಗಳಿಗಿಂತ ಹೆಚ್ಚಿನ ಪ್ರೀತಿಲಿ ಸೊಸಿನ ಕಂಡಳಲ್ಲಾ
ಮೆಚ್ಚಿನ ಸೊಸೆಯು ತಾಯಿಯ ಹಂಗ ನೋಡಿ ಕೊಳ್ಳಲಿಲ್ಲ
ಸೋತ ಶರೀರಕ ಸುಖವೆಂಬದು ಈ ಸೊಸಿಯು ನೀಡಲಿಲ್ಲ
ಉಂಡು ಬಿಟ್ಟಿರುವ ಎಂಜಲ ಕೂಳ ತಾಯಿಗಾಕ್ಯಾಳಲ್ಲ
ಮಗನ ಮೋಹಕ ಹಳಸಿದ ಕೂಳ ತಾಯಿ ತಿಂದಳಲ್ಲ
ಅದನು ಯಾರಿಗೇಳಲಿಲ್ಲ ॥ದುಡ್ಡು॥
ಉಪವಾಸ ವನವಾಸ ಹಣ್ಣಾದ ಮುದುಕಿ ಎಷ್ಟಂತ ಇರತಾಳೊ
ಹಸಿವು ತಾಳದೆ ಮತ್ತೊಬ್ಬರಲ್ಲಿ ಬೇಡಿ ತಿನ್ನುತಾಳೊ
ಇಷ್ಟೇ ಇದ್ದದ್ದು ಸೊಕ್ಕಿನ ಸೊಸೆಯು ದೊಡ್ಡದು ಮಾಡ್ಯಾಳು
ಅವಮಾನ ನಮಗಂತ ತನ್ನ ಮನೆಯಿಂದ ಹೊರಗೆ ಹಾಕ್ಯಾಳು
ಮಗನಿಗೇಳಿದರ ನೋವು ಆ ಜೀವಕ ಎಂದು ತಿಳಿದಾಳು
ತಾಯಿ ನಿನ್ನಿಂದ ದೂರಾಳು ॥ದುಡ್ಡು॥
ಮಗ ಇದ್ದರು ಹಡೆದ ತಾಯಿ ಪರದೇಶಿ ಆಗಿಹಳು
ಅಲ್ಲಿ ಇಲ್ಲಿ ತಾ ಭಿಕ್ಷೆಯ ಬೇಡಿ ದಿನಗಳ ಕಳೀತಾಳು
ಬಂದ ನೋವುಗಳ ಸಹಿಸುತ ಮಗನ ಚಿಂತೆ ಮಾಡತಾಳು
ಕಣ್ಣು ಕಾಣಲಿಲ್ಲ ಕಿವಿಯು ಕೇಳಲಿಲ್ಲ ಎಷ್ಟು ದಿನ ಇರೂತಾಳು
ನನ್ನ ಮಗನಿಗೆ ಚನ್ನಾಗಿ ಇಡು ಅಂತ ಮಹಾಂತನ ಬೇಡ್ಯಾಳು
ತಾಯಿ ಬೀದ್ಯಾಗ ಸತ್ತಾಳು ॥ದುಡ್ಡು॥.[೫]

ಪ್ರಸ್ತುತ ಪದ್ಯ ಹೆತ್ತ ತಾಯಿಯ ಋಣವನ್ನು ಸಾಯುವರೆಗೂ ಸಹ ತೀರಿಸುವುದಕ್ಕೆ ಸಾಧ್ಯವಾಗದು. ತಾಯಿಯು ಒಂಬತ್ತು ತಿಂಗಳು ತನ್ನ ಗರ್ಭದಲ್ಲಿ ಸಂರಕ್ಷಿಸಿ ಮಗುವಿಗೆ ಭೂಮಿಯೆಂಬ ವಿಶಾಲವಾದ ಸ್ಥಳವನ್ನು ಪರಿಚಯಿಸುತ್ತಾಳೆ. ದೇವರ ರೂಪದಲ್ಲಿ ಸಾಕಿ ಬೆಳೆಸುವ ತಾಯಿ ಬದುಕಿನೂದ್ದಕ್ಕೂ ಮಕ್ಕಳ ಏಳ್ಗೆಯನ್ನೆ ಬಯಸುತ್ತ ತನ್ನ ಜೀವನವನ್ನು ಸವೆಸುತ್ತಾಳೆ. ಅಂತಹ ತಾಯಿಯ ಪ್ರೀತಿ ಮಮತೆಯ ದ್ಯೋತಕವಾಗಿ ಈ ಹಾಡು ಮೂಡಿಬಂದಿದೆ. ಈ ಹಾಡನ್ನು ಕೇಳುತ್ತಿದ್ದರೆ ಎಲ್ಲರಿಗೂ ತಮ್ಮ ತಾಯಿಯ ನೆನಪಾಗುತ್ತದೆ. ತಾಯಿ ಮತ್ತು ಮಗನ ಸಂಬಂಧ ಹೇಗಿದೆ ಎಂಬುದನ್ನು, ಈ ಹಾಡನ್ನು ಹಾಡುವ ಮೂಲಕ ಗುರುರಾಜ ಹೊಸಕೋಟಿ ಅವರು ತಿಳಿಸಿಕೊಟ್ಟಿದ್ದಾರೆ. ಇಂದು ಎಲ್ಲರೂ ತಮ್ಮ ತಾಯಿಯನ್ನು ಹೇಗೆ ನೋಡಿಕೊಳ್ಳುತ್ತಿದ್ದಾರೆ ಎಂಬುದನ್ನು ಈ ಪದ್ಯದಲ್ಲಿ ವಿಡಂಬಿಸಲಾಗಿದೆ. ಪ್ರಸ್ತುತ ಸಮಾಜಕ್ಕೆ ಇಂತಹ ಹಾಡುಗಳ ಅವಶ್ಯಕತೆ ಇದೆ.

ಇವರು ಕಸ್ತೂರಿ ಶಂಕರ್, ಬಿ.ಆರ್.ಛಾಯಾ, ಮಂಜುಳಾ ಗುರುರಾಜ್ ಮುಂತಾದ ಕಲಾವಿದರೊಂದಿಗೆ ಹಾಡಿದ ಧ್ವನಿ ಸುರುಳಿಗಳು ನಾಡಿನ ತುಂಬೆಲ್ಲ ಜನ ಮಾನಸದಲ್ಲಿ ಅಚ್ಚಾಗಿ ಉಳಿದಿವೆ ಅಂತಹ ಕೆಲವೊಂದು ಪ್ರಸಿದ್ಧ ಧ್ವನಿಸುರುಳಿಗಳು ಈ ಕೆಳಗಿನಂತಿವೆ.

೧. ತಾಯಿ ಸತ್ತ ಮೇಲೆ
೨. ನಾ ದೊಡ್ಡಾಕೀ ಆಗೇನಿ
೩. ಕರುಳು ಮಿಡಿಯುವ ಕಥೆ
೪. ಗಂಡ ಸತ್ತ ಮ್ಯಾಲ
೫. ಜಮಖಂಡಿ ಜಾನಿ
೬. ಕನ್ನಡದ ಕವಾಲಿ ಗೀತೆಗಳು
೭. ಹೆಣ್ಣಿನ ಬಾಳು ಗೋಳು
೮. ರಸಿಕನ ಚಂಚಲೆ.....ಇತ್ಯಾದಿ.

ಈ ರೀತಿಯಾಗಿ ಸುಂದರ ರೋಚಕ ಹಾಡುಗಳನ್ನು ಕನ್ನಡ ನಾಡಿಗೆ ಕೊಡುಗೆ ನೀಡಿದ್ದಾರೆ. ಇವರು ಕೇವಲ ಒಂದೇ ಕ್ಷೇತ್ರಕ್ಕೆ ಸೀಮಿತರಾಗದೆ, ಯಶಸ್ವಿ ಕವಿಯಾಗಿ ಕವನ ಬರೆದಿದ್ದಾರೆ. ಯಶಸ್ವಿ ಗಾಯಕನಾಗಿ ಹಾಡಿದ್ದಾರೆ, ಸಂಗೀತ ವಿದ್ವಾಂಸರಾಗಿ ಸಂಗೀತ ಸಂಯೋಜನೆ ಮಾಡಿದ್ದಾರೆ. ಝೇಂಕಾರ ಎನ್ನುವಂತಹ ಕಾರ್ಯಕ್ರಮಗಳ ಮೂಲಕ ಕನ್ನಡ ಮನಸ್ಸುಗಳನ್ನು ತಣಿಸುವ, ತಂಪುಗೊಳಿಸುವ ಕಾರ್ಯವನ್ನು ಮಾಡಿದ ಇವರ ಸೇವೆ ಅವರ್ಣನೀಯವಾಗಿದೆ. ನಿಜವಾದ ಮೇರು ಸಾಧಕರ ಸಾಲಿನಲ್ಲಿ ಇವರು ಸೇರಿದ್ದಾರೆ.

ಹೊಸಕೋಟೆಯವರು ಕವಿಯಾಗಿ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಅಲ್ಲದೇ ಹಲವಾರು ಕವನ ಸಂಕಲಗಳನ್ನು ಹೊರತಂದಿದ್ದಾರೆ. ಹಾಗೆಯೇ ರಂಗಭೂಮಿಯ ಕಲಾವಿದರು ಆಗುವುದರ ಜೊತೆಗೆ ನಾಟಕಗಳನ್ನು ರಚಿಸಿದ್ದಾರೆ. ಆ ನಾಟಕಗಳು ನೂರಾರು ಬಾರಿ ಪ್ರಯೋಗಗಳನ್ನು ಕಾಣುವಂತೆ ಮಾಡಿದ್ದಾರೆ. ಸೊಕ್ಕು ತಂದ ಸೋಲು, ಸುಮ್ಸುಮ್ನೆ, ಅದೇನ್ ಹೇಳ್ರಿ ಹೇಳಕಾಗಲ್ಲಾ ಮುಂತಾದವುಗಳು ಅವರು ರಚಿಸಿದ ನಾಟಕಗಳು.

ಮುಂದೆ ಹೊಸಕೋಟಿ ಅವರಿಗೆ ಸಿನಿಮಾ ರಂಗದಲ್ಲಿಯೂ ಕೂಡ ಹಾಡುವಂತಹ ಅವಕಾಶ ದೊರಕಿತು. ಸುಮಾರು ಐವತ್ತಕ್ಕೂ ಹೆಚ್ಚು ಚಲನಚಿತ್ರ ಗೀತೆಗಳಲ್ಲಿ ಹಾಡಿ ತಮ್ಮ ಮಧುರ ಕಂಠ ಸಿರಿಯನ್ನು ನಾಡಿನ ಜನತೆಗೆ ಉಣಬಡಿಸಿದ್ದಾರೆ. ಅವರು ಹಾಡಿದಂತಹ ಚಲನಚಿತ್ರಗಳು ಸಂಗ್ಯಾಬಾಳ್ಯ, ತವರಿನ ತೊಟ್ಟಿಲು, ಮಹಾಕ್ಷತ್ರಿಯ, ಕರಿಯ, ದಾಸ, ಜೋಗಿ, ತನನಂ ತನನಂ, ಸುಂಟರಗಾಳಿ, ಅಶೋಕ, ರಾಮ ಶಾಮ ಭಾಮ, ಅಂಬಿ, ಶಂಭು ಮುಂತಾದವುಗಳು. 'ಅಲ್ಲೇ ಇರುವುದು ನೋಡಿ' ಎಂಬ ಚಲನಚಿತ್ರವನ್ನು ನಿರ್ದೇಶಿಸಿದ್ದಾರೆ. ಚಲನಚಿತ್ರಗಳಿಗೆ ಧ್ವನಿ ಸೇವೆಯನ್ನು ಸಹ ನೀಡಿದ್ದಾರೆ. ಕೆಲವು ಚಿತ್ರಗಳಿಗೆ ಗೀತರಚನೆಯನ್ನೂ ಮಾಡಿದ್ದಾರೆ. ಓ ಗುಲಾಬಿ, ಒಡ ಹುಟ್ಟಿದವರು, ಅಗ್ರಹಾರ ಮುಂತಾದವುಗಳು.

೧೯೮೩-೧೯೮೫ ಅವಧಿಯಲ್ಲಿ ಅವರು ಸಂಗೀತ ನೃತ್ಯ ಅಕಾಡೆಮಿಯ ಸದಸ್ಯರಾಗಿ ತಮ್ಮ ಅಪರೂಪದ ಸೇವೆಯನ್ನು ಸಲ್ಲಿಸಿದ್ದಾರೆ. ಇವರ ಅವಿರತ ದಣಿವರಿಯದ ಸೇವೆಗೆ ಜಾನಪದ ಕಲಾನಿಧಿ, ಜಾನಪದ ಕಲಾಕೌಸ್ತುಭ, ಜಾನಪದ ಗಾನಸಿರಿ, ಜಾನಪದ ಸಾರ್ವಭೌಮ, ಜಾನಪದ ಕೋಗಿಲೆ ಹೀಗೆ ಹಲವಾರು ಗೌರವ ಬಿರುದುಗಳು ಇವರಿಗೆ ಸಂದಿವೆ.

**ನಿಜಾಂ ಅಲ್ಲಾಖಾನ್**

ಉತ್ತರ ಕರ್ನಾಟಕ ಭಾಗದ ಜನಪದ ಹಾಡುಗಾರರು ಎಂದ ತಕ್ಷಣ ನೆನಪಿಗೆ ಬರುವವರು ನಿಜಾಂ ಅಲ್ಲಾಖಾನ. ಇನ್ನೋರ್ವರು ಗುರುರಾಜ ಹೊಸಕೋಟಿ ಇವರು ಸಮಕಾಲೀನ ಹಾಡುಗಾರರು. ತಮ್ಮ ಹಾಡುಗಳ ಮೂಲಕ ಜನರ ಮನಸ್ಸನ್ನು ಗೆದ್ದು ಸಾಧನೆಯ ಶಿಖರವನ್ನು ಏರಿದ್ದಾರೆ. ನಿಜಾಂ ಅಲ್ಲಾಖಾನ್ ಅವರ ಬಗ್ಗೆ ಹೇಳುವುದಾದರೆ ಇವರು ಬಾಗಲಕೋಟ ಜಿಲ್ಲೆಯ ಮೂಧೋಳ ತಾಲೂಕಿನ ಮಹಾಲಿಂಗಪುರದಲ್ಲಿ ಜೂನ್ ೧, ೧೯೫೯ರಂದು ಹಸನಸಾಬ ಮತ್ತು ಬಿಯಾಮಾ ದಂಪತಿಗಳ ಮಗನಾಗಿ ಜನಿಸಿದರು. ಬಾಲ್ಯದಲ್ಲಿ ತಾಯಿಯ ತಂದೆ(ಅಜ್ಜ) ಹಾಡುತ್ತಿದ್ದ ಮೊಹರಂ ಪದಗಳನ್ನು ಕೇಳುತ್ತಿದುದ್ದರಿಂದ ಹಾಡುಗಳ ಪ್ರಭಾವಕ್ಕೆ ಒಳಗಾಗಿ ಬೆಳೆದ ನಿಜಾಂ ಅಲ್ಲಾಖಾನರು ಮುಂದೆ ಸಣ್ಣ ಪುಟ್ಟ ಕಾರ್ಯಕ್ರಮಗಳಲ್ಲಿ ಹಾಡುತ್ತಾ, ಸಾಹಿತ್ಯ ರಚನೆ ಮಾಡುತ್ತ ಜನಪ್ರಿಯತೆ ಪಡೆದುಕೊಂಡರು. ಶಿಕ್ಷಣ ಕೇವಲ ಏಳನೇ ತರಗತಿಯವರೆಗೆ ಮಾತ್ರ ಪಡೆದುಕೊಂಡ ನಿಜಾಂ ಅಲ್ಲಾಖಾನರು ಹಾಡುಗಳನ್ನು ಹಾಡುವುದು, ರಚಿಸುವುದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಪರಿಶ್ರಮಕ್ಕೆ ತಕ್ಕ ಫಲದಂತೆ ಇವರು ಸುಮಾರು ಎರಡನೂರು ಕ್ಯಾಸೆಟ್‌ಗಳಷ್ಟು ಹಾಡುಗಳನ್ನು ಹಾಡಿದ್ದಾರೆ. ಜನಪದ ಗೀತೆಗಳು, ಭಕ್ತಿಗೀತೆಗಳು, ಹಿಂದಿ ಹಾಡುಗಳು, ರೈತರ ಕುರಿತಾದ ಹಾಡು ಹೀಗೆ ಹಲವು ಪ್ರಕಾರದ ಹಾಡುಗಳನ್ನು ಹಾಡಿದ್ದಾರೆ.

ನಿಜಾಂ ಅಲ್ಲಾಖಾನ ಅವರು ಸುಮಾರು ನಲವತ್ತು ವರ್ಷಗಳಿಂದ ಹಾಡುಗಳನ್ನು ಹಾಡುವುದರಲ್ಲಿ, ರಚನೆ ಮಾಡುವುದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಇದರ ಫಲವಾಗಿ ಸಾಕಷ್ಟು ಪ್ರಶಸ್ತಿಗಳು ಕೂಡ ಇವರಿಗೆ ಲಭಿಸಿವೆ. ಜಾನಪದ ಚಕ್ರವರ್ತಿ, ಜಾನಪದ ಸಾರ್ವಭೌಮ ಹೀಗೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಇವರು ಯಾವುದೇ ರೀತಿ ಶೃಂಗಾರಕ್ಕೆ ಹೆಚ್ಚಿನ ಒತ್ತು ನೀಡದೆ, ಕೇವಲ ಸಾಮಾಜಿಕ, ಕೌಟುಂಬಿಕ ವಿಷಯಗಳನ್ನು ಒಳಗೊಂಡ ಹಾಡುಗಳನ್ನು ಹೆಚ್ಚು ರಚನೆ ಮಾಡಿ ಹಾಡಿದ್ದಾರೆ.

ಇವರ ಒಂದು ವೈಶಿಷ್ಟ್ಯ ಎಂದರೆ ಇವರು ಹಾಡುಗಾರರು ಅಷ್ಟೇ ಅಲ್ಲ, ಹಾಡುಗಳ ರಚನಾಕಾರರು ಹಾಗೂ ಸಂಗೀತದ ಪರಿಪೂರ್ಣವಾದ ಜ್ಞಾನ ಹೊಂದಿದವರು. ಒಂದು ಯಾವುದಾದರು ಕವನವನ್ನು ರಚಿಸಿ ಕೊಟ್ಟರೆ ಕ್ಷಣಾರ್ಧದಲ್ಲಿ ಅದಕ್ಕೆ ಸಂಗೀತದ ಧಾಟಿ ಹಚ್ಚುವ ಜಾಣ್ಮೆ ನಿಜಾಂ ಅಲ್ಲಾಖಾನರಲ್ಲಿದೆ. ಕ್ಯಾಸೆಟ್ ಸಂಸ್ಕೃತಿಯಲ್ಲಿದ್ದ ಇವರು ಮುಂದೆ

ಸಿಡಿ ಸಂಸ್ಕೃತಿ ನಂತರದಲ್ಲಿ ಇಂದು ಇಂಟರ್‌ನೆಟ್ ಸಂಸ್ಕೃತಿ, ಯೂಟ್ಯೂಬ್‌ನಲ್ಲಿ ಕೂಡಾ ಇವರ ಹಾಡುಗಳನ್ನು ಕಾಣುತ್ತೇವೆ.

ನಿಜಾಂ ಅಲ್ಲಾಖಾನ ಅವರು ಇಂದಿಗೂ ಸಹ ಬೇರೆ ಬೇರೆ ಕಡೆಗಳಲ್ಲಿ ಹೋಗಿ ಕಾರ್ಯಕ್ರಮಗಳನ್ನು ನೀಡುತ್ತಿದ್ದಾರೆ. ಬೇರೆ ಜನಪದ ಹಾಡುಗಾರರಿಗೂ ಮತ್ತು ಇವರಿಗೂ ಬಹಳಷ್ಟು ಭಿನ್ನತೆ ಇರುವುದನ್ನು ಕಾಣುತ್ತೇವೆ. ಸಮಾಜಕ್ಕೆ ಯಾವ ವಿಷಯ ಮುಖ್ಯ ಅನಿಸುತ್ತೋ ಅಂತಹ ಹಾಡುಗಳನ್ನು ರಚನೆಮಾಡಿ ಹಾಡುತ್ತಾರೆ. ಬಹಳ ಸೌಮ್ಯ ಸ್ವಭಾವದವರಾದ ನಿಜಾಂ ಅಲ್ಲಾಖಾನ ಎಲ್ಲರ ಪ್ರೀತಿಗಳಿಸಿಕೊಂಡು ಸುಖಕರವಾದ ಜೀವನವನ್ನು ನಡೆಸುತ್ತಿದ್ದಾರೆ. ಇವರಿಗೆ ಜನಪ್ರಿಯತೆ ತಂದುಕೊಟ್ಟ ಹಾಡನ್ನು ಇಲ್ಲಿ ನೋಡಬಹುದು.

**ಬಿಡು ಸೆರಗ ಮಾವ :**

ನೀ ಜಗ್ಗ ಬ್ಯಾಡ ಬಿಡು ಸೆರಗ ಮಾವ
ನೀ ಜಗ್ಗ ಬ್ಯಾಡ ಬಿಡು ಸೆರಗ ಮಾವ

ಏ ಬಿಡಾಕ ಹಿಡಿದಿಲ್ಲ ನಾ ನಿನ್ನ ಸ್ವಾದರ ಮಾವ
ಏ ಬಿಡಾಕ ಹಿಡಿದಿಲ್ಲ ನಾ ನಿನ್ನ ಸ್ವಾದರ ಮಾವ

ನಾವು ಅದೀವು ಬಾಳ ಬಡವರು
ತುಟ್ಟಿ ಈ ತೌರು ಬಿಟ್ಟಾ ಈ ತೌರು
ನೀ ಮನಸಿಗೆ ಹಚ್ಚ ಬ್ಯಾಡ ಬಿಡು ಸೆರಗ ಮಾವ

ಇದ್ದವರು ಇಲ್ಲದವರು ಬ್ಯಾಡ ಈ ಚಿಂತಿ
ಪ್ರೀತಿಗೆ ಅಡ್ಡ ಬರತೈತಿ ನೀತಿ
ಆ ಭಾವನೆ ಇಟ್ಟಿಲ್ಲ ನಾ ನಿನ ಸ್ವಾದರ ಮಾವ
ನೀ ಜಗ್ಗ ಬ್ಯಾಡ । ನೀ ಜಗ್ಗ ಬ್ಯಾಡ
ಏ ಬಿಡಾಕ ಹಿಡಿದಿಲ್ಲ

ಮದವೀಯ ದಿವಸ ಕನ್ಯಾರು ಬರುತಾರು
ನಿನ್ನ ಮುಂದ ಕುಂತ ಚುಚ್ಚಿ ಕದ್ದಾರು
ಬೆಳ್ಳಿ ಬಂಗಾರ ಬಿಡು ಸೆರಗ ಮಾವ

ಬಂಗಾರದಂಥ ಹುಡುಗಿ ನೀ ಇರುವಾಗ ಬಂಗಾರವೆಂಥೆದ್ದ
ದುಡದ ತರೋದನಾ ನನಗ ಬೇಕಾದಾಗ
ಗಟ್ಟಿ ಐತಿ ಉಡದಾರ ನಾ ನಿನ್ನ ಸ್ವಾದರ ಮಾವ
ಗಟ್ಟಿ ಐತಿ ಉಡದಾರ ನಾ ನಿನ್ನ ಸ್ವಾದರ ಮಾವ

ನಿಮ್ಮ ತಂದೆ ತಾಯಿ ದುಡ್ಡು ಮ್ಯಾಲೆ ಪ್ರಾಣ
ಬೇಡವು ಅವರ ವರದಕ್ಷಿಣಾ
ನಮ್ಮ ಹತ್ತಿರ ಇಲ್ಲ ಹಣ ಬಿಡು ಸೆರಗ ಮಾವ
ವರದಕ್ಷಿಣ ಅನ್ನುತ ಅಲ್ಲೆ ಕುಂದರ್ಲೀ ವರದಕ್ಷಿಣೆ ।
ನನ್ನ ನಿನ್ನ ಡೋಣಿ ಮುಂದಕ ಸಾಗಲಿ
ಬೇಡವ್ರಿಗೆ ಬುದ್ಧಿ ಬರ್ಲಿ ನಾವರ ಓಡಿ ಹೋಗೋಣಾ
ಬೇಡವ್ರಿಗೆ ಬುದ್ಧಿ ಬರ್ಲಿ॥.[೬]

ಪ್ರಸ್ತುತ ಪದ್ಯದಲ್ಲಿ ಮದುವೆಯ ಆತುರದಲ್ಲಿರುವ ಹರೆಯದ ಹೆಣ್ಣಿನ ಮನಸ್ಥಿತಿಯು ಯಾವ ರೀತಿ ತಳಮಳಗೊಂಡಿರುತ್ತದೆ ಎಂಬುದನ್ನು ಇಲ್ಲಿ ಚಿತ್ರಿಸಿದ್ದಾರೆ. ತಾನು ಪ್ರೀತಿಸಿದ ತನ್ನ ಸ್ವಾದರ ಮಾವನಿಗೆ ತನ್ನ ಮನಸಿನ ಭಾವನೆಗಳು ಹಂಚಿಕೊಳ್ಳುವ ನಿದರ್ಶನವನ್ನು ಇಲ್ಲಿ ಕಾಣುತ್ತೇವೆ.

ಹೀಗೆ ಹಲವು ಜನಪದ ಗೀತೆಗಳನ್ನು ರಚಿಸುವ ಮೂಲಕ ಉತ್ತರ ಕರ್ನಾಟಕ ಭಾಗದ ಪ್ರಸಿದ್ಧ ಜನಪದ ಗಾಯಕರಲ್ಲಿ ಇವರು ಒಬ್ಬರಾಗಿದ್ದಾರೆ. ನನ್ನ ನಿನ್ನ, ಎಂಥಾ ಗಂಡ, ಹಡೆದ ತಾಯಿ, ಅಕಿ ಕಣ್ಣು ಮುಂತಾದ ಹಾಡುಗಳು ಅವರ ಪ್ರಸಿದ್ಧಿಗೆ ಹಿಡಿದ ಕೈಗನ್ನಡಿಯಾಗಿದೆ. ಹೀಗೆ ಇಂದು ಆಧುನಿಕ ಮಾಧ್ಯಮಗಳಲ್ಲಿ ಇವರ ಹಾಡುಗಳು ಬಳಕೆಗೊಳ್ಳುತ್ತಿರುವ ಕಾರಣ ಹೆಚ್ಚು ಜನಪ್ರಿಯತೆಯನ್ನು ಪಡೆದುಕೊಂಡಿದ್ದಾರೆ.

**ಗುರುರಾಜ ಕೆಂಧೂಳಿ**

ಉತ್ತರ ಕರ್ನಾಟಕವು ಕಲೆಯ ತವರು ಮನೆಯಾಗಿದೆ. ಈ ತವರಿನಲ್ಲಿ ಹಲವಾರು ಕಲಾಶಕ್ತಿಗಳು ಮೈದಳೆದು ಕನ್ನಡಿಗರ ಮನಸ್ಸುಗಳಿಗೆ ಮುದವನ್ನು ನೀಡಿವೆ. ಬಾಗಲಕೋಟ ಜಿಲ್ಲೆಯ ರಬಕವಿಯಲ್ಲಿ ಹುಟ್ಟಿದ ಗುರುರಾಜ ಕೆಂಧೂಳಿಯವರು ಕೂಡ ಕನ್ನಡ ಮನಸ್ಸುಗಳಿಗೆ ಜನಪದದ ಮೂಲಕ ಮುದನೀಡಿರುವ ಮಹನೀಯರ ಸಾಲಿನಲ್ಲಿ ಮುಂಚೂಣಿಯಲ್ಲಿದ್ದಾರೆ. ಗ್ರಾಮೀಣ ಪ್ರದೇಶದಿಂದ ಬಂದ ಕೆಂಧೂಳಿಯವರು ಜನಪದ ಅಳಿಸದಂತೆ, ನಳನಳಿಸುವಂತೆ ಮಾಡಿರುವ ಜನಪದ ಸೇವೆಯು ಅಕ್ಷರಶಃ ಶ್ಲಾಘನೆಗೆ ಯೋಗ್ಯವಾಗಿದೆ. ಕೆಂಧೂಳಿಯವರು ರಚಿಸಿ ಹಾಡಿರುವ ಕೆಲವೊಂದು ಗೀತೆಗಳು ನಿಜಕ್ಕೂ ಸಮಾಜಕ್ಕೆ ಅಂಟಿಕೊಂಡಿರುವ ಧೂಳನ್ನು ರಪರಪನೆ ಜಾಡಿಸಿ ಮಡಿಗೊಳಿಸುವಂತಹ ಕೆಲಸವನ್ನು ಮಾಡಿವೆ. ಸಮಾಜದಲ್ಲಿ ಇರುವ ಹುಳುಕುಗಳನ್ನು ಕೆಚ್ಚೆದೆಯಿಂದ ಹಾಡಿನಲ್ಲಿ ವಿಡಂಬಿಸಿದ್ದಾರೆ. ಅಂತಹ ಗೀತೆಗಳಲ್ಲಿ 'ಸೂಳ್ಯಾರು ಬಾಳ ಸುಮಾರು ಅಂತ ಅಂತಿರಿ ಸುಮಸುಮ್ಮಕ...ಅವರಾಗಿ ಏನು ಕರಿಯಾಕ ಬಂದಿಲ್ಲ ನಿಮ್ಮ ನಿಮ್ಮ ಮನಿತನಕ' ಎಂಬುವುದು ಒಂದು ಪ್ರಮುಖ ಗೀತೆಯಾಗಿದೆ. ಇವರು ಹಾಡುಗಾರರಷ್ಟೇ ಅಲ್ಲದೇ ರಚನೆಕಾರರಾಗಿ, ಮಾರಾಟಗಾರರಾಗಿ, ವಿತರಕರಾಗಿ ಎಲ್ಲಾ ಮಗ್ಗಲುಗಳಲ್ಲಿಯೂ ತಮ್ಮನ್ನು ತಾವು ತೊಡಗಿಸಿ

ಕೊಂಡವರು. ಇವರ ಮಕ್ಕಳಾದ ಶ್ರೀಕಾಂತ ಮತ್ತು ಪಲ್ಲವಿಯವರು ತಂದೆಯಂತೆ ಇವರು ಸಹ ಸಂಗೀತ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡವರು.

ಕೆಂಧೂಳಿಯವರು ತಮ್ಮ ಹಾಡಿನ ಮೂಲಕ ಜನಪದಕ್ಕೆ ಜೀವ ತುಂಬುವ ಕೆಲಸವನ್ನು ಮಾಡಿದ್ದಾರೆ. ತಂದೆಯ, ತಾಯಿಯ, ಪತಿಯ, ಪತ್ನಿಯ, ಮಗಳ, ಮಗನ, ಯುವತಿಯ, ಯುವಕನ, ಅತ್ತೆ–ಮಾವನ, ಸೊಸೆಯ, ಸೂಳೆಯರ ಮುಂತಾದ ಎಲ್ಲ ಪಾತ್ರಗಳ ಅಂತರಂಗದ ಭಾವಗಳನ್ನು ಅರಿತು ಕರಗತ ಮಾಡಿಕೊಂಡು ತಮ್ಮ ಕಲೆಯ ಮೂಲಕ ಅವುಗಳಿಗೆ ಬಣ್ಣ ತುಂಬಿದ್ದಾರೆ. ತಮ್ಮ ಹಾಡುಗಳನ್ನು ಧ್ವನಿಸುರುಳಿ ಮಾಡುವಾಗ ಕೇವಲ ತಾವು ಮಾತ್ರ ಹಾಡದೇ ನಾಡಿನ ಪ್ರಸಿದ್ಧ ಗಾಯಕರಾದಂತಹ ಮಂಜುಳಾ ಗುರುರಾಜ, ಬಿ.ಆರ್.ಛಾಯಾ, ಚಂದ್ರಿಕಾ ಕಸ್ತೂರಿಶಂಕರ ಮುಂತಾದ ಹಾಡುಗಾರರಿಂದ ಹಾಡುಗಳನ್ನು ಹಾಡಿಸಿ ಜನರಿಗೆ ಮುದ ನೀಡುವಂತಹ ಕೆಲಸವನ್ನು ಮಾಡಿದ್ದಾರೆ. ಆ ಎಲ್ಲ ಗಾಯಕರಿಂದ ಹಾಡಿರುವ ಹಾಡುಗಳು ಎಲ್ಲ ಸಂಬಂಧಗಳ ಭಾವನೆಗಳಿಗೆ ಬೆಳಕಾಗಿ ಮೂಡಿಬಂದಿವೆ. ಉದಾಹರಣೆಗೆ ಮಂಜುಳಾ ಗುರುರಾಜ್ ಹಾಡಿರುವ ಒಂದು ಗೀತೆಯನ್ನು ಇಲ್ಲಿ ನೋಡಬಹುದು.

ನಾ ಹ್ಯಾಂಗ್ ಮಾಡಲೀಗ
ನಿನಗಂಡಬೇಕ ನನಗ ಅಂದ
ನಾನು ಅಪ್ಪ ಅವ್ವ ಕೂಡಿ
ನಿನ ಹಿರಿಯನ ಕೂಡ ಜಗಳಾಡಿ
ಅಲ್ಲಾದ ನ್ಯಾಯ ಮಾಡಿ
ನನ್ನಿಂದ ದೂರಮಾಡಿ
ತವರವರ ಮಾತಕೇಳಿ
ಅಗೇನಿ ನಾನು ಪ್ಯಾಲಿ
ಬಂಗಾರ ನಾಲ್ಕು ತೊಲಿ
ಹಾಕಿಲ್ಲ ಮದುವೇಲಿ
ಬರಬ್ಯಾಡ ಬರಿಯ ಕೈಲಿ
ಕಳಿಸ್ಯಾನ ಬಡದ ತವರಿಗೆ
ನಾ ಬಂದ ಎರಡ ವರ್ಷಾಯ್ತು
ಬಂಗಾರ ಮಾತ್ರ ಸಿಗದಾಯ್ತು
ನನ್ನವಗ ಪತ್ರ ಬರದಾಯ್ತು
ನೂರಾರು ಪತ್ರ ಬರದೋಯ್ತು
ಉತ್ತರಬಂತು ಕಡೆಮಾತು
ಬೇರೊಂದು ಮದುವೆಯ ಮಾತು[೭]...

ಈ ಪದ್ಯದಲ್ಲಿ ಮದುವೆಯಾದ ನಂತರ ಗಂಡನ ಮನೆಗೆ ಹೋದ ಹೆಣ್ಣು ಮಗಳಿಗೆ ಗಂಡನ ಮನೆಯವರು ವರದಕ್ಷಿಣೆ ರೂಪದಲ್ಲಿ ನೀಡುವ ಚಿತ್ರಹಿಂಸೆ ಇಲ್ಲಿ ಕಂಡು ಬರುತ್ತದೆ. ಹಾಗೆಯೇ ಗಂಡನ ಮನೆಯವರ ತಿರಸ್ಕಾರಕ್ಕೆ ಒಳಗಾದ ಹೆಣ್ಣು ಗಂಡನ ಅಗಲಿಕೆ ವಿರಹ ಹಾಗೂ ನೊಂದ ಭಾವನೆಗಳು ಇಲ್ಲಿ ವ್ಯಕ್ತವಾಗುತ್ತವೆ. ಈ ಸಮಾಜ ಹೆಣ್ಣು ಮಗಳನ್ನು ಎಷ್ಟೊಂದು ಘೋರ ರೂಪದಲ್ಲಿ ನೋಡಿಕೊಳ್ಳುತ್ತಿದೆ ಎಂಬುದಕ್ಕೆ ಇದೊಂದು ಉದಾಹರಣೆ. ಇಂತಹ ಹಲವಾರು ಗೀತೆಗಳ ರಚನೆ, ಗಾಯನ, ಪ್ರಚಾರ ಹೀಗೆ ಜನಪದ ಸೇವೆಯನ್ನು ಎರಡು ದಶಕಗಳಿಂದ ಮಾಡುತ್ತಿದ್ದಾರೆ. ಇವರು ಹಲವಾರು ಗ್ರಾಮಗಳಲ್ಲಿ ಹಾಗೂ ನಗರಗಳಾದಂತಹ ಬೆಳಗಾವಿ, ವಿಜಯಪುರ, ಬಾಗಲಕೋಟ ಧಾರವಾಡ, ನೆರೆಯ ರಾಜ್ಯ ಮಹಾರಾಷ್ಟ್ರದ ಸಾಂಗ್ಲಿ, ಸೊಲ್ಲಾಪುರ ಮುಂತಾದ ಕಡೆ ಹಾಡುವ ಮೂಲಕ ಪ್ರಖ್ಯಾತಿ ಪಡೆದಿದ್ದಾರೆ. ಜನಪದ ಕಲೆಯ ಮೇಲೆ ಅಪಾರ ಆಸಕ್ತಿ ಅಭಿಮಾನ, ಆದರಗಳನ್ನು ಇಟ್ಟುಕೊಂಡಿರುವ ಇವರು ಜನಪದ ಕಲಾವಿದರಿದ್ದ ಹಳ್ಳಿಹಳ್ಳಿಗೆ ಹೋಗಿ ಅವರಿಂದ ಹಾಡಿಸಿ, ಆನಂದಪಟ್ಟು ಅವುಗಳು ಮುಂದಿನ ಪೀಳಿಗೆಗೆ ಉಳಿಯಲು ಸಂಗ್ರಹಿಸಿ, ಕ್ಯಾಸೆಟ್ ಮಾಡಿ ಮಾರಾಟ ಮಾಡುವುದರೊಂದಿಗೆ ನಾಡಿನ ಜನತೆಗೆ ಮುಟ್ಟಿಸಿದ್ದಾರೆ. ಈ ಮೂಲಕ ಜನಪದ ಕಲಾವಿದರನ್ನು ನಾಡಿನ ಜನತೆಗೆಲ್ಲ ಪರಿಚಯಿಸುತ್ತಿರುವುದು ಅತ್ಯಂತ ಅಭೂತಪೂರ್ವ ಕಾರ್ಯವಾಗಿದೆ. ಇವರ ಈ ಎಲ್ಲಾ ಸಾಹಿತ್ಯ ಕೃಷಿಯು ನವಮೌಖಿಕ ಸಾಹಿತ್ಯಕ್ಕೆ ಸೂಕ್ತ ಉದಾಹರಣೆಗಳಾಗಿವೆ. ಏಕೆಂದರೆ ನವಮೌಖಿಕ ಸಾಹಿತ್ಯದ ಲಕ್ಷಣಗಳು ಇವುಗಳಲ್ಲಿ ಕಂಡು ಬರುತ್ತವೆ. ಅಲ್ಲದೇ ಪ್ರಸ್ತುತ ಜನರ ಅಭಿರುಚಿಗೆ ತಕ್ಕಂತೆಯು ರಚನೆಯಾಗಿವೆ.

ಕೆಂಧೂಳಿ ಅವರು ೧೯೭೭ರಲ್ಲಿ ಹುಚ್ಚೇಶ್ವರ ನಾಟ್ಯಸಂಘ ಬಾಗಲಕೋಟೆಯಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ತಮ್ಮ ಗಾಯನದ ಮೂಲಕ ಸಂಗೀತ ಸುಧೆಯನ್ನು ಉಣಬಡಿಸಿದ್ದಾರೆ. ಮುಂದೆ ಧಾರವಾಡ ಆಕಾಶವಾಣಿ ಕೇಂದ್ರದಿಂದ ಅವರ ಏಕತಾರಿ ಹಾಡುಗಳು, ಶಿವಶರಣರ ವಚನಗಳು, ತತ್ವಪದಗಳು ಪ್ರಸಾರವಾಗಿವೆ. ಕೆಂಧೂಳಿಯವರು ೨೦೦ಕ್ಕೂ ಹೆಚ್ಚು ಧ್ವನಿಸುರುಳಿಗಳಿಗೆ ಧ್ವನಿಯಾಗಿದ್ದಾರೆ. ೧೫೦ಕ್ಕೂ ಅಧಿಕ ಜನಪದ ಗೀತೆ ಮತ್ತು ಭಕ್ತಿಗೀತೆಗಳ ರಚನೆ ಹಾಗೂ ಧ್ವನಿಸುರುಳಿಗಳನ್ನು ಮಾಡಿದ್ದಾರೆ. ಶ್ರೀಶೈಲದ ಮಲ್ಲಿಕಾರ್ಜುನನ ಮೇಲೆ ಇವರು ಹಾಡಿರುವ ಭಕ್ತಿಗೀತೆಗಳು ಬಹಳ ಪ್ರಸಿದ್ಧಿಯಾಗಿವೆ. "ನೆರೆಯ ಆಂಧ್ರದ ಶ್ರೀಶೈಲಕ್ಕೆ ಹೋಗಿ ಭಕ್ತಿಗೀತೆಗಳ ಕ್ಯಾಸೆಟ್‌ನ್ನು ತೋರಿಸಿ ಅಂದಾಗ ಅಂಗಡಿಕಾರ ನಮಗೆ ತೋರಿಸುವುದು ಕೆಂಧೂಳಿಯವರ ಕ್ಯಾಸೆಟ್‌ನ್ನೆಗಳನ್ನೇ, ಶ್ರೀಶೈಲ ಮಲ್ಲಯ್ಯ, ಉಘೇ ಉಘೇ ಮಲ್ಲಯ್ಯ, ಮಲ್ಲಯ್ಯ ಬಂದಾನ ನಡಿ, ಶ್ರೀಶೈಲ ಯಾತ್ರಾ ಮಾಡೋನ ನಡಿ, ಕಂಬಿ ಹಾಡುಗಳು, ಮಾಡಿರೋ ಮಲ್ಲಯ್ಯನ ಧ್ಯಾನ ಮುಂತಾದ ಅನೇಕ ಧ್ವನಿಸುರುಳಿಗಳು ಅವರಿಂದ ರಚನೆಗೊಂಡು ಮಾರಾಟವಾಗಿವೆ. ಇವರ ಪ್ರಮುಖ ಭಕ್ತಿ ಗೀತೆಯ ಕ್ಯಾಸೆಟ್‌ಗಳೆಂದರೆ ಇಳಕಲ್ಲದ ವಿಜಯ ಮಹಾಂತೇಶ, ಗಳನಾಥ ದತ್ತಾತ್ರೆಯ, ಗುಡ್ಡಾಪುರದ ದಾನಮ್ಮ, ಇಂಚಲಮಠದ ಭಕ್ತಿಗೀತೆಗಳು, ಹುಬ್ಬಳ್ಳಿಯ ಸಿದ್ಧಾರೂಢರ

ಸುಪ್ರಭಾತ ಇತ್ಯಾದಿ. ಸೋಬಾನೆ ಪದಗಳು, ಕಡ್ಲಿಮಟ್ಟಿ ಕಾಶಿಬಾಯಿ, ಡಾ.ಸೋಮಶೇಖರ ಇಮ್ರಾಪುರ, ಅಳಿಯನ ಅರ್ಭಟ, ಹೆಂಡ್ತೀದ್ದು ನಗತಾರೆ ಮತ್ತು ಶ್ರೀರಾಮ ಇಟ್ಟನ್ನವರ ಅವರ ಗಂಡಾಹೆಂಡ್ತಿ[೮] ಇತ್ಯಾದಿ ಕೆಂಧೂಳಿಯವರ ಕ್ಯಾಸೆಟ್‌ಗಳಾಗಿವೆ. ಇವರು ೧೯೮೮ರಿಂದ ಕೆಂಧೂಳಿ ರೆಕಾರ್ಡಿಂಗ್ ಸರ್ವಿಸ್‌ನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರು ಮೂರು ಸಾವಿರಕ್ಕಿಂತ ಅಧಿಕ ಜಾನಪದ ಕಾರ್ಯಕ್ರಮಗಳನ್ನು ನಾಡಿನಾದ್ಯಂತ ನೀಡಿದ್ದಾರೆ. ಇವರ ಹಾಡನ್ನು ಕೇಳಿ ಜನಪದ ರತ್ನ ಹುಕ್ಕೇರಿ ಬಾಳಪ್ಪನವರು ಸಹ ಇವರನ್ನ ಹಾರೈಸಿದ್ದಾರೆ.

ಕೆಂಧೂಳಿಯವರ ಅವಿರತ, ದಣಿವರಿಯದ ಜನಪದ ಸೇವೆಗೆ ಮೆಚ್ಚಿ ಅನೇಕ ಗೌರವಾದರಗಳು ದೊರೆತಿವೆ. ಅನೇಕ ಸಂಘ-ಸಂಸ್ಥೆಗಳು ಇವರನ್ನು ಸತ್ಕರಿಸಿವೆ, ೨೦೧೩-೧೪ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಕೆಂಧೂಳಿಯುವರು ಹಳ್ಳಿಯಲ್ಲಿದ್ದುಕೊಂಡು ಗ್ರಾಮೀಣ ಸೊಗಡನ್ನು ಸವಿದು, ಜನರ ನಾಡಿಮಿಡಿತವನ್ನು ತಿಳಿದು, ಎಲ್ಲ ಮಗ್ಗಲುಗಳ ಕುರಿತಾಗಿ ಗೀತೆಗಳನ್ನು ಹಾಡಿದ್ದಾರೆ. ಅವಶ್ಯಕವೆನಿಸಿದಲ್ಲಿ ಸ್ವತಃ ಗೀತೆ ರಚಿಸಿ ಸಮಾಜದ ಅಂಕುಡೊಂಕುಗಳನ್ನು ನಿರ್ಭಿಡೆಯಿಂದ, ನಿರ್ಭಯದಿಂದ ಟೀಕಿಸುವ ಎದೆಗಾರಿಕೆ ಇವರದ್ದಾಗಿದೆ.

**ಶಬ್ಬೀರ ಡಾಂಗೆ**

ಶಾಸ್ತ್ರ ಸಾಹಿತ್ಯ ಸಹಜವಾಗಿ ಸಾಮಾನ್ಯ ಜನರನ್ನು ಸೆಳೆತಕ್ಕೆ ತೆಗೆದುಕೊಳ್ಳುವುದು ಕಡಿಮೆ. ಆದರೆ ಕ್ಷಣ ಮಾತ್ರದಲ್ಲಿ ಬಿಡದೆ ಸೆಳೆದು ತನ್ನ ತೆಕ್ಕೆಯಲ್ಲಿ ಹಾಕಿಕೊಳ್ಳುವ ತಾಕತ್ತು ಇರುವುದು ಜನಪದ ಸಾಹಿತ್ಯಕ್ಕೆ ಎಂದರೆ ಅತಿಶಯೋಕ್ತಿಯಲ್ಲ. ಏಕೆಂದರೆ ಸಾಮಾನ್ಯ ಜನರ ಸಹಜ ಭಾವಗಳನ್ನು ಸಮ್ಮೇಳನ ಮಾಡಿಕೊಂಡು ಸುಂದರವಾಗಿ ವ್ಯಕ್ತಪಡಿಸಿದಾಗ ಅದು ಜನರ ಮನಸ್ಸಿಗೆ ಲಗ್ಗೆ ಹಾಕುತ್ತದೆ. ಗಂಭೀರತೆಯಲಿ ಅತಿ ಗಂಭೀರವಾದ ವ್ಯಕ್ತಿಯೂ ಕೂಡ ಒಂದು ಕ್ಷಣ ಗಾಂಭೀರ್ಯವನ್ನು ಮರೆತು ಮಂದಹಾಸ ಬೀರುವಂತಹ ಸುಂದರ ಘಳಿಗೆಗಳನ್ನು ನಿರ್ಮಾಣ ಮಾಡುವ ಸಾಮರ್ಥ್ಯ ಈ ಸುಂದರ ಜಾನಪದ ಗಂಗೆಗಿದೆ. ಜಗತ್ತನ್ನು ಆಳಿದ ಮಹಾನ್ ಸಾಮ್ರಾಟರೆಲ್ಲ ಮರೆಯಾಗಿ ಹೋದರು. ಆದರೆ ಮಾನಸ ಲೋಕದ ಸಾಮ್ರಾಜ್ಯವನ್ನು ಆಳಿದ ಮಹನೀಯರು ಮನಸ್ಸಿನಲ್ಲಿ ಮನೆ ಮಾಡಿಕೊಂಡು ಉಳಿದಿದ್ದಾರೆ. ಅಂತಹ ಮಾನಸ ಲೋಕದ ಮಹನೀಯರ ಸಾಲಿನಲ್ಲಿ ಸಂಗೀತಗಾರರು ಪ್ರಮುಖರು. ಅದರಲ್ಲೂ ಸಾಮಾನ್ಯ ಜನರಿಗೆ ಸಿಹಿ ಉಣಿಸುವ ಸವಿ ನೀಡುವ ಸುಂದರ ಸಾಹಿತ್ಯ ರಚಿಸಿ ಸುಂದರವಾಗಿ ಅಭಿವ್ಯಕ್ತ ಮಾಡಿದಂತಹ ವ್ಯಕ್ತಿಗಳು ಜನರ ಮನೋ ಮಂಟಪದಲ್ಲಿ ರಾರಾಜಿಸುತ್ತಾ ಇರುತ್ತಾರೆ. ಶ್ರೀ ಸಾಮಾನ್ಯ ಜನರ ಮನಸ್ಸನ್ನು ಅರಿತು ಅದರ ಆಳ ಅಗಲುಗಳನ್ನು ತಿಳಿದು ಅವುಗಳನ್ನು ಬಗೆದು ಗೀತೆ ಮುಗಿಸಿಕೊಂಡು ಹಾಡಿದ ಕಲಾವಿದರು ಅಸಂಖ್ಯಾತ. ಅಂತಹ ಅಸಂಖ್ಯಾತ ಕಲಾವಿದರಲ್ಲಿ ಉತ್ತರ ಕರ್ನಾಟಕದ ಖ್ಯಾತ

ಕಲಾವಿದ ಶಬ್ಬೀರ ಡಾಂಗೆ ಕೂಡ ಒಬ್ಬರು. ಇವರು ಜುಲೈ ೨೦, ೧೯೬೪ರಂದು ಅಬ್ದುಲ್‌ಸಾಬ್ ಮತ್ತು ಬೂಮಾಬಿ ಅವರ ಮಗನಾಗಿ ಮೂಡಲಗಿಯಲ್ಲಿ ಜನಿಸಿದರು. ಇವರು ಶಿಕ್ಷಣವನ್ನು ಕೇವಲ ಎಸ್.ಎಸ್.ಎಲ್.ಸಿ ವರೆಗೆ ಮಾತ್ರ ಪಡೆದರು ಸಹ, ಇಂದು ಶಬ್ಬೀರ್ ಡಾಂಗೆ ಅವರನ್ನು ನೆನೆಸಿಕೊಂಡರೆ ಸಾಕು ಜನರ ಮಾನಸ ಲೋಕದಲ್ಲೊಂದು ಹೊಸ ರೀತಿಯ ಭಾವಗಳ ಹೊನಲು ಉಕ್ಕುತ್ತದೆ. ಅಷ್ಟೊಂದು ಜನಪ್ರಿಯತೆಯನ್ನು ಪಡೆದವರಾಗಿದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ಕೂಡ ಡಾಂಗೆ ಅವರ ಹಾಡುಗಳ ಬೇಡಿಕೆಗೆ ಕೊರತೆಯಿಲ್ಲ. ಶಬ್ಬೀರ ಡಾಂಗೆಯವರು ತಮ್ಮ ಹಿಮ್ಮೇಳದೊಂದಿಗೆ ವೇದಿಕೆಯನ್ನು ಏರಿದರೆ ಚಪ್ಪಾಳೆ, ಕೆಕೆಗಳ ಸುರಿಮಳೆ ಶ್ರೋತೃಗಳ ಕಡೆಯಿಂದ ಕೇಳಿ ಬರುತ್ತದೆ. ಇವರು ಹಾಡುವ ಮುನ್ನ ಇವರ ಬಳಗದವರಿಂದ ಹಾಡಲಾರಂಭಿಸಿದ ಪಲ್ಲವಿಯ ಧ್ವನಿ ಅನುರಣಿಸಿ ಜನರ ಸಂತಸಭರಿತ ಕೂಗುಗಳು ಕೇಳಿ ಬರುತ್ತವೆ. ಇನ್ನೂ ಇವರು ಬಲಗೈಯಲ್ಲಿ ಧ್ವನಿವರ್ಧಕ ಹಿಡಿದು ತಮ್ಮ ಎಡಗೈಯನ್ನು ಮೇಲೆತ್ತಿ.

ಹೇ ನಾಚಬೇಡ ನಾರಿ ನಿನ್ನ ಮಾವ ಬಂದಾನ
ಓಡಿ ಹೋಗಿ ನೋಡಬಾರದೇ ಏನ ತಂದಾನ...

ಎಂದು ಆರಂಭಿಸಿದರೆ ಸಾಕು ಕೇಳುಗರ ಸಂತಸದ ಶಿಳ್ಳೆಗಳು ಧ್ವನಿಗಳು ಧುಮ್ಮಿಕ್ಕಿ ಬರುತ್ತವೆ. ಉತ್ತರ ಕರ್ನಾಟಕದಲ್ಲಿ ಸಾಮಾನ್ಯವಾಗಿ ಶ್ರೀ ಸಾಮಾನ್ಯರಿಂದ ಕೇಳಲ್ಪಡುವ ಹಾಡುಗಾರರು ಅಂದರೆ ಶಬ್ಬೀರ ಡಾಂಗೆ, ಗುರುರಾಜ್ ಹೊಸಕೋಟೆ, ಬಸವರಾಜ ನರೇಂದ್ರ ಮುಂತಾದವರು. ಅದರಲ್ಲೂ ಶಬ್ಬೀರ ಡಾಂಗೆ ಅವರ ಜೀವನದ ಯಶಸ್ಸು ಶ್ಲಾಘನೀಯ.

ಇವರ ಚಟುವಟಿಕೆಗಳನ್ನು ಕಲಾ ಸಾಧನೆಯನ್ನು ಸಂಕ್ಷಿಪ್ತವಾಗಿ ನೋಡುವುದಾದರೆ, ಅಂದು ೧೯೮೦ರಲ್ಲಿ ರಂಜಾನ್ ಉಪವಾಸ ತಿಂಗಳಲ್ಲಿ ರೋಜಾ ಇರುವವರನ್ನು ಬೆಳಗಿನ ಜಾವ ಜಾಗೃತಗೊಳಿಸುವ ಧಾರ್ಮಿಕ ಕಾರ್ಯದಿಂದ ಪ್ರಾರಂಭವಾಯಿತು. ೧೯೮೮ರಲ್ಲಿ ಗುಡ್ ಫ್ರೈಡೆ ದಿನದಂದು ಕ್ರೈಸ್ತ ಯುವಕ ಸಂಘದ ವತಿಯಿಂದ ನಡೆಸಲ್ಪಟ್ಟ ಕಾರ್ಯಕ್ರಮದ ಮೂಲಕ ರಂಗಭೂಮಿಯ ಪ್ರವೇಶವನ್ನು ಮಾಡಿ, ಅದೇ ವರ್ಷ ಗಣೇಶ ಚತುರ್ಥಿಯಂದು ಗುರುಗಳಾದ ಸಣ್ಣಕ್ಕಿ ಅವರ ನಿರ್ದೇಶನದಲ್ಲಿ ಅಭಿನಯಿಸಲ್ಪಟ್ಟು. ಮುಂದೆ ಶ್ರೀ ಪ್ರಕಾಶ್ ಕಡಪಟ್ಟಿ ವಿರಚಿತ ಪೂರ್ಣ ಪ್ರಮಾಣದ ನಾಟಕದಲ್ಲಿ ಕಂಠಿ ಅಂದರೆ ಚಕ್ಕಾ ಪಾತ್ರದಲ್ಲಿ ಅಭಿನಯಿಸಿ ಜನ ಮೆಚ್ಚುಗೆಯನ್ನು ಪಡೆದರು. ನಂತರದ ದಿನಗಳಲ್ಲಿ ದೀಪ, ಮಂಗಳ ನನ್ನ ಅತ್ತಿಗೆ, ರೈತ ನಗಲಿಲ್ಲ ಸರ್ಕಾರ ಉಳಿಯಲಿಲ್ಲ ಮತ್ತು ಇನ್ನೂ ಹಲವಾರು ನಾಟಕಗಳಲ್ಲಿ ರಂಗಭೂಮಿಯ ಸೇವೆ ಮಾಡಿದ್ದಾರೆ. ಶಿಶುನಾಳ ಶರೀಫ, ಹುಕ್ಕೇರಿ ಬಾಳಪ್ಪಜ್ಜ, ಗುರುರಾಜ್ ಹೊಸಕೋಟಿ. ಗುರುರಾಜ್ ಕೆಂಧೂಳಿ ಇವರುಗಳಿಂದ ಹಾಡುಗಾರಿಕೆ ಮತ್ತು ಜನಪದ ಸಾಹಿತ್ಯದ ಗೀಳನ್ನು ಹಚ್ಚಿಕೊಂಡು ಜನಪದ ಗೀತೆಗಳನ್ನು ರಚಿಸುತ್ತಿರುವ ಮಹಾಲಿಂಗಪುರದ ಜನಪದ ಸಾರ್ವಭೌಮ ಶ್ರೀ ನಿಜಾಂ ಅಲ್ಲಖಾನ್‌ರವರಿಗೆ ಡ್ರೈವರ್ ಮಾಮಾ ಧ್ವನಿ ಸುರುಳಿಯನ್ನು, ಡ್ರೈವರ್ ಕೆಲಸ ಸಾಕಪ್ಪಾ ನನಗೆ ಅನ್ನುವಂತಹ ಸಾಹಿತ್ಯವನ್ನು ಕೊಟ್ಟಾಗ

ಸಾಹಿತ್ಯಕ್ಕೆ ಜನ ಮೆಚ್ಚುಗೆ ವ್ಯಕ್ತಪಡಿಸಿದರು. ಮುಂದೆ ಗೆಳೆಯರ ಬಳಗದ ಒತ್ತಾಯದ ಮೇರೆಗೆ ೧೯೯೩ರಲ್ಲಿ ಸ್ವತಃ ಮೂಡಲಗಿ ಗೌಡ ಮತ್ತು ಬಾರೆ ಹಿತ್ತಲಮನೆ ಚೆನ್ನಿ ಎನ್ನುವ ಧ್ವನಿ ಸುರುಳಿಗಳಲ್ಲಿ ಸ್ವರಚಿತ ಜನಪದ ಗೀತೆಗಳೊಂದಿಗೆ ಹಾಡುವ ಕಾಯಕಕ್ಕೆ ಪಾದಾರ್ಪಣೆ ಮಾಡಿದರು. ಇವರು ರಚಿಸಿದ ಮತ್ತು ಹಾಡಿದ ಕೆಲವೊಂದು ಹಾಡುಗಳು.

೧. ಜವಾರಿ ಪೋರಿ ಮೂಡಲಗಿ ಹೋರಿ
೨. ಹುಡುಗ ಬೆಕ್ ಯಾದಿ ಮೇ ಶಾದಿ
೩. ಚಡ್ಡಿ ದೋಸ್ತ್ ಕಲಿಯುಗದ ಬಬ್ರುವಾಹನ
೪. ಆಲಮಟ್ಟಿ ಕಥೆ
೫. ಮಾಗ್ಗಲ ಮನೆ ಮಲ್ಯ
೬. ಕಾರ್ಗಿಲ್‌ದ ಹುಲಿಗಳು
೭. ಕೊಲ್ಲಾರಿ ಬಂಡಿ ಹಾಲಿನ ಗಿಂಡಿ
೮. ಶರಣರಿಗೆ ಮರಣವಿಲ್ಲ...ಇತ್ಯಾದಿ.

ಇವರಿಗೆ ಜನಪ್ರಿಯತೆ ತಂದುಕೊಟ್ಟ ಒಂದು ಹಾಡನ್ನು ಇಲ್ಲಿ ನೋಡಬಹುದು.

ನೀ ನಗುವುದು ಬಿಡವಲ್ಲಿ
ನನ್ನ ಮರೆತರ ಮರಿವಲ್ಲಿ ॥
ಹಿಂಗ್ಯಾಕ ಎಲೆ ಬಾಲಿ..
ನನ್ನ ಕೊಲುವುದು ಬಿಡವಲ್ಲಿ
ಕೈ ಹಿಡಿದರು ಹಿಡಿವಲ್ಲಿ
ಮದುವಿಯಾಗಾಕ ಬಿಡವಲ್ಲಿ
ನೀನ್ಯಾಕ ತಿಳಿಯವಲ್ಲಿ..
ಬರತೈತಿ ನನಗ ಹರಳಿ
ನೀ ನಗುವುದು ಬಿಡವಲ್ಲಿ
ನನ್ನ ಮರೆತರ ಮರಿವಲ್ಲಿ
ನನ್ನ ಪ್ರೀತಿಯ ಈ ತೇರ
ಆ ಗುರಿಯ ಮುಟ್ಟಲಿಲ್ಲಾ
ನಡುದಾರಿಯೋಳಗ ಬಂದು
ಬಿರುಗಾಳಿ ಬಿಸಿತಲ್ಲಾ
......................................
......................................
ನೀ ನಗುವುದು ಬಿಡವಲ್ಲಿ
ನನ್ನ ಮರೆತರ ಮರಿವಲ್ಲಿ॥[೯]

ಶಬ್ಬೀರ ಡಾಂಗೆ ಅವರು ಈ ಗೀತೆಯ ಮೂಲಕ ಗಂಡು-ಹೆಣ್ಣಿನ ಪ್ರೀತಿ ಯಾವ ರೀತಿಯಾಗಿ ಇರುತ್ತದೆ. ದೂರವಾದಾಗ ಅವರ ಮನಸ್ಸಿನ ಮೇಲಾಗುವ ಪರಿಣಾಮಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಇಂದು ಈ ರೀತಿಯ ಹಾಡುಗಳನ್ನು ಕೇಳುವ ಯುವಜನಾಂಗ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಅದಕ್ಕಾಗಿಯೇ ಇಂದು ನವಮೌಖಿಕದಲ್ಲಿ ಇಂತಹ ಹಾಡುಗಳು ಸಿಂಹಪಾಲನ್ನು ಪಡೆದುಕೊಂಡಿವೆ.

ಇದೇ ರೀತಿ ೩೫೦ಕ್ಕೂ ಹೆಚ್ಚು ಧ್ವನಿಸುರುಳಿಗಳಲ್ಲಿ ಹಾಡಿ ಉತ್ತರ ಕರ್ನಾಟಕದ ಜನಪದ ಜಾಣ, ಶ್ರೀನಿಧಿ, ಸರ್ವಶ್ರೇಷ್ಠ ಕಲಾಭೂಷಣ ಮತ್ತು ಇನ್ನೂ ಅನೇಕ ನಾಮಾಂಕಿತದಿಂದ ಹುಟ್ಟೂರು ಮೂಡಲಗಿಯ ಹೆಸರನ್ನು ನಾಡಿನ ತುಂಬೆಲ್ಲ ಬೆಳಗಿ ಕ್ಯಾಸೆಟ್ ಲೋಕದಿಂದ ಜನಮನ್ನಣೆ ಪಡೆದಿದ್ದಾರೆ. ಉತ್ತರ ಕರ್ನಾಟಕದುದ್ದಕ್ಕೂ ಜನಪದ ರಸಮಂಜರಿ ಹಾಗೂ ಹೆಸರಾಂತ ಟಿವಿ ವಾಹಿನಿಗಳಲ್ಲಿ ಕಾರ್ಯಕ್ರಮಗಳನ್ನು ನೀಡುತ್ತಾ, ಜನರ ಮನಸ್ಸನ್ನು ತಣಿಸುತ್ತ ತಮ್ಮನ್ನು ತಾವೇ ಕಲಾದೇವಿ ಸೇವೆಗೆ ಮುಡುಪಾಗಿಟ್ಟು ಕೊಂಡವರು.

**ಆಕಾಶ ಮನಗೂಳಿ**

ಆಕಾಶ ಮನಗೂಳಿ ಉತ್ತರ ಕರ್ನಾಟಕದ ಅತ್ಯಂತ ಪ್ರಸಿದ್ಧ ಭಜನಾ ಪದ ಹಾಡುಗಾರರಲ್ಲಿ ಒಬ್ಬರು. ಭಜನಾ ಪದಗಳಿಗೆ ಒಂದು ಹೊಸ ರೂಪವನ್ನು ಕೊಟ್ಟು ಅದು ಎತ್ತರವಾಗಿ ಬೆಳೆಯಲು ಇವರ ಪಾತ್ರ ಹಿರಿದಾದದ್ದು. ಇವರು ಹುಟ್ಟಿದ್ದು ವಿಜಯಪುರ ಜಿಲ್ಲೆಯ ಬಾಗೇವಾಡಿ ತಾಲೂಕಿನ ಮನಗೂಳಿ ಎಂಬ ಗ್ರಾಮದಲ್ಲಿ. ಇವರ ಭಜನಾ ಪದಗಳು ಕೇಳುವುದಕ್ಕೆ ಅತ್ಯಂತ ಆಕರ್ಷಕವಾಗಿಯೂ ಮತ್ತು ಅರ್ಥಗರ್ಭಿತವಾಗಿವೆ. ಆಕಾಶ ಮನಗೂಳಿ ತಮ್ಮ ಭಜನಾ ಪದಗಳನ್ನು ಹಾಡುವುದರ ಮುಖಾಂತರವಾಗಿ ಸಮಾಜದಲ್ಲಿ ಇರುವಂತಹ ಗೊಡ್ಡು ಸಂಪ್ರದಾಯಗಳನ್ನು, ಅಜ್ಞಾನ, ಅಂಧಕಾರಗಳನ್ನು ವಿಡಂಬನೆ ಮಾಡುತ್ತಾರೆ. ಹಾಡುಗಳನ್ನು ಕೇಳಿದವರು ತಮ್ಮ ಜೀವನದ ತಪ್ಪುಗಳನ್ನು ತಿದ್ದಿಕೊಳ್ಳಬೇಕು ಅನ್ನುವಷ್ಟರ ಮಟ್ಟಿಗೆ ಇವರ ಹಾಡುಗಳು ಪರಿಣಾಮ ಬೀರಿವೆ.

ಕೆಲವೊಂದು ಸಾರಿ ಇವರು ತಮ್ಮ ಭಜನಾ ಪದಕ್ಕೆ ಚಲನಚಿತ್ರಗಳಲ್ಲಿ ಬಳಕೆಯಾದ ಹಾಡುಗಳ ಧಾಟಿಗಳನ್ನು ಹಚ್ಚುವ ಮೂಲಕ ಹೊಸ ಹಾಡುಗಳನ್ನು ಅರ್ಥಗರ್ಭಿತವಾಗಿ ರಚಿಸುತ್ತಾರೆ. ಭಜನಾ ಪದ ಕೊನೆಯಲ್ಲಿ ತಮ್ಮ ಆರಾಧ್ಯ ದೈವದ ಹೆಸರನ್ನು ಮತ್ತು ತಮ್ಮ ಹೆಸರನ್ನು ಬಳಸುತ್ತಾರೆ. ಬಾಲ್ಯದಿಂದಲೇ ಆರಂಭವಾದ ಇವರ ಸಂಗೀತ ಸೇವೆಯು ಇಂದಿನವರೆಗೂ ಅತ್ಯಂತ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಯಾವ ಹಳ್ಳಿಗೆ, ಧಾರ್ಮಿಕ ಕಾರ್ಯಕ್ರಮಗಳಿಗೆ ಹೋದರು ಕೂಡ ಅಲ್ಲಿ ಆಕಾಶ್ ಮನಗೂಳಿಯವರ ಭಜನಾಪದಗಳ ಧ್ವನಿ ಕೇಳುವುದು ಸಾಮಾನ್ಯ ಸಂಗತಿಯಾಗಿದೆ. ತಮ್ಮ ಭಜನೆಗಳ ಮುಖಾಂತರವಾಗಿ ಸಮಾಜಕ್ಕೆ ನೀತಿ ಬೋಧನೆ ಮಾಡುತ್ತಿದ್ದಾರೆ. ಇವರು ಸಮಾಜವನ್ನು ಸರಿದಾರಿಗೆ ತರುವ

ಕಾರ್ಯವನ್ನು ಮಾಡುತ್ತ ಬಂದವರು. ಇವರ ಹಾಡುಗಳು ಇಂದು ಧ್ವನಿಸುರುಳಿಗಳಾಗಿ ಹೊರಬಂದಿವೆ. ೨೧ನೇ ಶತಮಾನದಲ್ಲಿ ಅತಿ ಹೆಚ್ಚು ಜನರಿಂದ ಬಳಕೆಯಾಗುತ್ತಿರುವ ಯೂಟ್ಯೂಬ್‌ನಲ್ಲಿ ಇವರ ಭಜನಾ ಪದಗಳು ಹೇರಳವಾಗಿ ದೊರೆಯುತ್ತಿವೆ. ಅಲ್ಲದೇ ಇವರು ಸವಾಲ್-ಜವಾಬ್ ಎಂಬ ಭಜನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜನರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಆಕಾಶ್ ಮನಗೂಳಿ ಭಜನೆಯ ಎಲ್ಲ ಮಗ್ಗಲುಗಳನ್ನು ತಮ್ಮ ಹಾಡಿನ ಮೂಲಕ ಬಿಂಬಿಸಿದ್ದಾರೆ. ಪ್ರಸ್ತುತ ಶಿಕ್ಷಣ ಕ್ಷೇತ್ರವನ್ನು ಕುರಿತಾಗಿಯೂ ಹಾಡನ್ನು ಹಾಡಿದ್ದಾರೆ.

"ಕರಕೊಂಡು ಬಾರೋ ತಮ್ಮಾ ಮಾಸ್ತರನ" ಎಂಬ ಹಾಡಿನಲ್ಲಿ ಪ್ರಸ್ತುತ ಶಿಕ್ಷಣ ಕ್ಷೇತ್ರವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ಅಸ್ತವ್ಯಸ್ತವಾದ ಶಿಕ್ಷಣ ಪದ್ಧತಿ, ಆಸಕ್ತಿ ಇಲ್ಲದ ವಿದ್ಯಾರ್ಥಿಗಳು, ಲಂಚ ಕೊಟ್ಟು ಬಂದ ಶಿಕ್ಷಕರು, ವಿದ್ಯಾಹೀನ ಶಿಕ್ಷಕರು, ಬುದ್ಧಿಗೇಡಿ ಪಾಲಕರು, ಯದ್ವಾ-ತದ್ವಾ ಶಿಕ್ಷಣ ಸ್ಥಿತಿಗತಿಗಳು, ಗುರು-ಶಿಷ್ಯ ಬಾಂಧವ್ಯದ ಅವನತಿ ಮುಂತಾದ ವಿಷಯಗಳನ್ನು ಬಿಂಬಿಸಿದ್ದಾರೆ. ಇಂತಹ ವಿಡಂಬನಾತ್ಮಕ ಗೀತೆಗಳು ಸ್ವಲ್ಪ ಮಟ್ಟಿಗಾದರೂ ಜನರಲ್ಲಿ ಜಾಗೃತಿಯನ್ನು ಮೂಡಿಸುವ ಕೆಲಸ ಮಾಡುತ್ತಿವೆ.

**ಭಾರತದೊಳಗೆ ಮಟಕಾ ಬಂದೈತೆ :**

ಭಾರತದೊಳಗೆ ಮಟಕಾ ಬಂದೈತೆ ಅಂತ
ಮಟಕಾಕ ಹತ್ತ ಕೊಂಡಿ
ಮಟಕಾದ ಲೆಕ್ಕ ಮಾಡಿ ಮಾಡಿ
ನಿನ್ನ ಕಣ್ಣ ಗುಡ್ಡಿ ಕಳಕೊಂಡಿ...
ಒಂದು ರೂಪಾಯಿಗೆ ತೊಂಬತ್ತ ಬರತಾವಂತ
ಮನದಾಗ ಇಟಗೊಂಡಿ
ಒಂದು ರೂಪಾಯಿ ಹೋದ ಮ್ಯಾಲ ನೀ
ಬಾಯಿ ಬಾಯಿ ಬಡಕೊಂಡಿ...
ಓಪನ್ ಎಕ್ಕಾ ಬರತೈತಂತ ನೀ
ಪಕ್ಕಾ ಮಾಡಿಕೊಂಡಿ
ಎಕ್ಕಾ ಹೋಗಿ ಅಲ್ಲೆ ಚಕ್ಕಾ ಬಂದಾಗ
ಬಾಯಿ ಬಾಯಿ ಬಡಕೊಂಡಿ...
ಬರಡ ಹಾವಿನಂತ ಕಾಗದ ಬರಕೊಂಡ
ಕಿಸೆದಾಗ ಇಟಗೊಂಡಿ
ಹಾವಿನ ವಿಷವು ಬಾಯಲ್ಲಿ ಐತೆಂತ
ನೀ ಎಲ್ಲ ತಿಳಕೊಂಡಿ

ಮಟಕಾ ರೊಕ್ಕಾ ಬರ್‍ತಾವಂತ ನೀ
ಹೊಲಮನಿ ಕಳಕೊಂಡಿ
ಕಾಡಸಿದ್ಧನಪಾದಕ ಹೋಗಿ
ಜೋಳಿಗೆ ಹಾಕ್ಕೊಂಡಿ[೧೦]...

ಈ ಪದ್ಯದ ಮೂಲಕ ಮನಗೂಳಿಯವರ ಮಟ್ಕಾ ದುಶ್ಚಟದ ಬಗ್ಗೆ ಜಾಗೃತಿಯನ್ನು ಮೂಡಿಸುವ ಕೆಲಸ ಮಾಡಿದ್ದಾರೆ. ಮಟಕಾದಿಂದ ಯಾವ ಯಾವ ತೊಂದರೆಗಳಾಗುತ್ತವೆ. ಅದು ಯಾವ ರೀತಿಯ ತೊಂದರೆಯನ್ನು ಕೊಡುತ್ತದೆ. ಹೇಗೆ ಅದರಿಂದ ದೂರವಿರಬೇಕು ಎಂಬ ಅರಿವನ್ನು ಮೂಡಿಸಿದ್ದಾರೆ.

ಇವರ 'ಎಚ್ಚರಿಲ್ಲೊ ಹುಚ್ಚ ನಿನಗ' ಗೀತೆಯನ್ನು ಕೇಳಿದಾಗ, ಮಾನವ ಜನ್ಮ ದೊಡ್ಡದು ಇದೆ ಹಾಳು ಮಾಡಿಕೊಳ್ಳಬೇಡಿರಿ ಹುಚ್ಚಪ್ಪಗಳಿರಾ ಎಂಬ ದಾಸವಾಣಿಯಂತೆ, ಈ ಪದ್ಯವು ಕೂಡ ಜೀವನದ ಸಾರ್ಥಕತೆಯ ಕುರಿತಾಗಿ ಹೇಳುತ್ತದೆ. ಮಾನವ ಸ್ವಾರ್ಥಿಯಾಗಿ ಗಳಿಸುತ್ತಾನೆ. ಆತ ಅಮರ ಅನ್ನುವ ಭ್ರಮೆಯಲ್ಲಿ ಮುಳುಗಿರುತ್ತಾನೆ. ಈ ಮಾನವ ಜನ್ಮ ನೀರ ಮೇಲಿನ ಗುಳ್ಳೆಯಂತೆ ಸ್ಥಿರವಲ್ಲ ಎಂಬುವುದನ್ನು ಮರೆಯುತ್ತಾನೆ. ಬರುವಾಗ ಏನು ತರುವುದಿಲ್ಲ, ಹೋಗುವಾಗ ಏನು ಒಯ್ಯುವುದಿಲ್ಲ, ನಮ್ಮೊಂದಿಗೆ ಯಾರು ಬಂದಿಲ್ಲ, ಹೋಗುವಾಗ ಯಾರು ಬರುವುದಿಲ್ಲ, ಇರುವಷ್ಟು ದಿನ ಸುಂದರವಾಗಿ ಸಜ್ಜನಿಕೆಯಿಂದ ಬಾಳಿ ಬದುಕಿ ಬೆಳಕಾಗಿ ಹೋಗಬೇಕು, ಎನ್ನುವಂತಹ ಮಾರ್ಮಿಕವಾದ ಸಂದೇಶವನ್ನು ಈ ಭಜನಾ ಪದಗಳ ಮೂಲಕ ತಿಳಿಸಿದ್ದಾರೆ. ಆಕಾಶ್ ಮನಗೂಳಿ ಅವರು ದಾರಿ ಬಿಟ್ಟಂತಹ ಜನಸಾಮಾನ್ಯರಿಗೆ ಭಜನಾ ಪದಗಳ ಮೂಲಕ ತಪ್ಪಿನ ಅರಿವನ್ನು ಮುಡಿಸುವ ಮಹತ್ತರವಾದ ಕಾರ್ಯವನ್ನು ಮಾಡಿದ್ದಾರೆ. ಇವರ ಪ್ರಸಿದ್ಧ ಭಜನಾ ಪದಗಳನ್ನು ಇಲ್ಲಿ ನೋಡಬಹುದು.

೧. ಕರ್ಮಕ್ಕೆ ಧರ್ಮಕ್ಕೆ ಜಗಳ ನಡದೈತಿ
೨. ಕುಂತ ದೈವಕ ಕೈ ಮುಗಿದು ಹೇಳ್ತೀನಿ
೩. ಯಾಕೋ ತಮ್ಮ ಹಿಂಗ್ಯಾಕ ನಡೆಸಿದಿ
೪. ಅಗಲಿ ಹೋದನಂದು
೫. ಆದಿಶಕ್ತಿ ಎಲ್ಲಮ್ಮ ತಾಯಿಯ ಮಹಿಮೆ ಕೇಳಿರಿ
೬. ದುಡ್ಡು ದಾರಿ ಬಿಡಸೈತಿ
೭. ಹಳ್ಳಿಯ ಕುರಿ ಒಂದು
೮. ಯಾವ ಜನ್ಮದ ಫಲವು
೯. ಯಾರನ್ನು ನಂಬಬೇಕೊ ಜಗದಲ್ಲಿ ಯಾರನ್ನ ಬಿಡಬೇಕೊ
೧೦. ಅಯ್ಯೋಯ್ಯೋ ಏ ಕುಡುಕ
೧೧. ಹೆಣ್ಣಾಗಿ ಹುಟ್ಟಿದಿ ತಂಗೀ ಮನಿಯಾಗ

೧೨. ನೀ ಸಿಟ್ಟ ಆಗಬ್ಯಾಡ ಕೋತಿ...ಇತ್ಯಾದಿ.

ಇಂತಹ ಹಲವಾರು ಹಾಡುಗಳನ್ನು ಹಾಡುವ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸುವಂತಹ ಮಹತ್ಕಾರ್ಯವನ್ನು ಮಾಡುತ್ತಿದ್ದಾರೆ. ಜನರ ಹೃದಯದಿಂದ ಹುಟ್ಟಿ ಬಂದ ಅನುಭವದ ಮಾತುಗಳು ವಿಶ್ವವಿದ್ಯಾಲಯದ ಪಂಡಿತರಿಗೂ ಕಡಿಮೆ ಏನಿಲ್ಲ. ಇವರ ಭಜನಾ ಪದಗಳು ಜನರಿಗೆ ಸರಳವಾಗಿ ತಿಳಿಯುವ ಭಾಷೆಯಲ್ಲಿ ಮೂಡಿಬಂದಿವೆ. ಇಂಥ ದೇಶಿ ಕಲೆಗಳನ್ನು ಗೌರವಿಸುವ, ಪ್ರೋತ್ಸಾಹಿಸುವ ಕೆಲಸ ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಇಂತಹ ಕಲಾವಿದರು ನಿಜವಾದ ಸಮಾಜ ಸೇವಕರು.

**ರುಕ್ಮೀಣಿ ಮಲ್ಲಪ್ಪ ಹರಿನಾಳ**

ಇಂದು ಪಾಶ್ಚಿಮಾತ್ಯ, ಚಲನಚಿತ್ರ ಗೀತೆಗಳ ಅಬ್ಬರದಲ್ಲಿ ಗ್ರಾಮೀಣ ಜನರ ಜ್ಞಾನಾಮೃತವಾದ ಜನಪದ ಗೀತೆಗಳನ್ನು ರಚಿಸುವ, ಹಾಡುವ ಕಾಯಕದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರಲ್ಲಿ ರುಕ್ಮೀಣಿ ಹರಿನಾಳ ಅವರು ಒಬ್ಬರಾಗಿದ್ದಾರೆ. ಇವರು ಹುಟ್ಟಿದ್ದು ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ತುಂಗಳ ಗ್ರಾಮ. ಇವರ ಗಂಡನ ಊರು ಗದ್ಯಾಳ. ಪ್ರಸ್ತುತ ಇವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರು ಶಿಕ್ಷಣ ಪಡೆದದ್ದು ಕೇವಲ ಮೂರನೇ ತರಗತಿವರೆಗೆ ಮಾತ್ರ. ಆದರೂ ಸಹ ಸಾಧನೆಗೆ ಯಾವುದೇ ರೀತಿಯ ಕೊರತೆ ಉಂಟಾಗಿಲ್ಲ. ೭೦ರ ಹರೆಯದಲ್ಲೂ ಕಂಚಿನ ಕಂಠ ಸಿರಿಯನ್ನು ಹೊಂದಿರುವ ರುಕ್ಷ್ಮೀಣಿ ಹರಿನಾಳ ಸಾವಿರಾರು ಜನಪದ ಗೀತೆಗಳನ್ನು ನೆನಪಿನಿಂದಲೇ ಹಾಡುವ ಒಂದು ವಿಶಿಷ್ಟ್ಯ ಶಕ್ತಿಯನ್ನು ಹೊಂದಿದ್ದಾರೆ.

ರುಕ್ಮೀಣಿ ಹರಿನಾಳ ಅವರ ನೆನಪಿನ ಜ್ಞಾನ ಭಂಡಾರಗಳಲ್ಲಿ ನೂರಾರು ವಿಧದ ಜನಪದ ಗೀತೆಗಳ ಸಂಗ್ರಹವೇ ಇದೆ ಎನ್ನುತ್ತಾರೆ ಇವರನ್ನು ಕಂಡವರು. ಕುಬಸದ ಹಾಡು, ಮಕ್ಕಳ ನಾಮಕರಣ, ಮದುವೆ ಹಾಡು, ಸೋಬಾನೆ ಪದ, ವ್ಯವಸಾಯದ ಮೇಲಿನ ಹಾಡು, ಹಂತಿಹಾಡು, ದೇವರ ನಾಮ, ಒಳಕಲ್ಲು ಪೂಜೆಯ ಹಾಡು ಅಲ್ಲದೇ ಬಸವಣ್ಣನ ಹಾಡು ಸೇರಿದಂತೆ ಹಲವು ನಮೂನೆಯ ಜನಪದ ಗೀತೆಗಳು ಇವರ ಬತ್ತಳಿಕೆಯಲ್ಲಿವೆ. ಇಂದು ಇವರ ಎಷ್ಟೋ ಹಾಡುಗಳು ನವಮೌಖಿಕ ಪ್ರವೇಶ ಪಡೆದುಕೊಂಡಿವೆ.

ಇವರ ವಿಶೇಷತೆಯೆಂದರೆ ದೇವರ ನಾಮಗಳು, ವಚನಕಾರರು, ವಿಶ್ವ ಪ್ರಸಿದ್ಧ ವಿಜಯಪುರದ ಗೋಳಗುಮ್ಮಟ, ರಾಜಕಾರಣಿ ಗೋವಿಂದ ಕಾರಜೋಳ ಅವರ ಮೇಲೂ ಹಾಡಿದ್ದಾರೆ. ಒಂದು ವಸ್ತು ಇಲ್ಲವೇ ಯಾವುದಾದರೂ ಒಂದು ವಿಷಯ ಕೊಟ್ಟರೆ ಕ್ಷಣಾರ್ಧದಲ್ಲಿ ಹಾಡು ರಚಿಸಿ ಹಾಡುವ ಜಾಣ್ಮೆ ಇವರದ್ದಾಗಿದೆ.

ಕಸವನ್ನು ಮಾಡುತ್ತ
ಕಣಿಯನ್ನು ತೆಗೆಯುತ್ತ
ಮೇಟಿಯಣೇಡುವನು ಕುಣಿ ಒಳಗ...

ಹಂತಿಯ ಹೊಡೆಯುತ್ತ
ಕಂಕಿಯ ಎಳೆಯುತ್ತ
ಕಾಳನ್ನು ತೂರುವನು ಕಣದೊಳಗ...

ಹೀಗೆ ಇವರ ಹಾಡನ್ನು ಕೇಳುತ್ತಿದ್ದರೆ, ಕೇಳುಗನ ಮನದಾಳದಲ್ಲಿ ಕಾಯಕವೇ ಕೈಲಾಸ ಎಂಬ ತತ್ವದಡಿ ಸಾಗುತ್ತಿರುವ ಅನ್ನದಾತನ ಶ್ರಮದ ಜೀವನದ ಚಿತ್ರಣ ಮೂಡುತ್ತದೆ. ಮದುವೆ ಸಂದರ್ಭದ ಒಳಕಲ್ಲು ಪೂಜೆಯ ಹಾಡನ್ನು ಇಲ್ಲಿ ನೋಡಬಹುದು.

ಗೋಧಿಯ ಬಿಸಲಾಕ
ನಾ ಯಾರನ ಕರಿಸಲೇ
ಕಟದ ಕಲ್ಲಿನ ಮನಿಯಾಳ...
ಮನಿಯ ಮಗಳನ ಕರಸಲೇ
ಹತ್ತಮಾನದ ಕಲ್ಲ
ಎತ್ತಿ ತಂದಾನ ಭೀಮಾ
ಮದುವೆ ಗೋಧಿ ಬೀಸುದುಕ[೧೧]...

ಹೀಗೆ ಇವರು ಹಾಡುಗಳನ್ನು ಹಾಡುತ್ತಿದ್ದರೆ, ಕೇಳುಗರಲ್ಲಿ ಒಂದು ಗೀತೆಗಳ ಬಗ್ಗೆ ಹೊಸ ಆಯಾಮಗಳ ಸೃಷ್ಟಿಯಾಗುತ್ತದೆ. ಇವರು ಚಿಕ್ಕವರಿದ್ದಾಗ ಮನೆಯಲ್ಲಿ ಅಜ್ಜಿ, ತಾಯಿ, ಅಕ್ಕಪಕ್ಕದ ಹಿರಿಯರು ಹಾಡುತ್ತಿದ್ದ ಪದಗಳನ್ನು ಗಮನಿಸಿ, ಅವುಗಳನ್ನು ತಪ್ಪಿಲ್ಲದೆ ನಿರರ್ಗಳವಾಗಿ ಹಾಡುವುದನ್ನು ಕಲಿತು ಮುಂದೆ ಹಾಡುಗಳಲ್ಲೇ ತಮ್ಮ ಆಸಕ್ತಿ ಬೆಳೆಸಿಕೊಂಡು ಮುಂದೆ ಜನಪದ ಧಾಟಿಯಲ್ಲೇ ತಾವೇ ಹಲವು ಪದಗಳನ್ನು ರಚಿಸಿದರು. ಹೀಗೆ ಅವರ ಜನಪದ ಸಾಹಿತ್ಯದ ಸೊಗಡು ಆಳವಾಗಿ ಬೇರು ಬಿಟ್ಟು ಇಂದು ಹೆಮ್ಮರವಾಗಿ ಬೆಳೆದಿದೆ.

ಕರಿಯತ್ತ ಕಾಳಿಂಗ
ಬಿಳಿಯತ್ತ ಮಾನಿಂಗ
ಸರ್ಕಾರನೆತ್ತ ಸಾರಂಗ
ಬರುವಾಗ ನನ್ನೂರದ
ಭೂಮಿ ಅದರ್ಯಾದ...

ಇಂಥ ನೂರಾರು ಬಗೆಯ ಜನಪದ ಗೀತೆಗಳು ಅವರ ನೆನಪಿನ ಶಕ್ತಿಯಲ್ಲಿ ಅಚ್ಚಳಿಯದೇ ಉಳಿದಿದೆ. ಈ ಹಾಡುಗಳು ಮುಂದಿನ ತಲೆಮಾರಿನವರಿಗೆ ಉಡುಗೊರೆಯಾಗಿ ಕೊಡುವ ಮಹದಾಸೆ ಇವರದು. ಈ ಕಾರಣದಿಂದಲೇ ಇವರ ಹತ್ತಿರ ಯಾರೇ ಹಾಡುಗಳನ್ನು ಕಲಿಯಲು ಹೋದರೆ ಅವರಿಗೆ ತಮ್ಮಲ್ಲಿರುವ ಜ್ಞಾನವನ್ನು ಧಾರೆ ಎರೆಯುತ್ತಿದ್ದಾರೆ.

ರುಕ್ಮಿಣಿ ಹರಿನಾಳ ಅವರು ಆಕಾಶವಾಣಿಯಲ್ಲಿ 'ಬಿ' ಗ್ರೇಡ್ ಕಲಾವಿದೆಯಾಗಿ ತಮ್ಮ ಹಾಡುಗಳ ಮೂಲಕ ಎಲ್ಲರ ಮನೆಮನಗಳನ್ನು ತಲುಪಿದ್ದಾರೆ. ಜೊತೆಗೆ ಕೃಷಿಯಲ್ಲೂ ಇವರ ಆಸಕ್ತಿಯನ್ನು ನೋಡುವುದಾದರೆ ಬೆಂಗಳೂರಿನ ಮಗನ ಮನೆಯಲ್ಲಿದ್ದು, ಕೈಕಟ್ಟಿದ ಹಾಗಾಗಿದ್ದರಿಂದ ಮನೆಯ ಮಹಡಿಯಲ್ಲಿ ಕೈತೋಟ ನಿರ್ಮಿಸಿ ಬದನೆ, ಗಜ್ಜರಿ, ಅವರೆ ಸೇರಿದಂತೆ ವಿವಿಧ ತರಕಾರಿಗಳನ್ನು ಬೆಳೆದು ಸೈ ಎನಿಸಿಕೊಂಡಿದ್ದಾರೆ. ಇವರ ಕೆಲಸ ಗಮನಿಸಿದ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯ ಇವರಿಗೆ ೨೦೧೫ರ 'ಪ್ರವಾಸಿ ಜಾನಪದ ಲೋಕೋತ್ಸವ' ಪ್ರಶಸ್ತಿ ನೀಡಿ ಗೌರವಿಸಿದೆ.

ಜನಪದ ಸಾಹಿತ್ಯದ ಬಗ್ಗೆ ಅವರು ಹೇಳಿರುವುದನ್ನು ಅವರ ಮಾತುಗಳಲ್ಲಿ ಕೇಳುವುದಾದರೆ, "ಜನಪದ ಗೀತೆ ಬಲ್ಲ ನನ್ನಂತವರು ಹಲವಾರು ಜನ ರಾಜ್ಯದಲ್ಲಿದ್ದಾರೆ, ಅಂಥವರನ್ನು ಸರ್ಕಾರ ಗುರುತಿಸುವ ಕೆಲಸ ಮಾಡಬೇಕಿದೆ. ನನಗೆ ಗೊತ್ತಿರುವ ಜನಪದ ಸಾಹಿತ್ಯ ಕಲಿಸಲು ನಾನು ಸಿದ್ಧಳಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳು ಎಲ್ಲೇ ಆಯೋಜನೆ ಮಾಡಿದರೂ ಸಹ ಅಲ್ಲಿಗೆ ತೆರಳಿ ಹಾಡು ಕಲಿಸುತ್ತೇನೆ. ಗ್ರಾಮೀಣ ಸೊಗಡಿನ ಜಾನಪದ ಕಲೆ ಉಳಿಸಲು ಕೊನೆಯುಸಿರು ಇರುವವರೆಗೂ ಪ್ರಯತ್ನಿಸುತ್ತೇನೆ"[೧೨] ಎಂದು ಹೇಳುವ ಮೂಲಕ ಜನಪದ ಸಾಹಿತ್ಯದಲ್ಲಿ ತಮ್ಮ ಆಸಕ್ತಿ ಎಷ್ಟಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

**ಸಿದ್ದಪ್ಪ ಬಿದರಿ**

'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂದು ಶ್ರೀವಿಜಯ ತನ್ನ ಕವಿರಾಜಮಾರ್ಗದಲ್ಲಿ ಅಪಾರ ಅಭಿಮಾನದಿಂದ ಕರುನಾಡಿನ ಕವಿಗಳ ಬಗ್ಗೆ ಜನತೆಯ ಬಗ್ಗೆ ಶ್ಲಾಘಿಸಿದ್ದಾನೆ. ಸಿದ್ದಪ್ಪ ಬಿದರಿಯಂತ ಹಳ್ಳಿಯ ಮುಗ್ಧ ಮನುಷ್ಯನನ್ನು ನೋಡಿದಾಗ ಇದು ಅಕ್ಷರಶಃ ಸತ್ಯವೆನಿಸುತ್ತದೆ. ಸಿದ್ದಪ್ಪ ಬಿದರಿಯವರು ಓದಲು ಬರೆಯಲು ಬಾರದ ಹಳ್ಳಿಯ ಮುಗ್ಧ ಮನುಷ್ಯ. ಹುಟ್ಟಿದ್ದು ಬಾಗಲಕೋಟ ಜಿಲ್ಲೆ ಬೀಳಗಿಯಲ್ಲಿ. ಹೊಲಮನೆ ಕೆಲಸಗಳನ್ನು ಮಾಡುತ್ತಾ ಕಾವ್ಯ ಕಟ್ಟುತ್ತಾರೆ. ನಿರಕ್ಷರ ಕುಕ್ಷಿಯಾದ ಸಿದ್ದಪ್ಪರ ನಾಲಿಗೆಯ ಮೇಲೆ ಲೀಲಾಜಾಲವಾಗಿ ಶಬ್ದಗಳು ಬರುವುದನ್ನು ನೋಡಿದ ಎಲ್ಲರಿಗೂ ಆಶ್ಚರ್ಯವೇ ಕಾದಿರುತ್ತದೆ. ಇವರು ಅನಕ್ಷರಸ್ಥರಾಗಿರಬಹುದು, ಆದರೆ ಸರಿ-ತಪ್ಪು, ನ್ಯಾಯ-ಅನ್ಯಾಯ ಮುಂತಾದ ವಿಷಯಗಳ ಬಗ್ಗೆ ಆಳವಾದ ಜ್ಞಾನವನ್ನು ಹೊಂದಿದವರು. ಸಮಾಜದ ಅಂಕುಡೊಂಕುಗಳನ್ನು ತಮ್ಮ ಕಾವ್ಯದ ಮೂಲಕ ವಿಡಂಬನೆ ಮಾಡಲು ಇವರು ಹಿಂಜರಿಯುವವರಲ್ಲ. ಸಿದ್ದಪ್ಪರಿಂದ ಸ್ವರಚಿತ ಕವನಗಳು ಬೇರೆ ಬೇರೆಯವರ ಮೂಲಕ ಬೇರೆಬೇರೆ ಸಂದರ್ಭಗಳಲ್ಲಿ ಬಳಕೆಯಾಗುತ್ತಿವೆ. ಆಧುನಿಕ ಸ್ಪರ್ಶವನ್ನು ಪಡೆದುಕೊಂಡು ನವಮೌಖಿಕ ಸಾಹಿತ್ಯಕ್ಕೆ ಇವರ ಹಾಡುಗಳು ಸೇರಿಕೊಂಡಿವೆ.

ಸಿದ್ದಪ್ಪ ಸಾಬಣ್ಣ ಬಿದರಿಯವರು ಎಂದೂ ಪೆನ್ನು ಹಿಡಿದಿಲ್ಲ, ಹಲಗೆ, ಬಳಪ ಸಹ ಹಿಡಿದಿಲ್ಲ. ಇವರು ಕಾವ್ಯ ಕೇವಲ ಕಲಿತವರ ಸೊತ್ತಲ್ಲ ಎಂಬುದನ್ನು ಸಿದ್ಧಗೊಳಿಸಿದ್ದಾರೆ.

ತಕ್ಷಣ ಕಂಡದ್ದನ್ನು ಕವನವಾಗಿಸುವ ಆಶುಕವಿತ್ವ ಇವರದ್ದಾಗಿದೆ. ಇವರು ಎಂದು ಬರೆದವರಲ್ಲ ಆದರೂ ಸಹ ಇವರ ಕವನ ಸಂಕಲನಗಳು ಹೊರಬಂದಿವೆ. ಕಿರಿಯ ಹಿರಿಯ ಕವಿಗಳೆಲ್ಲ ಇವರ ಕವನ ಸಂಕಲನಗಳಿಗೆ ಮುನ್ನುಡಿ ಬರೆದಿದ್ದಾರೆ. ಇವರು ಮೊದಮೊದಲು ಸಿನಿಮಾ, ನಾಟಕ ಹಾಡುಗಳ ಹುಚ್ಚು ಹಚ್ಚಿಕೊಂಡಿದ್ದರು. ಮುಂದೆ ಕಂಟಿ ಹಾಗೂ ಇಟ್ಟಣ್ಣವರ ಸಾಹಿತಿಗಳ ಸಂಪರ್ಕ, ಪ್ರೋತ್ಸಾಹ ಮತ್ತು ಮಾರ್ಗದರ್ಶನದಿಂದ ಕವನ ರಚಿಸಿದರು. ಇವರ ಸೀದಾ ಸಾದಾ ಸರಳ, ಸುಂದರ ಸ್ವಾನುಭವದ ಕವನದ ತುಣುಕುಗಳಿಗೆ ಇಡೀ ಕರ್ನಾಟಕದ ಜನತೆಯೇ ಮನಸೋತಿದೆ. ಒಂದು ಟಿ.ವಿ. ಸಂದರ್ಶನದಲ್ಲಿ ವೀಣಾ ಎಂಬುವರು ನಿಮಗೆ ಈ ರೀತಿ ಪದಗಳು ಹೇಗೆ ಸಿಗುತ್ತವೆ ಎಂದು ಕೇಳಿದರು. ಅದಕ್ಕೆ ಇವರು "ಸರಾ ಹರದರ ಸರದಾಗಿನ ಮುತ್ತ ಹೆಂಗ ಉದರಿ ಬೀಳತಾವ ಹಂಗ ನನಗ ಮಾತು ಬರತಾವ" ಎಂದು ಉತ್ತರಿಸಿದ್ದರು.

ಒಳ್ಳೊಳ್ಳೇರು ಹ್ವಾದರಪ್ಪ
ಇಲ್ಲಿ ಉಳ್ಸಾಡಿ
ಕಳ್ಳಾನ ದೇವರಂಗ ಕಾಯಬೇಡಿ
ರಾಜರಾಜರು ಬಡಿದಾಡಿ ಸತ್ತರು
ಕತ್ತಿ ಹಿಡಕೊಂಡ
ತುಡಗರು ತುಡಗರು ಕೂಡಿ ತಿಂದ್ರು
ಹಾದಿ ಬಡಕೊಂಡ
ಗಡ್ಡಬಿಟ್ಟ ಕುಡದ ಕುಂತ
ಮಾಡ್ಯಾರ ಜಪತಪ
ಹಂತಿಂತವರು ಕಾಣದಂಗ
ಹೋಗ್ಯಾರ ಗಪಚುಪ್ಪ
ಮಸೀದಿ ಮಂದಿರ ಗುಡಿಗಳ ಕಟ್ಯಾರ
ಮನಸಿಗೆ ದ್ಯಾಸಿಲ್ಲ
ಪುರಾನ ಕುರಾನ ಬೈಬಲ್ ಬರದಾರ
ಕಣ್ಣಿಗೆ ನಿದ್ದಿಲ್ಲ
ನಮಜ್ಯಾತಿ ಹೆಚ್ಚೊ ನಿಮಜ್ಯಾತಿ ಹೆಚ್ಚೊ[೧೩]...

ಈ ರೀತಿಯಾಗಿ ದೇಸಿ ಸೊಬಗಿನಲ್ಲಿ ಸಿದ್ದಪ್ಪ ಅವರು ಕವನಗಳನ್ನು ಬರೆದಿದ್ದಾರೆ. ಇವರ ಕವನ ಸಂಕಲನಕ್ಕೆ ಚನ್ನವೀರ ಕಣವಿ, ಯು.ಆರ್.ಅನಂತಮೂರ್ತಿ, ಚಂದ್ರಶೇಖರ ಕಂಬಾರ, ಜಿ.ಎಸ್.ಶಿವರುದ್ರಪ್ಪ, ಎಂ.ಪಿ.ಪ್ರಕಾಶ, ಮಲ್ಲಿಕಾ ಘಂಟಿಯವರಂತಹ ಸಾಹಿತ್ಯ ದಿಗ್ಗಜರೂ ಮುನ್ನುಡಿ ಬರೆದಿದ್ದಾರೆ. ಇವರ ಕೆಲವು ಕವನಗಳು 'ಹೊಳಿಸಾಲ ಬಳ್ಳಿ, 'ಹತ್ತೂನ

ಬಾ', 'ಪ್ರೀತಿಗಾಗಿ', 'ಅನುಭವದ ಅಡಗೆ', 'ಮಾತು ಮಾಣಿಕ್ಯ', 'ಕೆರೆಯ ನೀರು ಕೆರೆಗೆ ಚಲ್ಲಿ' ಇತ್ಯಾದಿ.

ಬಿದರಿ ಸಿದ್ದಪ್ಪ ಹಾಡುವ ಸಿದ್ದಪ್ಪನೆಂದು ಕರ್ನಾಟಕದ ತುಂಬೆಲ್ಲ ಹೆಸರು ವಾಸಿಯಾಗಿದ್ದಾರೆ. ಇವರ ಕವನಗಳನ್ನು ಜನ ಕೇಳಿ ನಿಬ್ಬೆರಗಾಗಿ 'ಒನ್ಸ್‌ಮೋರ್' ಎಂದು ಕೇಕೆ ಹಾಕುವರು. ಇಂದು ಸಿದ್ದಪ್ಪರ ಕವನಗಳು ಧ್ವನಿಸುರುಳಿ ಮೂಲಕ ಹೊರಬಿದ್ದಿವೆ. ಯೂಟ್ಯೂಬ್‌ನಲ್ಲಂತೂ ಯಾವಾಗಲು ಹರಿದಾಡುತ್ತಲೇ ಇರುತ್ತವೆ. ಬಡವರಾದ ಸಿದ್ದಪ್ಪ ಕಾವ್ಯಗಂಗೆಯ ಕೃಪೆಯನ್ನು ಪಡೆದು ಶ್ರೇಷ್ಠ ಸಾಹಿತಿಗಳ ಸಾಲಿನಲ್ಲಿ ನಿಲ್ಲಬಲ್ಲವರಾದರೂ ಎಲ್ಲಾ ಅವಂದರೀ ನಂದೇನದರಿ ಎಂದು ತಮ್ಮ ಮನೆದೇವರಾದ ಕೊಣ್ಣೂರು ಕರಿಸಿದ್ದೇಶ್ವರನನ್ನು ಸ್ಮರಿಸುತ್ತಾರೆ.

**ಬಸವಲಿಂಗಯ್ಯ ಹಿರೇಮಠ (ಬೈಲೂರು ಬಸವಲಿಂಗಯ್ಯ)**

ಕನ್ನಡ ನಾಡು ಕಂಡ ಅಪರೂಪದ ಕಲಾರತ್ನಗಳಲ್ಲಿ, ಜನಪದ ದಿಗ್ಗಜರಲ್ಲಿ, ಮೇರು ವ್ಯಕ್ತಿತ್ವಗಳಲ್ಲಿ, ದೇಶಿಯ ದೈತ್ಯ ಪ್ರತಿಭೆಗಳಲ್ಲಿ, ಕನ್ನಡದ ಖ್ಯಾತ ಗಾಯಕರಲ್ಲಿ, ಜೇನ ಧ್ವನಿಯ ಜನಪದರಲ್ಲಿ, ಹಾಲು ಮನದ ಹತ್ತಾರು ಹಾಡುಗಾರರಲ್ಲಿ, ದಣಿವರಿಯದ ದೇಶಿ ಕಲೆಗಳ ಕಲಾ ಸೇವಕರಲ್ಲಿ, ಹಾಡುತ್ತ ಜನರ ಮನಕ್ಕೆ ಲಗ್ಗೆ ಹಾಕುವ ಅಗ್ರಜರಲ್ಲಿ ಬೈಲೂರು ಬಸವಲಿಂಗಯ್ಯನವರೂ ಒಬ್ಬರು. ಇವರು ಬೈಲ್ ಊರಿನವರು ಆಗಿದ್ದರಿಂದ ಇವರಿಗೆ ಬೈಲೂರು ಬಸವಲಿಂಗಯ್ಯ ಎಂದು ಕರೆಯುತ್ತಾರೆ. ಇವರ ಕಲಾಸೇವೆ, ನಿಸ್ವಾರ್ಥ ಸೇವೆಗೆ ಮೆಚ್ಚಿ ಅಭಿನವ ಶರೀಫ್ ಎಂಬ ಬಿರುದು ಇವರಿಗೆ ಸಂದಿದೆ. ಬಸವಲಿಂಗಯ್ಯನವರ ಎಲ್ಲಾ ಸಾಧನೆಗಳು ಮತ್ತು ಸಾಂಸ್ಕೃತಿಕ ಲೋಕದ ಸಂತಸ ಸಡಗರಗಳನ್ನು ಹೆಚ್ಚಿಸುವುದಕ್ಕಾಗಿ ಡಾ.ಬಾಳಣ್ಣ ಸೀಗೀಹಳ್ಳಿ ಎಂಬುವರು **ಹಾಡ ತೂರ್‍ಯಾಡ್ಯಾವ** ಎನ್ನುವ ಅಭಿನಂದನಾ ಗ್ರಂಥವನ್ನು ಸಮರ್ಪಿಸಿದ್ದಾರೆ. ಅವರ ಎಲ್ಲ ಅಭಿಮಾನಿ ಬಳಗದಿಂದ ಸನ್ಮಾನಿಸಲ್ಪಟ್ಟಿದ್ದಾರೆ. ಇದು ಬಸವಲಿಂಗಯ್ಯನವರ ಸಾಧನೆಗೆ, ವ್ಯಕ್ತಿತ್ವಕ್ಕೆ ಸಂದ ಶ್ರೇಷ್ಠ ಗೌರವವಾಗಿದೆ.

ಇವರು ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಚನ್ನಮ್ಮನ ಕಿತ್ತೂರ ಸಮೀಪದ ಬೈಲೂರಿನಲ್ಲಿ ಸೆಪ್ಟೆಂಬರ್ ೯, ೧೯೫೫ ರಂದು ಸಂಗಯ್ಯ ಮತ್ತು ಈರಮ್ಮ ದಂಪತಿಗಳ ಕಿರಿಯ ಮಗನಾಗಿ ಜನಿಸಿದರು. ಇವರದು ಮಧ್ಯಮ ವರ್ಗದ ಕೃಷಿ ಪ್ರಧಾನ ಕುಟುಂಬ. ಊರಿನಲ್ಲಿ ಇವರದು ಜಂಗಮ ಮನೆತನವಾದ್ದರಿಂದ ಎಲ್ಲಾ ಕಾರ್ಯಗಳಲ್ಲೂ ಬಸವಲಿಂಗಯ್ಯನವರ ತಂದೆಯವರು ಇವರನ್ನು ಕರೆದುಕೊಂಡು ಹೋಗುತ್ತಿದ್ದರು. ಬೈಲೂರಿನ ಸಾಂಸ್ಕೃತಿಕ ಪರಿಸರ ಬಸವಲಿಂಗಯ್ಯನವರ ಮೇಲೆ ಅಪಾರವಾಗಿ ಪ್ರಭಾವ ಬೀರಿತು. ಏಕೆಂದರೆ ಬೈಲೂರು ಇದು ಒಂದು ಶರಣರ ಬೀಡು. ಸಾಂಸ್ಕೃತಿಕ ಚಟುವಟಿಕೆಗಳ ಕಣಜ. ಇದಕ್ಕೆ ಸಂಗೀತಗಾರರ ತವರು ಎಂದು ಕರೆಯುತ್ತಾರೆ. ಏಕೆಂದರೆ ಇಲ್ಲಿ ನೂರಕ್ಕೂ ಅಧಿಕ ಹಾರ್ಮೋನಿಯಂ ಬಾರಿಸುವವರ ಮತ್ತು ಹಾಡುವವರ ತಂಡಗಳಿದ್ದವು.

ಹಿಂದಿನಿಂದಲೂ ಹಿರಿಯರು ಸಂಗೀತ, ಕುಣಿತಗಳನ್ನು ಕಿರಿಯರಿಗೆ ಕಲಿಸುತ್ತಿದ್ದರು. ಹತ್ತಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಹಬ್ಬ-ಹರಿದಿನಗಳು ಉತ್ಸವಗಳು ಗ್ರಾಮೀಣ ಹಿನ್ನೆಲೆಯಲ್ಲಿ ನಡೆಯುತ್ತಿದ್ದವು. ಇದರ ಪ್ರಭಾವ ಬಸವಲಿಂಗಯ್ಯನವರ ಮೇಲಾಯಿತು.

ಇವರ ಊರಿಗೆ ಬೈಲೂರು ಎಂಬ ಹೆಸರು ಬರಲು ಕಾರಣ ಏನೆಂದರೆ "ಶರಣರು ತಮ್ಮ ವಚನ ಭಂಡಾರದ ಕಟ್ಟುಗಳನ್ನು ಬಸವಣ್ಣ ಅಕ್ಕನಾಗಮ್ಮ ಮೊದಲಾದವರೊಂದಿಗೆ ಅವರ ಊರಿನ ಮೂಲಕ ತೆಗೆದುಕೊಂಡು ಹೋಗುವಾಗ ಬೈಲೂರಿನಲ್ಲಿ ಬಯಲಾದರು ಎನ್ನುವ ಸಂಕೇತವಾಗಿ ಅವರ ಊರಿಗೆ ಬೈಲೂರು ಎಂಬ ಹೆಸರು ಬಂದಿತು ಎಂಬ ಪ್ರತೀತಿ ಇದೆ."[೧೪] ಎಂಬುದನ್ನು ಬಸವಲಿಂಗಯ್ಯನವರು ತಮ್ಮ ಊರಿನ ಬಗ್ಗೆ ಹೇಳಿಕೊಳ್ಳುತ್ತಾರೆ. ಒಟ್ಟಾರೆಯಾಗಿ ಇದು ಒಂದು ಸಾಂಸ್ಕೃತಿಕ ಕೇಂದ್ರವೇ ಸರಿ ಮತ್ತು ಶರಣರ ಕೃಪಾಭೂಮಿಯು ಹೌದು. ಬಸವಲಿಂಗಯ್ಯನವರಿಗೆ ಬಾಲ್ಯದಿಂದಲೇ ಸಂಗೀತದ ಮೇಲೆ ಮತ್ತು ಜನಪದ ಕಲೆಗಳ ಮೇಲೆ ಅದಮ್ಯವಾದ ಪ್ರೀತಿ, ಸೆಳೆತ. ಅದರ ಫಲವಾಗಿ ಇಂದಿನ ದಿನಮಾನಗಳಲ್ಲಿ ಅವರೊಬ್ಬ ಅತಿಶ್ರೇಷ್ಠ ಜಾನಪದ ದಿಗ್ಗಜನಾಗಿ ನಮ್ಮ ಎದುರಿಗೆ ನಿಂತಿದ್ದಾರೆ.

ಬಸವಲಿಂಗಯ್ಯನವರು ಹುಟ್ಟಿದ್ದು ಸಂಗೀತದ ಕುಟುಂಬದಲ್ಲಿ ಅಂದರೆ ಅವರ ತಂದೆ ಬೈಲಾಟದ ದೊಡ್ಡ ಕಲಾವಿದರಾಗಿದ್ದರು. ತಾಯಿಯು ಸಹ ಹಾಡುಗಾರ್ತಿ ಆಗಿದ್ದರು, ತಾಯಿಯ ಅಣ್ಣನ ಹೆಂಡತಿ ಜಯದೇವಿತಾಯಿ ಹಿರೇಮಠ ಕೂಡ ಸಂಗೀತಗಾರ್ತಿ ಯಾಗಿದ್ದು, ಶರಣರ ಕುರಿತು ಅದ್ಭುತವಾಗಿ ಮಾತನಾಡುತ್ತಿದ್ದರು. ಚಿಕ್ಕವನಿರುವಾಗ ಬಸವಲಿಂಗಯ್ಯನವರನ್ನು ಅವರ ತಂದೆ ಹೆಗಲ ಮೇಲೆ ಕುಡಿಸಿಕೊಂಡು ಪಕ್ಕದ ಗದಿಗೆಪ್ಪ ಗುಡಿಗೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ತಂದೆಯ ತೊಡೆಯ ಮೇಲೆ ಕುಳಿತು ಸಂಗೀತವನ್ನು ಭಜನೆಗಳನ್ನು ಕೇಳುತ್ತಿದ್ದರು. ಹೀಗೆ ಚಿಕ್ಕಂದಿನಲ್ಲಿಯೇ ಹಾಡಲು ಕಲಿತರು, ಹಾರ್ಮೋನಿಯಂ ಬಾರಿಸುವುದನ್ನು ಕಲಿತರು. ಇವರು ಹಾಡುವುದನ್ನು ನೋಡಿ ಜನರು ಬಹಳ ಸಂತೋಷ ಪಡುತ್ತಿದ್ದರು.

ಬಸವಲಿಂಗಯ್ಯನವರು ತಮಗೆ ಪ್ರೇರಣೆಯಾದ ಘಟನೆಯನ್ನು ಕೆಳಗಿನಂತೆ ಸ್ಮರಿಸಿಕೊಳ್ಳುತ್ತಾರೆ.

ಕೂಡಿದ ಜನ ಗಲ್ಲ ಗಲ್ಲ ಮಾಡಬ್ಯಾಡ್ರಿ ಗುಲ್ಲ
ನಾವು ನಾಚಿ ನಿಂತೆವರಪ್ಪ ನಿಮ್ಮ ಮುಂದೆ...

ಎಂದು ಸಂಗ್ಯಾ ಬಾಳ್ಯಾ ಮೊದಲ ಪದ್ಯ ಶುರುವಾದಾಗ ಕೆಳಗಿನಿಂದ ಇಬ್ಬರು ಬಂದು ಲೆಗ್ ಹಾರ್ಮೋನಿಯಂ ಬಾರಿಸಿ ಹಾಡುತ್ತಿದ್ದ ನನಗೆ ನೋಟಿನ ಸರ ಮಾಡಿ ಕೊರಳಿಗೆ ಹಾಕಿ ಚುರುಮುರಿ(ಚುನುಮುರಿ) ಸುರುವಿ ಸೀಟಿ ಹೊಡೆದು ಸಂಭ್ರಮಿಸುತ್ತಿದ್ದರು. ಆ ಕ್ಷಣಗಳು ನನ್ನ ಜೀವನದ ಅವಿಸ್ಮರಣೀಯ ಘಟನೆಗಳು. ನೀವೇನೆ ಹೇಳಿ ಹಳ್ಳಿ ಜನರ ಬದುಕು ಅಂದ್ರೆ ತವರಮನಿ ಇದ್ದಂಗ. ಏನು ಬೇಕಾದ್ದು ಬೇಡಿದ್ರು, ಏನ್ ಮಾಡಿದ್ರು, ಏನು

ತಿಂದ್ರು, ಬೇಸರ ಇಲ್ಲದ ಪ್ರೀತಿಸಿ ಬೆಳೆಸುವ ಜನ ಅವರು. ಹಿಂಗ ನನ್ನ ಸಂಗೀತದ ಬದುಕು ಬಯಲಾಟಗಳಿಂದ ಭಜನೆಗಳಿಂದ ಆರಂಭ ಆಯ್ತು ಎಂದು ಬಸವಲಿಂಗಯ್ಯನವರು 'ಹಾಡು ತೂರ್‍ಯಾಡ್ಯಾವ' ಎಂಬ ಅವರ ಅಭಿನಂದನಾ ಗ್ರಂಥದಲ್ಲಿ ನನ್ನ ಬದುಕಿನ ಹಾಡುಗಳ ಭಾಗದಲ್ಲಿ ಈ ವಿಷಯ ಹಂಚಿಕೊಂಡಿದ್ದಾರೆ.

ಬಸವಲಿಂಗಯ್ಯನವರ ದನಿಯ ಕಂಠ ಸಿರಿಯೂ ಅತ್ಯಂತ ಮೃದುವಾಗಿದ್ದು, ಕಿವಿಗೆ ತಂಪಾಗಿ ಇಂಪಾಗಿ ಕೇಳಿಸುತ್ತದೆ. ಕೇಳುಗರನ್ನು ಗಾಳಿಯಲ್ಲಿ ತೇಲಿಸಿಕೊಂಡು ಉತ್ತುಂಗಕ್ಕೆ ಒಯ್ಯುತ್ತದೆ. ಇವರ ಕಲಾ ಪ್ರಪಂಚವು ಅತ್ಯಂತ ವಿಸ್ತಾರವಾದದ್ದು. ಜನಪದ ಗೀತೆ, ಲಾವಣಿ ಪದ, ಕೋಲಾಟ ಪದ, ದೊಡ್ಡಾಟ ಪದಗಳು, ಹಂತಿ ಪದಗಳು, ಜನಜಾಗೃತಿ ಪದಗಳು, ಪಾರಿಜಾತ ಗೀತೆಗಳು, ರಂಗ ಗೀತೆಗಳು ಹೀಗೆ ಎಲ್ಲಾ ವಿಧವಾದ ಜನಪದ ಗೀತೆಗಳಲ್ಲಿ ಪ್ರತಿಭೆಯನ್ನು ತೋರಿದ ಬಸವಲಿಂಗಯ್ಯನವರು ಹಾಡುವುದಕ್ಕೆ ಸದಾ ಸಿದ್ಧಹಸ್ತರು. ಇವರಿಗೆ ಸಿದ್ಧತೆ ಬೇಕಿಲ್ಲ ಏಕೆಂದರೆ ಇವರು ಮಾನಸಿಕವಾಗಿ ಸದಾ ಸಿದ್ಧರು ತಲೆಗೆ ಪೇಟ ಸುತ್ತಿಕೊಂಡು ಗರಿಗರಿಯಾದ ಬಟ್ಟೆ ತೊಟ್ಟು ಡಪ್ಪನ್ನು ಹಿಡಿದು ವೇದಿಕೆಯ ಮೇಲೆ ನಿಂತರೆ ಅವರೊಳಗಿದ್ದ ಹಾಡುಗಳು ತಾಮುಂದು ನಾಮುಂದು ಎಂದು ಬರುತ್ತವೆ. ಇವರು ಹಾಡುಗಳ ಮುಖಾಂತರ ನಮ್ಮ ದೇಶೀಯ ಸಂಸ್ಕೃತಿಯ ಸೊಗಡು ಮುಂತಾದ ವಿಚಾರಗಳನ್ನು ನಾಡಿನ ಜನರಿಗೆ ಪರಿಚಯಿಸುತ್ತಿದ್ದಾರೆ. ಅಲ್ಲದೇ ಜನರಲ್ಲಿ ಮನೆ ಮಾಡಿರುವ ಅಜ್ಞಾನ, ಮೂಢನಂಬಿಕೆ, ದುಷ್ಟ ಚಟಗಳು ಮುಂತಾದ ಸಮಾಜ ಘಾತುಕ ಕಾರ್ಯಗಳ ವಿರುದ್ಧ ಹಾಡುಗಳನ್ನು ಕಟ್ಟಿ ಹಾಡುತ್ತಾರೆ. ಇವರ ಮತ್ತೊಂದು ಸೌಭಾಗ್ಯ ಎಂದರೆ ಇವರ ಶ್ರೀಮತಿ ವಿಶ್ವೇಶ್ವರಿ ಅವರು ಬಾಳ ಸಂಗಾತಿಯಾಗುವುದರ ಜೊತೆಗೆ ಇವರ ಕಲೆಯ ಸಂಗಾತಿಯಾಗಿಯೂ ಸಹ ಇವರೊಂದಿಗೆ ಹೆಜ್ಜೆ ಹಾಕಿದ್ದಾರೆ. ಧಾರವಾಡದಲ್ಲಿ ಯಾವುದೇ ಸಭೆ ಸಮಾರಂಭಗಳಾಗಲಿ, ಜಾನಪದ ಉತ್ಸವಗಳಾಗಲಿ, ಸಾಹಿತ್ಯ ಸಂಭ್ರಮವಾಗಲಿ ಬಸವಲಿಂಗಯ್ಯನವರ ಹಾಡುಗಾರಿಕೆ ಇದ್ದೇ ಇರುತ್ತದೆ. ಹಾಡಿನೊಂದಿಗೆ ಹಾಸ್ಯ ಬೆರೆಸಿ ಹಾಡುವ ಇವರು ಜನರಿಗೆ ಸಂದೇಶವನ್ನು ಕೊಡುವುದನ್ನು ಎಂದೂ ಮರೆಯುವುದಿಲ್ಲ. ಇವರು ಧಾರವಾಡದಲ್ಲಷ್ಟೇ ಅಲ್ಲ ನಾಡಿನ ಪ್ರತಿ ಜಿಲ್ಲೆಯಲ್ಲಿಯೂ ನಾಡಿನ ಶ್ರೇಷ್ಠ ಉತ್ಸವಗಳಲ್ಲಿ ಭಾಗವಹಿಸಿ ಜನರಿಗೆ ರಸದೌತಣ ಉಣಬಡಿಸಿದ್ದಾರೆ. ಇವರ ಹಾಡುಗಳನ್ನು ಕೇಳಿ ಪ್ರೇಕ್ಷಕರಿಗೆ ಮತ್ತೊಮ್ಮೆ ಹಾಡಿಸಿ ಕೇಳಬೇಕು ಎಂಬ ಅಭಿಲಾಷೆ ಉಕ್ಕುತ್ತದೆ. ಕೆಲವೊಮ್ಮೆ ಸಂತಸಗೊಂಡ ಪ್ರೇಕ್ಷಕರು 'ಒನ್ಸ್ ಮೋರ್, ಒನ್ಸ್ ಮೋರ್...' ಎಂದು ಹಲವಾರು ಕಾರ್ಯಕ್ರಮಗಳಲ್ಲಿ ಹೇಳಿರುವುದು ಉಂಟು.

ತಾರ ಸ್ವರದ ಕಂಚಿನ ಕಂಠದ ಗಾಯಕರಾದ ಇವರನ್ನು ಜನ ಪಾರಿಜಾತದ ಬಸವಲಿಂಗಯ್ಯ ಎಂದೂ ಕರೆಯುತ್ತಾರೆ. ಇವರಿಗೆ ಧ್ವನಿವರ್ಧಕದ ಅವಶ್ಯಕತೆ ಇಲ್ಲ. ಹಾಡಲಾರಂಭಿಸಿದರೆ ಸಾಕು, ಹಾಡುಗಾರಿಕೆಯು ಕಳೆ ಗಟ್ಟಿ ಹಾಡುಗರನ್ನು, ಪ್ರೇಕ್ಷಕರನ್ನು ಸೆಳೆಯುತ್ತದೆ. ಇವರಿಗೆ ಐವತ್ತು ದಾಟಿದರೂ ಸಹ ಇವತ್ತಿಗೂ ಇವರಲ್ಲಿ ಯುವಕರ ಉತ್ಸಾಹ

ಬತ್ತಿಲ್ಲ. ಕನ್ನಡ ನಾಡಿನ ಗಾಯಕ ಪರಂಪರೆಯಲ್ಲಿ ಹಿರಿಯರಾದ ಬಾಳಪ್ಪ ಹುಕ್ಕೇರಿ, ಕರೀಂಖಾನ್, ಫಕೀರವ್ವ ಗುಡಿಸಾಗರ, ಬಾನಂದೂರು ಕೆಂಪಯ್ಯ ಮುಂತಾದವರು ಪ್ರಮುಖರಾಗಿದ್ದರು. ಅವರ ಸಾಲಿನಲ್ಲಿ ಬಸವಲಿಂಗಯ್ಯ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಇವರು ರಾಜ್ಯದಲ್ಲಿ ಅಷ್ಟೇ ಅಲ್ಲ, ಹೊರ ರಾಜ್ಯದಲ್ಲಿ ಅಷ್ಟೇ ಅಲ್ಲ, ಹೊರದೇಶಗಳಲ್ಲಿಯೂ ಹಾಡಿದ್ದಾರೆ. ವಿಶೇಷವಾಗಿ ಇಂಗ್ಲೆಂಡಿನ ಕನ್ನಡಿಗರಿಗೆ ಇವರು ಅಚ್ಚುಮೆಚ್ಚು. ಇಲ್ಲಿಯವರೆಗೂ ಇವರು ಹನ್ನೆರೆಡು ಸಾವಿರಕ್ಕಿಂತಲೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. 'ಸಾವಿರ ಹಾಡುಗಳ ಸರದಾರ' ಎಂದು ಖ್ಯಾತರಾದ ಬಾಳಪ್ಪ ಹುಕ್ಕೇರಿಯವರ ಪರಂಪರೆಯನ್ನು ಬಸವಲಿಂಗಯ್ಯ ಅಕ್ಷರಶಃ ಪಾಲಿಸಿಕೊಂಡು ಬಂದಿದ್ದಾರೆ. ಹಾಡು ಕೇಳಲು ಕುಳಿತು ಕುಳಿತು ಕೇಳುಗರ ಸೊಂಟ ಬಗ್ಗುತ್ತೆ ಹೊರತು ಅವರ ಕಂಠ ಎಂದು ಕುಗ್ಗುವುದಿಲ್ಲ.

**ಬಸವಲಿಂಗಯ್ಯನವರ ಜನಪ್ರಿಯ ಹಾಡುಗಳು :**

ಒಕ್ಕಲಿಗ್ಯಾಗ ಚಕ್ಕಡಿ ಬೇಕ
ನೂಲುವವಗ ಕುಕ್ಕಡಿ ಬೇಕ
ವ್ಯಾಪಾರಸ್ಥರಿಗೆ ತಕ್ಕಡಿ ಬೇಕ
ವ್ಯಾಪಾರ ಮಾಡುವುದಕ್ಕ
ಗೀಯ ಗಾ ಗೀ ಗೀ ಯ ಗಾ
ಗೀಯ ಗಾ[೧೫]...

ಎಂದು ಹಾಡುವ ಇವರ ಹಾಡುಗಳು ಅತ್ಯಂತ ಪ್ರಸಿದ್ಧಿಯಾಗಿವೆ. ಇವರಿಗೆ ಯಾವುದೇ ಕಾರ್ಯಕ್ರಮದಲ್ಲಿ ಸ್ವಲ್ಪ ಸಮಯ ಸಿಕ್ಕರೆ ಈ ಹಾಡನ್ನು ಹಾಡಿ ಮುಗಿಸುತ್ತಾರೆ.

ನಾನೇನಂದಿಲ್ಲ ಬಾರೋ
ಶಿವ ಶಂಭೋ ಲಿಂಗ
ನಾನೇನಂದಿಲ್ಲ ಬಾರೋ
ನಾನೇನಂದಿಲ್ಲ ಬಾರೋ
ಇಂದು ನಿನಗ ಆಗಿಲ್ಲ ಗ್ಯೆರೋ
ತಂದೆ ನಿನ್ನ ಪಾದವ ತಾರೊ
ನಾನೇನಂದಿಲ್ಲ ಬಾರೋ[೧೬]...

ಎಂಬ ಸಂತ ಶಿಶುನಾಳ ಶರೀಫ್, ಶಿವಯೋಗಿಗಳ ತತ್ವಪದವನ್ನು ಅದ್ಭುತವಾಗಿ ಹಾಡುತ್ತಾರೆ. ನಾಡಿನ ಅಪರೂಪದ ಕಲಾವಿದರಾಗಿರುವ ಬಸವಲಿಂಗಯ್ಯ ಹಿರೇಮಠ ಅವರು ಎಸ್.ಪಿ.ಬಾಲಸುಬ್ರಮಣ್ಯಂ ಅವರ 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದಲ್ಲೂ ಸನ್ಮಾನಿತರಾಗಿದ್ದಾರೆ. ಇವರ ಹಾಡುಗಾರಿಕೆಯನ್ನು ಕಂಡು ಸ್ವತಃ ಎಸ್.ಪಿ.ಬಾಲಸುಬ್ರಮಣ್ಯಂ ಅವರೇ ಎದ್ದು ನಿಂತು ಇವರನ್ನು ಅಭಿನಂದಿಸಿದ್ದಕ್ಕೆ ಕನ್ನಡ ನಾಡಿನ ಲಕ್ಷಾಂತರ ಜನರು

ಸಾಕ್ಷಿಯಾಗಿದ್ದಾರೆ. ಇದರ ಜೊತೆಗೆ ಧಾರವಾಡದಲ್ಲಿ ಜನಪದ ಸಂಶೋಧನಾ ಸಂಸ್ಥೆ ಎಂಬ ಸಾಂಸ್ಕೃತಿಕ ಸಂಸ್ಥೆಯನ್ನು ಕಟ್ಟಿ ಕನ್ನಡದ ಸಂಸ್ಕೃತಿ ಅಮರವಾಗಲು ಪ್ರಯತ್ನಿಸಿದ್ದಾರೆ. ಕನ್ನಡ ಸಂಸ್ಕೃತಿ ರಕ್ಷಣೆಗೆ ಬಸವಲಿಂಗಯ್ಯ ಒಂದು ಚತುರಂಗ ಬಲ ಎಂದು ಕನ್ನಡ ನಾಡಿನ ಹಿರಿಯ ಕವಿ ನಾಡೋಜ ಚನ್ನವೀರ ಕಣವಿಯವರು ಹೇಳಿದ್ದಾರೆ. ಇವರು ಚೆನ್ನಮ್ಮನ ಕಿತ್ತೂರಿನಲ್ಲಿ ಪ್ರಥಮ ಬಾರಿಗೆ ಶ್ರೀ ಕೃಷ್ಣ ಪಾರಿಜಾತ ಉತ್ಸವವನ್ನು ಮಾಡಿದ್ದರು. ಇದಾದ ನಂತರ ದೊಡ್ಡಾಟ ಉತ್ಸವ, ಲಾವಣಿ, ಗೀಗೀ ಉತ್ಸವ ಹೀಗೆ ಹಲವಾರು ಉತ್ಸವಗಳು ಇವರಿಂದಾಗಿವೆ. ಇವರ ಈ ಸಾಧನೆಗೆ ಗೌರವ ಪೂರ್ವಕವಾಗಿ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ. ಜನಪದ ಗೀತೆಗಳೊಂದಿಗೆ ಪ್ರಸಿದ್ಧ ಕವಿಗಳಾದಂತಹ ಬೇಂದ್ರೆ, ಕುವೆಂಪು ಮುಂತಾದವರ ಭಾವಗೀತೆಗಳನ್ನು ಭಾವಪೂರ್ಣವಾಗಿ ಇವರು ಹಾಡುತ್ತಾರೆ. ಕನ್ನಡ ಸಂಸ್ಕೃತಿಯ ಸಾಂಪ್ರದಾಯಿಕ ಜವಾಬ್ದಾರಿಯನ್ನು ಹೊತ್ತವರು ಬಸವಲಿಂಗಯ್ಯನವರು. ಇವರೊಂದು ಜನಪದದ ಜಲಪಾತ, ಇವರು ವಿಶ್ವಾಸದ ಹಾಡುಗಾರಿಕೆಗೆ ಪರ್ಯಾಯ ಪದವಿದ್ದಂತೆ, ಇವರು ಹಾಡಲು ನಿಂತರೆ ಜಲಪಾತದ ಅಬ್ಬರದಂತೆ ಹಾಡುತ್ತಾರೆ"[೧೭] ಎಂದು ಡಾ.ಎಂ.ಎಂ.ಕಲಬುರ್ಗಿ ಅವರು ಮುಕ್ತಕಂಠದಿಂದ ಹೊಗಳಿದ್ದಾರೆ.

ಹೀಗೆ ಬಸವಲಿಂಗಯ್ಯನವರು ಜನಪದವನ್ನು ತಮ್ಮ ಉಸಿರಾಗಿಸಿಕೊಂಡು ಜನಪದದ ಏಳಿಗೆಗೆ ಹಗಲಿರುಳು ದುಡಿದ ದಣಿವರಿಯದ ಜೀವ ಬತ್ತದ ಉತ್ಸಾಹದ ಬುಗ್ಗೆ. ಇವರಿಗೆ ಅನೇಕ ಮಾನ-ಸನ್ಮಾನಗಳು, ಗೌರವಗಳು, ಬಹುಮಾನಗಳು, ಪ್ರಶಸ್ತಿಗಳು, ಫಲಕಗಳು, ಬಿರುದು-ಬಾವಲಿಗಳು ದೊರೆತಿವೆ. ಅನೇಕ ಸಭೆ ಸಮಾರಂಭಗಳಲ್ಲಿ ಇವರನ್ನು ಸನ್ಮಾನಿಸಲಾಗಿದೆ. ಅವರನ್ನು ಹಲವಾರು ಸಂಘ ಸಂಸ್ಥೆಗಳು ಸತ್ಕರಿಸಿವೆ. ಅಲ್ಲದೇ ರಾಜ್ಯೋತ್ಸವ ಪ್ರಶಸ್ತಿಯು ಇವರ ಮುಡಿಗೇರಿದೆ. ಕನ್ನಡ ಜಾನಪದ ಲೋಕಕ್ಕೆ, ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಬಸವಲಿಂಗಯ್ಯನವರು ಕೊಟ್ಟ ಕೊಡುಗೆ ಅಸಾಧಾರಣವಾದದ್ದು. ಇವರ ಈ ಜನಪದ ಸೇವಾ ಕ್ಷೇತ್ರ ಇನ್ನೂ ಉತ್ತುಂಗಕ್ಕೆ ಹೋಗುವಂತಾಗಲಿ.

**ಇಮಾಮಸಾಬ ವಲ್ಲೆಪ್ಪನವರ**

ಇಮಾಮಸಾಬ ವಲ್ಲೆಪ್ಪನವರ ಜನಪದ ಗಾಯನ ಕಲಾವಿದರಾಗಿ ಕಳೆದ ನಲವತ್ತು ವರ್ಷಗಳಿಂದ ನಾಡಿನಾದ್ಯಂತ ತಮ್ಮ ವಿಶಿಷ್ಟ ಕ್ರಿಯಾಶೀಲತೆಯ ಮೂಲಕ ಜಾನಪದ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇಂದು ಡೊಳ್ಳಿನ ಪದಗಳನ್ನು ಆಧುನಿಕ ಮಾಧ್ಯಮಗಳ ಮೂಲಕ ಪರಿಚಯಿಸುತ್ತಿರುವವರಲ್ಲಿ ಇಮಾಮಸಾಬ ವಲ್ಲೆಪ್ಪನವರ ಒಬ್ಬರು. ಇವರು ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನ ನಾಗನೂರ ಗ್ರಾಮದಲ್ಲಿ ಜುಲೈ ೨೮, ೧೯೫೭ರಂದು ಜನಿಸಿದರು. ಇವರು ಬಡತನವನ್ನು ಬೆನ್ನಿಗೆ ಕಟ್ಟಿಕೊಂಡು ಬಂದವರು. ಶಿಕ್ಷಣ ಪಡೆಯದೆ ಜೀತದಾಳಾಗಿ ಕೆಲಸ ಮಾಡಿ ಜೀವನ ಸಾಗಿಸುವ ಅನುಭವ ಉಂಡವರು. ತಮ್ಮಲ್ಲಿದ್ದ ಹಾಡುಗಾರಿಕೆಯ ಮೂಲಕ ಇಂದು ಎಲ್ಲರಿಗೂ ಚಿರಪರಿಚಿತರು. ಇವರು

ಅನಕ್ಷರಸ್ಥರಾದರೂ ಸಹ ಇಂದು ಜಾನಪದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡುವ ಮಟ್ಟಕ್ಕೆ ಬೆಳೆದಿದ್ದಾರೆ. ಅಲ್ಲದೇ ಆಕಾಶವಾಣಿಯಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಹಲವು ರೀತಿಯ ಕ್ಯಾಸೆಟ್ ಮತ್ತು ಸಿಡಿಗಳಲ್ಲಿ ತಮ್ಮ ಧ್ವನಿಗಳ ಮೂಲಕ ಜನರಿಗೆ ಪರಿಚಯವಾದ ವ್ಯಕ್ತಿತ್ವ ಇವರದು. ಇವರ ಕೆಲವು ಡೊಳ್ಳಿನ ಪದ ಧ್ವನಿಮುದ್ರಿತ ಸಿಡಿಗಳು.

೧. ಒಕ್ಕಲಗಿತ್ತಿ

೨. ಉಳುವಯೋಗಿ

೩. ಅನುಭವದ ಅಮೃತ....ಇತ್ಯಾದಿ ಸಿಡಿಗಳು ಇಂದು ಎಲ್ಲೆಡೆ ರಾರಾಜಿಸುತ್ತಿವೆ.

ಕನ್ನಡ ನಾಡಿನ ಜನಪದ ಪ್ರಕಾರಗಳಲ್ಲಿ ಡೊಳ್ಳಿನ ಪದಗಳ ಪ್ರಕಾರವು ಒಂದಾಗಿದೆ. ಡೊಳ್ಳಿನ ಪದವು ತನ್ನದೆಯಾದ ರೋಚಕವಾದ ಇತಿಹಾಸವನ್ನು ಹೊಂದಿದೆ. ಹಲವಾರು ಪ್ರಸಿದ್ಧ ಡೊಳ್ಳಿನ ಪದಕಾರರು ಕನ್ನಡ ನಾಡಿನಲ್ಲಿ ಆಗಿ ಹೋಗಿದ್ದಾರೆ. ಜನತೆಗೆ ಸಂಗೀತ ಸುಧೆಯನ್ನು ಮನತುಂಬುವಂತೆ ಉಣಬಡಿಸಿದ್ದಾರೆ. ಅಂತಹ ಅಪರೂಪದ ಅದ್ಭುತ ಅದ್ವಿತೀಯ ಡೊಳ್ಳಿನ ಪದಕಾರರಲ್ಲಿ ಇಮಾಮಸಾಬ ವಲ್ಲೆಪ್ಪನವರ ಕೂಡ ಒಬ್ಬರು. ಇವರು ತಮ್ಮ ಹಾಡಿನ ಮೂಲಕ ಸಮಾಜದ ಅಂಕುಡೊಂಕುಗಳನ್ನು, ಮೂಢನಂಬಿಕೆಗಳನ್ನು, ಮೇಲು-ಕೀಳು ಭಾವನೆಗಳನ್ನು, ಸಮಾಜದ ಡಂಬಾಚಾರಗಳನ್ನು ಖಂಡಿಸಿ ಮನ ಮುಟ್ಟುವಂತೆ, ಅರ್ಥಪೂರ್ಣವಾಗಿ ಹಾಡುಗಳನ್ನು ಹಾಡುವ ಗಾಯನ ಗಾರುಡಿಗ. ಇವರು ಹಾಡಲಾರಂಭಿಸಿದರೆ ಇದ್ದಬಿದ್ದ ಜನರೆಲ್ಲ ಎದ್ದು ಬಿದ್ದು ಎಲ್ಲವನ್ನು ಮರೆತು ಇವರ ಕಾರ್ಯಕ್ರಮದ ಕಡೆಗೆ ಓಡೋಡಿ ಹೋಗುತ್ತ ಕಾರ್ಯಕ್ರಮಕ್ಕೆ ಮುಗಿಬೀಳುತ್ತಾರೆ. ಬಿಟ್ಟಕಣ್ಣು ಬಿಟ್ಟಹಾಗೆ ಬೆರಗಾಗಿ ಗಾನ ಮಾಧುರ್ಯಕ್ಕೆ ಮೋಹಿತರಾಗಿ ಮೈಮರೆತು ನಿಂತು ಬಿಡುತ್ತಾರೆ. ಹಳ್ಳಿಯ ಹೃದಯದಲ್ಲಿ ಹುಟ್ಟಿದ ಈ ಪ್ರತಿಭಾ ಶಕ್ತಿಯೇ ಅಂತದ್ದು.

ಸಾಮಾನ್ಯವಾಗಿ ಇವರದು ನಾಲ್ಕು ಜನರ ಗುಂಪು ಇರುತ್ತದೆ, ನಿಂತುಕೊಂಡು ಕಾರ್ಯಕ್ರಮವನ್ನು ನೀಡುತ್ತಾರೆ. ಮೊದಲನೆಯವನು ಡೊಳ್ಳು ಹೊಡೆಯುತ್ತಾನೆ, ಎರಡನೆಯವನು ತಾಳ ಹಾಕುತ್ತಾನೆ, ಇವರಿಬ್ಬರ ಪಕ್ಕದಲ್ಲಿ ನಿಂತು ಹಾಡುವವರೇ ಇಮಾಮ ಸಾಬ ವಲ್ಲೆಪ್ಪನವರ ಇವರ ಪಕ್ಕದಲ್ಲಿ ಮತ್ತೊಬ್ಬ ತಾಳ ಹಾಕುತ್ತಿರುತ್ತಾನೆ. ಇವರೆಲ್ಲರೂ ಸಾಮಾನ್ಯವಾಗಿ ಬಿಳಿ ಬಟ್ಟೆಯನ್ನು ಧಾರಣ ಮಾಡಿರುತ್ತಾರೆ. ಇಮಾಮ ಸಾಹೇಬರು ಹಳದಿ ಪೇಟ ಸುತ್ತಿಕೊಂಡು ಹೆಗಲ ಮೇಲೊಂದು ಕಂಬಳಿ ಹಾಕಿಕೊಂಡು, ಬಿಳಿ ಪೈಜಾಮ ಜುಬ್ಬಾ ಧರಿಸಿ ಇವರು ಆ ಆ ಆ ಆ ಆ... ಸ್ವಾಮಿ ನಮ್ಮಯ ದೇವರಿಗೆ ಶರಣೆನ್ನರಾ, ಗುರುವಾ ರೇವಣಸಿದ್ಧಗೋ ಶರಣ ಎನ್ನಿರೋ... ಎಂದು ಆರಾಧ್ಯ ದೈವ ಗುರು ರೇವಣ ಸಿದ್ಧನನ್ನು ನೆನೆಸಿಕೊಂಡು ಹಾಡು ಆರಂಭಿಸಿಬಿಟ್ಟರೆ ಮುಗಿಯಿತು. ಇಮಾಮ ಸಾಹೇಬರು ಕೇಳುಗರ ಮನಸ್ಸನ್ನು ಹೃದಯವನ್ನು ಕಲೆಯಿಂದ ಕೊಳ್ಳೆ ಹೊಡೆಯುತ್ತಾರೆ. ಆ..ಹಾ..ಹಾ ಅದೆಂತಹ ಸೊಗಸು ಅದನ್ನು ನೋಡುವುದೇ ಒಂದು ಮೋಜು. ಡೊಳ್ಳು ಬಡಿಯುತ್ತ ಗೋಣು

ಹಾಕುವನೊಬ್ಬ, ತಾಳ ಕುಟ್ಟುವವನು ಒಬ್ಬ, ಹಾವ ಭಾವದೊಂದಿಗೆ ಹಾಡುವವನೊಬ್ಬ, ಕೊನೆಗೆ ಒಬ್ಬ ನವಿಲಿನಂತೆ ಕುಣಿಯುತ್ತ, ಕುಣಿದು ಕುಪ್ಪಳಿಸುತ್ತ ತಾಳ ತಟ್ಟುತ್ತ ಕೋಗಿಲೆಯ ಕಂಠವನ್ನು ಬೆಳೆಸುತ್ತಾರೆ. ಹೀಗೆ ತಾಳ, ಮೇಳ, ಲಯ, ರಾಗ, ಗತ್ತು-ಗಮ್ಮತ್ತುಗಳೊಂದಿಗೆ ಹಾಡುತ್ತಿದ್ದರೆ. ಗಂಧರ್ವ ಲೋಕವೇ ಧರೆಗೆ ಇಳಿದು ಬಂದಂತೆ ಭಾಸವಾಗುತ್ತದೆ ಎಂದರೆ ಅತಿಶಯೋಕ್ತಿಯೇನಲ್ಲ. ಆದರೆ ವಿಪರ್ಯಾಸದ ಸಂಗತಿಗಳು ಏನೆಂದರೆ ರತ್ನವನ್ನು ಬೀಸಿ ಒಗೆದು, ಗಾಜಿನ ಚೂರನ್ನು ಎತ್ತಿ ಕೊಂಡಂತೆ. ಪ್ರಸ್ತುತ ಸಮಾಜವು ಜನಪದ ಗಾನಗಂಧರ್ವರ ತುಣುಕುಗಳನ್ನು ತೊರೆದು ಅರ್ಥಹೀನ ಅಪರಿಪೂರ್ಣ ಆಧುನಿಕ ಹಾಡಿನ ಹಿಂದೆ ಹೋಗಿ ಹಾಳಾಗುತ್ತಿದ್ದಾರೆ.

ಬಲ್ಲವನೇ ಬಲ್ಲ ಬೆಲ್ಲದ ರುಚಿಯ ಎಂಬಂತೆ ಕೆಲವರು ಮಾತ್ರ ನಮ್ಮ ದೇಶೀಯ ಜಾನಪದದ ಹಿಂದೆ ಹೊರಟಿದ್ದಾರೆ. ಉಳಿದವರೆಲ್ಲರೂ ಕೂಡ ನಮ್ಮ ದೇಶಿಯ ಜಾನಪದದ ಜೇನು ಸವೆಯನ್ನು ಸವೆದು ನೋಡಬೇಕಾಗಿದೆ ಇಲ್ಲದಿದ್ದರೆ ನಮಗೆ ನಾವೇ ವಂಚನೆ ಮಾಡಿಕೊಂಡಂತೆ.

ಆ ಆ ಆ ಆ ಆ
ಸ್ವಾಮಿ ನಮ್ಮಯ ದೇವರಿಗೆ ಶರಣೆನ್ನಿರಾ
ಗುರುವಾ ರೇವಣಸಿದ್ಧಗೋ ಶರಣ ನೆನ್ನಿರೋ
ಕುಲ ಕುಲ ಕುಲವೆಂದು ಹೊಡೆದಾಡೊ ಜನರೆಲ್ಲ।
ಕುಲದ ನೆಲೆಯ ತಿಳಿದಿಲ್ಲ ನನಗ।
ಈ ಹೊಲಸು ಮೋಸದ ಹುತ್ತ
ಎಲುಬಿನ ಹಂದರ।
ಮಲಮೂತ್ರದೊಳಗಿದ್ದ ಶರೀರವಿದು।
ಏ ಮಲಮೂತ್ರದೊಳಗಿದ್ದ ಶರೀರವಿದು
ಕುಲವ್ಯಾತಕಬೇಕು ಎಂದ ಸರವಜ್ಞರಾ।
ಮುಟ್ಟಿನ ಹೊಲೆಯಲ್ಲಿ
ಹುಟ್ಟಿದೆ ಜಗವೆಲ್ಲ।
ಮುಟ್ಟ ಬೇಡ ಅನ್ನಾಂವ
ಎಲ್ಲಿ ಹುಟ್ಟಿದನೋ।
ಏ ಜಾತಿ ಜಾತಿ ಅಂತ ನಾವು ಜಗಳ ಮಾಡತೆವ್ರಿ
ಜಾತಿಯೊಳಗ ನೀತಿಮಾರ್ಗ ಮರತ ಬಿಟ್ಟೆವ್ರಿ
ಏ ಜಾತಿ ಒಳಗ ನೀತಿ ಮಾರ್ಗ ಮರತ ನಿಂತೆವ್ರಿ
ಸುಣಗಾರ ಮನ್ಯಾನಸುಣ್ಣ ತಂದ ಮನಿ ಸಾರಸೆವ್ರಿ[೧೮]...

ವಲ್ಲೆಪ್ಪನವರು ಸಮಾಜವನ್ನು ಕಟ್ಟುವಂತಹ ಇಂತಹ ಹಲವಾರು ಗೀತೆಗಳನ್ನು ರಚಿಸಿದ್ದಾರೆ. ಜಾತಿಯ ಜಿಡ್ಡುಗಟ್ಟಿಕೊಂಡ ಸಮಾಜಕ್ಕೆ ಇದು ವಜ್ರಾಘಾತದಂತೆ ಕೆಲಸ ಮಾಡುತ್ತದೆ. ಅಲ್ಲದೇ ಜಾತಿ ಎಂಬ ಮಲಿನ ಜಲದಲ್ಲಿ ಮುಳುಗಿದ ಮನಸ್ಸುಗಳಿಗೆ, ಮನುಷ್ಯರಿಗೆ ಇದು ಕೊಡಲಿ ಪೆಟ್ಟು ಕೊಟ್ಟು ಸತ್ಯಾಸತ್ಯತೆಯನ್ನು ತಿಳಿಯಲು ಪ್ರಯತ್ನಿಸುವಂತೆ ವಿಚಾರಕ್ಕೀಡು ಮಾಡುತ್ತದೆ. ಈ ಗೀತೆಯು ಐಕ್ಯತೆಯ ಮಂತ್ರದಂತೆ ಕೆಲಸ ಮಾಡಿದೆ ನಾಡಿನ ರಾಷ್ಟ್ರದ ಐಕ್ಯತೆಯನ್ನಷ್ಟೇ ಅಲ್ಲದೇ ವಿಶ್ವವನ್ನೇ ಮಾನವೀಯತೆಯ ಹಿನ್ನಲೆಯಲ್ಲಿ ಕಟ್ಟುವ ಕಾರ್ಯ ಮಾಡುತ್ತದೆ. 'ವಸುದೈವ ಕುಟುಂಬಕಂ' ಎಂಬ ವಿಶ್ವಕುಟುಂಬದ ಮಹಾನ ಪರಿಕಲ್ಪನೆಯ ಮಂತ್ರವೂ ಆಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಇಂತಹ ಕಲಾವಿದರು ಮನಸ್ಸುಗಳನ್ನು ಕಟ್ಟುತ್ತಾರೆ, ಮನೆಮನೆಗಳನ್ನು ಕಟ್ಟುತ್ತಾರೆ, ರಾಷ್ಟ್ರಗಳನ್ನು ಕಟ್ಟುತ್ತಾರೆ, ಕೊನೆಗೆ ವಿಶ್ವಶಾಂತಿಯ ವಿಶ್ವಬಂಧುತ್ವದ ವಿಚಾರಧಾರೆಯ ಕಡೆಗೆ ಒಯ್ಯುತ್ತಾರೆ.

ಇಂತಹ ಹಾಡುಗಳ ಮುಖಾಂತರ ಈ ಕಲಾವಿದರು ಸದ್ದಿಲ್ಲದೆ ಸಮಾಜವನ್ನು ತಿದ್ದುವ ಮೂಲಕ ಸಮಾಜವನ್ನು ಶುದ್ಧಗೊಳಿಸುವ ಸತ್ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಇವರು ಸರಳ ಸಜ್ಜನಿಕೆಯ ವ್ಯಕ್ತಿತ್ವವನ್ನು ಹೊಂದಿದವರು. ಇಂದು ಹಲವಾರು ಹಾಡುಗಳನ್ನು ರಚಿಸುವ ಮೂಲಕ ಸಮಾಜಕ್ಕೆ ಸಂದೇಶವನ್ನು ಸಾರುವಂತಹ ಶ್ರೇಷ್ಠ ಕಾರ್ಯದಲ್ಲಿ ನಿರಂತರವಾಗಿ ದುಡಿಯುತ್ತಿದ್ದಾರೆ.

ಈ ಕಲಾವಿದನ ಕಲೆಯನ್ನು ಗುರುತಿಸಿ ಜನರು ಮಾನ ಸಮ್ಮಾನಗಳನ್ನು ನೀಡಿದ್ದಾರೆ. ಹಲವು ಸಂಘ ಸಂಸ್ಥೆಗಳು ಇವರನ್ನು ಕರೆಸಿ ಸತ್ಕರಿಸಿವೆ. ನಾಡಿನ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇವರನ್ನು ಗೌರವಿಸಲಾಗಿದೆ. ಒಮ್ಮೆ ಕೇಳಿದರೆ ಸಾಕು ಇವರ ಹಾಡುಗಳು ಯಾವಾಗಲೂ ಮನದಾಳದಲ್ಲಿ ಮರೆಯದಂತೆ ಅಚ್ಚೊತ್ತಿ ಬಿಡುತ್ತವೆ, ಅಲ್ಲದೇ ಅವುಗಳನ್ನು ಗುನುಗುತ್ತಲೇ ಇರಬೇಕೆಂದೆನಿಸುತ್ತದೆ.

ಈಗಲೂ ಹಳ್ಳಿಗಳಲ್ಲಿ, ನಗರಗಳಲ್ಲಿ, ಸಭೆ ಸಮಾರಂಭಗಳಲ್ಲಿ ಈ ಕಲಾವಿದರಿಗೆ ಆದರಪೂರ್ವಕವಾಗಿ ಆಹ್ವಾನ ನೀಡುತ್ತಾರೆ. ಕಾರ್ಯಕ್ರಮದಲ್ಲಿ ಇವರನ್ನು ಹಾಡಿಸಿ ಸಂತಸಪಟ್ಟು, ಇವರಿಗೆ ಪ್ರೀತಿಪೂರ್ವಕವಾಗಿ ಗೌರವ ಧನವನ್ನು ನೀಡುತ್ತಾರೆ. ಜನ ಎಷ್ಟು ಕೊಡುತ್ತಾರೋ ಅಷ್ಟನ್ನೇ ಪ್ರೀತಿಯಿಂದ ಸ್ವೀಕರಿಸಿ ಕೈಮುಗಿದು ಹೋಗುವ ಸ್ವಭಾವ ಇವರದು. ಇವರನ್ನು ಕಂಡರೆ ಎಲ್ಲರಿಗೂ ಅಚ್ಚುಮೆಚ್ಚು. ಇವರ ವ್ಯಕ್ತಿತ್ವವೂ ಕೂಡ ಅತ್ಯಂತ ವಿನಯ ಶೀಲವಾದದ್ದು. ಇಂಥ ಕಲಾವಿದರನ್ನು ಮನಸಾರೆ ಆದರಿಸಿ ಇವರ ಕಲೆಯನ್ನು ಅಪ್ಪಿಕೊಂಡಾಗಲೇ ನಮ್ಮ ಸಂಸ್ಕೃತಿ ಸಂವರ್ಧಿಸುತ್ತದೆ.

**ಬಸವರಾಜ ನರೇಂದ್ರ (ಬಸವರಾಜ ಬಳಗೇರ)**

ಉತ್ತರ ಕರ್ನಾಟಕ ಜನಪದ ಹಾಡುಗಳು ಅಂದಾಗ ಕಣ್ಣಮುಂದೆ ಬರುವ ಜನಪದ ಹಾಡುಗಾರರಲ್ಲಿ ಬಸವರಾಜ ನರೇಂದ್ರ ಕೂಡ ಒಬ್ಬರು. ಇವರು ಧಾರವಾಡ ಜಿಲ್ಲೆ ಹಾಗೂ ತಾಲೂಕಿನ ನರೇಂದ್ರ ಎಂಬ ಗ್ರಾಮಯಲ್ಲಿ ಜೂನ್ ೬, ೧೯೬೬ರಂದು ಶಿವಬಸಪ್ಪ ಮತ್ತು ಸರಸ್ವತಿ ದಂಪತಿಗಳ ಹಿರಿಯ ಮಗನಾಗಿ ಜನಿಸಿದರು. ಬಡತನದ ಕಾರಣದಿಂದ ಶಿಕ್ಷಣ ಕೇವಲ ಎರಡನೇ ತರಗತಿವರೆಗೆ ಪಡೆದುಕೊಂಡ ಇವರು, ಮುಂದೆ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಳ್ಳಿಯ ಪರಿಸರದಲ್ಲಿ ಬೆಳೆದ ನರೇಂದ್ರ ಅವರು ಚಿಕ್ಕಂದಿನಲ್ಲಿ ಆಡುತ್ತಿದ್ದ ಆಟಗಳು, ಹಾಡುತ್ತಿದ್ದ ಹಾಡುಗಳು ಎಲ್ಲವೂ ಇವರ ಮೇಲೆ ಪ್ರಭಾವಿಸಿದವು. ಅದರ ತರುವಾಯ ಇವರು ಮುಂದೆ ಡೊಳ್ಳಿನ ಹಾಡು, ಭಜನಾ ಪದಗಳು, ಸೋಬಾನೆ ಪದಗಳು, ಹೆಜ್ಜೆ ಮೇಳ ಎಲ್ಲವನ್ನು ಕ್ರಮೇಣ ಹಾಡತೊಡಗಿದರು. ಚನ್ನಯ್ಯ ಸ್ವಾಮಿ ಮತ್ತು ಬಸಲಿಂಗಪ್ಪ ಬಳಗೇರ ಅವರು ಗುರುವಿನ ಸ್ಥಾನದಲ್ಲಿ ನಿಂತು ಹಾಡುಗಳನ್ನು ಕಲಿಸುತ್ತಾ ತಪ್ಪುಗಳನ್ನು ಗುರುತಿಸಿ ಸರಿಯಾದದ್ದನು ತಿಳಿಸುತ್ತಿದ್ದರು. ಹಾಡುಗಳನ್ನು ಸುಂದರವಾಗಿ ಹಾಡಲು ಪ್ರಾರಂಭಿಸಿದ ನಂತರ ದನ ಕಾಯುವ, ಕಮತಾ ಮಾಡುವ, ಟ್ರ್ಯಾಕ್ಟರ್ ಓಡಿಸುವ ಕೆಲಸ ನಿಲ್ಲಿಸಿ ಹಾಡುಗಳನ್ನು ಹಾಡುವುದರಲ್ಲೇ ತಮ್ಮನ್ನು ತೊಡಗಿಸಿಕೊಂಡರು.

ಮುಂದೆ ಒಂದು ದಿನ ಹಾಡುಗಳನ್ನು ರಚನೆ ಮಾಡಿ ಒಂದು ಬಾರಿ ಬೆಂಗಳೂರಿಗೆ ಹೋದಾಗ ಜನಪ್ರಿಯ ನಾಯಕ ನಟರಾದ ಡಾ। ರಾಜಕುಮಾರ ಅವರನ್ನು ಭೇಟಿ ಆಗಿದ್ದರು. ಆಗ ಇವರು ತಮ್ಮಲ್ಲಿದ್ದ ಜನಪದ ಹಾಡುಗಳನ್ನು ಅವರ ಮುಂದೆ ಬಿಚ್ಚಿಟ್ಟಾಗ ರಾಜಕುಮಾರವರು ಜಂಕಾರ ಸ್ಟುಡಿಯೋ ವಿಳಾಸವನ್ನು ನೀಡಿ ಕಳುಹಿಸುತ್ತಾರಂತೆ. ಇವರು ಜಂಕಾರ ಸ್ಟುಡಿಯೋಗೆ ಭೇಟಿ ನೀಡಿದ ನಂತರದಲ್ಲಿ ಇವರ ಜೀವನವೇ ಬದಲಾಯಿತು. ಊರಿಗೆ ಬಂದು ನಾನು ಡಾ। ರಾಜಕುಮಾರ ಅವರನ್ನು ಭೇಟಿ ಮಾಡಿದ್ದೆ ಎಂದು ಹೇಳಿದರೂ ಯಾರು ನಂಬಿರಲಿಲ್ಲ ಎಂಬುದನ್ನು ಸ್ವತಃ ಬಸವರಾಜ ನರೇಂದ್ರ ಅವರೆ ಹೇಳಿಕೊಳ್ಳುತ್ತಾರೆ. ಯಾವಾಗ ಇವರ ಹಾಡುಗಳು ಕ್ಯಾಸೆಟ್‌ಗಳ ಮೂಲಕ ಜನರಿಗೆ ತಲುಪಿದವೊ ಆಗ ಸಮಾಜ ಇವರನ್ನು ನೋಡುವ ದೃಷ್ಟಿಯೇ ಬದಲಾಯಿತು. ಇವರ ಹಾಡುಗಾರಿಕೆಯಿಂದ ಬಸವರಾಜ ಬಳಗೇರ ಎಂಬುದರ ಬದಲಾಗಿ ಬಸವರಾಜ ನರೇಂದ್ರ ಎಂದು ಊರ ಹೆಸರಿನಿಂದ ಇಂದು ಎಲ್ಲರಿಗೂ ಚಿರಪರಿಚಿತರು. 'ಪ್ಯಾಸೆಂಜರ್ ಹುಡುಗಿ', 'ಭಾರತಿ ನೀ ಗಮ..ಗಮ ನಾರತಿ' ಇಂತಹ ಹಾಡುಗಳು ಇವರಿಗೆ ಜನಪ್ರಿಯತೆಯನ್ನು ತಂದುಕೊಟ್ಟಿವೆ. ಸುಮಾರು ಮೂವತ್ತು ಸಾವಿರಕ್ಕಿಂತಲೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಅಲ್ಲದೇ ೩೬೦ ಕ್ಯಾಸೆಟ್, ಸಿಡಿಗಳಲ್ಲಿ ಹಾಡುಗಳು ಬಿತ್ತರಗೊಂಡಿವೆ. ಇಂದು ಯೂಟ್ಯೂಬ್ ಬಂದ ನಂತರ ಎಲ್ಲ ಹಾಡುಗಳು ಯೂಟ್ಯೂಬ್‌ನಲ್ಲಿ ಸಿಗುವುದರಿಂದ ಕ್ಯಾಸೆಟ್, ಸಿಡಿಗಳನ್ನು ಕೊಳ್ಳುವವರೆ ಇಲ್ಲವಾಗಿದ್ದಾರೆ.

ಬಸವರಾಜ ನರೇಂದ್ರ ಅವರು ಅಪ್ಪಟ ದೇಶೀಯ ಸಂಸ್ಕೃತಿಯನ್ನು ದೇಸಿತನದ ಗ್ರಾಮೀಣ ಚಟುವಟಿಕೆಗಳನ್ನು, ಮದುವೆ-ಮುಂಜಿಗಳನ್ನು ಕುರಿತು ಹಲವಾರು ಗ್ರಾಮೀಣ ಕಾರ್ಯಕ್ರಮಗಳ ಕುರಿತು ಹಾಡಿದ್ದಾರೆ. ಇವರ ಹಾಡುಗಳನ್ನು ಕೇಳುತ್ತಿದ್ದರೆ ಅದಾವುದೋ ಭಾವಲೋಕಕ್ಕೆ ಹೊಕ್ಕ ಅನುಭವವಾಗುತ್ತದೆ.

ಉತ್ತರ ಕರ್ನಾಟಕ ಭಾಗಗಳಲ್ಲಿ ಇವರ ಧ್ವನಿ ಸುರುಳಿಗಳು ಮನೆ ಮಾತಾಗಿವೆ. ಎಷ್ಟೋ ರೈತ ಬಾಂಧವರು ತಮ್ಮ ಟ್ರ್ಯಾಕ್ಟರ್‌ಗಳಲ್ಲಿ ಹೋಗುವಾಗ ಬಸವರಾಜ ನರೇಂದ್ರ ಅವರ ಹಾಡುಗಳನ್ನು ಹಚ್ಚಿಕೊಂಡು ಸಂತೋಷವಾಗಿ ತಮ್ಮ ಕೆಲಸದ ಕಡೆ ಹೋಗುವ ದೃಶ್ಯ ಇಂದಿಗೂ ಸರ್ವೇ ಸಾಮಾನ್ಯ. ಇವರ ಹೆಸರು ಕೆಲ ಹಳ್ಳಿಯ ಮುಗ್ಧ ಮನಸ್ಸುಗಳಿಗೆ ತಿಳಿಯದೇ ಇರಬಹುದು. ಆದರೆ ಇವರ ದೇಸಿ ಸೊಗಡಿನ ಹಾಡುಗಳು ಅವರ ಹೃದಯದಲ್ಲಿ ಇಳಿದು ಆನಂದ ನೀಡಿ ಅವರೊಂದಿಗೆ ಒಂದಾಗಿ ಬಿಟ್ಟಿವೆ. ಬಸವರಾಜ ನರೇಂದ್ರ ಅವರ ಧ್ವನಿ ಸುರುಳಿಗಳು ಸಮಾಜಕ್ಕೊಂದು ಸುಂದರ ಮಾರ್ಗವನ್ನು ಒದಗಿಸುವಂತಹ ಕೆಲಸವನ್ನು ಮಾಡಿವೆ. ಉದಾಹರಣೆಗೆ 'ಪ್ರೀತಿಯ ಅಣ್ಣ ಮುದ್ದಿನ ತಂಗಿ' ಎಂಬ ಧ್ವನಿಸುರುಳಿಯಲ್ಲಿ ತವರಿನ ಮನೆಯಿಂದ ಗಂಡನ ಮನೆಗೆ ಹೋದ ಹೆಣ್ಣು ಮಗಳು ಹೇಗಿರಬೇಕು ಎಂಬುವುದಕ್ಕೆ ಬುದ್ಧಿ ಮಾತು ಹೇಳಿದಂತಿದೆ. ಮನೆಯಲ್ಲಿ ಅಣ್ಣ ತಂದೆ-ತಾಯಿ ಮುಂತಾದ ಹಿರಿಯರು ಮಾಡಬೇಕಾದ ಕೆಲಸವನ್ನು ನರೇಂದ್ರ ಅವರು ಧ್ವನಿಸುರುಳಿ ಮೂಲಕ ಮಾಡಿದ್ದಾರೆ. ಈ ಧ್ವನಿಸುರುಳಿ ಗಂಡನ ಮನೆಗೆ ಹೋಗುವ ಹೆಣ್ಣು ಮಗಳಿಗೆ ಮಾರ್ಗದರ್ಶಿ ಸೂತ್ರವಾಗಿದೆ.

**ಪ್ರೀತಿಯ ಅಣ್ಣ ಮುದ್ದಿನ ತಂಗಿ :**

ತುಂಬಿದ ಮನೆಯಲ್ಲಿ ತಂಗಿ
ಒಂದು ನಂಬಿಗೆ ಇರಬೇಕು
ಅದು ತವರೂರಿನ ಬದುಕು
ಆ ನಂಬಿಗೆ ಹೋದರೆ ತಂಗಿ
ತವರು ನಿನಗ ಇಲ್ಲವೆನಬೇಕು
ಗಂಡನ ಮನೆಯಲ್ಲಿ ತಂಗಿ
ನೀನು ಅರಿತು ನಡಿಬೇಕು॥ಪ॥
ನಂಬಿಗೆ ಎಂಬುದು ಹೆಣ್ಣಿಗೆ
ಜೀವನದ ಬದುಕು
ಅದು ತವರೂರಿಗೆ ಬೆಳಕು
ಆ ನಂಬಿಕೆ ಹೋದರೆ ಹೆಣ್ಣು
ಭೂಮಿ ಮ್ಯಾಲ್ಯಾಕಿರಬೇಕು
ನಂಬಿಗೆ ತುಂಬಿ ತುಳುಕುವ

ಹಾಗೆ ಹೆಣ್ಣು ಇರಬೇಕು॥
ಬಂಗಾರ ಬಣ್ಣದ ಬದುಕು
ಗುಣ ಚಂದ ಇದ್ದರೆ ಸಾಕು
ಅದರಿಂದ ಹೆಣ್ಣಿಗೆ ಬೆಳ್ಳಿ ಬೆಳಕು॥
ಸಿಂಗಾರ ಮಾತು ಸಾಕು
ಹೆಚ್ಚಿಂದು ಯಾರಿಗೆ ಬೇಕು
ಅತ್ತಿ ಮಾವನ ಮುತ್ತಾಗಿ ಇರಬೇಕು॥
ಹಿರೇಸೊಸಿಯಾದರೂ ಬರೀ ನಿನ್ನ
ಕೈ ಕೆಲಸದೊಳಿರಬೇಕು
ಹುಟ್ಟಿದ ಮನೆಯಂಗ ಸುಖ ಬೇಕಂದರೆ
ಹೌದ್ಯಾರನಬೇಕು॥
ಮಾತುಮಾತಿಗೆ ರತನ
ಜಾತಿ ಜಾತಿಗೆ ಕದನ
ತಿಳಿದರು ತಿಳಿಯದವರಂತಿರಬೇಕು॥
ಮಾತು ಬಲ್ಲವನು ಜಾಣ
ನೀತಿ ಮನೆತನದ ಪ್ರಾಣ
ಸೋತು ಸೊಸೆಯಾಗಿ
ಪ್ರೀತಿ ಬೇಕು॥
ಅಡುಗೆ ಮನೆಯಲ್ಲಿ
ತಾಯಿಯ ಹಾಗೆ ಊಟ ಬಡಿಸಬೇಕು
ಮೈದುನರಿಗೆ ಅವರವ್ವನಕ್ಕಿಂತ ಹೆಚ್ಚಾಗಿರಬೇಕು॥
ದುಡಿಮೆ ನಿನ್ನ ತಾಯಿ ಅನಬೇಕು
ಬದುಕೇ ನಿನ್ನ ತಂದೆ ಎನಬೇಕು
ಆಳಾಗಿ ದುಡಿದು ಅರಸನಾಗಿ ಉಣಬೇಕು॥
ಕಲಬುರಗಿ ಶರಣರ ಸತಿ
ಮಾದಮ್ಮ ನಂಗಿರಬೇಕು
ಬೆಳ್ಳಿ ಮೂಡುವಾಗ
ಅಡುಗೆ ಮಾಡಬೇಕು॥
ಗಂಡನ ಕೂಡ
ಹಿಗ್ಗಿಲೆ ದುಡಿದು
ಸುಗ್ಗಿ ಮಾಡಬೇಕು

ಮ್ಯಾಟ ಹತ್ತಿ ಜ್ವಾಳಾ ತೂರಿದರ
ಹೌದ ಹೌದ ಅನಬೇಕು.[೧೯]

ತಾಯಿಯಾಗಿ, ಮಡದಿಯಾಗಿ, ಅಕ್ಕನಾಗಿ, ತಂಗಿಯಾಗಿ, ಮಗಳಾಗಿ ಕಾಣಿಸಿಕೊಳ್ಳುವ ಹೆಣ್ಣಿಗೆ ನಮ್ಮ ಸಂಸ್ಕೃತಿಯಲ್ಲಿ ಉನ್ನತವಾದಂತಹ ಸ್ಥಾನ ಕಲ್ಪಿಸಲಾಗಿದೆ.

ಪ್ರಸ್ತುತ ಪದ್ಯದಲ್ಲಿ ಗಂಡನ ಮನೆಗೆ ಹೋಗುವ ಹೆಣ್ಣು ಮಗಳಿಗೆ ಅವಳ ಅಣ್ಣನು ಹೇಳುವ ತಿಳುವಳಿಕೆ ಮಾತುಗಳು ಇಲ್ಲಿ ಕಂಡುಬರುತ್ತವೆ. ತವರು ಮನೆ ಮತ್ತು ತವರು ಮನೆಯಲ್ಲಿರುವ ತನ್ನವರನ್ನು ನೋಡಿಕೊಳ್ಳುವ ಹಾಗೆ ಗಂಡನ ಮನೆಯಲ್ಲಿಯೂ ಹಾಗೆಯೇ ನಡೆದುಕೊಳ್ಳಬೇಕೆಂಬ ಸಲಹೆಗಳನ್ನು ಅಣ್ಣನು ತಿಳಿಯಪಡಿಸುತ್ತಿರುವುದನ್ನು ಕಾಣುತ್ತೇವೆ. ಹೆಣ್ಣು ಜ್ಯೋತಿಯಾಗಿ ಮನೆ ಬೆಳಗುವ ಲಕ್ಷ್ಮೀ ಆಗಿದ್ದಾಳೆ. ಅದಕ್ಕೆ ಅನುಗುಣವಾಗಿ ಎಲ್ಲ ಕಡೆಯೂ ಅದೇ ನಡುವಳಿಕೆಯನ್ನು ಹೊಂದಿರಬೇಕೆಂಬ ಆಶಯವನ್ನು ಈ ಕವನ ವ್ಯಕ್ತಪಡಿಸುತ್ತದೆ.

ಬಸವರಾಜ ನರೇಂದ್ರ ಅವರು ದೇಶಿ ಸಂಸ್ಕೃತಿಯನ್ನು ತಮ್ಮ ಹಾಡುಗಳ ಮುಖಾಂತರ ಕಟ್ಟಿಕೊಟ್ಟಿದ್ದಾರೆ, ಎಂಬುದಕ್ಕೆ ಅವರ ಮದುವೆ ಮನೆ ಧ್ವನಿಸುರುಳಿಯಲ್ಲಿ ಕಂಡುಬರುವ ಸೋಬಾನೆ ಪದಗಳು ಇದಕ್ಕೆ ಸಾಕ್ಷಿಯಾಗಿವೆ. ಇವರ ಮದುವೆ ಮನೆ ಧ್ವನಿ ಸುರುಳಿಯಲ್ಲಿ ಬಳಕೆಯಾದ ಹಾಡುಗಳು.

೧. ಕನ್ಯಾ ನೋಡಾಕ ಬರತಾರ ತಂಗಿ
೨. ಬಣ್ಣದ ಮನೆ ಮುಂದೆ ಹಂದರ ಬಾಳ ಚಂದ
೩. ಮಾವ ತಂದಾನ
೪. ಅಣ್ಣ ತಂಗಿಯರು....ಇತ್ಯಾದಿ.

ಈ ಧ್ವನಿಸುರುಳಿಯಲ್ಲಿ ಮದುವೆ ಎಂಬ ಕಾರ್ಯಕ್ರಮದಲ್ಲಿ ಬರುವ ಎಲ್ಲಾ ಸಂಸ್ಕೃತಿಗಳು, ಘಟನೆಗಳು ಮೂಡಿಬಂದಿವೆ. ಇಲ್ಲಿ ಬಳಕೆಯಾದ ಮದುವೆಗೆ ಸಂಬಂಧ ಪಟ್ಟಂತಹ ಪದಗಳನ್ನು ಇಲ್ಲಿ ನೋಡುತ್ತೇವೆ. ಹಂದರ, ಹಾಲಗಂಬ, ಒಳಕಲ್ಲು, ಬೀಗರ ಜಗಳ, ಬಳೆಗಾರ ಚೆನ್ನಯ್ಯ, ಹಸಿರು ಬಳೆ, ಚಹಾದ ಗಡಿಬಿಡಿ, ರೇಷ್ಮೆ ಸೀರೆ, ದ್ಯಾಮವ್ವನ ಗುಡಿ ಗೋಧಿ ಹುಗ್ಗಿ, ದೈವದ ಊಟ, ಊರ ಪಂಚರ ಆಶೀರ್ವಾದ, ಸುರಗಿ ನೀರು ಸುರಿಯುವುದು, ಅರಿಶಿಣದ ಕಾರ್ಯ, ಹೊಸ ಬಟ್ಟೆ ತೊಡುವುದು, ಬಣ್ಣದ ಬಾಸಿಂಗ, ಚಿನ್ನದ ಗುಳದಾಳಿ, ಅಕ್ಕಿ ಕಾಳು, ಮುತ್ತೈದೆಯರು ತವರು ಬಿಟ್ಟು ಹೋಗುವಾಗ ಮಗಳ ಅಳಲು, ತಾಯಿಯ ಸಂಕಟ, ತಂದೆಯ ದುಃಖ, ಕಾಲಿನ ಕಾಲುಂಗುರ, ಹೂವಿನ ಸೀರೆ, ಬುಂದೆ ಊಟ..ಅ..ಹಾ..ಹಾ..ಹಾ ಏನು ಅದ್ಭುತವಾದ ವರ್ಣನೆ. ನಿಜವಾಗಿಯೂ ಮದುವೆ ಮಾಡಿ ಮುಗಿಸಿ ಬಂದಂತಹ ಅನುಭವವಾಗುತ್ತದೆ. ಇಲ್ಲಿ ಮದುವೆಯಾಗದವರು ತಮ್ಮ ಮದುವೆಯನ್ನು ಕಲ್ಪಿಸಿಕೊಂಡು ಖುಷಿ ಪಟ್ಟರೆ, ಮದುವೆಯಾದವರು ತಮ್ಮ ಮದುವೆಯ

ಮಧುರ ಕ್ಷಣಗಳನ್ನು ಮೆಲುಕು ಹಾಕಿ ಸಂಭ್ರಮಿಸುತ್ತಾರೆ. ಅಂತಹ ಅನುಭವವನ್ನು ಈ ಧ್ವನಿಸುರುಳಿಗಳು ನೀಡುತ್ತವೆ. ಇವರು ಕನ್ನಡ ನಾಡಿನ ಪವಿತ್ರ ಸಂಸ್ಕೃತಿಯ ಚಿತ್ತಾರವನ್ನು ಈ ಹಾಡುಗಳಲ್ಲಿ ತುಂಬಿದ್ದಾರೆ.

ಇವರ ಧ್ವನಿ ಸುರುಳಿಯ ಮೊದಲನೆಯ ಹಾಡು 'ಕನ್ಯಾ ನೋಡಾಕ ಬರತಾರಂತ' ಎಂಬ ಹಾಡಂತೂ ಬಹಳ ಸೊಗಸಾಗಿ ಮೂಡಿಬಂದಿದೆ. ಇಲ್ಲಿ ಕರ್ನಾಟಕ ರಾಜ್ಯದ ಸ್ಥಳಗಳನ್ನು ಬಳಕೆ ಮಾಡಿಕೊಂಡು ಹಾಡು ಕಟ್ಟಿರುವುದು ಮತ್ತೊಂದು ವಿಶೇಷತೆಯಾಗಿದೆ. ಧಾರವಾಡ, ಗರಗ, ಎತ್ತಿನಗುಡ್ಡ, ದಾಸನಕೊಪ್ಪ, ಕೂಡಲಸಂಗಮ, ಕಲಘಟಗಿ, ಹುಬ್ಬಳ್ಳಿ, ದುಮ್ಮವಾಡ, ಕೆಲಗೇರಿ, ಶಿಶುನಾಳ, ಮಲ್ಲಿಗವಾಡ, ಬೆಳಗಾವಿ, ನವಲೂರು, ಕೋಟೂರು, ಮಮ್ಮಿಗಟ್ಟಿ ಮುಂತಾದ ಸ್ಥಳಗಳ ಹೆಸರುಗಳನ್ನು ಬಳಸಿಕೊಂಡಿದ್ದಾರೆ. ತಮ್ಮ ತಮ್ಮ ಊರಿನ ಹೆಸರು ಬಂದಾಗ ಜನರು ಕಾತರದಿಂದ ಕೇಳಿ ಖುಷಿ ಪಡುತ್ತಾರೆ.

ಬಸವರಾಜ ನರೇಂದ್ರ ಅವರು ಬೇರೆ ಬೇರೆ ಪ್ರಕಾರದ ಹಾಡುಗಳನ್ನು ಸಹ ರಚನೆ ಮಾಡಿದ್ದಾರೆ. ಅವರು ಸ್ವತಃ ತಾವೇ ಅನೇಕ ಸಣ್ಣ ಹಾಸ್ಯ ನಾಟಕಗಳನ್ನು ಬರೆದು ಅಭಿನಯಿಸಿದ್ದಾರೆ. ಅವುಗಳು ಕೂಡ ಅತ್ಯಂತ ಸುಂದರವಾಗಿವೆ.

೧. ನೀನು ಕುಡಿ ನಡಿ ನಡಿ
೨. ಹಿಂಗ್ಯಾಕ ನೋಡತಿ ನನ್ನ ನನಗೆ ಕೊಡ್ತಾರೆ ನಿನ್ನ
೩. ಡ್ರೈವರ್ ನನ್ನ ಲಿವರ್
೪. ಮಲತಾಯಿ ಮಕ್ಕಳು.....ಇತ್ಯಾದಿ

ಇವುಗಳ ಮೂಲಕ ನರೇಂದ್ರ ಅವರದು ಬಹುಮುಖ ವ್ಯಕ್ತಿತ್ವ ಎಂಬುದನ್ನು ತಿಳಿಯಬಹುದು.

**ಇವರ ಪ್ರಮುಖ ಧ್ವನಿಸುರುಳಿಗಳು :**

೧. ಮದುವೆ ಮನೆ
೨. ಹಾಲಿನ ಗಿಂಡಿ
೩. ಹೆಳವರ ಬಂಡಿ
೪. ಪ್ರೀತಿಯ ಆನೆ
೫. ಏನೇ ಕಲಾವತಿ
೬. ಬಲ ಭೀಮ
೭. ಪ್ರೀತಿಯ ಅಣ್ಣ ಮುದ್ದಿನ ತಂಗಿ
೮. ಪ್ಯಾಸೆಂಜರ್ ಹುಡುಗಿ
೯. ಭಾರತಿ ಘಮ ಘಮ ನಾರತಿ...ಮುಂತಾದವುಗಳು.

ಇವುಗಳ ಮೂಲಕ ಬಸವರಾಜ ನರೇಂದ್ರ ಅವರು ತಮ್ಮ ಕಲಾ ರಂಗೋಲಿಯನ್ನು ಬಿಡಿಸಿದ್ದು, ಅವು ಜನರ ಮನಸ್ಸುಗಳನ್ನು ಸೆಳೆಯುತ್ತಿವೆ. ಈ ರೀತಿಯಾಗಿರುವ ಧ್ವನಿ ಸುರುಳಿಗಳು ನವಮೌಖಿಕತೆಯ ಮುಖ್ಯ ಅಂಶಗಳಲ್ಲಿ ಕಂಡುಬರುತ್ತವೆ. ಏಕೆಂದರೆ ಈ ರೀತಿಯಾದಂತಹ ಎಲ್ಲಾ ಹಾಡುಗಳು ಧ್ವನಿಸುರುಳಿ ಆಗುವುದರ ಜೊತೆಗೆ ನವಮೌಖಿಕತೆಯ ಪ್ರವೇಶ ಪಡೆದಿವೆ. ಇವು ಆಧುನಿಕ ಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯೂಟ್ಯೂಬ್ ಮುಂತಾದವುಗಳಲ್ಲಿ ಹೇರಳವಾಗಿ ಬಳಕೆಯಾಗಿವೆ. ಈ ದೃಷ್ಟಿಕೋನದಿಂದ ಇಲ್ಲಿ ಬಸವರಾಜ ನರೇಂದ್ರ ಅವರ ಧ್ವನಿಮುದ್ರಿತ ಗೀತೆಗಳನ್ನು ನವಮೌಖಿಕ ಸಾಹಿತ್ಯದ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಹಲವಾರು ವರ್ಷಗಳಿಂದ ತಮ್ಮ ಹಾಡಿನಿಂದ ಜನರ ಹೃದಯದಲ್ಲಿ ಉಳಿದ ಈ ಬಸವರಾಜ ನರೇಂದ್ರ ಅವರು ಹತ್ತಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಇವರಿಗೆ ಅನೇಕ ಅಭಿಮಾನಿಗಳು, ಸಾಂಸ್ಕೃತಿಕ ಸಂಘ ಸಂಸ್ಥೆಗಳು ಮುಂತಾದವರು ಇವರಿಗೆ ಪ್ರೀತಿಪೂರ್ವಕ ಸನ್ಮಾನಗಳ ಜೊತೆಗೆ ಸತ್ಕರಿಸಿದ್ದಾರೆ.

**೫.೧.೩. ಮೂರನೇ ತಲೆಮಾರಿನ ಹಾಡುಗಾರರು**

ಈ ಭಾಗದಲ್ಲಿ ಬರುವ ಹಾಡುಗಾರರು ಮೇಲಿನ ಎರಡು ತಲೆಮಾರಿನ ಹಾಡು ಗಾರರಿಗಿಂತ ಭಿನ್ನ ಸ್ವರೂಪದವರು. ಏಕೆಂದರೆ ಇವರ ಹಾಡುಗಳು ನೇರವಾಗಿ ಸಾಮಾಜಿಕ ಜಾಲತಾಣಗಳನ್ನು ತಲುಪಿವೆ. ಇಲ್ಲಿ ಹಾಡುಗಾರನ ಗಾಯನದ ಜೊತೆಗೆ ಸಂಗೀತದ ಪಾತ್ರ ಸಿಂಹಪಾಲಿನಂತೆ ಕೆಲಸ ಮಾಡುತ್ತದೆ. ಇಂದು ಜನಪ್ರಿಯ ನವಮಾಧ್ಯಮಗಳಾದ ಟಿವಿ, ಯೂಟ್ಯೂಬ್, ಫೇಸ್‌ಬುಕ್ ಇತ್ಯಾದಿಗಳಲ್ಲಿ ಇವರ ಹಾಡುಗಳು ಬಿತ್ತರಗೊಳ್ಳುತ್ತಿವೆ. ಇವು ಅತೀ ಬೇಗ ಜನಪ್ರಿಯತೆ ತಂದು ಕೊಡುವ ಮಾಧ್ಯಮಗಳಾಗಿವೆ. ಈ ಮಾಧ್ಯಮಗಳಲ್ಲಿ ಹಾಡುವ ಹಾಡುಗಾರರ ಕುರಿತಾದ ಅಧ್ಯಯನವಾಗಿದೆ.

**ಲಕ್ಷ್ಮೀ ತಳವಾರ**

ಈ ನೆಲದ ಸಂಸ್ಕೃತಿಯ ಮೂಲ ಜನಪದ. ಗ್ರಾಮೀಣ ಪ್ರದೇಶಗಳಲ್ಲಿ ಜನಪದ ಗೀತೆಗಳು ಇಂದಿಗೂ ಜೀವಂತವಾಗಿವೆ. ಮದುವೆ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಜನಪದ ಗೀತೆಗಳು ಅನುರಣಿಸುತ್ತಿವೆ. ಸಂಗೀತ ಕುರಿತು ರಿಯಾಲಿಟಿ ಶೋಗಳಲ್ಲಿ ಕೂಡಾ ಜನಪದ ಗೀತೆಗಳ ಹಾಡುಗಾರಿಕೆ ಸ್ಪರ್ಧೆಗಳು ಒಂದು ಭಾಗವಾಗಿವೆ. ಜೀ ಕನ್ನಡ ರಿಯಾಲಿಟಿ ಚಾಂಪಿಯನ್ ಸ..ರಿ..ಗ..ಮ..ಪ ಸೀಸನ್ ಹದಿನಾಲ್ಕರಲ್ಲಿ ಭಾಗವಹಿಸಿ ಲಕ್ಷ್ಮೀ ತಳವಾರ ಪ್ರಾರಂಭದಲ್ಲಿ 'ಯಾವ ದೇಶದ ಗಂಡು ಇವನು...' ಎಂದು ಪದಗಳನ್ನು ಜೋಡಿಸುತ್ತ, ಹಳ್ಳಿಯ ಜನಪದ ಧಾಟಿಯಲ್ಲಿ ಹಾಡನ್ನು ಪ್ರಾರಂಭಿಸಿದಾಗ ಅಲ್ಲಿದ್ದ ತೀರ್ಪುಗಾರರು ಮೂಕ ವಿಸ್ಮಯರಾಗಿ ಆಲಿಸುತ್ತಿದ್ದರು. ಅಲ್ಲದೇ ಈ ಹಾಡನ್ನು ಅವಳ ಬಾಯಿಂದ ಮತ್ತೊಂದು ಬಾರಿ ಹಾಡಿಸುವುದರ ಮೂಲಕ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಲಕ್ಷ್ಮೀ ತಳವಾರ

ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕಿನ ಘೋಡಗೇರಿ ಗ್ರಾಮದಲ್ಲಿ ರಾಮಪ್ಪ ಮತ್ತು ಸಂಗೀತಾ ಎಂಬ ದಂಪತಿಗಳ ಮಗಳಾಗಿ ಜನಿಸಿದ್ದು, ಇಂದು ಹುಕ್ಕೇರಿಯ ಸರಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದಾಳೆ. ಮೊಬೈಲ್‌ನಲ್ಲಿ ಹಾಡುಗಳನ್ನು ಕೇಳುತ್ತಾ ಆ ಹಾಡುಗಳಿಗೆ ತನ್ನದೇ ಆದ ಧಾಟಿಯನ್ನು ಹಚ್ಚಿಕೊಂಡು ಹಾಡುವ ಜಾಣ್ಮೆ ಲಕ್ಷ್ಮೀ ತಳವಾರಗೆ ಒಲಿದಿದೆ ಎಂದೇ ಹೇಳಬಹುದು. ಇವಳಿಗೆ ಜನಪ್ರಿಯತೆ ತಂದು ಕೊಟ್ಟ ಹಾಡುಗಳು.

**ಯಾವ ದೇಶದ ಗಂಡು ಇವನು :**

ಯಾವ ದೇಶದ ಗಂಡು ಇವನು
ರಂಗಿಲಾಲಾ
ಕುಂತಾನ ಕುದುರೆ ಮ್ಯಾಲ
ಮಾಡತಾನ ಡೌಲ...
ಕೈಯಲ್ಲಿ ಗೀನಿ ಕೋಗಿಲ
ತಿರಗಸ್ತಾನ ಕೋಲ
ಯಾವ ತಾಯಿ ಕುಡಿಸಿದಳವ್ವಾ
ಎದಿ ಹಾಲ ಮಾಡತಾನ ಡೌಲ
ಯಾವ ದೇಶದ ಗಂಡು ಇವನು
ರಂಗಿಲಾಲಾ[೨೦]...

ಈ ಹಾಡನ್ನು ಹಾಡುವುದರ ಮೂಲಕ ಲಕ್ಷ್ಮೀ ತಳವಾರ ಇಂದು ಎಲ್ಲರ ಮನೆ ಮಾತಾಗಿದ್ದು, ಸಂಗೀತ ನಮ್ಮ ವ್ಯಕ್ತಿತ್ವವನ್ನು ಯಾವ ಮಟ್ಟಕ್ಕೆ ನಿಲ್ಲಿಸುತ್ತದೆ ಎಂಬುದಕ್ಕೆ ಲಕ್ಷ್ಮೀ ತಳವಾರ ಉದಾಹರಣೆಯಾಗಿದ್ದಾಳೆ. ಹಾಡು ಎಂದಾಗ ಯಾವುದೇ ಒಂದು ಹಾಡು ಅನ್ನುವುದಕ್ಕಿಂತಾ ಜನಪದ ಹಾಡುಗಳನ್ನು ಹಾಡಿದರೆ ಜನರ ಮನಸ್ಸಿಗೆ ನೇರವಾಗಿ ತಟ್ಟುತ್ತವೆ.

**ಊರ ಕಣ್ಣು ಯಾರ ಕಣ್ಣು ಮಾರಿ ಕಣ್ಣು ಹೋರಿ ಕಣ್ಣು :**

ಊರ ಕಣ್ಣು......ಯಾರ ಕಣ್ಣು....
ಮಾರಿ ಕಣ್ಣು......ಹೋರಿ ಕಣ್ಣು....
ಯಾವ ಮೋಸಳೆ ಕಣ್ಣು
ಬಿತ್ತಮ್ಮಾ ಬಿತ್ತಮ್ಮಾ
ನಮ್ಮ ಪ್ರೀತಿ ಮ್ಯಾಲೆ ನಮ್ಮ ಪ್ರೀತಿ ಮ್ಯಾಲೆ।
ಬದುಕು ಅಂದರೇನು ಅಣ್ಣಾ
ವಿಧಿ ಅದರ ಯಜಮಾನಾ
ಅವರು ಹೋಗುವದ ಕಡೆಗೆ ಹೋಗಬೇಕನ್ನಾ

ವಿರಹ ಅನ್ನೊ ವಿಷವನ್ನಾ
ಕುಡಿಸುತಾನೆ ಬ್ರಹ್ಮನ್ನಾ
ಸತ್ಯವಾದ ಪ್ರೇಮಿಗಳಿಗೆ ಇದು ಬಹುಮಾನಾ।
ನಮ್ಮ ಖಳನಾಯಕಾ ಮೇಲೆ ಹಿರೋ ಮಾಲಿಕಾ
ಕಾಲ ಗಡು ಗಿಚಕಾ ಪ್ರೀತಿ ಕೋಲೆ ಪಾತಕ
ಊರ ಕಣ್ಣು......ಯಾರ ಕಣ್ಣು....
ಮಾರಿ ಕಣ್ಣು......ಹೋರಿ ಕಣ್ಣು....
ಯಾವ ಮೋಸಳೆ ಕಣ್ಣು
ಬಿತ್ತಮ್ಮಾ ಬಿತ್ತಮ್ಮಾ
ನಮ್ಮ ಪ್ರೀತಿ ಮ್ಯಾಲೆ ನಮ್ಮ ಪ್ರೀತಿ ಮ್ಯಾಲೆ।
ಹಣೆ ಬರಹಕ್ಕೆ ಹೋಣೆ ಯಾರು
ಇಲ್ಲಿ ಬೊಂಬೆ ಎಲ್ಲಾರು
ಯಾವ ಮತ್ತು ಇರದಂತಾ ನೋವು ನೂರಾರು
ಇತಿಹಾಸ ಆಗೋರು ಪ್ರೀತಿಯಲ್ಲಿ ಸೋತೊವರು
ನಾವು ಚರಿತೆ ಯಾಗುತ ಸೇರಲಿ ಈ ಉಸಿರು
ನಮ್ಮ ಖಳನಾಯಕಾ ಮೇಲೆ ಹಿರೋ ಮಾಲಿಕಾ
ಕಾಲ ಗಡು ಗಿಚಕಾ ಪ್ರೀತಿ ಕೋಲೆ ಪಾತಕಾ।
ಊರ ಕಣ್ಣು......ಯಾರ ಕಣ್ಣು
..............................
...............ನಮ್ಮ ಪ್ರೀತಿ ಮ್ಯಾಲೆ ನಮ್ಮ ಪ್ರೀತಿ।[೨೧]

ಮನುಷ್ಯನ ಜೀವನದಲ್ಲಿ ಯಾವ ರೀತಿಯ ಸಮಸ್ಯೆಗಳು ಬರುತ್ತವೆ ಎಂದು ಹೇಳಲಾಗದು. ಆದರೆ ಪ್ರತಿಯೊಂದು ಸಮಸ್ಯೆಗೆ ಒಂದು ಪರಿಹಾರ ಎನ್ನುವುದು ಇದ್ದೆ ಇರುತ್ತದೆ. ಪರಿಹಾರ ಕಂಡುಕೊಳ್ಳುವವರೆಗೂ ಮನುಷ್ಯ ತಾಳ್ಮೆಯಿಂದಿರಬೇಕು. ಬದುಕನ್ನು ಕಟ್ಟಿಕೊಳ್ಳುವ ರೀತಿ, ಜೀವನ ಕ್ರಮ, ವಿಧಿ ಆಟಗಳು, ಹಣೆಬರಹಕ್ಕೆ ಹೊಣೆಯಾರು? ಎಂಬಂತೆ ಹಲವು ಮೆಟ್ಟಿಲುಗಳನ್ನು ನಾವು ಜೀವನದಲ್ಲಿ ಹತ್ತಬೇಕಾಗುತ್ತದೆ. ಅದೆಲ್ಲವನ್ನು ಜನಪದ ಗೀತೆಗಳಲ್ಲಿ ಕಾಣುತ್ತೇವೆ. ಗ್ರಾಮೀಣ ಜನರು ತಮ್ಮ ಬದುಕನ್ನೇ ಹಾಡುಗಳ ಮೂಲಕ ವಿಶ್ಲೇಷಿಸುತ್ತಾರೆ.

ಹೀಗೆ ಜನಪದ ಹಾಡುಗಳನ್ನು ಹಾಡುತ್ತಾ ಎಲ್ಲರ ಮನಸ್ಸನ್ನು ಗೆದ್ದ ಲಕ್ಷ್ಮೀ ತಳವಾರ ಅಪರೂಪದ ಹಾಡುಗಾರತಿಯಾಗಿ ನಿಂತಿದ್ದಾಳೆ. ಇವಳು ಗ್ರಾಮೀಣ ಪ್ರದೇಶದವಳಾದರೂ ಸಹ ಇಂದು ಆಧುನಿಕ ಮಾಧ್ಯಮಗಳ ಮೂಲಕ ಬಿತ್ತರವಾದ ವಿಷಯಗಳು ಬಹು ಬೇಗನೆ ಎಲ್ಲರ ಮನೆಯನ್ನು ತಲುಪುತ್ತವೆ. ಯೂಟ್ಯೂಬ್‌ನಲ್ಲಿ ಲಕ್ಷ್ಮೀ ತಳವಾರ ಎಂದು ಟೈಪ್

ಮಾಡಿದರೆ ಸಾಕು ಅವಳು ಹಾಡಿರುವ ಎಲ್ಲ ಹಾಡುಗಳು ಪರದೆಯ ಮೇಲೆ ಬಂದು ಬಿಡುತ್ತವೆ. ಅಂತಹ ಒಂದು ತಂತ್ರಜ್ಞಾನ ಬೆಳೆದು ಬಂದಿವುದರಿಂದಲೇ ಇಂದು ಎಲೆಮರೆ ಕಾಯಿಯಂತಿದ್ದ ವ್ಯಕ್ತಿಗಳು ಎಲ್ಲರಿಗೂ ಚಿರಪರಿಚಿತವಾಗುತ್ತಿದ್ದಾರೆ.

**ಸ.ರಿ.ಗ.ಮ.ಪ. ಹನುಮಂತ**

ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ಬಡ್ನಿ ತಾಂಡಾದ, ಲಂಬಾಣಿ ಜನಾಂಗಕ್ಕೆ ಸೇರಿದ ಹನುಮಂತ. ತನ್ನ ಕುರಿ ಕಾಯುವ ಕಾಯಕದಲ್ಲಿ ಅವರಿವರು ಹಾಡಿದ ಹಾಡುಗಳನ್ನು ಕೇಳುತ್ತ ಬೆಳೆದವನು. ಈತ ಕೇವಲ ಐದನೇ ತರಗತಿವರೆಗೆ ಮಾತ್ರ ಶಿಕ್ಷಣ ಪಡೆದು ಕೊಂಡಿದ್ದರೂ ಸಹ, ಇಂದು ಎಲ್ಲರ ಮನೆಯ ಮಾತಾಗಿ ಬೆಳೆದಿದ್ದಾನೆ. ಕಾರಣ ಆತನಲ್ಲಿದ್ದ ಸಂಗೀತ ಜ್ಞಾನ. ದಿನ ನಿತ್ಯ ತನ್ನ ಕಾಯಕದ ಜೊತೆಗೆ ಶರೀಫ್‌ರ ಹಾಡುಗಳು ಇತರೆ ಜನಪದ ಗೀತೆಗಳನ್ನು ಹಾಡುತ್ತ, ತನ್ನ ಕಂಠವನ್ನು ಗಟ್ಟಿಗೊಳಿಸುತ್ತ, ಇಂದು ಎಲ್ಲರ ಮುಂದೆ ಹಾಡುವ ಮೂಲಕ ತನ್ನಲ್ಲಿದ್ದ ಸಂಗೀತವನ್ನು ಎಲ್ಲರಿಗೂ ಉಣಬಡಿಸುತ್ತಿದ್ದಾನೆ. ಸಾಧಕನಿಗೆ ಯಾವ ಕಾಯಕವಾದರೇನು ಸಾಧನೆಗೆ ಎಂದೂ ಕೊರತೆ ಉಂಟಾಗದು ಎಂಬ ಮಾತು ಹನುಮಂತನ ಜೀವನಕ್ಕೂ ಅನ್ವಯವಾಗುತ್ತದೆ.

ಇಂದು ಜೀ ಕನ್ನಡ ಸ..ರಿ..ಗ..ಮ..ಪ ಸೀಸನ್ ಹದಿನೈದರ ಕಾರ್ಯಕ್ರಮದ ಮೂಲಕ ನಾಡಿನಾದ್ಯಂತ ಜನರ ಮನಸ್ಸನ್ನು ಗೆದ್ದ ಹನುಮಂತ ಫೈನಲ್ ತಲುಪಿ ದ್ವಿತೀಯ ಸ್ಥಾನವನ್ನು ಸಹ ಪಡೆದುಕೊಂಡಿದ್ದಾನೆ. ಇದಕ್ಕೆ ಮುಖ್ಯ ಕಾರಣ ಇಂದು ಬಳಕೆಯಲ್ಲಿರುವ ಆಧುನಿಕ ಮಾಧ್ಯಮಗಳು. ಈ ಮಾಧ್ಯಮಗಳಲ್ಲಿ ಒಂದು ಬಾರಿ ಬಿತ್ತರವಾದರೆ ಸಾಕು, ಅದು ಎಲ್ಲ ಜನರಿಗೆ ತಲಪುವ ಎಲ್ಲ ವ್ಯವಸ್ಥೆ ಅದರೊಳಗಿದೆ. ಹಾಗಾಗಿಯೇ ಕುರಿ ಕಾಯುವ ಹನುಮಂತ ಇಂದು ಸಂಗೀತಗಾರನಾಗಿ ನಮ್ಮ ಮುಂದೆ ನಿಂತಿರುವ ಈತನಿಗೆ ಕಂಠ ದೇವರು ಕೊಟ್ಟ ವರವಾಗಿದೆ.

ಎಷ್ಟೋ ಸಲ ತಂದೆ–ತಾಯಿಗಳು ತಮ್ಮ ಮಕ್ಕಳನ್ನು ಒಳ್ಳೆಯ ಸಂಗೀತ ಶಾಲೆಗಳಿಗೆ ಕಳಿಸುತ್ತಾರೆ. ನಮ್ಮ ಮಕ್ಕಳು ಸಂಗೀತವನ್ನು ತಿಳಿದುಕೊಳ್ಳಲಿ ಎಂಬ ಕಾರಣಕ್ಕೆ, ಆದರೆ ಈ ಹನುಮಂತನಿಗೆ ಯಾವುದೇ ರೀತಿಯಲ್ಲಿ ಗುರುಗಳು ಇಲ್ಲ. ಸರಿಯಾದ ವ್ಯವಸ್ಥೆಯನ್ನು ಕಾಣದ ಈತ ಇಂದು ತನ್ನ ಸ್ವ–ಪ್ರಯತ್ನದ ಮೂಲಕ ಹಾಡುವುದನ್ನು ಕಲಿತು ಇಷ್ಟೊಂದು ಸಾಧನೆ ಮಾಡಿದ್ದಾನೆ. ಈತ ಹಾಡಿದ ಹಾಡುಗಳನ್ನು ಇಲ್ಲಿ ನೋಡಬಹುದು.

**ಬಡತನ – ಹೆಣ್ಣು – ಮನೆ :**

ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು
ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು

ಹಡೆದ ತಪ್ಪಿಗಾಗಿ ತಂದೆ
ಹಡೆದ ತಪ್ಪಿಗಾಗಿ ತಾಯಿ
ಕಣ್ಣೀರ ಸುರಿಸಬಾರದು...
ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು
ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು...
ಬಡವನ ಮಗಳಾದರೂ
ಕಪ್ಪಾಗಿರಬಾರದು
ಬಡವನ ಮಗಳಾದರೂ
ಕಪ್ಪಾಗಿರಬಾರದು...
ಹೆಣ್ಣು ಹಡೆದ ತಾಯಿ–ತಂದೆಗೆ
ಎಂದು ಬೈಯಬಾರದೂ
ಹಣದಾಸೆಯ ಗುಣದವನಾ
ಹಣದಾಸೆಯ ಗುಣದವನಾ
ಹೆಂಡತಿಯಾಗ ಬಾರದೂ
ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು
ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು...
ಕರುಣೆ ಇಲ್ಲದ ಅತ್ತೆಯ ಮನೆಯ
ಸೊಸೆಯಾಗ ಬಾರದೂ
ಕರುಣೆ ಇಲ್ಲದ ಅತ್ತೆಯ ಮನೆಯ
ಸೊಸೆಯಾಗ ಬಾರದೂ
ಅಪ್ಪಿಕೊಂಡು ನಡೆಯುವ
ಅತ್ತೆಯ ಸೇವೆ ಮರಿಯ ಬಾರದೂ...
ಹಡೆದ ತಾಯಿ–ತಂದೆಗೆ
ಹಡೆದ ತಾಯಿ–ತಂದೆಗೆ
ಮಾತು....ತರಬಾರದು
ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು

ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು...
"ಹೆಣ್ಣು" "ಹೊನ್ನು" "ಮಣ್ಣು" ಒಂದೆ
ಎಂದು ಜಗವು ಕೂಗುವುದು
"ಹೆಣ್ಣು" "ಹೊನ್ನು" "ಮಣ್ಣು" ಒಂದೆ
ಎಂದು ಜಗವು ಕೂಗುವುದು
ಈ ಲೋಕದಲ್ಲಿ ನಮಗೆ
ಭಾಗ್ಯ ಎಂದು ದೊರಕುವುದು
ಸಾಕು ಈ ಲೋಕದ ಸಂಘ
ಸಾಕು ಈ ಲೋಕದ ಸಂಘ
ಮರಳಿ ಹುಟ್ಟ ಬಾರದೂ...
ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು.
ಹಡೆದ ತಪ್ಪಿಗಾಗಿ ತಂದೆ
ಹಡೆದ ತಪ್ಪಿಗಾಗಿ ತಾಯಿ
ಕಣ್ಣಿರ ಸುರಿಸಬಾರದೂ...
ಬಡತನದ ಮನಿಯೊಳಗ
ಹೆಣ್ಣು ಹುಟ್ಟಬಾರದು.[೨೨]

**ಸಾಹಿತ್ಯ : ಬಸವರಾಜ ನರೇಂದ್ರ**

ಹೆಣ್ಣನ್ನು ಲಕ್ಷ್ಮೀಗೆ ಹೋಲಿಕೆ ಮಾಡುವ ಸಮಾಜ, ಹಾಗೆಯೇ ತಾಯಿಯಾಗಿ, ತಂಗಿಯಾಗಿ, ಅಕ್ಕರೆ ತೋರಿಸುವ ಅಕ್ಕನಾಗಿ, ಹೆಂಡತಿಯಾಗಿ, ಮಗಳಾಗಿ ಹೀಗೆ ಹಲವಾರು ಬಗೆಗಳಲ್ಲಿ ಕಾಣಿಸಿಕೊಳ್ಳುವ ಹೆಣ್ಣು ಈ ಪುರುಷ ಪ್ರಧಾನ ರಾಷ್ಟ್ರದಲ್ಲಿ ಒಂದೊಂದು ಸಂದರ್ಭದಲ್ಲಿ ಶೋಷಣೆಗೆ ಒಳಗಾಗುತ್ತಿರುವುದನ್ನು ಕಾಣುತ್ತೇವೆ. ಹೀಗೆ ಹೆಣ್ಣು ಹುಟ್ಟಿದ ಸಂದರ್ಭವನ್ನು ವಿವರಿಸುತ್ತ ಮತ್ತು ಆ ಸಂದರ್ಭದಲ್ಲಿ ದು:ಖಪಡುವ ತಂದೆ-ತಾಯಿ ಕಣ್ಣೀರನ್ನು ಹಾಕಬಾರದೆಂಬ ಸಂದೇಶವನ್ನು ಈ ಗೀತೆ ಪ್ರಸ್ತುತಪಡಿಸುತ್ತದೆ.

ಹೆಣ್ಣು ಸಮಾಜದ ಕಣ್ಣು ಎನ್ನುತ್ತೇವೆ. ಬಡತನದಲ್ಲಿ ಹುಟ್ಟಿದ ಹೆಣ್ಣಿಗೆ ಯಾವ ರೀತಿ ತೊಂದರೆಗಳಿರುತ್ತವೆ ಎಂಬುದನ್ನು ಹನುಮಂತ ಹಾಗೂ ಆತನ ಸಹೋದರಿ ಕಮಲಾ ಈ ಹಾಡಿನ ಮೂಲಕ ತಿಳಿಸಿಕೊಟ್ಟಿದ್ದಾರೆ.

ಕೇಳ ಜಾಣ ಶಿವ ಧ್ಯಾನ ಮಾಡಣ್ಣ
ನಿನ್ನ ಒಳಗ ನೀನು ತಿಳಿದು ನೋಡಣ್ಣ
ನಿನ್ನ ಒಳಗ ನೀನು, ತಿಳಿದು ನೋಡಣ್ಣ

ಕಾಶಿ ಯಾತ್ರೆಯ ಚೆನ್ನಾಗಿ ಮಾಡೋ
ಕಾಶಿ ಯಾತ್ರೆಯ ಚೆನ್ನಾಗಿ ಮಾಡೋ
ಹಸಿದು ಬಂದವರಿಗೆ ಅನ್ನವ ನೀಡೋ
ದಾನ ಧರ್ಮವ ನಿತ್ಯದಿ ಮಾಡಣ್ಣ
ನಿನ್ನ ಒಳಗ ನೀನು ತಿಳಿದು ನೋಡಣ್ಣ...
ಸ್ವರ್ಗವ ಸುಟ್ಟು ಬೂದಿಯ ಮಾಡೋ
ಸ್ವರ್ಗವ ಸುಟ್ಟು ಬೂದಿಯ ಮಾಡೋ
ಗರ್ವವೆಂಬುವ ಹರಣ ಮಾಡೋ
ಸಿಟ್ಟು ಬಂದಾಗ ನಿಧಾನ ಮಾಡಣ್ಣ
ನಿನ್ನ ಒಳಗ ನೀನು ತಿಳದು ನೋಡಣ್ಣ...
ಕೇಳ ಜಾಣ ಶಿವ ಧ್ಯಾನ ಮಾಡಣ್ಣ
ನಿನ್ನ ಒಳಗ ನೀನು ತಿಳಿದು ನೋಡಣ್ಣ.[೨೩]

ಅಂದು ವಚನಗಳಲ್ಲಿ ಕಾಣಿಸಿಕೊಂಡ ವಿಷಯ ಇಂದು ಈ ಹಾಡನ್ನು ಹಾಡುವುದರ ಮೂಲಕ ಹನುಮಂತ ಮನುಷ್ಯ ಜೀವನ ಹೇಗೆ ರೂಪಿಸಿಕೊಳ್ಳಬೇಕೆಂಬುದನ್ನು ತಿಳಿಸಿದ್ದಾನೆ. ಪ್ರಾರಂಭದಲ್ಲಿ ಈ ಹಾಡನ್ನು ಹಾಡುವುದರ ಮೂಲಕ ಎಲ್ಲರ ಗಮನ ಸೆಳೆದುಕೊಂಡ ಹನುಮಂತ ತನ್ನಲ್ಲಿರುವ ಸಂಗೀತ, ಕಂಚಿನ ಕಂಠ, ಮುಗ್ಧ ಮನಸ್ಸಿನಿಂದ ಏಳು ಕೋಟಿ ಕನ್ನಡಿಗರ ಮನಸ್ಸನ್ನು ಗೆಲ್ಲುವ ಮೂಲಕ ಇಂದು ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾಗಿದ್ದಾನೆ.

**ನಿಂಗಪ್ಪ ಗುಡ್ಡದ**

ಒಬ್ಬ ವ್ಯಕ್ತಿಯೂ ಸಾಮಾಜಿಕ ಜಾಲತಾಣಕ್ಕೆ ಪ್ರವೇಶಿಸಿದರೆ ಸಾಕು, ಆತ ಹೇಗೆ ಜನಪ್ರಿಯತೆ ಪಡೆಯುತ್ತಾನೆ ಎಂಬುದನ್ನು ನಿಂಗಪ್ಪ ಗುಡ್ಡದ ತೋರಿಸಿಕೊಟ್ಟಿದ್ದಾರೆ. ಇವರು ಜನಪದ ಹಾಡುಗಳನ್ನು ಹಾಡುವ ಮುಖಾಂತರ, ಆ ಹಾಡುಗಳು ಸಾಮಾಜಿಕ ಜಾಲತಾಣಗಳಲ್ಲಿ ಒಂದಾದ ಫೇಸ್‌ಬುಕ್‌ನಲ್ಲಿ ಬಿತ್ತರಗೊಂಡು ಜನಪ್ರಿಯತೆಗೆ ಕಾರಣವಾಗಿವೆ. ಇವರು ಓದಿದ್ದು ಕೇವಲ ಮೂರನೇ ತರಗತಿ ಆದರೂ ಸಹ ಸಂಗೀತ ಇವರಿಗೆ ಬಳುವಳಿಯಾಗಿ ಬಂದದ್ದು. ಕಳೆದ ೧೮ ವರ್ಷಗಳಿಂದ ಜನಪದ ಗೀತೆಗಳ ರಚನೆ, ಗಾಯನ ಮಾಡಿಕೊಂಡು ಬಂದ ನಿಂಗಪ್ಪ ಗುಡ್ಡದ ಅವರಿಗೆ ಇಂದು ಫೇಸ್‌ಬುಕ್ ಜಾಲತಾಣ ಜನಪ್ರಿಯತೆಯನ್ನು ತಂದುಕೊಟ್ಟಿದೆ.

ಮೊದಲು ಇವರ ಹಾಡುಗಳನ್ನು ಕೇಳಿದ ಸ್ನೇಹಿತರು, ಆ ಹಾಡುಗಳನ್ನು ಫೇಸ್‌ಬುಕ್‌ಗೆ ಹಾಕಿ, ಆ ಹಾಡುಗಳನ್ನು ಸುಮಾರು ತೊಂಬತ್ತುಮೂರು ಸಾವಿರ ಜನರು ನಾಲ್ಕೈದು ದಿನಗಳಲ್ಲಿ ವೀಕ್ಷಿಸಿದ್ದಾರೆ. ಅಲ್ಲದೇ ಇಪ್ಪತ್ತೊಂಬತ್ತು ಸಾವಿರ ಜನರು ಲೈಕ್

ಮಾಡಿದ್ದಾರೆ. ನಾಲ್ಕಸಾವಿರದ ಎಂಟನೂರು ಜನ ಶೇರ್ ಮಾಡಿದ್ದಾರೆ. ಹದಿನಾರನೂರು ಜನರು ಕಾಮೆಂಟ್ ಮೂಲಕ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ. ಇಂದು ಇವರ ಹಾಡುಗಳು ಯುಟ್ಯೂಬ್‌ನಲ್ಲೂ ಸಹ ವೀಕ್ಷಿಸಬಹುದು. ಈ ರೀತಿಯಾಗಿ ಜನಪ್ರಿಯತೆ ಪಡೆದ ನಿಂಗಪ್ಪ ಗುಡ್ಡದ ಮೂಲತಃ ಗದಗ ಜಿಲ್ಲೆ ಮುಂಡರಗಿ ತಾಲೂಕಿನ ಕಪ್ಪತಗುಡ್ಡ ತಪ್ಪಲಿನ ಡೋಣಿ ಗ್ರಾಮದ ಕುರಿ ಕಾಯುವ ಯುವಕ. ಮೊದಲು ನಾಗಾವಿ ಗ್ರಾಮದ ಗವಿಯಪ್ಪ ಕುರಿ ಅವರ ಹತ್ತಿರ ಕುರಿ ಕಾಯುವ ಕೆಲಸಕ್ಕಿದ್ದಾಗ ಗವಿಯಪ್ಪ ಕುರಿ ಹಾಡುತ್ತಿದ್ದ ಗೀತೆಗಳಿಂದ ಪ್ರಭಾವಿತರಾಗಿ ಹಾಡುವುದನ್ನು ರೂಢಿಸಿಕೊಂಡರು. ಮುಂದೆ ಸ್ವತಃ ಗೀತೆಗಳನ್ನು ರಚಿಸಿ ಹಾಡುವುದನ್ನು ಕಲಿತು ನಂತರದಲ್ಲಿ ಬೇರೆ ಬೇರೆ ಜನಪದ ಕವಿಗಳು ರಚಿಸಿದ ಗೀತೆಗಳನ್ನು ಹಾಡಲು ಪ್ರಾರಂಭಿಸಿದರು. ಸುಮಾರು ಮೂವತ್ತನೇ ವಯಸ್ಸಿನ ಇವರು ತಮ್ಮ ಹನ್ನೆರಡನೆಯ ವಯಸ್ಸಿನಿಂದಲೇ ಜನಪದ ಗೀತೆಗಳನ್ನು ರಚಿಸಿ ಹಾಡುವುದನ್ನು ರೂಢಿಸಿಕೊಂಡವರು.

ಉತ್ತರ ಕರ್ನಾಟಕದಲ್ಲಿ ಸೋಬಾನೆ ಪದ, ದೊಡ್ಡಾಟ, ಭಜನಾ ಪದ ಹೀಗೆ ಹತ್ತು ಹಲವು ಬಗೆಯ ಕಲಾ ಪ್ರಕಾರಗಳು ಮರೆಯಾಗುವ ಆತಂಕದಲ್ಲಿವೆ. ಈ ನಿಟ್ಟಿನಲ್ಲಿ ನಮ್ಮ ಸಂಪ್ರದಾಯದ ಸೊಗಡನ್ನು ಉಳಿಸಬೇಕು ಎನ್ನುವ ಕಾಳಜಿ ನಿಂಗಪ್ಪರದು. ಇವರು ಅಂದಾಜು ಐನೂರು ಜನಪದ, ಸೋಬಾನೆ ಪದ, ಡೊಳ್ಳಿನ ಪದಗಳನ್ನು ರಚಿಸಿದ್ದಾರೆ. ಶಾಲೆಯ ಜ್ಞಾನ ಅಷ್ಟಾಗಿ ಗೊತ್ತಿರದಿದ್ದರೂ ಇವರು ಪದಗಳನ್ನು ಪೋಣಿಸಿದ ಪರಿ ನೋಡಿದರೆ ಎಂಥವರೂ ಮಂತ್ರ ಮುಗ್ಧರಾಗುತ್ತಾರೆ. ಇವರ ಒಂದು ಜನಪ್ರಿಯ ಹಾಡನ್ನು ಇಲ್ಲಿ ನೋಡಬಹುದು.

ಜಾತಿ ಜಾತಿ ಅಂತ ನೀವು ಜಗಳಕ ನಿಂತಿರಿ
ಜಾತಿಯೊಳಗೆ ನೀತಿಮಾರ್ಗ ಮರೆತುಬಿಟ್ಟಿರಿ
ವಡ್ಡರನ್ನ ಕರಿಸಿ ನೀವು ದೊಡ್ಡ ಗ್ವಾಡಿಕಟ್ಟಿಸಿರಿ
ಬಡಿಗ್ಯಾರನ್ನ ಕರಿಸಿ ನೀವು ಕಿಡಕಿ ಮಾಡಿಸಿರಿ
ಹುಂಚಿಕೊರವರ ಮಾಡಿದ ಚಾಪಿ ಮನಿಯಾಗ ಹಾಸಿರಿ
ನೀವು ಸುಣಗಾರೂ ಸುಟ್ಟಂತ ಸುಣ್ಣ ಮನಿಗಿ ಹಚ್ಚಿರಿ
ಜಾತಿ ಜಾತಿ ಅಂತ ನೀವು ಜಗಳಕ ನಿಂತಿರಿ
ಜಾತಿಯೊಳಗೆ ನೀತಿಮಾರ್ಗ ಮರೆತುಬಿಟ್ಟಿರಿ[೨೪]...

ಈ ಗೀತೆ ಇಂದು ಸಮಾಜದಲ್ಲಿರುವ ಜನ ಜಾತಿ ಜಾತಿ ಅಂತ ಅವರು ಬಡಿದಾಡುತ್ತಿರುವುದನ್ನು ಚಿತ್ರಿಸುತ್ತದೆ. ಇಂದು ಅಕ್ಷರಸ್ಥ ಸಮಾಜವು ಕೂಡ ಜಾತಿ ವಿಷಯದಲ್ಲಿ ಮೇಲು ಕೀಳು ಎಂಬ ತಾರತಮ್ಯವನ್ನು ಮಾಡುತ್ತಾ ಸಾಗುತ್ತಿದೆ. ಜಾತಿ ಬಗ್ಗೆ ತಿಳುವಳಿಕೆ ನೀಡುವ ಕೆಲಸವನ್ನು ನಿಂಗಪ್ಪ ಗುಡ್ಡದ ಅವರು ಈ ಹಾಡಿನ ಮೂಲಕ ಮಾಡಿದ್ದಾರೆ.

ಜನಪದ ಕಲಾವಿದ ನಿಂಗಪ್ಪ ಗುಡ್ಡದ ಅವರು ಇಂದು ಡೋಣಿ ಗ್ರಾಮ ಪಂಚಾಯತಿ ಸದಸ್ಯರಾಗಿದ್ದರೂ ಸಹ ಕುರಿ ಕಾಯುವ ಕಾಯಕ, ಜಮೀನು ಸಾಗುವಳಿ ಜೊತೆಗೆ ಜನಪದ ಗೀತೆಗಳನ್ನು ಹಾಡುವುದನ್ನು ನಿಲ್ಲಿಸದ ಶ್ರಮಜೀವಿ. ತಮ್ಮ ಹಾಡಿನ ಲೋಕದಲ್ಲೇ ಉಳುಮೆ ಮಾಡುವ ನಿಂಗಪ್ಪ ಗುಡ್ಡದ ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗಿದ್ದಾರೆ.

ಹೀಗೆ ನವಮೌಖಿಕತೆಯಲ್ಲಿ ಬರುವ ಹಾಡುಗಾರರ ಜೀವನ ಮತ್ತು ಅವರ ಜನಪದ ಸಾಹಿತ್ಯ ಕೃಷಿ ಮಾಡಿರುವುದನ್ನು ಕಾಣುತ್ತೇವೆ. ಇವರ ಹಾಡುಗಳು ಇಂದು ಕೇಳುವ ವರ್ಗಕ್ಕೆ ಯಾವ ರೀತಿಯ ಪರಿಣಾಮವನ್ನು ಬೀರುತ್ತಿವೆ ಎಂಬುದು ಸಹ ಇಲ್ಲಿ ಮುಖ್ಯವಾಗುತ್ತದೆ. ಇಲ್ಲಿ ನಾನು ಅಧ್ಯಯನ ಮಾಡಿರುವ ಎಲ್ಲ ಹಾಡುಗಾರರು ಜನಪ್ರಿಯತೆ ಪಡೆದದ್ದು, ಆಧುನಿಕ ಮಾಧ್ಯಮಗಳಲ್ಲಿ ಅವರ ಹಾಡುಗಳು ಬಿತ್ತರವಾದ ಮೇಲೆಯೇ ಎಂಬ ಮಾತನ್ನು ತಳ್ಳಿ ಹಾಕುವಂತಿಲ್ಲ.

ಇಂದು ಆಧುನಿಕ ಮಾಧ್ಯಮಗಳಿಂದ ಹೊಸ ಹೊಸ ಜನಪದ ಪ್ರತಿಭೆಗಳು ಪರಿಚಯವಾಗುತ್ತಿವೆ. ಜೋಗಿಲ ಸಿದ್ದರಾಜು, ಬಸವರಾಜ ಬಡಿಗೇರ, ಪ್ರಭಾವತಿ ಕಿರಣಗಿ, ನಿಡಗುಂದಿ ಕಲ್ಮೇಶ, ರವಿ ರಾಠೋಡ, ಧರು ಶಿವಣಗಿ, ಶ್ರೀಕಾಂತ ಬಿಲಕೇರಿ, ವೀರಯ್ಯಾ ಎಸ್ ಹೊಸಮನಿ, ಬಾಗೇಶ ಜಾದಗೌಡ, ಅಮೋಗ ಬಳ್ಳೂರ, ರವಿ ಜಂಬಗಿ, ಮಲ್ಲು ತೂರಿಬಿನವರ, ಹನಮಂತ ತೂರಿಬಿನವರ, ಗ್ಯೆಬು ಗಣಿ, ಪರಸು ಕೊಲುರ, ಉಮೇಶ ಕಾಳಗಿ, ಶ್ರೀ ಚನ್ನಬಸಯ್ಯ ಹಿರೇಮಠ, ಶ್ರೀಮತಿ ರಂಗಮ್ಮ ದೇವಿ ಹೀಗೆ ನೂರಾರು ಗಾಯಕರು ಯುಟ್ಯೂಬ್ ಮಾಧ್ಯಮದ ಮೂಲಕ ಜನಪ್ರಿಯತೆ ಪಡೆಯುತ್ತಿದ್ದಾರೆ. ಇದನ್ನು ನವಜನಪದದ ಮುನ್ನಡೆ ಎಂದೇ ಭಾವಿಸಬಹುದು.

**೫.೨ ನವಮೌಖಿಕ ಹಾಡುಗಳು**

ಇಂದು ಸಮೂಹ ಸಂವಹನ ಮಾಧ್ಯಮಗಳು ಹೆಚ್ಚು ಜನಪ್ರಿಯತೆ ಪಡೆಯುತ್ತಿವೆ. ಸಮಾಜದ ಸಂವಹನವೇ ಸಮೂಹ ಮಾಧ್ಯಮಗಳಿಂದ ಎನ್ನುವ ಮಟ್ಟಿಗೆ ಅದರ ಅವಲಂಬನೆಯಾಗಿದೆ. ಮೌಖಿಕ ಸಂವಹನವೇ ಇಂದು ಮಾಧ್ಯಮಗಳ ಮೂಲಕ ಪ್ರಸರಣವಾಗುತ್ತಿರುವುದರಿಂದ ಜನಪದ ಸಾಹಿತ್ಯವು ಬದಲಾವಣೆಯನ್ನು ಕಾಣುತ್ತಿದೆ. ಅದರ ಮುಂದುವರೆದ ಭಾಗವಾಗಿ ನವಮೌಖಿಕತೆ ಕಾಣುತ್ತದೆ. ಇಂದು ಜನಪದ ಸಾಹಿತ್ಯವನ್ನು ಧ್ವನಿಮುದ್ರಿತ, ಕ್ಯಾಸೆಟ್, ಸಿಡಿ, ಯುಟ್ಯೂಬ್ ಇವುಗಳ ಮೂಲಕ ಪ್ರಸಾರವಾಗುವ ಮೌಖಿಕತೆಗೆ ಸಂವಹನದ ಅಗಾಧ ಶಕ್ತಿಯಿದೆ ಎಂಬುದು ತಿಳಿಯುತ್ತದೆ. ಅದಕ್ಕಾಗಿಯೇ ಜನಪದ ಸಾಹಿತ್ಯ ಇಂದು ಬದಲಾದರೂ ಸಹ ತನ್ನ ಮೂಲ ಅಂಶಗಳನ್ನು ಉಳಿಸಿಕೊಂಡೆ ಬಂದಿರುವುದು. ಈ ಹಿನ್ನಲೆಯನ್ನು ಇಟ್ಟುಕೊಂಡು ಅಧ್ಯಯನಕ್ಕೆ ಸಂಬಂಧಿಸಿದಂತೆ ನವಮೌಖಿಕತೆಯಲ್ಲಿ ಬರುವ ಹಾಡುಗಾರರು ಎಂತಹ ಹಾಡುಗಳನ್ನು ಇಂದು ನವಮಾಧ್ಯಮದಲ್ಲಿ ಬಿತ್ತರಿಸುತ್ತಿದ್ದಾರೆ ಎಂಬುದನ್ನು ಹುಕ್ಕೇರಿ ಬಾಳಪ್ಪ, ಆಕಾಶ ಮನಗೂಳಿ,

ಶಬ್ಬೀರ ಡಾಂಗೆ, ಗುರುರಾಜ ಕೆಂಧೂಳಿ, ನಿಜಾಂ ಅಲ್ಲಾಖಾನ ಮುಂತಾದ ಹಾಡುಗಾರರ ಕೆಲವೊಂದು ಹಾಡುಗಳನ್ನು ಇಲ್ಲಿ ನೋಡಬಹುದಾಗಿದೆ.

**ಬುತ್ತಿ ತೊಗೊಂಡ ಹೋಗ್ತಿನಿ ಹೊಲಕ :**

ನಾ ಬರತೇನಿ ಹೊತ್ತ ಮುನಗುದಕ
ಬುತ್ತಿ ತೊಗೊಂಡ ಹೋಗ್ತಿನಿ ಹೊಲಕ...

ಹೊಳಿದಂಡಿ ಮ್ಯಾಲ ನಮ್ಮ ಹೊಲಾ
ಬೆಳದ ನಿಂತೈತಿ ಬಿಳಿ ಜ್ವಾಳ ನೆಲಾ
ತೆನಿಗಳು ಮುತ್ತಿನ ಗೊಂಚಲಾ
ಅದನೋಡಿ ನೋಡಿ ಹಿಗ್ಗಿ ಹಾಡುದಕ...

ದುಡಿಯು ಎತ್ತ ಎರಡ ಚೆನ್ನ ರನ್ನ
ದಿನ ತಿಂತಾವ ಹೊಡಿ ಹಸರನ್ನ
ಅವು ತಿಂದಷ್ಟು ಹೆಚ್ಚು ನಮಗನ್ನ
ನಾ ನೋಡತೇನಿ ಅವನ್ನ ಚಣಚಣಕ...

ದುಡಿದುಡಿದು ಹೊತ್ತಿದ್ದ ನನ್ನ ದೋರಿ
ನೋಡತಿರ್ತಾನ ನಾ ಬರುದಾರಿ
ನನ್ನ ಬುತ್ತೆಂದ್ರ ಅಂವಗ ಸಕ್ಕರಿ
ನಾ ನೀಡತನಿ ಮುಂದ ಕುಂತ ಉಣ್ಣಾಕ...

ಉದ್ರತೈತಿ ಹೊತ್ತತೈಮಾರ
ಆವಾದ ಬೆಳಸಿ ತಯ್ಯಾರ
ಕುಂತ ತಿಂತೇವು ನಾವು ಎದರ ಬದರಾ
ಎನರುಚಿಯವ್ವ ಬಿಳಿಜ್ವಾಳ ಫಲಕ
ಆಡತೀವಿ ಕೂಡಿ ಎನೂ ಮಾತಾ
ಮಾಡತೇವಿ ಬದುಕಿನಾ ಬೇತಾ

ಮಾಡತೇವಿ ಪ್ರೀತಿಯಿಂದ ಕುಂತಾ
ಬುತ್ತಿ ತೊಗೊಂಡ ಹೋಗ್ತಿನಿ ಹೊಲಕ.

**ಸಾಹಿತ್ಯ ಮತ್ತು ಗಾಯನ–ಹುಕ್ಕೇರಿ ಬಾಳಪ್ಪ**

ಉತ್ತರ ಕರ್ನಾಟಕದ ಪ್ರಸಿದ್ಧ ಜನಪದ ಹಾಡುಗಾರರಾದ ಹುಕ್ಕೇರಿ ಬಾಳಪ್ಪನವರು ಹಾಡಿದ ಈ ಗೀತೆಯು ಹಳ್ಳಿಯ ಪರಿಸರದ ಚಿತ್ರಣ ಹಾಗೂ ಬದುಕನ್ನು ಕಟ್ಟಿಕೊಳ್ಳುವ

ಪರಿಯನ್ನು ಒಳಗೊಂಡಿದೆ. ಜೀವನದಲ್ಲಿ ಕಾಯಕ, ಪ್ರಕೃತಿ, ಪ್ರೀತಿ ಇತ್ಯಾದಿಗಳು ಬೆರೆತರೆ ಬದುಕು ಸುಂದರ ಎಂಬುದನ್ನು ಈ ಗೀತೆ ತಿಳಿಸುತ್ತದೆ.

**ದುಡ್ಡು ದಾರಿ ಬಿಡಿಸೈತಿ :**

ದುಡ್ಡು ದಾರಿ ಬಿಡಿಸೈತಿ ಅಡ್ಡಹಾದಿ ಹಿಡಿಸೈತಿ
ಮನುಷನಲ್ಲಿ ಇರುವಂತಾ ಮನುಷ್ಯತ್ವ ಕೆಡಿಸೈತಿ...
ಮಾಡಬಾರದಂತಾ ಕೆಲಸ ದುಡ್ಡು ಮಾಡಾಕ ಹಚ್ಚೈತಿ
ದುಡ್ಡಿನಾಸೆಕಾಗಿ ಮನುಷ್ಯ ಬೇಕಾದ್ದ ಮಾಡತೈತಿ...
ದುಡ್ಡಿಗಾಗಿ ಮಾನವ ಜನ್ಮ ದೊಡ್ಡ ಕೆಲಸ ನಡೆಸೆತಿ
ಕೆಲವು ಜನ ದುಡ್ಡಿಗಾಗಿ ಹೆಂಡರ ಮಕ್ಕಳ ಮಾರೈತಿ...
ಹಣದಾಸೆಕ್ಕಾಗಿ ಮನುಷ್ಯ ಗುಣ ಕೆಡಸಿಕೊಂಡೈತಿ
ದುಡ್ಡು ಒಂದೆ ಇದ್ದರು ಸಾಕು ಬೇಕದ್ದ ನಡಿತೈತಿ...
ಕೊಲೆ ಸುಲಗಿ ದರೋಡಿ ಎಲ್ಲ ದುಡ್ಡು ಮಾಡಾಕ ಹಚ್ಚೈತಿ
ದುಡ್ಡಿಗಾಗಿ ಮಾನವ ಜನ್ಮ ನರಿಯಾಗಿ ಬಿಟ್ಟೈತಿ...
ದುಡ್ಡಿನಾಸೆಕಾಗಿ ಮನುಷ ಹೇಸಿಗೇನು ತಿಂತೈತಿ
ಕಲಿಯುಗದೊಳು ದುಡ್ಡು ನಾನೆ ದೊಡ್ಡದೆಂತೈತಿ...
ಎಂತೆಂಥ ಮನುಷ್ಯ ನಿರಲಿ ದುಡ್ಡು ಮುದ್ದಿ ಮಾಡೈತಿ
ತಾಂಬರದುಡ್ಡು ತಾಯಿ ಮಕ್ಕಳ ಪ್ರೀತಿ ಕೆಡಸಿ ಬಿಟ್ಟೈತಿ...
ಸತ್ಯ ಶಾಂತಿ ನೀತಿಯೆಲ್ಲ ದುಡ್ಡೆ ಕೆಡಸಿ ಬಿಟ್ಟೈತಿ
ಎಂತೆಂಥ ಶರಣರ ಮನಸ್ಸು ದುಡ್ಡು ಹಾಳು ಮಾಡೈತಿ...
ಮನಗೂಳಿ ಸೋಮೇಶ್ವರ ಮನಸ್ಸು ದುಡ್ಡಿನ ಮಹಿಮೆ ಬರದೈತಿ.

**ಸಾಹಿತ್ಯ ಮತ್ತು ಗಾಯನ–ಆಕಾಶ ಮನಗೂಳಿ**

ಆಕಾಶ ಮನಗೂಳಿ ಅವರು ಪ್ರಸ್ತುತ ಸಮಾಜದ ಸ್ಥಿತಿಯನ್ನು ಈ ಗೀತೆಯ ಮೂಲಕ ಬಿಂಬಿಸುತ್ತಾರೆ. ಹಣ, ವಸ್ತುಗಳನ್ನು ಬಳಸಬೇಕು, ಮನುಷ್ಯರನ್ನು ಪ್ರೀತಿಸಬೇಕು. ಆದರೆ ಇದು ವರ್ತಮಾನದಲ್ಲಿ ಹಾಗಾಗುತ್ತಿಲ್ಲ, ಬದಲಾಗಿ ಹಣವನ್ನು ಪ್ರೀತಿಸುತ್ತಿದ್ದಾರೆ, ಮನುಷ್ಯನನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇಂದು ಹಣದ ಮೇಲಿನ ಆಸೆಯಂತೂ ದುರಾಸೆಯಾಗಿ ಬೆಳೆದಿದೆ. ಹಣದ ಮೇಲಿನ ಈ ದುರಾಸೆಯಿಂದ ಮನುಷ್ಯ ತಪ್ಪುದಾರಿಗೆ ಹೋಗುತ್ತಿದ್ದಾನೆ. ಮಾಡಬಾರದ ಕೆಲಸಗಳನ್ನು ಮಾಡುತ್ತಿದ್ದಾನೆ ಎಂಬುದು ಈ ಗೀತೆಯಲ್ಲಿ ಚಿತ್ರಣಗೊಂಡಿದೆ.

**ಹೆಂಡತಿ ಮಾಡಿದ ಹಠಾ :**

ಹೆಂಡತಿ ಮಡಿದರ ಹಠಾ
ಗಂಡಸು ಮಾಡತಾನ ಚಟಾ

ಹೆಣ್ಣು ಮಕ್ಕಳ ನೀವು ಕಿವಿಗೊಟ್ಟು ಕೇಳಿರಿ
ಈ ಮಾತ ಐತಿ ಬಾಳ ದಿಟ
ಮನೆಯಲ್ಲಿ ತಿಂಡಿ ಊಟ ವ್ಯಾಳಕ ಸಿಗದ್ದಿದರೆ
ಗಂಡಸರಿಗೆ ಬೀಳತೈತಿ ಹೋಟಲ್ ಚಹಾ
ಮನೇಲಿ ಉಂಡಾಗ ಹೆಂಡ್ತಿಕೂಟ ಜಗಳ
ಹೋಟೆಲ್‌ದಾಗ ಉಂಡಿದ್ದು ನಾಲಗೆ ಚಟಾ
ಮನೆಯಲ್ಲಿ ಹೆಂಡತಿ ಸಿಡಿ ಮಿಡಿ ಮಾಡಿದರ
ಹೊರಗಿಂದ ಹೊರಗ ಗಂಡಸ ತಿರುಗೊ ಚಟ
ತಲಿಕೆಟ್ಟ ಉಡಾಳ ಹುಡುಗುರ ಸಹವಾಸ
ತಿನ್ನೊದು ಕುಡಿಯೊದ ಸೇದುದ ಚಟಾ
ಹೆಂಡ್ತಿ ಬಯಸಿ ಬಂದಾಗ ರಾತ್ರಿ ಸುಖ ನೀಡದಿದ್ರ
ಗಂಡಸರಿಗೆ ಬೀಳತೆತಿ ರಂಡ್ಯಾರ ಚಟ
ದುಡದ ದುಡ್ಡ ಹಿಂಗ ಚಟಕ ಹಾಳಾದರ
ಸಂಸಾರ ಆಗತೈತಿ ಗಾಳಿಪಟ
ಕೆಂಧೂಳಿ ಅನುಭವ ಕೇಳಿ ನಡೆಯಿರಿ
ಹೆಂಗಸರಿಗೆ ಬರಲಿ ಬುದ್ಧಿ ಸಹಕಾರ ಚಟ.

**ಸಾಹಿತ್ಯ ಮತ್ತು ಗಾಯನ– ಗುರುರಾಜ ಕೆಂಧೂಳಿ**

ಕೆಂಧೂಳಿಯವರು ಈ ಗೀತೆಯ ಮೂಲಕ ಸತಿಯಾದವಳು ಪತಿಯೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಮಾರ್ಮಿಕವಾಗಿ ತಿಳಿಸಿದ್ದಾರೆ. ಹೆಂಡತಿಯಾದವಳು ಹಠಮಾರಿಯಾಗದೆ ತನ್ನ ಗಂಡನೊಂದಿಗೆ ಹೊಂದಿಕೊಂಡು ಹೋಗಬೇಕು. ಇಲ್ಲದಿದ್ದರೆ ಪುರುಷರು ಚಟಗಳ ದಾಸರಾಗಿ ಸಾವನ್ನು ಸನ್ನಿಹಿತ ಮಾಡಿಕೊಳ್ಳುತ್ತಾರೆ. ಜೀವನವನ್ನು ಸುಂದರವಾಗಿ ಕಳೆಯಬೇಕಾದರೆ ಹೆಂಡತಿಯ ಪಾತ್ರ ಎಷ್ಟು ಮಹತ್ವದ್ದು ಎಂಬುದು ಈ ಗೀತೆಯಲ್ಲಿ ಮೂಡಿಬಂದಿದೆ.

**ಎಷ್ಟು ದಿನಾ ಇಲ್ಲೆ ಇರತಿ :**

ಎಷ್ಟು ದಿನಾ ಇಲ್ಲೆ ಇರತಿ
ನಿನ್ನ ಮನಿ ಬ್ಯಾರೈತಿ ॥ಪ॥

ಬಣ್ಣದ ಮನಿಯಾ ಕಟ್ಟಿಸಿದಿ ಜೋರ
ಸ್ಥಿರವಾಗಿ ನಿನಗ ಉಳಿಲಿಲ್ಲ ಪೂರಾ
ಹೆಂಡತಿ ಮಕ್ಕಳಿಗೆ ನನ್ನವರೆಂದೆಪ್ಪ
ನೀನು ಹೋಗುವಾಗ ಯಾರೂ ಇಲ್ಲಪ್ಪ ॥

ಹೊಂಚುಹಾಕಿ ನೀ ಲಂಚಾವ ತಿಂತಿ
ಲಾಭಕ್ಕಾಗಿ ನೀ ಲಡಾಯಿ ಮಾಡತಿ
ಅಣ್ಣ ತಮ್ಮರಿಗೆ ಮೋಸಮಾಡತಿ
ಸತ್ತಮ್ಯಾಲ ಯಾರ ಹೆಗಲಮ್ಯಾಲ ಹೋಗತಿ ॥

ಬಿಕ್ಷುಕ ಬಂದರ ದಾನ ಇಲ್ಲಂತಿ
ಊರತುಂಬ ಬಡ್ಡಿಸಾಲ ಹಾಕತಿ
ಗಳಸಿ ಗಳಸಿ ಮನ್ಯಾಗ ಇಡತಿ
ನಿ ಸತ್ತಮ್ಯಾಲ ಅದನ ಯಾರಿಗೆ ಕೊಡತಿ ॥

ಮಾನವ ಜನ್ಮ ಶ್ರೇಷ್ಠ ಐತಿ
ತಿಳಕೊಂಡ ನಡದರ ನಿನಗೊಲಿತೈತಿ
ದೇವರ ತುಕಾರಾಮನ ಕವನವ ಕೇಳಿ
ಮುಕ್ತಿ ಕಾಣಬೇಕು ನೀ ಮನುಜಾ॥.

**ಸಾಹಿತ್ಯ ಮತ್ತು ಗಾಯನ–ಆಕಾಶ ಮನಗೂಳಿ**

ಜೀವನವೆಂಬ ಚದುರಂಗದಾಟದಲ್ಲಿ ನಾವು ಅನುಭವಿಸುವ ಕಷ್ಟ ಸುಖಗಳು ಹಾಗೂ ಸ್ವಾರ್ಥಕ್ಕಾಗಿ ಮಾಡುವ ಭ್ರಷ್ಟಾಚಾರ, ಅಣ್ಣ–ತಮ್ಮರಿಗೆ ಮಾಡುವ ಮೋಸ ಹೀಗೆ ಹಲವಾರು ರೂಪಕಗಳ ಮೂಲಕ ಮನುಷ್ಯನ ಜೀವನ ಶೈಲಿ ಅಧೋಗತಿಗೆ ಹೋಗುತ್ತದೆ. ಅದಕ್ಕಾಗಿ ತಿಳುವಳಿಕೆಯ ಮಾತಿನ ರೂಪದಲ್ಲಿ ಈ ಪದ್ಯ ಮೂಡಿಬಂದಿದೆ.

ಭಜನಾ ಪದಕಾರರಾದ ಆಕಾಶ ಮನಗೂಳಿ ಅವರು ಪ್ರಸ್ತುತ ಸಮಾಜದಲ್ಲಿ ಜನರು ಯಾವ ರೀತಿ ಬದುಕುತ್ತಿದ್ದಾರೆ. 'ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ' ಎಂಬ ಮಾತಿನಂತೆ ನಾವು ಯಾರು ಈ ಭೂಮಿ ಮೇಲೆ ಶಾಶ್ವತವಲ್ಲ ಎಂಬುದನ್ನು ತಿಳಿದರೂ ಸಹ ಜನರು ತಪ್ಪುದಾರಿಯಲ್ಲಿ ಸಾಗುತ್ತಿದ್ದಾರೆ. ಅಂತವರಿಗೆ ಒಂದು ತಿಳುವಳಿಗೆ ನೀಡುವ ಗೀತೆ ಇದಾಗಿದೆ.

**ಎರೆನಾಡ ಕನ್ಯಾ ನೋಡಬೇಕ :**

ಎರಿ ನಾಡ ಕನ್ಯಾ ನೋಡ ಬೇಕ
ಧಾರವಾಡ ಪೇಡೆತಿಂದಂಗಿರಬೇಕ
ಮಸ್ತ ಇಳಕಲ್ಲ ಸಿರಿಯ ತೊಡಬೇಕ
ಸಿಸ್ತ ಸುರೇಬಾನ ಆ ಕುಬಸ ತೊಡಬೇಕ
ಏ ಈ ಕನಸ ಕೈಗೂಡಬೇಕ॥
ಮೂಡಲಗಿ ಹೋರಿಯ ಹೂಡಬೇಕ
ನಾ ಮಣ್ಣಿನ ಮಗನಾಗಿ ದುಡಿಯಬೇಕ

ಗಂಡು ಮೆಟ್ಟಿದ ನಾಡು ಕಾಣಬೇಕ
ಆ ಬೆಳೆವಲ ಭೂಮ್ಯಾಗ ಬಾಳಬೇಕ
ಕಾಯಕವೇ ಕೈಲಾಸ ಎನ್ನುವ ವಾಣಿಯ ತಿಳಿಬೇಕ
ಮಣ್ಣಲ್ಲಿ ಮಣ್ಣಾಗಿ ದುಡಿಯೊವರೆಗೆ ಬಾಳಿಗೆ ಸಿಗಬೇಕ
ಅಮ್ಮಾ ಭೀಮಮ್ಮಾ ಸವದತ್ತಿ ಯಲ್ಲಮ್ಮಾ
ಅಮ್ಮಾ ದಾನಮ್ಮಾ ಗತ್ತರಗಿ ಭಾಗಮ್ಮಾ
ಹರಕೆ ಹೊತ್ತು ಬಂದೆನಮ್ಮ ತಾಯೇ
ಕನ್ಯಾ ನೋಡಿ ಲಗು ಮಾಡಿ ಆಗಬೇಕ
ಆ ಬಾಸಿಂಗ ಬಲಕೊಡಿ ಬರಬೇಕ
ಮನಿಮಂದಿ ಹುಡಗಿನ ಒಪ್ಪಬೇಕ
ಆ ಹುಡಗಿ ಜೋಡಿ ಸುರಗಿ ನಾ ಸುತ್ತಬೇಕ
ಹಣೆಯಕ್ಕಿ ಕೂಡಿದರ ಹಡೆದವರ್‍ಯಾಕ ಅನುವದು ಬಿಡಬೇಕ
ಮೆಚ್ಚಿದ ಹುಡಗಿ ನನ ಹಡೆದವರ ಅರಿತು ನಡಿಯಬೇಕ
ಇಚ್ಚೆ ಅರಿವಾ ಸತಿಯಾಗಿ ಬರಬೇಕ
ಸ್ವರ್ಗಾಧರೆಯಲ್ಲಿ ನಾ ಕಾಣಬೇಕ
ಕನ್ಯಾ ಇದ್ದರೆ ಹೇಳಿ ಕಳುಹಬೇಕ.

**ಸಾಹಿತ್ಯ ಮತ್ತು ಗಾಯನ–ಶಬ್ಬೀರ ಡಾಂಗೆ**

ಶಬ್ಬೀರ ಡಾಂಗೆ ಅವರ ಎರೆನಾಡ ಕನ್ಯಾ ನೋಡಬೇಕ ಎಂಬ ಈ ಗೀತೆಯು ಉತ್ತರ ಕರ್ನಾಟಕದ ಪ್ರಾದೇಶಿಕತೆಯನ್ನು ಹಿನ್ನಲೆಯಾಗಿಟ್ಟುಕೊಂಡು ಜೀವನ ಸಂಗಾತಿ ಹೇಗಿರಬೇಕು ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ. ಅಲ್ಲದೇ ಇಂದಿನ ಕಾಲದಲ್ಲಿ ಒಳ್ಳೆಯ ಹೆಣ್ಣು ಸಿಗುವುದು ದುಸ್ತರವಾಗಿದೆ ಎಂಬ ಸಂಗತಿ ಸಾಂಕೇತಿಕವಾಗಿ ಈ ಗೀತೆಯಲ್ಲಿ ಮೂಡಿಬಂದಿದೆ.

**ನಾಜೂಕ ನಾರಿ ನನ್ನಗಿಣಿ :**

ನಾಜೂಕ ನಾರಿ ನನ್ನಗಿಣಿ
ಬಾಗಿಲ ತಗಿ ಮಣಿ
ನೀ ಕೊಟ್ಟ ವ್ಯಾಳೆಗೆ ಭೇಟಿಗೆ ಬಂದೇನಿ
ತಂದೇನಿ ಸಿಹಿಮುತ್ತ ಹನಿ. ॥ಪ॥
ಅಂದು ನೀ ಕೊಟ್ಟಿದ್ದು ಉಡಿಯಾಗ ಐತಿ
ಪ್ರೀತಿಯ ಮಾತು ಮನಸ ತುಂಬೈತಿ
ಬೇಡಿದ ಒಡುವೆ ನೆನಪು ತಂದೈತಿ
ಬಾಗಿಲ ತಗಿ ಮುಖ ನೋಡುವೆ ರಮಣಿ ॥೧॥

ಹೆತ್ತವರಿಗೆಲ್ಲ ಇದನ ಹೇಳೇನಿ
ನಾನೊಂದ ಹುಡಗಿ ಪಸಂದ ಮಾಡೇನಿ
ಆದರೆ ನಿನ್ನನ್ನೆ ಮದುವೆಯಾಗೇನಿ
ನಿನ್ನ ಕೊಳ್ಳಿಗೆ ತಾಳಿ ಕಟತಿನಿ ಜಾಣೆ ॥೨॥
ಮಹಡಿಯ ಮನಿ ಒಂದ ಕಟ್ಟಿಸಿ ಕೊಡುವೆ
ಕೈಯಲ್ಲಿ ಕೆಲಸಕ್ಕೆ ಆಳುಗಳ ಇಡುವೆ
ತಿರುಗಾಕ ಮಾರುತಿ ಕಾರನ್ನು ಕೊಡುವೆ
ಬಾಗಿಲ ತಗಿ ನಿನ್ನ ಬೇಗ ನೋಡತಿನಿ ॥೩॥
ಆಯ್ಯೊ ನೀ ಬಾಗಿಲ ಯಾಕಾರ ತಗದೆ
ಇವನಾರು ಇವನ ಜೊತೆ ಸಂಗ್ಯಾಕ ಮಾಡಿದೆ
ಬೆಳ್ಳಗೆ ಕಂಡದ್ದು ಹಾಲೆಂದು ತಿಳದೆ.
ಕೆಂಧೂಳಿಗೆ ನಾ ಹಾಡ ಬರೆಯಂದೆ.

**ಸಾಹಿತ್ಯ ಮತ್ತು ಗಾಯನ– ಗುರುರಾಜ ಕೆಂಧೂಳಿ**

ಪ್ರೀತಿಸುವ ಯುವ ಮನಸ್ಸು ತನ್ನ ಪ್ರಿಯತಮೆಯ ಸಲುವಾಗಿ ತನ್ನ ಬಂಧು ಬಳಗದವರನ್ನು ಮರೆತು, ಆ ಪ್ರೀತಿಸುವ ಪ್ರಿಯತಮೆಗೆ ಕಾಣಿಕೆಯನ್ನು ಕೊಡುವ ಹಾಗೂ ತನ್ನ ಪ್ರೇಯಸಿಗೆ ಯಾವುದೇ ರೀತಿಯ ಕಷ್ಟಗಳನ್ನು ಬರದ ಹಾಗೆ ನೋಡಿಕೊಳ್ಳುವ ಕಲ್ಪನೆಗಳನ್ನು, ಬೇರೆ ಬೇರೆ ರೂಪಕಗಳ ಮೂಲಕ ಈ ಕವನದಲ್ಲಿ ಚಿತ್ರಿಸಲಾಗಿದೆ.

ಗುರುರಾಜ ಕೆಂಧೂಳಿ ಅವರು ಗಂಡು–ಹೆಣ್ಣು ಪರಸ್ಪರ ಪ್ರೀತಿ ಎಂಬ ಜಾಲದಲ್ಲಿ ಹೇಗೆ ಬೀಳುತ್ತಾರೆ ಎಂಬುದನ್ನು ಮಾರ್ಮಿಕವಾಗಿ ಇಲ್ಲಿ ತೋರಿಸಿಕೊಟ್ಟಿದ್ದಾರೆ. ಹೆಣ್ಣು ಆಸೆಯ ಬೆನ್ನುಹತ್ತಿದರೆ ಏನಾಗುತ್ತದೆ ಎಂಬುದನ್ನು ಉದಾಹರಣೆ ಸಮೇತ ಚಿತ್ರಿಸಿದ್ದಾರೆ.

**ನನ್ನ ನಿನ್ನ ಪ್ರೇಮದ ಮಾತು :**

ನನ್ನ ನಿನ್ನ ಪ್ರೇಮದ ಮಾತು
ಮನದಲ್ಲಿ ಮುಚ್ಚಿ ಇಡಬೇಕು
ರಾತ್ರಿ ನಾ ನಿನ್ನ ಭೇಟಿಗೆ ಬರತುನು
ಬಾಗಿಲ ತೆರೆದು ಬಿಡಬೇಕು।
ನಿನ್ನ ಗೆಳತಿ ಕೈಯಾಗ ಚೀಟಿಕೊಟ್ಟೆನಿ
ಸರಿಯಾಗಿ ಓದಿಕೋ ನನ್ನ ಮನಸಿನ ಮಾತ
ಅದರಾಗ ಬರದೆನು ಮನಸಿಲೆ ತಿಳಕೊ
ಹರದ ಚೀಟಿ ಕಸಾ ಮಾಡಿ ತಿಪ್ಯಾಗ ಚೆಲ್ಲಬ್ಯಾಡ
ನನ್ನ ಮನಸಿನ ತುಕಡಿ ಮಾಡಿದಾಂಗ।

ಅನುಕೂಲ ಸಿಗದಿದ್ದರ ಕೊಡಾ ಹೊರಸಾಕ ಕರಿಬೇಕು
ಕೊಡಾ ಹೊರಸುವ ನೆವದಿಂದ ನಾ ಕಣ್ಣ ತುಂಬಾ ನೋಡಬೇಕು.
ಕಣ್ಣು ಮುಚ್ಚಿ ಬೆಕ್ಕ ಹಾಲ ಕುಡದಂಗ ಆಗೊದು ನೋಡ
ಈ ಚೀಟಿ ನಮ್ಮ ಪ್ರೇಮದ ಗುರ್ತ ತಿಳಿಬೇಕ।
ರಾತ್ರಿ ನಾನಿನ್ನ...
ನೀರಿಗೆ ಹೋಗುವಾಗ ನಮ್ಮ ಮನಿಮುಂದ ಹಾಯಿಬೇಕು
ಏನ ವಿಚಾರವೆಂಬುವದು ಸನ್ನಿಲೆ ತಿಳಿಸಬೇಕು
ಅನುಕೂಲ ಆಗದಿದ್ದರ ಕೊಡ ಹೊರಸಾಕ ಕರಿಯಬೇಕು
ನೆವದಿಂದ ನಾನು ಕಣ್ಣತುಂಬ ನೋಡಬೇಕು।
ಕಣ್ಣಮುಚ್ಚಿ ಬೆಕ್ಕ ಹಾಲು ಕುಡಿದಂಗ ಇರಬೇಕು
ಗೊಂಜಾಳ ರೊಟ್ಟಿ ನೀ ಮಾಡು ನಾ ಭಡಂಗ ತರತುನ
ನಿಂಬೆ ಹಣ್ಣಿನ ಉಪ್ಪಿನ ಕಾಯಿ ತರತುನ
ನನಗ ಕಿಮಾಮ ಪಟ್ಟಿ ನಿನಗ ಮಸಾಲಾ ತರತುನ।
ಇಬ್ಬರು ಜೋಡಿಲೆ ಕುಂತ ನಾವು ಊಟಾ ಮಾಡೋನ
ಕಿಡಕಿ ಮುಚ್ಚಬ್ಯಾಡ ತಂಪ ಗಾಳಿ ಬರಬೇಕ
ರಾತ್ರಿ ನಾ......

**ಸಾಹಿತ್ಯ ಮತ್ತು ಗಾಯನ– ನಿಜಾಂ ಅಲ್ಲಾಖಾನ**

ನಿಜಾಂ ಅಲ್ಲಾಖಾನರವರ ಈ ಗೀತೆ ಪ್ರೀತಿಸುವ ಗಂಡು–ಹೆಣ್ಣಿನ ಮನಸ್ಸಿನ ಪ್ರೀತಿ ದ್ಯೋತಕ ಭಾವನೆಗಳನ್ನು ಬಿಚ್ಚಿಡುತ್ತದೆ. ಕದ್ದು ಮುಚ್ಚಿ ಪ್ರೀತಿಸುವ ಎರಡು ಮನಸ್ಸುಗಳು ತಮ್ಮ ಪ್ರೀತಿಯನ್ನು ಗಟ್ಟಿಯಾಗಿಸಿಕೊಳ್ಳುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಈ ಸಮಾಜದವರ ಮತ್ತು ಮನೆತನದವರ ಭಯದಲ್ಲಿರುವ ಹೆಣ್ಣು–ಗಂಡು ಬೇರೆ ರೂಪದಲ್ಲಿ ಪರಸ್ಪರ ಭೇಟಿಯಾಗೋಣ ಎಂಬ ಹಂಬಲವನ್ನು ಇಲ್ಲಿ ಕಾಣುತ್ತೇವೆ. ಇಲ್ಲಿ ಹಲವು ಸಮಯ ಸಂದರ್ಭಗಳ ರೂಪಕಗಳ ಮೂಲಕ ಕವಿ ಪ್ರೇಮ ಪ್ರಸಂಗವನ್ನು ವ್ಯಕ್ತಪಡಿಸಿದ್ದಾನೆ.

ನಿಜಾಂ ಅಲ್ಲಾಖಾನ ಅವರ ನನ್ನ ನಿನ್ನ ಪ್ರೇಮದ ಮಾತು ಎಂಬ ಈ ಗೀತೆಯು ಇಂದು ಯುವಜನಾಂಗದ ಮೇಲೆ ಸಾಕಷ್ಟು ಪರಿಣಾಮವನ್ನು ಬೀರಿದೆ. ಗಂಡು–ಹೆಣ್ಣು ಪ್ರೇಮದ ಕುರಿತಾದ ವಿಷಯಗಳನ್ನು ಒಳಗೊಂಡಿದೆ.

**ಅಬಬ... ಅಬ್ಬರದಾಗ :**

ಅಬಬ ಅಬ್ಬರದಾಗ
ಹಾಕಿದ ಕನಸಿನ ಚಪ್ಪರದಾಗ
ಹ್ಯಾಂಗ ಹೋಗತಾಳ ಸೆರಗಿನ ಗಾಳಿ ಹಬ್ಬಿಸಿ

ನಮ್ಮ ಹುಚ್ಚ ಹುಡುಗರು ನೋಡತಾರೋ
ಎದಿ ಉಬ್ಬಿಸಿ ಹಮ್ಮನ್ಯಾಗ ಹುಡುಗುರುಗೆಲ್ಲ।
ಹಣ್ಣುಕಾಯಿ ಮಾಡಕೊಂತ
ಸುಮ್ಮ ಸುಮ್ಮನ ನಗತಿರತಾಳೊ
ಹುಬ್ಬ ಹೊಳ್ಳಿಸಿ
ನಮ್ಮ ಹುಚ್ಚ ಹುಡಗ ನೋಡತಾನ
ಕಣ್ಣರಳಿಸಿ।
ಬೆನ್ನಿನ ಮ್ಯಾಲೆ ಉದ್ದ ಜಡಿ
ಹಾಂವಗಾರಾಟ ಆಡತೈತಿ
ಚನ್ನಿ ಹೋಗತಾಳ ಚಲುವಿನ ಹೊಸಾಗತ್ತೀಲೆ
ನಮ್ಮ ಹುಚ್ಚ ಹುಡುಗರು ನೋಡತಾರೆ
ಸಂಜೆ ಹೊತ್ತಲೇ।
ಮಳ್ಳ ಹುಡುಗರ ಮನಸನ್ನೆಲ್ಲ
ಬಳ್ಳಮ್ಯಾಲ ಕುಣಿಸಿಕೊಂತ
ಕಳ್ಳನಗಿ ನಗತಿರತಾಳು ಕತ್ತ ಬಗ್ಗಿಸಿ
ನಮ್ಮ ಹುಚ್ಚ ಹುಡುಗರು
ನೋಡುತಾವು ಮೈ ಹಿಗ್ಗಿಸಿ।
ಕಟದಗೊಂಬಿ ಅಂತಾ ಹುಡಗಿ
ಪುಟಿಯತಾಳು ಸೊಕ್ಕಿನ್ಯಾಗ
ತುಟಿಯೊಳಗ ನಗತಿರತಾಳು ಟೊಂಕ ಬಳುಕಿಸಿ
ನಮ್ಮ ಹುಚ್ಚ ಹುಡುಗರು
ನೋಡತಾರು ಎದೆ ಗೆಲ್ಲಿಸಿ।
ಕಬರ ಹಾರಿ ಹುಡುಗರೆಲ್ಲ
ಅಬ್ರುಗೇಡಿಯಾಗಿ ಹೋದ್ರು
ಜಿಬರಲಿಂದ ಹೋಗತಾಳು ತನ್ನಗತ್ತಲೇ
ನಮ್ಮ ಹುಚ್ಚ ಹುಡುಗರು
ಜೀವ ಹೊತು ನಡಕನೆತ್ತೀಲೆ।

**ಸಾಹಿತ್ಯ ಮತ್ತು ಗಾಯನ-ಗುರುರಾಜ ಕೆಂಧೂಳಿ**

ಪ್ರಸ್ತುತ ಗೀತೆಯು ಇಂದು ಒಳ್ಳೆಯ ಭವಿಷ್ಯವನ್ನು ಕಟ್ಟಿಕೊಳ್ಳಬೇಕಿದ್ದ ಯುವಜನಾಂಗ ಹೇಗೆ ಮಾಯದ ಲೋಕಕ್ಕೆ ಪ್ರವೇಶ ಪಡೆದುಕೊಂಡು, ತಮ್ಮ ಭಾವಿ ಜೀವನದ ಮಧುರ ಕ್ಷಣಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಪ್ರೀತಿ, ಪ್ರೇಮ, ಮೋಸವೆಂಬುದರ ಸೆಳೆತಕ್ಕೆ ಸಿಕ್ಕು

ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಈ ಮಾಯಾ ಪ್ರಪಂಚದಲ್ಲಿ ಮಾಯೆಯೆಂಬ ಹೆಣ್ಣಿನ ಸೌಂದರ್ಯಕ್ಕೆ ಮನಸೋತ ಯುವಜನಾಂಗದ ವಾಸ್ತವದ ಚಿತ್ರಣವನ್ನು ರಸವತ್ತಾಗಿ ಗುರುರಾಜ ಕೆಂಧೂಳಿ ಅವರು ತಮ್ಮ ಹಾಡಿನ ಮೂಲಕ ತಿಳಿಸಿದ್ದಾರೆ.

**ನೀ ಸಿಟ್ಟ ಆಗಬ್ಯಾಡ ಕೋತಿ :**

ನೀ ಸಿಟ್ಟ ಆಗಬ್ಯಾಡ ಕೋತಿ
ಸಮಾಧಾನಕ್ಕ ಇಲ್ಲ ಸರಿಸಾಟಿ।
ನೀ ಅವಗುಣ ಕಟ್ಟಿ ಹೊಡಿಹೊಡಿ ಮಟ್ಟಿ
ಜನ್ಮ ಜನ್ಮಾಂತರ ದುಃಖ ಅನುಭವಿಸಿ
ಬಂದೆಲ್ಲ ನೀನು ಹುಟ್ಟಿ
ಹೆಂಡತಿ ಮಕ್ಕಳ ಮೋಹಕ್ಕ ಬಿದ್ದು
ಬಲುಬೇಗ ನೀನು ಕೆಟ್ಟಿ
ಕನಸಿನ ಪ್ರಪಂಚ ಸುಳ್ಳು ಅನ್ನುದು
ನೀನು ಮರೆತು ಬಿಟ್ಟಿ
ಇರುವ ತನಕ ನೀ ನಂದು ನಂದು ಅಂತ।
ಬಡಿದಾಡಿ ಹೊಂಟೆಲ್ಲ ಕೋತಿ
ಮುದ್ದಿನ ಸತಿಯನು ಸಾಕುವಸಲುವಾಗಿ
ತಲೆಮ್ಯಾಲ ಹೊತ್ತದಿ ಬುಟ್ಟಿ
ನಿಮಿಷದ ಸುಖಕ್ಕ ಆಸೆದಾಗಿ
ಕಾಮದ ಬೆನ್ನ ಹತ್ತಿ ಸುಟ್ಟಿ
ಲೋಭಿಗಾಗಿ ಹೆಂಡತಿ ಹೆಸರಿಲೆ
ಬ್ಯಾಂಕಿಗೆ ಹಣವನ್ನು ಇಟ್ಟಿ।
ಸಂಸಾರ ನಂದು ನಂದು ಅಂತಾನಿ
ಗಂಟ ಕಟ್ಟಿ ಈಗ ಇಟ್ಟಿ
ಈ ಜೀವನ ನಡೆಸುವ ಸಲುವಾಗಿ
ಸುಳ್ಳ ಹೇಳುತ ಹೊಂಟಿ
ನೀನು ಇರುವ ಸಲುವಾಗಿ ಅಣ್ಣಾ
ಬಿಲ್ಡಿಂಗ ಮನಿಕಟ್ಟಿ ಬಿಟ್ಟಿ।
ಸೊಸ್ತ್ಯಾರು ಬಂದಮ್ಯಾಲ ಹೊರಗ ಹಾಕಿ ನಿನ್ನ
ಮಾಡಿ ಬಿಟ್ಟಾರೊ ಒಂಟಿ.
ಯಮರಾಯ ಕರಿವಾಗ ಯಾರಿಲ್ಲ ನಿನಗೂಡ
ಒಬ್ಬನೇ ನೀನು ಹೊಂಟಿ

ತನು ಮನ ಧನದಿಂದ ಗುರುವಿನ ಭಕ್ತಿಗೆ
ಆಗಪ್ಪಾ ನೀನು ಗಟ್ಟಿ
ಅರುವಿನ ಜನ್ಮದಿ ವ್ಯಸನದ ಹಾದಿಗೆ
ತೂಡಿಬೇಕೂ ನೀನು ಕಂಟಿ
ಹುಟ್ಟಿ ಬಂದ ಮ್ಯಾಲ ಪುಣ್ಯ ಕಾರ್ಯಕ್ಕೆ
ಕೊಡಬೇಕು ನೀನು ಪಟ್ಟಿ।
ಆವಾಗ ನಿನ್ನ ಭಕ್ತಿಗೆ ಒಲಿದು
ಕೊಡತಾನ ಗುರುವ ಭೇಟಿ
ಹಡಗಲಿ ಊರಾಗ ಎಲ್ಲಾರು ಕೂಡಿ
ಲಕ್ಷ್ಮಿಯ ಗುಡಿಯನು ಕಟ್ಟಿ
ಮನಗೂಳಿ ಆಕಾಶ ಗಾಯನ ಮಾಡತಾನ
ಪೂಜೇಕ ನುಡದಂಗ ಗಂಟಿ
ಹಡಗಲಿ ಊರಾಗ ಸಿದ್ದೂನ ಹಂತೇಕ
ಪದಗಳು ಹೆಂಗ ಹುಟ್ಟಿ
ವಿಷ್ಣುನ ಸತಿಯು ಲಕ್ಷ್ಮವ್ವ ನೀನು
ಆಗೊಮ್ಮೆ ನನಗ ಭೇಟಿ।

**ಸಾಹಿತ್ಯ ಮತ್ತು ಗಾಯನ–ಆಕಾಶ ಮನಗೂಳಿ**

ಆಕಾಶ ಮನಗೂಳಿ ಅವರು ಹಾಡಿದ ಪ್ರಸ್ತುತ ಗೀತೆಯು ಸಮಾಜಕ್ಕೆ ನೀತಿ ಬೋಧನೆಯನ್ನು ಮಾಡುತ್ತದೆ. ಈ ಜಗತ್ತು ಕನಸಿದ್ದಂತೆ, ಜೀವನ ಮೂರು ದಿನದ ಸಂತೆಯಂತೆ ನಶ್ವರವಾದದ್ದು ಎಂಬುದನ್ನು ಮನುಷ್ಯ ಮರೆತ್ತಿದ್ದಾನೆ. ವಾಸ್ತವ ಸ್ಥಿತಿಯನ್ನು ಮರೆತು ತಾನೆಂದು ಸಾಯುವುದಿಲ್ಲ ಎಂಬಂತೆ ವರ್ತಿಸುತ್ತಿದ್ದಾನೆ. ಅತೀ ಆಸೆಯಿಂದ ಹಗಲಿರುಳು ದುಡಿಯುವುದು, ಜನರಿಗೆ ಮೋಸ ಮಾಡುವುದು ಇಂತವರ ದಿನನಿತ್ಯದ ಕಾರ್ಯವಾಗಿವೆ. ದಾನ, ಧರ್ಮ, ಪುಣ್ಯದ ಕಾರ್ಯಗಳನ್ನು ಮಾಡದೇ ಇಂದು ಸ್ವಾರ್ಥದ ಜೀವನ ನಡೆಸುತ್ತಿದ್ದಾರೆ. ಇಂತಹ ಬದುಕನ್ನು ಸಾಗಿಸುತ್ತಿರುವ ಜನರಿಗೆ ಒಂದು ಮಾರ್ಗ ಸೂಚಿಯಂತೆ ಈ ಗೀತೆ ಮೂಡಿಬಂದಿದೆ.

**ಎಂತಾ ಚಂದ ಬೆಳದಿಂಗಳ :**

ಎಂತಾ ಚಂದ ಬೆಳದಿಂಗಳ
ಜಗದ ಜನಕ ಮಂಗಳ
ರಂಗೋಲಿ ಹಾಕ್ಯಾರ ಯಾರ ಹೇಳ

ಹಿಟ್ಟ ಚಲ್ಲಿ ಬಿಟ್ರಂದ್ರ
ಬೆಣ್ಣಿಹಂಗ ಮಿದುವೇನ
ಹಾಲಿನ ಕೊಡಾ ಸೋರಿ ಸೋರಿ ಬಂತೇನ
ಎಂತಾ ಚಂದ...
ಮಲ್ಲಿಗೆಯ ಹೂವಿನ
ಹಾಸಿಗೆಯ ಹಾಸ್ಯಾರೇನ
ಮುಟ್ಟಿದರ ಮಾಸುವದೇನ
ಎಂತಾ...
ಅಮೃತದ ಬುರುಗೇನ
ಕುಟ್ಟಿದೆಲೆಯ ರಸವೇನ
ಸ್ವರ್ಗದ ಹೋಳಿ ತುಳಕ್ಯಾಡತಾವೇನ
ಎಂತಾ...
ಕಾದ ಆರಿದ ಹಾಲಿನೊಳಗ
ಕೇಸರಿಯ ಕಂಪೀನ
ಯಾಲಕ್ಕಿತಂಪ ಕಂಪೀನ
ಎಂತಾ ಚಂದ ಬೆಳದಿಂಗಳ
ಜಗದ ಜನಕ ಮಂಗಳ.

**ಸಾಹಿತ್ಯ ಮತ್ತು ಗಾಯನ–ಹುಕ್ಕೇರಿ ಬಾಳಪ್ಪ**

ಎಂತಾ ಚಂದ ಬೆಳದಿಂಗಳ ಪ್ರಕೃತಿಯೂ ಎಷ್ಟು ಸುಂದರವಾಗಿದೆ. ಹುಣ್ಣಿಮೆ ಚಂದಿರನನ್ನು ನೋಡಿದಾಗ ಅರ್ಥವಾಗುತ್ತದೆ ಎಂದು ಹೇಳುತ್ತ, ಬೆಳದಿಂಗಳನ್ನು ಕಂಡಾಗ ಆಗುವ ಆನಂದ, ಅನುಭವವನ್ನು ಕಂಡವನೆ ಬಲ್ಲ. ಹೀಗೆ ಬೆಳದಿಂಗಳ ಕುರಿತು ಹುಕ್ಕೇರಿ ಬಾಳಪ್ಪನವರು ಬಹಳ ಸುಂದರವಾದ ವರ್ಣನೆಯನ್ನು ತಮ್ಮ ಕಾವ್ಯದ ಮೂಲಕ ಮಾಡಿದ್ದಾರೆ.

ಇಂದು ಮೌಖಿಕ ಗೀತೆಗಳು ನವಮೌಖಿಕತೆಯಲ್ಲಿ ಬಳಕೆಗೊಳ್ಳುತ್ತಿರುವುದರ ಜೊತೆಗೆ ಹೊಸ ಹಾಡುಗಳನ್ನು ಮತ್ತು ಹೊಸ ಹಾಡುಗಾರರನ್ನು ಹುಟ್ಟು ಹಾಕುತ್ತಿವೆ. ಅಲ್ಲದೇ ಒಂದು ಹೊಸ ಮಾರ್ಗವನ್ನೇ ಸೃಷ್ಟಿಸುತ್ತಿವೆ. ಏಕೆಂದರೆ ಇಂದು ಜನಪದ ಹಾಡುಗಳು ಹೊಸ ರೂಪದಲ್ಲಿ ಬಿತ್ತರಗೊಳ್ಳುತ್ತಾ ಎಲ್ಲರನ್ನು ಸೆಳೆಯುತ್ತಿವೆ. ಯಾವುದೇ ವಯಸ್ಸಿನವರಾಗಲಿ ಈ ಬದಲಾವಣೆಗೆ ಹೊರತಾದವರಲ್ಲ, ಅಷ್ಟು ವ್ಯಾಪ್ತಿಯನ್ನು ಹೊಂದಿವೆ.

**ಕೊನೆ ಟಿಪ್ಪಣಿಗಳು**

೧. https://youtu.be/p04_bNXiwx4.
೨. ಅದೇ.
೩. https://youtu.be/p04_bNXiwxsi5.
೪. ಬಾಳಣ್ಣ ಸೀಗೀಹಳ್ಳಿ, ಹಾಡ ತೂರ್‍ಯಾಡ್ಯಾವ, ಪುಟ: ೧೧೦.
೫. https://youtu.be/txhD12Xsik.
೬. https://youtu.be/HenMcOgCltM.
೭. https://youtu.be/9YKxXptWdmM.
೮. ಬಾಳಣ್ಣ ಸೀಗೀಹಳ್ಳಿ, ಹಾಡ ತೂರ್‍ಯಾಡ್ಯಾವ, ಪುಟ–೧೬೨.
೯. https://youtu.be/jhkCox4d4wg.
೧೦. https://youtu.be/t4-recUElLA.
೧೧. https://www.vijayavani.net/western-film-song-folk-song-rukmini-harnala.
೧೨. ಅದೇ.
೧೩. https://youtu.be/dtNNzzXp_al.
೧೪. ಬಾಳಣ್ಣ ಸೀಗೀಹಳ್ಳಿ, ಹಾಡ ತೂರ್‍ಯಾಡ್ಯಾವ, ಪುಟ–೩೬೯.
೧೫. ಬೈಲೂರು ಬಸವಲಿಂಗಯ್ಯ, ಜನಪದ ಹಾಡುಗಳು, ಸಿಡಿ.
೧೬. ಅದೇ.
೧೭. ಬಾಳಣ್ಣ ಸೀಗೀಹಳ್ಳಿ, ಹಾಡ ತೂರ್‍ಯಾಡ್ಯಾವ, ಪುಟ–೩೭೨.
೧೮. ಇಮಾಮಸಾಬ್ ವಲ್ಲೆಪ್ಪನವರ, ಉಳುವ ಯೋಗಿ, ಸಿಡಿ.
೧೯. https://youtu.be/i5F2mS20-c4.
೨೦. https://youtu.be/KXpBp2VwFYg.
೨೧. https://youtu.be/2FHNA0gLsBY.
೨೨. https://youtu.be/J3eChaYnqyA.
೨೩. https://youtu.be/Z_ikRB96W9U.
೨೪. https://youtu.be/9kOsvimDN9l.

# ಅಧ್ಯಾಯ : ಆರು

## ಜನಪದ ಗೀತೆಗಳ ಕೇಳುಗ ಲೋಕ

೬.೧ ಯುವಜನಾಂಗ

೬.೨ ಇತರೆ ವರ್ಗದವರು

## ಅಧ್ಯಾಯ : ಆರು

## ಜನಪದ ಗೀತೆಗಳ ಕೇಳುಗ ಲೋಕ

ಜನಪದ ಗೀತೆಗಳು ಸಾಮಾನ್ಯವಾಗಿ ಅನಾಮಧೇಯ ಮೂಲದ ಹಾಡುಗಳಾಗಿ ಮೌಖಿಕ ರೂಪದಲ್ಲಿ ಹರಡುವುದಾಗಿದೆ. ಜನಪದ ಗೀತೆ ಎಂಬುದು ಹಳ್ಳಿಯ ಜನರ ಸಂಗೀತವಾಗಿದೆ. ಹಳ್ಳಿಯ ಜನರು ತಮ್ಮ ದಿನನಿತ್ಯದ ಕೆಲಸಗಳನ್ನು ಮಾಡುವ ಸಂದರ್ಭ ಹಾಗೂ ತಮ್ಮ ಬಿಡುವಿನ ವೇಳೆಯಲ್ಲಿ ತಮ್ಮದೇ ಆಡು ಪದಗಳಲ್ಲಿ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು. ಒಬ್ಬ ವ್ಯಕ್ತಿ ಹೀಗೆ ಕಟ್ಟಿ ಹಾಡಿದ ಹಾಡನ್ನು ಕೇಳಿದ. ಮತ್ತೊಬ್ಬ ಆತನ ಮೂಲಕ ಬೇರೊಬ್ಬರಿಗೆ ಹೀಗೆ ಬಾಯಿಯಿಂದ ಬಾಯಿಗೆ ಹರಡುತ್ತಾ ಬೆಳೆದ ಹಾಡುಗಳೇ ಜನಪದ ಗೀತೆಗಳಾದವು.

**ಉದಾಹರಣೆ:** ತಾಯಿ ತನ್ನ ಮಗುವನ್ನು ಕುರಿತು ಹಾಡಿದ ಹಾಡನ್ನು ನೋಡುವುದಾದರೆ ಇವು ಬಾಳಿಗೊಂದು ಬಂಗಾರದ ಮಾತುಗಳಾಗಿವೆ.

ಕೂಸು ಇದ್ದ ಮನೆಗೆ ಬೀಸಣಿಕೆ ಯಾತಕ
ಕೂಸು ಕಂದಯ್ಯ ಒಳಹೊರಗ....ಕೂಸು ಕಂದಯ್ಯ
ಒಳಹೊರಗ ಆಡಿದರ ಬಿಸಣಿಕೆ ಗಾಳಿ ಸುಳಿದಾವ...

ಈ ಹಾಡಿನ ಮೂಲಕ ತಾಯಿಯು ತನ್ನ ಮಗು ಮನೆಯಲ್ಲಿ ಓಡಾಡುತ್ತಿದ್ದರೆ ತನಗಾಗುವ ಆನಂದವನ್ನು ಹಾಡಿನಲ್ಲಿ ಬಣ್ಣಿಸಿದ್ದಾಳೆ. ಹೀಗೆ ಜನಪದ ಹಾಡು ತನ್ನದೇ ಆದ ವಿಶೇಷತೆಯನ್ನು ಹಿಂದಿನಿಂದಲೂ ಉಳಿಸಿಕೊಂಡು ಬಂದಿವೆ. ಇಂದು ಜನಪದ ಹಾಡುಗಾರರು ತಮ್ಮ ಧ್ವನಿಗಳ ಮೂಲಕ ಹಳ್ಳಿಯಿಂದ ಹಳ್ಳಿಗೆ, ನಗರದಿಂದ ನಗರಗಳಿಗೆ, ಪಟ್ಟಣದಿಂದ ಪಟ್ಟಣಕ್ಕೆ ಜನಪದ ಹಾಡಿನ ಮಹತ್ವವನ್ನು ಪರಿಚಯಿಸುತ್ತಿದ್ದಾರೆ. ಈ ಮೂಲಕವೇ ಇಂದು ಜನಪದ ಹಾಡುಗಳನ್ನು ಕೇಳುವ ವರ್ಗ ಹೆಚ್ಚಾಗಿದೆ. ಅಲ್ಲದೇ ಆಧುನಿಕ ಮಾಧ್ಯಮಗಳ ಮೂಲಕವು ಜನಪದ ಗೀತೆಗಳನ್ನು ಕೇಳುವ, ನೋಡುವ ವರ್ಗಗಳು ಹೆಚ್ಚಾಗಿವೆ. ಕಾಲ ಬದಲಾದಂತೆ ಸಾಹಿತ್ಯವೂ ಬದಲಾಗುತ್ತದೆ ಎನ್ನುವ ಮಾತು ಈ ಸಂದರ್ಭದಲ್ಲಿ ಪ್ರಸ್ತುತ ಎನಿಸುತ್ತದೆ. ನಾವು ಜನಪದ ಗೀತೆಗಳನ್ನು ಕೇಳುವವರನ್ನು ಎರಡು ವಿಧದಲ್ಲಿ ಗುರುತಿಸಬಹುದು. ಮೊದಲನೆಯ ವರ್ಗ ಇಂದಿನ ಯುವಜನಾಂಗ ಜನಪದ ಹಾಡುಗಳನ್ನು ಸಾಂದರ್ಭಿಕವಾಗಿ ಬಳಸಿಕೊಳ್ಳುವ ಕೆಲಸ ಇವರದ್ದಾಗಿದೆ. ಎರಡನೆಯ ವರ್ಗ ಎಂದರೆ ಯುವಜನಾಂಗವನ್ನು ಹೊರತುಪಡಿಸಿ ಉಳಿದ ಇತರೆ ವರ್ಗದವರು. ಈ ರೀತಿಯಾಗಿ ನಾವು ಜನಪದ ಗೀತೆಗಳ ಕೇಳುವ ಲೋಕವನ್ನು ಗುರುತಿಸುತ್ತೇವೆ.

೬.೧ ಯುವಜನಾಂಗ

ಯುವಜನಾಂಗವು ಕೇಳುತ್ತಿರುವ ಜನಪದ ಗೀತೆಗಳಿಂದ ಕನ್ನಡ ಸಾಹಿತ್ಯವನ್ನು ಬೆಳೆಸುವ ಪ್ರಯತ್ನ ಇಂದು ನಡೆದಂತೆ ಕಾಣುತ್ತಿದೆ. ಏಕೆಂದರೆ ಸಾಹಿತ್ಯವನ್ನು ಓದುವ ಆಸಕ್ತಿ ಹೊಂದಿರದ ಯುವಕರು ಯಾವುದೋ ಕಾರಣಕ್ಕೆ ಇಂದು ಜನಪದ ಹಾಡುಗಳನ್ನು ಕೇಳುವ, ಹಾಡುವ ಮನಸ್ಸು ಮಾಡುತ್ತಿದ್ದಾರೆ. ಮೊದಲು ಡೊಳ್ಳಿನ ಪದ, ಹಂತಿಪದ, ಬಿಸುಕಲ್ಲಿನ ಪದ, ಮೊಹರಂ ಪದ, ಸೋಬಾನೆ ಪದ ಇತ್ಯಾದಿ ಇವು ಜನಪದ ಗೀತೆಗಳು ಎನಿಸಿಕೊಂಡಿದ್ದವು. ಆದರೆ ಇಂದು ಕಾಲಕ್ಕೆ ತಕ್ಕಂತೆ ಜನಪದ ಗೀತೆಗಳಲ್ಲೂ ನಾವು ಬದಲಾವಣೆಗಳನ್ನು ಕಾಣುತ್ತೇವೆ. ಪ್ರೇಮ ಗೀತೆಗಳು, ಶೃಂಗಾರ ಗೀತೆಗಳು, ಶಿಕ್ಷಣ, ರಾಜಕಾರಣ, ಸಮಾಜ, ವಿದ್ಯಾರ್ಥಿಗಳ ಕುರಿತಾದ ಹೀಗೆ ಹಲವು ಪ್ರಕಾರಗಳಲ್ಲಿ ಇಂದು ಬದಲಾದ ರೀತಿಯಲ್ಲಿ ಜನಪದ ಗೀತೆಗಳು ರಚನೆಗೊಂಡು ಆಧುನಿಕ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುತ್ತಿವೆ. ಈ ರೀತಿ ಬಿತ್ತರಗೊಳ್ಳುತ್ತಿರುವ ಹಾಡುಗಳನ್ನು ಇಂದಿನ ಯುವಜನಾಂಗ ಕೇಳುತ್ತಿದೆ. ಇವರು ಸಾಮಾನ್ಯವಾಗಿ ೧೮ ರಿಂದ ೩೫ ವಯಸ್ಸಿನವರಾಗಿದ್ದಾರೆ.

೧) ಟ್ರ್ಯಾಕ್ಟರ್ ಚಾಲಕರ ವರ್ಗ
೨) ಲಾರಿ ಚಾಲಕರ ವರ್ಗ
೩) ಧಾಬಾಗಳಲ್ಲಿ ಕೇಳುವ ವರ್ಗ
೪) ಹಳ್ಳಿಯ ಪಾನ್‌ಶಾಪ್‌ಗಳು
೫) ಕಾಲೇಜ ವಿದ್ಯಾರ್ಥಿಗಳ ವರ್ಗ
೬) ಹಳ್ಳಿಯ ಅನಕ್ಷರಸ್ಥ ಯುವಕರು
೭) ಇತರೆ ವರ್ಗಗಳು.

ಹೀಗೆ ನಾವು ಉತ್ತರ ಕರ್ನಾಟಕ ಭಾಗದ ಯುವಜನಾಂಗವನ್ನು ಜನಪದ ಹಾಡುಗಳನ್ನು ಕೇಳುವ ವರ್ಗಗಳಲ್ಲಿ ಗುರುತಿಸಬಹುದು. ನಾನು ಟ್ರ್ಯಾಕ್ಟರ್ ಡ್ರೈವರ್‌ಗಳನ್ನು ಭೇಟಿಮಾಡಿ ನೀವು ಏಕೆ? ಜನಪದ ಹಾಡುಗಳನ್ನು ಈ ಪ್ರಮಾಣದಲ್ಲಿ ಕೇಳುತ್ತಿರಿ ಎಂದಾಗ, ಆಗ ಅವರು ನಾವು ಜನಪದ ಹಾಡುಗಳನ್ನು ಕೇಳುವುದರಿಂದ ನಮಗೆ ಯಾವುದೇ ರೀತಿಯ ಆಯಾಸ ಎನಿಸುವುದಿಲ್ಲಾ, ರಾತ್ರಿಯಿಡಿ ನಾವು ಬೇಸರಿಸದೆ ಟ್ರ್ಯಾಕ್ಟರ್ ಹೊಡೆಯುವುದಕ್ಕೆ ಒಂದು ರೀತಿಯ ಸ್ಫೂರ್ತಿಯನ್ನು ಈ ಹಾಡುಗಳು ನೀಡುತ್ತವೆ ಎಂದು ಹೇಳುತ್ತಾರೆ. ಅದೇ ರೀತಿ ಲಾರಿ ಚಾಲಕರಾಗಿರಬಹುದು, ಧಾಬಾಗಳಲ್ಲಿನ ಕೇಳುಗರಾಗಿರಬಹುದು ಇವರು ಕೂಡ ಜನಪದ ಹಾಡುಗಳು ಒಂದು ರೀತಿಯ ಸಂತೋಷವನ್ನುಂಟು ಮಾಡುವ ಹಾಡುಗಳಾಗಿದ್ದು, ಅವುಗಳನ್ನು ಕೇಳುವುದರಿಂದ ನಮಗೂ ಒಂದು ರೀತಿಯ ನೆಮ್ಮದಿ ಎನಿಸುತ್ತದೆ ಎನ್ನುತ್ತಾರೆ. ಹಳ್ಳಿಯ ಪಾನ್‌ಶಾಪ್‌ಗಳಲ್ಲೂ ಕೂಡ ಜನಪದ ಹಾಡುಗಳನ್ನು ಕೇಳುವವರ ಸಂಖ್ಯೆ ಹೆಚ್ಚಾಗಿದೆ. ತಾವು ಕೇಳುವುದರೊಂದಿಗೆ ತಮ್ಮ ಹತ್ತಿರ ಬರುವ ಎಲ್ಲ ಗ್ರಾಹಕರಿಗೂ ಇವರು ಈ ಹಾಡುಗಳ ಪರಿಚಯ ಮಾಡಿಸುತ್ತಾರೆ. ಕಾಲೇಜಿನ

ವಿದ್ಯಾರ್ಥಿಗಳ ವಿಷಯಕ್ಕೆ ಬರುವುದಾದರೆ ಇಂದಿನ ವಿದ್ಯಾರ್ಥಿಗಳ ಮೊಬೈಲ್‌ಗಳಲ್ಲಿ ಬಹುಭಾಗ ಜನಪದ ಹಾಡುಗಳೆ ತುಂಬಿರುತ್ತವೆ. ಇವರು ಪ್ರೇಮ, ಶೃಂಗಾರ ಗೀತೆಗಳನ್ನು ಹೆಚ್ಚಾಗಿ ಕೇಳುತ್ತಾರೆ. ಕಾರಣ ಅವರ ಹದಿಹರೆಯದ ವಯಸ್ಸಾಗಿರಬಹುದು. ಇಂದಿನ ಹಳ್ಳಿಯ ಅನಕ್ಷರಸ್ಥ ವರ್ಗದವರು ಜನಪದ ಗೀತೆಗಳಿಗೆ ಮಾರು ಹೋದವರಲ್ಲಿ ಪ್ರಮುಖ ವರ್ಗದವರು. ಇವರು ತಮ್ಮ ಕಾಯಕದ ಜೊತೆಗೆ ಈ ಹಾಡುಗಳನ್ನು ಕೇಳುವರು ಬೇರೆ ಹಾಡುಗಳ ರುಚಿ ಕಾಣದ ಈ ವರ್ಗ ತಮ್ಮ ಆಡು ಭಾಷೆಯಲ್ಲಿ ರಚನೆಯಾದ ಈ ಜನಪದ ಹಾಡಿನ ಗೀಳನ್ನು ಹಚ್ಚಿಕೊಂಡಿರುತ್ತಾರೆ. ಇತರೆ ವರ್ಗಗಳ ಕುರಿತು ಹೇಳುವುದಾದರೆ ಇಲ್ಲಿ ಯಾರು ಒಂದು ರೀತಿಯ ದೈಹಿಕ ಶ್ರಮದ ಕೆಲಸಗಳನ್ನು ಹೆಚ್ಚಾಗಿ ಮಾಡುತ್ತಿರುತ್ತಾರೋ ಅಂತವರು ಈ ಜನಪದ ಗೀತೆಗಳನ್ನು ಕೇಳುವುದರ ಮುಖಾಂತರ ತಮ್ಮ ಆಸರಕಿ–ಬ್ಯಾಸರಕಿಯನ್ನು ಕಳೆದುಕೊಳ್ಳುತ್ತಾರೆ.

ಮೇಲೆ ತಿಳಿಸಿದ ಯುವಜನಾಂಗವು ಯಾವ ರೀತಿಯ ಜನಪದ ಹಾಡುಗಳನ್ನು ಕೇಳುತ್ತಾರೆ ಎಂಬುದನ್ನು ಇಲ್ಲಿ ನೋಡಬಹುದು.

**ಮನಸ್ಸಿನ ಮಾತ ತಿಳಿಸ :**

ಮನಸ್ಸಿನ ಮಾತ ತಿಳಿಸ
ಪ್ರೀತಿಯ ಪತ್ರ ಕಳಿಸ...
ಕಟ್ಟಿನ ನೂರು ಕನಸ
ನಂದ ಮಲ್ಲಿಗೆ ಮನಸ[೧]...

ಪ್ರೀತಿಯ ಕುರಿತಾಗಿ ಬರೆಯುತ್ತಿರುವ ಪದಗಳೆ ಇಂದು ಹಾಡಿನ ರೂಪ ಪಡೆದುಕೊಂಡು ಬಳಕೆಗೊಳ್ಳುತ್ತಿವೆ ಎಂಬುದನ್ನು ಈ ಮೇಲಿನ ಪದಗಳಿಂದ ತಿಳಿಯುತ್ತೇವೆ.

**ದಾರ್ಯಾಗ ನಾನಿಂತ :**

ದಾರ್ಯಾಗ ನಾನಿಂತ...
ನೋಡತಿನ ನೀನಂತ...
ನಿನ್ನ ಸೈಕಲ್ ಸಾಕಳಿ ಬಿತ್ತ...
ಓ.... ಓ....
ನನ್ನ ಮುಂದ ಬಂದ ನಿಂತಿತ್ತ...

ನಿಮ್ಮ ಸಾಲಿಗಿ ಹೋಗಾಕ...
ನಡು ದಾರಿ ಒಂದಿತ್ತ...
ಯಾರು ಇರಲಿಲ್ಲ ಆವತ್ತ...ಅ...ಅ
ಹೇಳಿದಿ ಸಾಕಳಿ ಹಾಕಂತ

ಮನಿ ಮಾಳಿಗಿ ಮ್ಯಾಲ ಬರುತ್ತಿದ್ದಿ...

ಹಗಲ್ಲೆಲ್ಲಾ...
ನಾ ಬಂದರ...ಕಣ್ಣಾಗ ಕೊಡತ್ತಿದ್ದಿ ಸಿಗ್ನಲ್
ಮನಿ ಮಾಳಗಿ ಮ್ಯಾಲ ಬರ್ತಿದ್ದಿ
ಹಗಲ್ಲೆಲ್ಲಾ...
ನಾ ಬಂದರ ಕೊಡತ್ತಿದ್ದಿ...ಕಣ್ಣಾಗ ಸಿಗ್ನಲ್
ಹುಚ್ಚ ಹಿಡಸಿದ್ದಿ...ನೀ ಮೊದಲಾ...

ಲವ್ ಮಾಡಿನ್ಯೆ ನಿನ್ನ...ಕನ್ನಡ ಸಾಲ್ಯಾಗ
ಕೈ ಕೊಟ್ಟೆಲ್ಲ...ನನಗ ಹೈಸ್ಕೂಲ್ ಸಾಲ್ಯಾಗ.[೨]

ಇಂದು ಪ್ರೀತಿ–ಪ್ರೇಮದ ಹಾಡುಗಳು ಸಮಾಜವನ್ನು ಆವರಿಸಿಕೊಂಡು ಬಿಟ್ಟಿವೆ. ಕಾರಣ ಇಂದು ಶಾಲೆಗೆ ಹೋಗುತ್ತಿರುವ ಮಕ್ಕಳು ಆಗಿರಬಹುದು, ಪ್ರಾಯಕ್ಕೆ ಬಂದ ಗಂಡು–ಹೆಣ್ಣು ಯಾರೇ ಆಗಿರಬಹುದು ಇಂತಹ ವಯಸ್ಸಿನಲ್ಲಿ ಹುಟ್ಟಿಕೊಂಡ ಹಾಡುಗಳು ಇಂದು ಎಲ್ಲೆಡೆ ರಾರಾಜಿಸುತ್ತಿವೆ. ಪ್ರೇಮ ನಿವೇದನೆಯನ್ನು ಮಾಡಿಕೊಳ್ಳುವುದನ್ನು ಇಂತಹ ಹಾಡುಗಳಲ್ಲಿ ಕಾಣುತ್ತೇವೆ.

**ಹೊಂಟೇದಿ ಕರಡಿಗುಡ್ಡದ ಬಸ್ಸೀಗೆ ಹತ್ತಿ :**

ಹೊಂಟೇದಿ ಕರಡಿಗುಡ್ಡದ ಬಸ್ಸೀಗೆ ಹತ್ತಿ
ನನನೋಡಿ ಕೈ ಮಾಡಿ ಹೋದೆಲ್ಲ ಗೆಳತಿ॥
ಅಂದಿನಿಂದ ನನ್ನ ಮನದಾಗ ಕುಂತಿ
ಹೊತ್ತ ಹೊಂಟ್ರ ಸಾಕ ಬರಿ ನಿನ್ನ ಚಿಂತಿ॥

ಕುರುಬನ ರಾಣಿ ಬರತೇನ ಓಡಿ
ತಿನಸಾಕ ತರತಿದ್ದಿ ಹಾಲಿನ ಕೆನಿ
ಮಾಡಿ ದೇವರ ಆಣಿ
ಹೇಳಿದ್ದಿ ಜಾಣಿ
ಅದಕ್ಕ ಕೈ ಬಿಟ್ಟು ಹೋದೆಲ್ಲ ಅರಗಿಣಿ.[೩]

ಜನಪದ ಹಾಡುಗಳೆಂದರೆ ಎಲ್ಲರೂ ಪ್ರೇಮಗೀತೆಗಳಿಗೆ ಬಂದು ನಿಲ್ಲುತ್ತಾರೆ. ಅಂತ ಸ್ಥಿತಿಗೆ ಬಂದು ನಿಂತಿದೆ. ಈ ಗೀತೆಯಲ್ಲಿ ಪ್ರಿಯಕರನು ಹೊಂಟೇದಿ ಕರಡಿಗುಡ್ಡದ ಬಸ್ಸೀಗೆ ಹತ್ತಿ...ಎಂದು ತನ್ನನ್ನು ಬಿಟ್ಟು ಹೋಗುತ್ತಿರುವ ಪ್ರೇಯಸಿಯನ್ನು ಕುರಿತು ಆಡಿರುವ ಮಾತುಗಳು ಇಲ್ಲಿ ಮೂಡಿಬಂದಿವೆ. ಇಂದು ಸರ್ವೇಸಾಮಾನ್ಯವಾಗಿ ಇಂತಹ ಹಾಡುಗಳು ಬಳಕೆಗೊಳ್ಳುತ್ತಿವೆ. ಅಲ್ಲದೇ ಇಂದು ಯುವಜನಾಂಗದ ಮನಸ್ಸನ್ನು ಬೇಗನೆ ಮುಟ್ಟುವ ಮೂಲಕ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿವೆ.

**ಪ್ರೀತಿಯ ಪಾರಿವಾಳ :**

ಪ್ರೀತಿಯ ಪಾರಿವಾಳ
ಹಾರಿ ಹೋತೋ ಗೆಳೆಯಾ
ಮನಸಿಗಿ ತಳಮಳ
ಮಾಡಿ ಹೋತೊ ಗೆಳೆಯ॥

ಮರಿ ಅಂದರೆಂಗ ಮರಿಯಲಿ ಗೆಳೆಯಾ
ಮರಿ ಅಂದರೆಂಗ ಮರಿಯಲಿ ಗೆಳೆಯಾ

ಮರಿಯಲೆಂಗ ಗೆಳೆಯ
ಮರಿಯಲೆಂಗ ಗೆಳೆಯ
ಬದುಕಂದರೆಂಗ ಬದುಕಲಿ ಗೆಳೆಯಾ
ಬದುಕಲೆಂಗ ಗೆಳೆಯಾ
ಬದುಕಲೆಂಗ ಗೆಳೆಯಾ
ಮರಿ ಅಂದರೆಂಗ ಮರಿಯಲಿ ಗೆಳೆಯಾ...

ಕುಂತ್ರು ನಿಂತ್ರೂ ಬರಿ ಅಕಿ ನೆನಪಾಗತೈತಿ
ಎಲ್ಲಿ ನೋಡಿದರು ಆಕಿ ರೂಪ ಕಾಣತೈತಿ
ಹೊಟ್ಟಿ ಹಸ್ಯುದಿಲ್ಲಾ ನಿದ್ದಿ ಹೆಂಗ ಹತ್ತತೈತಿ
ನಿದ್ದಿ ಹತ್ತಿದಾಗ ಬಡದೆಬ್ಬಿಸತೈತಿ

ಅಕಿ ಮರೆತಿರ...ಅಕಿ...ಮರೆತಿರ...
ಅಕಿ ಮರಿತಿರಬೇಕೆನೋ ಗೆಳೆಯಾ
ಮರಿತಾಳೆನೋ ಗೆಳೆಯ
ಮರಿತಾಳೆನೋ ಗೆಳೆಯ

ಅಕಿ ಮರಳಿ ಸಿಕ್ಕಾಳೆನೋ ಗೆಳೆಯಾ
ಸಿಗ್ತಾಳೆನೋ ಗೆಳೆಯಾ
ಸಿಗ್ತಾಳೆನೋ ಗೆಳೆಯಾ

ಅಕಿ ಮರಿತಿರಬೇಕೆನೋ ಗೆಳೆಯಾ
ಮರಿತಾಳೆನೋ ಗೆಳೆಯ
ಮರಿತಾಳೆನೋ ಗೆಳೆಯ

ಮತ್ತೆ ಮರಳಿ ಕೂಡ್ಯಾಳೆನೊ ಗೆಳೆಯಾ
ಕೂಡ್ಯಾಳೆನೋ ಗೆಳೆಯಾ

ಕೂಡ್ಯಾಳೆನೋ ಗೆಳೆಯಾ...

ದಿನಕ್ಕೊಂದು ಸಾರಿ ನಂಗ ಭೇಟಿಯಾಗತ್ತಿದ್ದಿ
ಮುದ್ದು ಮುದ್ದು ಮಾತನಾಡಿ ಮನ ತಣಸತಿದ್ದಿ
ಭೇಟ್ಟಿಯಾದಾಗೊಮ್ಮೆ ಸವಿಬೆಲ್ಲ ಕೊಡತಿದ್ದಿ
ಖಿಲ್ಲಾ ಹೇಳತಿನಿ ಸಿಗುದಿಲ್ಲಾ ಇಂಥ ಪ್ರೀತಿ...
ನನ್ನ ಸೊಲ್ಲ...ನನ್ನ ಸೊಲ್ಲ...
ನನ್ನ ಸೊಲ್ಲುವಲ್ಲಿ ಕೇಳಿದೆನೊ ಗೆಳೆಯಾ
ಕೇಳಿದೆನೊ ಗೆಳೆಯಾ
ಕೇಳಿದೆನೊ ಗೆಳೆಯಾ...
ಕೇಳಿ ಬಂದು ಮಾತನಾಡಿತೆನೋ ಗೆಳೆಯಾ
ಮಾತಾಡಿತೆನೋ ಗೆಳೆಯಾ
ಮಾತಾಡಿತೆನೋ ಗೆಳೆಯಾ...

ಪ್ರೀತಿಯ ಪಾರಿವಾಳ
ಹಾರಿ ಹೋತೋ ಗೆಳೆಯಾ...
ಮನಸಿಗಿ ತಳಮಳ
ಮಾಡಿ ಹೋತೋ ಗೆಳೆಯ॥.[೪]

ಗಂಡು ಹೆಣ್ಣಿನೆಡೆಗೆ, ಹೆಣ್ಣು ಗಂಡಿನೆಡೆಗೆ ಪ್ರೀತಿಯಿಂದ ಸೆಳೆಯುವುದು ಒಂದು ರೀತಿಯಲ್ಲಿ ಅಯಸ್ಕಾಂತದಂತೆ ಅವರ ಪ್ರೀತಿ ಅಷ್ಟೊಂದು ಒಂದಕ್ಕೊಂದು ಗಟ್ಟಿಯಾಗಿ ಬೆಸೆದುಕೊಂಡಿರುತ್ತದೆ. ಅಂತಹ ಗಾಢವಾಗಿ ಬೇರೂರಿದ ಪ್ರೀತಿಯನ್ನು ಅಷ್ಟು ಸಲೀಸಾಗಿ ಮರೆಯಲಿಕ್ಕೆ ಸಾಧ್ಯವೇ ಇಲ್ಲ. ಮರೆಯಲಾಗದಂತ ಪ್ರೀತಿಯ ನೆನಪುಗಳನ್ನು ಪ್ರಿಯಕರನು ತನ್ನ ಪ್ರಿಯತಮೆಗಾಗಿ ಸ್ಮರಿಸಿಕೊಂಡದ್ದನ್ನು ಈ ಹಾಡಿನಲ್ಲಿ ಕಾಣುತ್ತೇವೆ.

ರಮೇಶ ಕುರುಬಗಟ್ಟಿ ಅವರು ಹಾಡಿದ ಈ ಪ್ರೀತಿಯ ಪಾರಿವಾಳ ಹಾಡು ಇಂದು ಯುವಜನಾಂಗದ ಮೇಲೆ ಸಾಕಷ್ಟು ಪರಿಣಾಮ ಬೀರಿದೆ. ಹೆಣ್ಣು ಮಗಳನ್ನು ಪಾರಿವಾಳಕ್ಕೆ ಹೋಲಿಕೆ ಮಾಡುವ ಮೂಲಕ ಬಿಟ್ಟು ಹೋದ ತನ್ನ ಪ್ರೇಯಸಿಯನ್ನು ಪ್ರಿಯಕರ ನೆನಪಿಸಿಕೊಳ್ಳುವ ಸಂದರ್ಭ ಇಲ್ಲಿನ ಕಥಾವಸ್ತುವಾಗಿದೆ.

**ಬಣ್ಣಬಣ್ಣದ ಚೂಡಿದಾರ್ :**

ಬಣ್ಣಬಣ್ಣದ ಚೂಡಿದಾರ್
ಹಾಕೊಂಡ ತೋಟದ ಹಾದ್ಯಾಗ ಬರುತ್ತಿದ್ದಳು

ಹೈಸ್ಕೂಲ ಹೋಗಾಗ ಗೆಳತಿಯರ
ಜೋಡ ನನ ಮಾರಿ ನೋಡತ್ತಿದ್ದಳು

ನನ್ನ ಗೆಳತಿ ಚಂದಬಾಳ
ಮಾರಿ ಮರತ...ಇರತಾಳು...
ನನ್ನ ಬಿಟ್ಟ ಈಗ...ಹೋಗ್ಯಾಳು...

ಊರಿಗಿ ಎಂದಾರ...ಬರತಾಳ...
ಅವರ ಅಪ್ಪಾನ ಮೊಬೈಲ ತೊಗೊಂಡ
ನನಗ ಪೋನ ಮಾಡತ್ತಿದ್ದಳು
ಮಿಸ್ಡಕಾಲ್ ಮಾಡಿ
ಕರಿಯತ್ತಿದ್ದಳು.

ನನ್ನ ಬಾಳ ಕಾಡ್ಯಾಳು
ಎಲ್ಲೆರ ಅದಿಯ ನನ್ನ ರಾಣಿ
ಹೆಂಗರ ಅದಿಯ ನನ್ನ ರಾಣಿ

ಸೈಕಲ್ ತೊಗೊಂಡ ಬರುತ್ತಿನಿ
ತೋಟದ ಹಾದ್ಯಾಗ ಇರತ್ತಿನಿ
ಗೆಳತಿ ನನ್ನ ಮಾರಿ ಇದಂಗ ಮನಸ್ಸ
ಇಲ್ಲ...ಮನಸ್ಸ ಇದ್ದಂಗ ಮಾರಿ ಇಲ್ಲ.[೫]

ಮುಗ್ಧ ಪ್ರೀತಿಯಲ್ಲಿ ಸಿಕ್ಕಿಹಾಕಿಕೊಂಡು ಇನ್ನೂ ಬಲಿಯದ ಪ್ರಿಯಕರನು ತನ್ನ ಪ್ರೇಯಸಿಯನ್ನು ಭೇಟಿಯಾದಾಗಿನ ಸಾಂದರ್ಭಿಕ ಘಳಿಗೆಗಳನ್ನು ಒಂದೊಂದಾಗಿ ಮೆಲುಕು ಹಾಕುವ ಪದ್ಯ ಇದಾಗಿದೆ. ಪ್ರೇಯಸಿ ತನಗೆ ಪ್ರಿಯಕರನ ಅವಶ್ಯವಿದ್ದಾಗ ಭೇಟಿಯಾಗಿ ಕೂಡಿದರೆ, ಅದೆ ಕೂಡುವಿಕೆಗೆ ಪ್ರಿಯಕರ ಹಾತೊರೆದು ನೆನಪಿಸಿಕೊಂಡು ಹಾಡಿದ ಹಾಡು ಇದಾಗಿದೆ.

**ಸಾಲಿಗಿ ಬರತಿದ್ದಿ ಸೈಕಲ್ ತರತಿದ್ದಿ :**

ಸಾಲಿಗಿ ಬರತಿದ್ದಿ ಸೈಕಲ್ ತರತಿದ್ದಿ
ಟ್ರ್ಯಾಕ್ಟರ್ ಮುಂದ ನಿಲ್ಲತಿದ್ದಿ
ಗೆಳತಿಯ ಮ್ಯಾಲಹಾಸಿ ಮಾತಾಡತಿದ್ದಿ
ನನಗ ನೋಡಿ ನಗತಿದ್ದಿ

ಸಾಲಿಗಿ ಬರತಿದ್ದಿ ಸೈಕಲ್ ತರತಿದ್ದಿ
ಟ್ರ್ಯಾಕ್ಟರ್ ಮುಂದ ನಿಲ್ಲತಿದ್ದಿ
ಗೊಂಟಗಿ...ತಟ್ಟಿನಾ...ಬಿಳ್ಳಾಗ ಕೈ ಹಿಡದಿ
ಊರ ಬಿಟ್ಟ ಊರಿಗಿ
ಬಂದಿದ್ನೆ ನಿನಗಾಗಿ

ಹೋಗಬ್ಯಾಡ ಎ ಹುಡಗಿ
ನನ್ನ ಬಿಟ್ಟ ಮದುವ್ಯಾಗಿ.[೬]

ಬದುಕಿನ ಬಂಡಿ ಉರುಳಲು ಟ್ರ್ಯಾಕ್ಟರ್ ಚಾಲಕನಾಗಿ ಕಾಯಕದಲ್ಲಿ ತೊಡಗಿದ್ದ 'ಹಳ್ಳಿ ಡ್ರೈವರ್'ನನ್ನು ಕೂಡ ಪ್ರೀತಿಯ ಈ ಸೆಳೆತ ಬಿಟ್ಟಿಲ್ಲ. ಪ್ರೀತಿ ಕುರುಡು ಅದಕ್ಕೆ ಯಾವುದೇ ಗಡಿ, ಸೀಮೆ, ನಿರ್ಬಂಧವಿಲ್ಲ. ಟ್ರ್ಯಾಕ್ಟರ್ ಡ್ರೈವರ್‌ನೊಬ್ಬ ತನ್ನ ಪ್ರೇಯಸಿಯು ಕೊಟ್ಟ ಪ್ರೀತಿಯ ಕ್ಷಣಗಳನ್ನು 'ಸಾಲಿಗಿ ಬರತಿದ್ದಿ ಸೈಕಲ್ ತರತಿದ್ದಿ, ಟ್ರ್ಯಾಕ್ಟರ್ ಮುಂದ ನಿಲ್ಲತಿದ್ದಿ' ಎಂದು ಮೆಲುಕು ಹಾಕಿದ್ದಾನೆ.

ಇಂದು ಭವಿಷ್ಯವನ್ನು ಕಟ್ಟಿಕೊಳ್ಳಬೇಕಾದ ನಮ್ಮ ಯುವಜನಾಂಗ ಬದಲಾಗಿ ಪ್ರೀತಿಯ ಹಾಡುಗಳನ್ನು ಕಟ್ಟಿ ಹಾಡುತ್ತಿದ್ದಾರೆ. ಇಂದಿನ ಚಲನಚಿತ್ರಗಳು ಸಹ ಇಂತಹ ಪಾಠವನ್ನೇ ಕಲಿಸುತ್ತಿವೆ. ಗಂಡು-ಹೆಣ್ಣು ಪರಸ್ಪರ ಹೇಗೆ ಆಕರ್ಷಣೆಗೆ ಒಳಗಾಗುತ್ತಿದ್ದಾರೆ ಎಂಬುದರ ಒಂದು ಉದಾಹರಣೆಯಾಗಿ ಈ ಪದ್ಯ ಮೂಡಿಬಂದಿದೆ.

**ಬಾಜು ಬೆಂಚಿನ್ಯಾಗ ಕುಂದರಾಕಿ :**

ಬಾಜು ಬೆಂಚಿನ್ಯಾಗ ಕುಂದರಾಕಿ...
ನನ್ನ ಸಲುವಾಗಿ ಕಾಯಾಕಿ
ಮಾಸ್ತರ ಒಳಗ ಬರುತನಕ
ಮಾತ ಹೇಳಿ ಬಲು ಕಾಡಾಕಿ...
ಆಟಕ ಬಿಟ್ಟರಂತು ಗೆಳೆಯರನ ಕೇಳಿ ಹುಡುಕಾಕಿ
ಆಟಕ ಬಿಟ್ಟರಂತು ಗೆಳೆಯರನ ಕೇಳಿ ಹುಡುಕಾಕಿ...

ಎಲ್ಲ ಹುಡುಗ್ಯಾರವಳಗ
ಚಂದ ನನ್ನಾಕಿ
ಪರವಾಸಕ ಹೋಗಿ ಬರುತನ ಬಸ್ಸಿನ್ಯಾಗ
ಬರೇ ನನ್ನ ಬಾಜು ಕುಂದ್ರಾಕಿ
ಕಣ್ಣಾಗ ಕಾಡಿ ಮನಸಾಗ ಮೂಡಿ
ಹೆಂಗರೆ ಮರಿತಾಳಾಕಿ.[೭]

ವಿದ್ಯಾಭ್ಯಾಸದ ಜೊತೆಗೆ ಪರಸ್ಪರ ಪ್ರೀತಿಸಿದ ಸಹಪಾಠಿಗಳು ಆನಂತರದಲ್ಲಿ ದೂರಾದಾಗ ಕಾಡಿದ ನೆನಪುಗಳು ಪ್ರಿಯಕರನಿಂದ ಹಾಡಾಗಿ ಅಂತರಂಗದಿಂದ ಒಡಮೂಡಿವೆ. ಇಂದು ಕಾಲೇಜ ವಿದ್ಯಾರ್ಥಿಗಳು ಯಾವ ರೀತಿಯ ಜನಪದ ಹಾಡುಗಳನ್ನು ಕೇಳುತ್ತಾರೆ, ಜೊತೆಗೆ ಹಾಡುಗಳನ್ನು ರಚನೆ ಮಾಡುವ ಗೀಳನ್ನು ಸಹ ಹಚ್ಚಿಕೊಂಡಿದ್ದಾರೆ ಎಂಬುದು ಈ ಹಾಡನ್ನು ನೋಡುವುದರಿಂದ ಅರ್ಥೈಸಬಹುದು. ಪರಸ್ಪರ ಆಕರ್ಷಣೆಯ ಪ್ರತೀಕವಾಗಿ ಈ ಹಾಡು ರಚನೆಗೊಂಡಿದೆ.

**ಎನ್ ಚಂದ ಕಾಣತಿಯ ಪೋರಿ :**

ಎನ್ ಚಂದ ಕಾಣತಿಯ ಪೋರಿ
ನೀ ನಾಜೂಕ ನಾರಿ...
ಏಷ್ವ ಚಂದ ಕಾಣತಿಯೆ ಪೋರಿ
ನೀ ನಾಜೂಕ ನಾರಿ...

ಗೋಧಿಯ ಬಣ್ಣ ಬೆಕ್ಕಿನ ಕಣ್ಣ
ತುಂಬಿದ ನಿನಗಲ್ಲ ಸೇಬು ಹಣ್ಣ
ಗೋಧಿಯ ಬಣ್ಣ ಬೆಕ್ಕಿನ ಕಣ್ಣ
ತುಂಬಿದ ನಿನಗಲ್ಲ ಸೇಬು ಹಣ್ಣ

ರಾಧಿಕ ಪಂಡಿತ ಇದ್ದಂಗ್ ನೀನ
ರಾಧಿಕ ಪಂಡಿತ ಇದ್ದಂಗ್ ನೀನ
ನಿನ ನೋಡಿ ಹುಡಗುರು ಕಳಿತಾರ ಚೊಣ್ಣ ಚೊಣ್ಣ
ಆಅ...ಆಅ...ಆಅ...

ಎನ ಚಂದ...ಎನ ಚಂದ...
ಎನ ಚಂದ ಕಾಣತಿಯೆ ಪೋರಿ
ನೀ ನಾಜೂಕ ನಾರಿ
ಎಷ್ವ ಚಂದ ಕಾಣತಿಯೆ ಪೋರಿ
ನೀ ನಾಜೂಕ ನಾರಿ
ತುಂಬಿದ ಗಲ್ಲಕ ಕೋಡಲೆನ ಬೆಲ್ಲ
ನಿನ ನೋಡಿ ಹುಡುಗುರು ಸೊರಸ್ಯಾರ ಜೊಲ್ಲ

ತುಂಬಿದ ಗಲ್ಲಕ ಕೋಡಲೆನ ಬೆಲ್ಲ
ನಿನ ನೋಡಿ ಹುಡುಗುರು ಸೊರಸ್ಯಾರ ಜೊಲ್ಲ
ಕಣ್ಣ ಹೋಡಿಯಬ್ಯಾಡ ಹುಡುಗಿ ಹಗಲೆಲ್ಲ
ಕಣ್ಣ ಹೋಡಿಯಬ್ಯಾಡ ಹುಡುಗಿ ಹಗಲೆಲ್ಲ
ನಿನಗ ತೋರಸತೆನ ಬೆಳ್ಳುಬ್ಬಿ ಕೆನಾಲ್...
ಆಅ...ಆಅ...ಆಅ...

ಎನ ಚಂದ...ಎನ ಚಂದ...
ಎನ ಚಂದ ಕಾಣತಿಯೆ ಪೋರಿ
ನೀ ನಾಜೂಕ ನಾರಿ
ಎಷ್ವ ಚಂದ ಕಾಣತಿಯೆ ಪೋರಿ

ನೀ ನಾಜೂಕ ನಾರಿ

ಕೆಂಪಾನ ಹುಡುಗಿ ಜ್ವಾಕಿ ನಿನ್ನ ಗಡಗಿ
ನನ ಕೈಯಾಗ ಸಿಕ್ಕ ಒದ್ಯಾಡಿ ಹೋಗಿ
ಇದ್ದಂಗ ನೀನು ಮೊಸರಿನ ಗಡಗಿ
ಇದ್ದಂಗ ನೀನು ಮೊಸರಿನ ಗಡಗಿ
ಹೊಳ್ಳಿ ನೋಡಬ್ಯಾಡ ನನ ತಿರುಗಿ...
ಈಈ...ಈಈ...ಈಈ...

ಎನ ಚಂದ...ಎನ ಚಂದ...
ಎನ ಚಂದ ಕಾಣತಿಯೆ ಪೋರಿ
ನೀ ನಾಜೂಕ ನಾರಿ
ಎಷ್ಟ ಚಂದ ಕಾಣತಿಯೆ ಪೋರಿ
ನೀ ನಾಜೂಕ ನಾರಿ

ಗೋಧಿಯ ಬಣ್ಣ ಬೆಕ್ಕಿನ ಕಣ್ಣ
ತುಂಬಿದ ನಿನಗಲ್ಲ ಸೇಬು ಹಣ್ಣ
ಗೋಧಿಯ ಬಣ್ಣ ಬೆಕ್ಕಿನ ಕಣ್ಣ
ತುಂಬಿದ ನಿನಗಲ್ಲ ಸೇಬು ಹಣ್ಣ

ಎನ ಚಂದ...ಎನ ಚಂದ...
ಎನ ಚಂದ ಕಾಣತಿಯೆ ಪೋರಿ
ನೀ ನಾಜೂಕ ನಾರಿ
ಎಷ್ಟ ಚಂದ ಕಾಣತಿಯೆ ಪೋರಿ
ನೀ ನಾಜೂಕ ನಾರಿ.[೮]

ಪ್ರಿಯಕರ ತಾನು ಪ್ರೀತಿಸಿದ 'ನಾಜೂಕ ನಾರಿ'ಯನ್ನು ಹೊಗಳಿ ಹೊಗಳಿ ಬಣ್ಣಿಸಿದ ಪರಿಯನ್ನು ನೋಡಿದರೆ, ಆ ಚಂದ ಪೋರಿ ಅವನಲ್ಲಿ ಎಷ್ಟೊಂದು ಅಚ್ಚೊತ್ತಿದ್ದಾಳೆಂಬುದು ಈ ಪದ್ಯದಿಂದ ಅರ್ಥೈಯಿಸಬಹುದು.

'ಗೋಧಿಯ ಬಣ್ಣ ಬೆಕ್ಕಿನ ಕಣ್ಣ, ತುಂಬಿದ ನಿನಗಲ್ಲ ಸೇಬು ಹಣ್ಣ' ಎಂದು ತನ್ನ ಜವಾರಿ ಮಾತುಗಳಲ್ಲಿ ಅವಳನ್ನು ಸ್ಮರಿಸುತ್ತಾನೆ. ಅಷ್ಟೇ ಅಲ್ಲ ಕನ್ನಡ ಸಿನಿಮಾದ ಖ್ಯಾತತಾರೆ ರಾಧಿಕಾ ಪಂಡಿತ ಅವರಿಗೂ ಅವಳನ್ನು ಹೋಲಿಸುವ ಪರಿ ಅದ್ಭುತವಾಗಿದೆ. ಹಾಗೇ 'ಕೆಂಪಾನ ಹುಡುಗಿ ಜ್ವಾಕಿ ನಿನ್ನ ಗಡಗಿ' ಎನ್ನುವಲ್ಲಿ ಅವಳಿಗೆ ಶೀಲ, ಚ್ಯಾರಿತ್ರ್ಯ, ಪಾವಿತ್ರ್ಯದ ಬಗ್ಗೆ ಇಲ್ಲಿ ಎಚ್ಚರಿಕೆ ಸಹ ಇದೆ.

ಹಿಂದಿನ ಕಾಲದಲ್ಲಿ ಹಾಗೂ ಇಂದಿನ ಕಾಲದಲ್ಲಿ ರಚನೆಯಾದ ಹಾಡುಗಳಲ್ಲಿ ಬಹಳಷ್ಟು ವ್ಯತ್ಯಾಸವನ್ನು ಕಾಣುತ್ತೇವೆ. ನಾಜೂಕ ನಾರಿ ಎಂದು ಕರೆಸಿಕೊಳ್ಳುವ ಹೆಣ್ಣು ಮಗಳ ವರ್ಣನೆಯನ್ನು ಪ್ರಸ್ತುತ ಕಾವ್ಯದಲ್ಲಿ ಕಾಣುತ್ತೇವೆ.

**ಅದು ಬ್ಯಾರೇನೆ ಐತಿ :**

ಎ ಮಾತು ಆಡಿದರೆ ಮುತ್ತು ಒಡೆದರೆ
ಮರಳಿ ಬರುವುದಿಲ್ಲೋ ಅದು ಬ್ಯಾರೇನ ಐತಿ
ಅದು ಬ್ಯಾರೇನೆ ಐತಿ॥

ದೊಡ್ಡ ದೊಡ್ಡ ಪ್ಯಾಟ್ಯಾಗ ಕಿಶೆ ಹೊಡೆಯತಾರ
ಪೋಲಿಸ್ರು ಹಿಡಿದಿಲ್ರೋ ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ
ಬೀಳೆ ಹಾಳೆ ಮೇಲೆ ಕೆಲಸ ಮಾಡುತ್ತಾರ
ಒಳಗ ಒಗೆಯೊದಿಲ್ರೋ ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ

ಎ ಮಾತು ಅಡಿದರೆ ಮುತ್ತು ಒಡೆದರೆ
ಮರಳಿ ಬರುವದಿಲ್ಲೋ ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ
ವರ್ಷಕ ಒಮ್ಮೆ ಎಲೆಕ್ಷನ್ ಮಾಡತ್ತಾರ
ಊರ ಉದ್ಧಾರಕಲ್ರೋ...ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ

ಹೆಂಗೋ ಎನೋ ಆರಿಸಿ ಬರುತ್ತಾರ
ನನಗೇನೂ ತಿಳದಿಲ್ರೋ ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ

ಎ ಮಾತು ಆಡಿದರೆ ಮುತ್ತು ಒಡೆದರೆ
ಮರಳಿ ಬರುವುದಿಲ್ರೋ ಅದು ಬ್ಯಾರೇನ ಐತಿ
ಅದು ಬ್ಯಾರೇನೆ ಐತಿ

ಎಂ.ಎಲ್.ಎ ಮನೆಯಾಗ ದೊಡ್ಡ ದೊಡ್ಡದಾಗಿ
ಮಾಯ ಮಾಡ ಬರದೂ ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ

ಊರಾಗ ಐದು ಮಂದಿ ಮೆಂಬರಿರತ್ತಾರ
ಕೆಲಸ ಏನೂ ಮಾಡೊದಿಲ್ರೋ ಅದು ಬ್ಯಾರೇನೆ ಐತಿ

ಅದು ಬ್ಯಾರೇನೆ ಐತಿ
ಎ ಮಾತು ಆಡಿದರೆ ಮುತ್ತು ಒಡೆದರೆ
ಮರಳಿ ಬರುವುದಿಲ್ಲೋ ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ

ಗೋಡಾವನದಾಗಿನ ಅಕ್ಕಿ ಎಲ್ಲಾ
ಹೆಗ್ಗಣ ತಿಂದಿಲ್ರೋ ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ

ಸೀಮೆ ಎಣ್ಣೆ ಬ್ಯಾರಲಕೆಲ್ಲ
ತೂತೆನೂ ಬಿದ್ದಿಲ್ರೋ...ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ
ಎ ಮಾತು ಆಡಿದರೆ ಮುತ್ತು ಒಡೆದರೆ
ಮರಳಿ ಬರುವುದಿಲ್ರೋ ಅದು ಬ್ಯಾರೇನ ಐತಿ
ಅದು ಬ್ಯಾರೇನೆ ಐತಿ

ಟೊಂಕವಳ್ಳಿಸಿ ನಡೆಯುವವರೆಲ್ಲಾ
ನಾರಿಯರಲ್ಲೋ ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ

ಸೀರೆ ಉಟ್ಟೋರೆಲ್ಲ ನೀವು
ಹೆಂಗಸರನ್ನ ಬ್ಯಾಡ್ರೋ...ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ
ಎ ಮಾತು ಆಡಿದರೆ ಮುತ್ತು ಒಡೆದರೆ
ಮರಳಿ ಬರುವುದಿಲ್ಲೋ ಅದು ಬ್ಯಾರೇನ ಐತಿ
ಅದು ಬ್ಯಾರೇನೆ ಐತಿ
ಈಗಿನ ಹುಡುಗರು ಕಾಲೇಜಕ ಹೋಗತ್ತಾರ
ಈಗಿನ ಹುಡಿಗೆರು ಕಾಲೇಜಕ ಹೋಗುತ್ತಾರ
ಕಲಿಯೊದಕಲ್ರೋ ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ

ಈಗಿನ ಬಾಗೇಶ ಹಾಡ ಬರೆಯತನ
ಯಾಕಂತ ಕೇಳಬ್ಯಾಡ್ರೋ ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ

ಎ ಮಾತು ಆಡಿದರೆ ಮುತ್ತು ಒಡೆದರೆ

ಮರಳಿ ಬರುವುದಿಲ್ಲೋ ಅದು ಬ್ಯಾರೇನ ಐತಿ
ಅದು ಬ್ಯಾರೇನೆ ಐತಿ

ನನ್ನ ಹಾಡು ತಿಳಿಲಿಲ್ಲಂದ್ರ
ಪೋನ್ ಮಾಡಿ ಕೇಳೋ...ಅದು ಬ್ಯಾರೇನೆ ಐತಿ
ಅದು ಬ್ಯಾರೇನೆ ಐತಿ

ನನ್ನ ಮೊಬೈಲ್ ಸುಚ್‌ಆಪ್ ಇದ್ದರ
ಬಿಳೇಬಾವಿಗೆ ಬಂದು ಬಿಡ್ರೋ ತಾಳಿಕೋಟಿ
ರೊಡ್ನಾಗ ಐತಿ
ತಾಳಿಕೋಟಿ ರೋಡ್ನಾಗ ಐತಿ
ತಾಳಿಕೋಟಿ ರೋಡ್ನಾಗ ಐತಿ.[೯]

ಹಳ್ಳಿಯಿಂದ ದಿಲ್ಲಿಯವರೆಗೆ ಈ ದೇಶದಲ್ಲಿ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರ, ವ್ಯಭಿಚಾರ, ಮೋಸ, ಲಂಚ, ಸುಲಿಗೆ, ವಂಚನೆ, ಕಳ್ಳತನ ಮುಂತಾದ ಕೃತ್ಯಗಳನ್ನು ಪದ್ಯದಲ್ಲಿ ವಿಡಂಬಿಸಿರುವುದನ್ನು ಕಾಣುತ್ತೇವೆ. ಮನುಷ್ಯ ತನ್ನ ಸ್ವಾರ್ಥ ಸಾಧನೆಗೆ, ಇಷ್ಟಾರ್ಥ ಸಿದ್ಧಿಗಾಗಿ ಎಂಥ ವಾಮ ಮಾರ್ಗಗಳನ್ನು ಹಿಡಿದಿದ್ದಾನೆನ್ನುವುದಕ್ಕೆ ಈ ಪದ್ಯವು ಕೈಗನ್ನಡಿಯಾಗಿದೆ. ಮೇಲ್ನೋಟಕ್ಕೆ ಪದ್ಯವು ಹಾಸ್ಯಧಾಟಿಯನ್ನು ಹೊಂದಿದ್ದರು, 'ಅದು ಬ್ಯಾರೇನೆ ಐತಿ' ಎನ್ನುವಲ್ಲಿ ಕೇಳುಗರಲ್ಲಿ ಪ್ರಶ್ನೆ ಹುಟ್ಟಿಸಿ, ತನ್ನಿಂತಾನೇ ಅರ್ಥವಾಗುತ್ತಾ ಹೋಗುತ್ತದೆ. ಆಧುನಿಕ ಜನಪದದಲ್ಲಿ ಬಂಡಾಯ ಮನೋಧರ್ಮವು ಈ ರೀತಿ ಮೈತಳೆದುದು ವಿನೂತನವಾಗಿದೆ.

ಆಧುನಿಕ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುತ್ತಿರುವ ಜನಪದ ಹಾಡುಗಳು ಇಂದು ಎಲ್ಲರ ಗಮನವನ್ನು ಸೆಳೆಯುತ್ತಿವೆ ಎಂದೇ ಹೇಳಬಹುದು. ಬಾಗೇಶ ಜಾದಗೌಡ ಅವರು ಹಾಡಿದ ಈ ಮೇಲಿನ ಹಾಡನ್ನು ನೋಡಿದಾಗ ಪ್ರಸ್ತುತ ಸಮಾಜದಲ್ಲಿ ದೊಡ್ಡ ದೊಡ್ಡ ಪ್ಯಾಟ್ಯಾಗ ಕಿಶೆಗಳ್ಳರಿದ್ದಾರೆ, ಮಾತು ಆಡಿದರೆ ಹೋಯಿತು ಮುತ್ತು ಒಡದರೆ ಹೋಯಿತು, ಎಲೆಕ್ಷನ್, ಎಂ.ಎಲ್.ಎ ಮನೆಗೆ ಬರುವುದು, ಈಗಿನ ಹುಡುಗರು–ಹುಡುಗಿಯರು ಕಾಲೇಜಿಗೆ ಹೋಗುತ್ತಾರೆ ಎಂಬ ವಿಷಯದ ಕುರಿತು ಹೇಳುವುದು, ಕೊನೆಗೆ ಅದು ಬ್ಯಾರೇನ ಐತಿ...ಎಂದು ಹೇಳುವುದರೊಂದಿಗೆ ಹಾಡು ಮುಕ್ತಾಯಗೊಳ್ಳುತ್ತದೆ.

**ಸೇಟಗೊಂಡಿ ಏನ ಗೆಳತಿ :**

ಸೇಟಗೊಂಡಿ ಏನ ಗೆಳತಿ
ನನ ಮಾರಿ ನೋಡಾಕ ಬರವಲ್ಲಿ॥

ಯಾರೆನ್ ಚುಚ್ಯಾರ ನಿನಗ
ಮಾರಿ ಗಂಟ ನೀ ತಗಿವಲ್ಲಿ

ಸಿಗವಲ್ಲಿ ಸಿಗವಲ್ಲಿ ನನ್ನ ನೋಡಿ ನಗವಲ್ಲಿ
ಬರವಲ್ಲಿ ಬರವಲ್ಲಿ ಬೋರಿನ ನೀರಿಗಿ ಬರವಲ್ಲಿ

ಕಲಕೊಂಡಿ ಕೆಟ್ಟ ಚಾಳಿ
ನೀ ಹಗ್ಗ ತಿನ್ನೋದು ಬಿಡವಲ್ಲಿ॥

ಮಂದ್ಯಾಕ ಚುಚ್ಚತಾರ
ನಾನು ನೋಡಿನಿ ಹೋಲದಲ್ಲಿ
ಬಿಡವಲ್ಲಿ ಬಿಡವಲ್ಲಿ ನನ್ನರ ಕೈಯ ಬಿಡವಲ್ಲಿ
ಹಿಡಿವಲ್ಲಿ ಹಿಡಿವಲ್ಲಿ ಪೂರಾ ಆಕಿನರ ಹಿಡಿವಲ್ಲಿ

ಸೇಟಗೊಂಡಿ ಎನ ಗೆಳತಿ
ಬಿಟ್ಟಿನಂತ ಬಾಯಿಲೆ ಹೇಳತಿ
ಅವರ ಮನಿ ಸಂದ್ಯಾಗ ಇರತಿ
ಸಂಡೇ ಮಂಡೇ ಸೀರಿ ತಂದ
ತುಡುಗಿಲೆ ಅಕಿಗೆ ಕೋಡತಿ

ಸಂಸೆಯಾಕ ಮಾಡತಿ ಅಲ್ಲಿ ಸ್ವಲ್ಪ ಕೇಲಸಿತ್ತ
ಗೆಳೆಯಾನ ಮನಿಗೋಗುವಾಗ
ಸುಣ್ಣದ ಕಾಯಿ ಕಳದಿತ್ತ
ಜೋಡಾಗಿ ಇರುವುನಂತ ದೇವರಾಣಿ ಮಾಡಿದಿ
ಕೆಟ್ಟಾಗತೈತೊ ಮನಕ ಬಿಟ್ಟ ಹಾದಿ ನೀ ಹಿಡದಿ

ಸೇಟಗೊಂಡಿ ಎನ ಗೆಳತಿ
ನನ ಮಾರಿ ನೋಡಾಕ ಬರವಲ್ಲಿ
ಕಲಕೊಂಡಿ ಕೆಟ್ಟ ಚಾಳಿ
ನೀ ಹಗ್ಗ ತಿನ್ನೊದು ಬಿಡವಲ್ಲಿ

ಯಾರೆನ ಚುಚ್ಯಾರ ನಿನಗ
ಮಾರಿ ಗಂಟ ನೀ ತಗೆವಲ್ಲಿ
ಬಿಡವಲ್ಲಿ ಬಿಡವಲ್ಲಿ ನನ್ನ ಕೈಯ ಬಿಡವಲ್ಲಿ
ಸಿಗವಲ್ಲಿ ಸಿಗವಲ್ಲಿ ನನ್ನ ನೋಡಿ ನಗವಲ್ಲಿ

ಅಳಕೊಂತ ಅಡ್ಯಾಡ ಬ್ಯಾಡ
ನನ್ನ ಜೋಡಿ ಸೆಟಗೊಂಡ
ನನ್ನ ಬಿಟ್ಟು ಹೋಗಬ್ಯಾಡ
ಮಾರಿ ಸಣ್ಣ ಮಾಡಕೊಂಡ

ನಿನ್ನ ಮಾರಿ ನೋಡದೆ ನಾನು
ಹ್ಯಾಂಗ ಇರಲಿ ತಡಕೊಂಡ
ಹೊಗೊದಿಲ್ಲ ಗೆಳೆಯ ನಾನು
ನಿನ್ನ ಪ್ರೀತಿ ಮುರಕೊಂಡ
ಚಂದಾಗಿ ಬಾಳೆಮಾಡೋ ನನ್ನ ಕೈಯ ಹಿಡಕೊಂಡು
ಇನ್ನಾರ ಇರಬೇಕ ನೀನು ಹೇಳಿದಂಗ ತಿಳಕೊಂಡು
ಸೇಟಗೊಂಡಿ ಎನ ಗೆಳತಿ
ನನ ಮಾರಿ ನೋಡಾಕ ಬರವಲ್ಲಿ॥[೧೦]

ಅನ್ಯರ ಚಾಡಿ ಮಾತಿಗೆ ಬಲಿಯಾಗಿ, ತನ್ನನ್ನು ಮರೆತು ಕುಳಿತಿರುವ ಪ್ರೇಯಸಿಯಲ್ಲಿ ಪ್ರಿಯಕರನು ವಿನಂತಿಸಿಕೊಳ್ಳುವಂತೆ, ನಾನು ಅಂಥ ಚಾರಿತ್ರ್ಯಯುಳ್ಳವನಲ್ಲ ಎಂದು ಸಾಕ್ಷೀಕರಿಸುವ ಪದ್ಯ ಇದಾಗಿದೆ. ಕೆಲವು ಸಂದರ್ಭದಲ್ಲಿ ಸಂಶಯದಿಂದಾಗಿ, ತಪ್ಪು ಕಲ್ಪನೆಯಿಂದಾಗಿ ಪ್ರೀತಿಯಲ್ಲಿ ಒಡಕು ಮೂಡುತ್ತಿರುತ್ತದೆ. ಪ್ರೀತಿಗೆ ಸಾಕ್ಷಿಯಾದವರು ಇಬ್ಬರು ಇದಕ್ಕೆ ಹೊಣೆಗಾರರು. ಅವರು ಒಂದೇ ನಾಣ್ಯದ ಎರಡು ಮುಖ. ಒಂದು ನಾಣ್ಯದ ಒಂದು ಬಾಜುವಿನ ಮುಖ ಜಜ್ಜಿ ಹೋದರೆ ಅದು ತನ್ನ ಮೌಲ್ಯ ಕಳೆದುಕೊಳ್ಳುತ್ತದೆ. ಹಾಗೇ ಪ್ರೇಯಸಿ-ಪ್ರಿಯಕರಲ್ಲಿ ಪ್ರೀತಿಯು ನಂಬಿಕೆ, ವಿಶ್ವಾಸ, ನಿಸ್ಸಂಶಯಗಳಿಂದ ಕೂಡಿದ್ದರೆ ಆ ಪ್ರೀತಿಗೊಂದು ಅರ್ಥವಿರುತ್ತದೆ. ಅದು ಸಾರ್ಥಕವೂ ಆಗುತ್ತದೆ. 'ಚೆಂದಾಗಿ ಬಾಳೆ ಮಾಡೋ ನನ್ನ ಕೈಯ ಹಿಡಕೊಂಡು' ಎನ್ನುವಲ್ಲಿ ಪ್ರೇಯಕರನ ಆಶ್ವಾಸನೆಯನ್ನು ಈ ಪದ್ಯದಲ್ಲಿ ಕಾಣುತ್ತೇವೆ.

ಧರು ಶಿವಣಗಿ ಅವರು ಹಾಡಿದ ಸೇಟಗೊಂಡಿ ಏನ ಗೆಳತಿ ಎಂಬ ಈ ಹಾಡು ಇಂದು ನಡೆಯುತ್ತಿರುವ ಪ್ರೇಮ ಪ್ರಸಂಗಗಳ ಕುರಿತು ವಿಶ್ಲೇಷಣೆಯನ್ನು ಒಳಗೊಂಡಿದೆ. ಯಾರೇನ ಚುಚ್ಯಾರ ನಿನಗ ಮಾರಿ ಗಂಟ ನೀ ತಗಿವಲ್ಲಿ, ಬಿಟ್ಟಿನಂತ ಬಾಯಿಲೆ ಹೇಳತಿ ಅವರ ಮನಿ ಸಂದ್ಯಾಗ ಇರತಿ, ಕಳಕೊಂಡಿ ಕೆಟ್ಟ ಚಾಳಿ ನೀ ಹಗ್ಗ ತಿನ್ನೋದು ಬಿಡವಲ್ಲಿ ಇತ್ಯಾದಿ ವಿಷಯಗಳನ್ನು ಈ ಹಾಡು ಒಳಗೊಂಡಿದೆ.

**ಮನಸರ ಹ್ಯಾಂಗ ಬಂತ ಗೆಳತಿ :**

ಮನಸರ ಹ್ಯಾಂಗ ಬಂತ ಗೆಳತಿ...
ಬಿಟ್ಟು ಹೋಗಲಾಕ ನಿಂತಿ...
ಬಣ್ಣದಮಾತು ನಂಬಿ ನಾ ಕೆಟ್ಟೆ ಹಿಂಗ್ಯಾಕ ಮಾಡಿದಿ
ಕಣ್ಣಾಗ ಕುಂತಿ ಮನದಾಗ ನಿಂತಿ ಈಗ್ಯಾಕ ದೂಡಿದಿ
ಓ...ಬಣ್ಣದಮಾತು ನಂಬಿ ನಾ ಕೆಟ್ಟೆ ಹಿಂಗ್ಯಾಕ ಮಾಡಿದಿ
ಕಣ್ಣಾಗ ಕುಂತಿ ಮನದಾಗ ನಿಂತಿ ಈಗ್ಯಾಕ ದೂಡಿದಿ
ಹಿರಿಯರ ಹೇಳಿದಾಂಗ ಕೇಳದಿದ್ರ್ಯಾಂಗ ಎನ ಮಾಡಬೇಕ

ನನ್ನ ಮನದಾಗ ಎನ ಐತೆಂತ ಹ್ಯಾಂಗ ಹೇಳಬೇಕ
ಗಟ್ಟಿಯಾಗಿ ನಿಲ್ಲಲಿಲ್ಲ ನನ್ನ ಒಂದು ಕೇಳಲಿಲ್ಲ
ನಿನ್ನ ಲಗ್ನಪತ್ರ ಬಂದು ನನ್ನ ಎದೆಯ ಸುಟ್ಟಿತಲ್ಲ
ಮಾತು ಮರೆತು ಹೋಯಿತಲ್ಲ
ನಿಂದು ಎನು ಉಳಿಯಲಿಲ್ಲ

ಗೆಳೆಯ ಹಿಡಿಸಿದೆಲ್ಲೋ ರಾಡಿ...
ಪ್ರೀತಿಗೆ ತಂದಿಯಲ್ಲೋ ಧಾಡಿ...
ಕುಡುಕ ತಂದಿಗೆ ಮಗಳಾಗಿ ಹುಟ್ಟಿ ನಾ ತಪ್ಪು ಮಾಡಿದೆ
ದುಡ್ಡಿನಾಸೆಕ ಮಾರಿಬಿಟ್ವಾನ ಮುಪ್ಪಾನ ಮುದಕಗೆ
ನನ್ನ ಪ್ರೀತಿಯ ಮರೆತು ಹೊಂಟೆಲ್ಲ ಹೆಂತ ಮನಸು ನಿಂದ

ಅಪ್ಪನ ಮಾತು ನಂಬಿ ಕೆಟ್ಟೆ
ಮುದುಕನ ಮಡದಿಯಾಗಿ ಬಿಟ್ಟೆ
ನಿನ್ನ ಮಾತು ಮರೆತು ಬಿಟ್ಟೆ
ಬದುಕಿಗೆ ನಾನೆ ಬೆಂಕಿ ಇಟ್ಟೆ...
ನಿನ್ನ ಬದುಕು ನಿನಗೆ ಬಿಟ್ಟೆ
ನಿನ್ನ ಮರೆತು ನಾನು ಹೊಂಟೆ

ಈಗ ಯಾಕ ಅಳತಿ ಕೋಡಿ
ಹೊಂಟ್ಯೆತಿ ನನ್ನ ಗಾಡಿ
ನಗತಿದ್ದಿ ನನ್ನ ನೋಡಿ
ಹಗಲು ರಾತ್ರಿ ನನ್ನ ಕಾಡಿ
ಮಯ್ಯ ಮರಸತಿದ್ದಿ ಹಾಕಿ
ಅಗಲ್ಯೆತೊ ನಮ್ಮ ಜೋಡಿ

ಮನಸರ ಹ್ಯಾಂಗ ಬಂತ ಗೆಳತಿ...
ಬಿಟ್ಟ ಹೋಗಲಾಕ ನಿಂತಿ...
ನಿನಗ ಇಲ್ಲ ನನ್ನ .......
..................................
.........ಯಾಕ ಮರತ ಹೊಂಟಿ.[೧೧]

ಆಧುನಿಕ ಮಾಧ್ಯಮಗಳ ಗುರುತು ಎಂಬಂತೆ ಬಳಕೆಗೊಳ್ಳುತ್ತಿರುವ ಇಂದಿನ ಜನಪದ ಹಾಡುಗಳು ಗಂಡು-ಹೆಣ್ಣಿನ ಒಂದು ಪ್ರೀತಿಯ ಪ್ರತೀಕವಾಗಿ ರಚನೆಗೊಳ್ಳುತ್ತಿವೆ. ಈ ಹಿನ್ನಲೆಯಲ್ಲಿ ನೋಡುವುದಾದರೆ ವಿಜಯಪುರದ ಧರು ಶಿವಣಗಿ ಅವರು ಹಾಡಿದ

ಮನಸರ ಹ್ಯಾಂಗ ಬಂತ ಗೆಳತಿ ಎಂಬ ಈ ಹಾಡು ಸಹ ಒಂದಾಗಿದೆ. ಇಲ್ಲಿ ಮನಸರ ಹ್ಯಾಂಗ ಬಂತ ಗೆಳತಿ...ಬಿಟ್ಟು ಹೋಗಲಾಕ ನಿಂತಿ...ನಿನಗ ಇಲ್ಲ ನನ್ನ ಚಿಂತಿ...ನನಗ ಐತಿ ನಿನ್ನ ಭ್ರಾಂತಿ ಹೀಗೆ ಎಲ್ಲವನ್ನು ಪ್ರೇಮದ ಸಂಕೇತವಾಗಿ ತೋರಿಸುತ್ತದೆ.

**ನನ ಗೆಳತಿ ನನ ಗೆಳತಿ :**

ನನ ಗೆಳತಿ ನನ ಗೆಳತಿ
ನನ ನೋಡಿ ನೀ ನಗತಿ...
ಓಣಿ ಹಿಡಿದ ನಾ ಬರುವಾಗ
ಹಳ್ಳ ಹೊಡಿತಿದಿ ನಿಂತ ಕಿಡಕ್ಯಾಗ
ಮನಸಾತು ನೀನಮ್ಯಾಲ
ಮೆಟ್ಟಮಾಡಿದಿ ಮನದಾಗ...

ಓಣಿ ಹಿಡಿದು...ನಾ ಬರುವಾಗ
ಹಳ್ಳ ಹೊಡಿತಿದಿ ನಿಂತ ಕಿಡಕ್ಯಾಗ॥
ಮನಸಾತು ನೀನಮ್ಯಾಲ
ಮೆಟ್ಟಮಾಡಿದಿ ಮನದಾಗ...

ಗೆಜ್ಜಿ ಚೈನ ಕಾಲಾಗ ಹಾಕೊಂಡನೀ ನಡಿವಾಗ
ದೇವಲೋಕದಿಂದ ಅಪ್ಸರೆ ಧರೆಗೆ ಇಳಿದು ಬಂದಂಗ॥
ನನ್ನ ನೋಡಿ ನೀ ನಕ್ಕಾಗ ರೋಮಾಂಚನ ನನ್ನ ಮಯ್ಯಾಗ
ನನ್ನ ನೋಡಿ ನೀ ನಕ್ಕಾಗ ರೋಮಾಂಚನ ನನ್ನ ಮಯ್ಯಾಗ
ಮನಸ್ಸಾತು ನೀನಮ್ಯಾಲ
ಮತ್ತ ಕೂಡುದು ಯಾವಾಗ

ನನ ಗೆಳತಿ ನನ ಗೆಳತಿ...ನನ ನೋಡಿ ನೀ ನಗತಿ...
ನನ ಗೆಳತಿ ನನ ಗೆಳತಿ...ನನ ನೋಡಿ ನೀ ನಗತಿ...
ಬಸವಣ್ಣನ ಜಾತ್ರ್ಯಾಗ ಕುಂಭ ಹೊತ್ತಿ ತಲಿಮ್ಯಾಲ
ಓಣಿ ಹಿಡಿದ ನೀ ಬರುವಾಗ ನವಿಲು ನಡಿಗೆ ನಡದಂಗ॥
ನಿನ್ನ ರೂಪ ನನ ಕಣ್ಣಾಗ ಸಿಡಿಲ ಹೊಡದಂಗಾತ ನನ
ಎದಿಯಾಗ
ನನ್ನ ಕೂಡುದು ಯಾವಾಗ
ಮನಸ್ಸಾತು ನಿನ ಮ್ಯಾಗ

ನನ ಗೆಳತಿ...ನಾ ಬರುವಾಗ
ಹಳ್ಳ ಹೊಡಿತಿದಿ ನಿಂತ ಕಿಡಕ್ಯಾಗ

ನನ ಗೆಳತಿ ನನ ಗೆಳತಿ...ನನ ನೋಡಿ ನೀ ನಗತಿ
ನನ ಗೆಳತಿ ನನ ಗೆಳತಿ...ನನ ನೋಡಿ ನೀ ನಗತಿ.[೧೨]

ಬಾಗಲಕೋಟೆಯ ಶ್ರೀಕಾಂತ ಆರ್. ಬಿಲಕೇರಿ ಅವರು ಹಾಡಿದ ಈ ಹಾಡು ಹೆಣ್ಣು ಮಗಳನ್ನು ಪ್ರೀತಿಯ ಹಿನ್ನಲೆಯಲ್ಲಿ ಅವಳನ್ನು ಹೋಗಳುತ್ತಿರುವುದು. ನನ ನೋಡಿ ನೀ ನಗತಿ...ಓಣಿ ಹಿಡಿದ ನಾ ಬರುವಾಗ, ಹಳ್ಳ ಹೊಡಿತಿದಿ ನಿಂತ ಕಿಡಕ್ಯಾಗ, ಮನಸಾತು ನೀನಮ್ಯಾಲ ಮೆಟ್ಟಮಾಡಿದಿ ಮನದಾಗ, ನಿನ್ನ ರೂಪ ನನ ಕಣ್ಣಾಗ ಸಿಡಿಲ ಹೊಡದಂಗಾತ ನನ ಎದಿಯಾಗ ಅಲ್ಲದೇ ಗೆಜ್ಜಿ ಚೈನ ಕಾಲಾಗ ಹಾಕೊಂಡ ನೀ ನಡಿವಾಗ ದೇವಲೋಕದ ಅಪ್ಸೆರೆ ಧರೆಗೆ ಇಳಿದು ಬಂದಾಂಗ ಅವಳನ್ನು ಮೆಚ್ಚಿಸುವ ಸಲುವಾಗಿ ಮಾಡಿದ ಪದಗಳ ಜೋಡಣೆಯಂತಿದೆ.

**ಹುಬ್ಬಳ್ಳಿ ಪೋರಿ :**

ಹುಬ್ಬಳ್ಳಿ ಪೋರಿ...
ಬಂದಿ ನೀ ಹಾರಿ...॥
ತಿರಗಸಬ್ಯಾಡ್ ನೀ ಮಾರಿ
ಹುಡುಗಿ ತಿರಗಸಬ್ಯಾಡ ನೀ ಮಾರಿ

ನಿನ್ನ ಮ್ಯಾಲೇ ಮನಸ್ಸಾಗಿ
ಬಂದಿನಿ ಹೌಹಾರಿ
ಹುಚ್ಚಿಡಿಸಬ್ಯಾಡ್ ನೀ ಪೋರಿ

ಎ ಮಾವಾ ।ಹೆ।
ಏನ್ ಹುಡುಗಿ ।ಗ।
ಚುಟ್ಟು ಚುಟ್ಟು ।ಹೆ।
ಎಲ್ಲೆ ।ಗ।
ಚುಟು ಚುಟು ಅನುತೈತಿ
ನನಗ ಚುರು ಚುರು ಆಗತೈತಿ॥

ಬಿಜಾಪುರ ಮಾವಾ ನೀ ನನ್ನ ಜೀವಾ
ಬಿಜಾಪುರ ಮಾವಾ ನೀ ನನ್ನ ಜೀವಾ
ಜಗ್ಗಬ್ಯಾಡ ನೀ ಮಾವ ಕೈಯ ಜಗ್ಗಬ್ಯಾಡ ನೀ ಮಾವಾ
ನಿನ್ನ ಮ್ಯಾಲೇ ಮನಸ್ಸಾಗಿ ಬಂದಿನೀ
ಹೌಹೌರಿ॥
ಹುಚ್ಚ ಹಿಡಿಸಬ್ಯಾಡ ನೀ ಮಾವಾ

ಎ ಮಾವಾ ।ಹೆ।

ಏನ್ ಹುಡುಗಿ ।ಗ।
ಚುಟ್ಟು ಚುಟ್ಟು ।ಹೆ।
ಎಲ್ಲೆ ।ಗ।
ಚುಟು ಚುಟು ಅನುತೈತಿ
ನನಗ ಚುರು ಚುರು ಆಗತೈತಿ॥

ಎ ಹುಡುಗಿ ಎನು ಚಂದ ಈ ನಿನ್ನ
ಮೈಮಾಟ ಅಬ್ಬಬ್ಬ...
ನಿನ್ನ ಮ್ಯಾಲೆ ಮನಸ್ಸಾಗಿ ಬಂದಿನಿ ತೆಲಿಕೆಟ್ಟ
ಚುಟು ಚುಟು ಅನುತೈತಿ
ನನಗ ಚುರು ಚುರು ಮಾಡತೈತಿ॥

ಮುಗಿಲ ಮ್ಯಾಲೆ ಚಂದ್ರ ನೀನು
ನೆಲದ ಮ್ಯಾಲಿನ ರಾಣಿ ನಾನು
ಹಗಲು ರಾತ್ರಿ ಪ್ರೀತಿಸು ಬಾರೊ
ನೀ ಹಗಲು ರಾತ್ರಿ ಪ್ರೀತಿಸು ಬಾರೊ॥

ಈ ನಿನ್ನ ಗಿಳಿ ಮೂಗು ಬಣ್ಣಾದ ಗುಲಗಂಜಿ॥
ಹೇಯ ಹೇಯ ಹೇಯ ಮುದ್ದಾದ ಅಪರಂಜಿ ಬಾ...ಆ..ಆ..ಆ
ಏನ್ ಹುಡುಗಿ ।ಗ।
ಎ ಮಾವಾ ।ಹೆ।
ಚುಟ್ಟು ಚುಟ್ಟು ।ಗ।
ಎಲ್ಲೆ ।ಹೆ।
ಚುಟು ಚುಟು ಅನುತೈತಿ
ನನಗ ಚುರು ಚುರು ಮಾಡತೈತಿ॥

ಹುಬ್ಬಳ್ಳಿ ಪೋರಿ...
ಬಂದಿ ನೀ ಹಾರಿ...
ತಿರಗಸಬ್ಯಾಡ್ ನೀ ಮಾರಿ
ಹುಡುಗಿ ತಿರಗಸಬ್ಯಾಡ ನೀ ಮಾರಿ
ನಿನ್ನ ಮ್ಯಾಲೇ ಮನಸ್ಸಾಗಿ
ಬಂದಿನಿ ಹೌಹಾರಿ॥
ಹುಚ್ಚಿಡಿಸಬ್ಯಾಡ್ ನೀ ಪೋರಿ

ಚುಟು ಚುಟು ಅನುತೈತಿ

ನನಗ ಚುರು ಚುರು ಮಾಡತೈತಿ.[೧೩]

ಗದಗ ಜಿಲ್ಲೆಯ ವೀರಯ್ಯಾ ಎಸ್. ಹೊಸಮನಿ ಅವರು ಹಾಡಿದ ಹುಬ್ಬಳ್ಳಿ ಪೋರಿ...ಹಾಡು ಇಂದು ಯುವಜನಾಂಗವನ್ನು ತಟ್ಟಿ ಎಬ್ಬಿಸುವಂತೆ ಮಾಡುತ್ತಿದೆ. ಅಂತಹ ಪದ ಪ್ರಯೋಗ ಈ ಪ್ರಸ್ತುತ ಹಾಡಿನಲ್ಲಿ ಬಳಕೆಗೊಂಡಿವೆ. ಬಿಜಾಪುರ ಮಾವ ನೀ ನನ್ನ ಜೀವಾ, ಜಗ್ಗಬ್ಯಾಡ ನೀ ಮಾವ ಕೈಯ ಜಗ್ಗ ಬ್ಯಾಡ ನೀ ಮಾವ ಎಂಬ ಪದ ಪ್ರಯೋಗಗಳು ಯುವಜನಾಂಗವನ್ನು ಕೈಬಿಸಿ ಕರೆದಂತಾಗುತ್ತಿದೆ.

**ಕಲಿತ ಹುಡಿಗಿ ಕುದರಿ ನಡಗಿ :**

ಕಲಿತ ಹುಡುಗ ಕುದರಿ ನಡಗಿ
ನಡದು ಬರತಿತ್ತ।
ಅದನ್ನು ಕಂಡು ನಮ್ಮ ಹಳ್ಳಿಮಂದಿಗೆ
ದಿಕ್ಕ ತಪ್ಪಿಹೋತ॥

ಉಟ್ಟ ಸೀರೆಯ ಕೆಳಗಿನ ದಡಿಯು ಕಸಾ ಹೊಡೆಯುತ್ತಿತ್ತ
ಮುನಸೀಪಾಲ್ಟಿ ಆಳಿನಕಿಂತ ಸ್ವಚ್ಛ ಮಾಡುತ್ತಿತ್ತ
ಜುಲುಪಿ ಬಿಟ್ಟ ಹಿಂದ ರಿಬ್ಬನ್ನು ಬಾಚಿ ಕಟ್ಟಿತ್ತ
ಭರ‍್ರಂತ ನಡಿಯೋದ್ರಾಗ ರಿಬ್ಬನ್ನು ಥಿರಕಿ ಹೊಡಿತಿತ್ತಾ

ಬಣ್ಣದ ಮುಖದ ಬಡಿದ ಪೌಡರು ಹಾರ‍್ಯಾರಿ ಬರುತ್ತಿತ್ತ
ಹಣೆಗೆ ಹಚ್ಚಿದ ಕುಂಕುಮ ಸಣ್ಣಗ ಹಣಕಿ ಹಾಕತ್ತಿತ್ತ
ಬಳೆಯಿಲ್ಲದ ಬಲಗೈಯಂತೂ ಬಣಬಣ ಅಂತಿತ್ತ
ಎಡಗೈಯಾಗ ರಿಷ್ಟವಾಚ್ ಬಡಿದ ಕುಂತಿತ್ತಾ

ಎತ್ತರ ಹಿಮ್ಮಡ ಚಪ್ಪಲ್ಲೊಮ್ಮೊಮ್ಮೆ ತೊಡ್ರಗಾಲ ಬಡಿತಿತ್ತ
ಮೊಳಕೈಗೊಂದು ರೊಕ್ಕದ ಪರ್ಸು ಜೋತು ಬಿದ್ದಿತ್ತ
ಕಣ್ಣಿನ ನೋಟಕ ಕಾಲಿನ ತಾಳಕ ಎಲ್ಲಿಯ ಪುರುಸೊತ್ತ
ಬಳ್ಳಿಯಾಂಗ ಬಳಕೂ ನಡುವು ನರ್ತನ ನಡೆಸಿತ್ತಾ

ಕಮ್ಮಾರ ಹುಡುಗ ಕಬ್ಬಿಣಾ ಕಾಸಿ ಬಡಕೊಂಡ ಕುಂತಿತ್ತ
ಹಾದು ಹೋಗುವ ಹುಡುಗಿಮ್ಯಾಗ ಅವನ ನೆದರ ಬಿತ್ತ
ಮ್ಯಾಲ ಎತ್ತಿದ ಕಬ್ಬಣ ಸುತ್ತಿಗೆ ಪಟ್ಟಂತ ಕೆಳಗ ಬಿತ್ತ
ಕಬ್ಬಿಣ ಮ್ಯಾಗ ಕುಂದ್ರೋ ಹೊಡತಾ ಕೈಯಮ್ಯಾಲ ಬಿತ್ತ

ಕುಂಬಾರ ಹುಡುಗಾ ಗಡಿಗಿ ಮಾಡಾಕ ಮಣ್ಣ ಕಲಸತಿತ್ತ
ಚಕ್ಕಂತ ಬಂದ ಹುಡುಗಿ ಮ್ಯಾಲ ಬಿತ್ತ ಅವನ ಚಿತ್ತ
ಬುಡುಕ ಕುಂತ ಹುಡುಗನ ಹೆಂಡತಿ ನೀರ ಬೆರಸತಿತ್ತ

ಹೆಂಡತಿ ಖಬರ ಇಲ್ಲದ ತುಳದಾನ ಸೊಂಟ ಮುರುದ ಬಿತ್ತ

ಮ್ಯಾದರ ಹುಡುಗ ಮೆಳ್ಳಗಣ್ಣಿಲೆ ಬಿದರ ಸೀಳತಿತ್ತ
ಮೂಲಿ ಹೊರಳಿ ಹುಡುಗಿ ಹೋಗುವಾಗ ಅವನ ಕಣ್ಣಬಿತ್ತ
ಬಿದರ ಸೀಳಿ ಎರಡೋಳಾಗಿದ್ದರು ಚೂರಿ ಸೀಳಿ ಬಂತ
ಬಟ್ಟ ಕತ್ತರಿಸಿ ಬಿದ್ದರೂ ಅವಗಾಗಲಿಲ್ಲ ಗೊತ್ತ

ಶೆಟ್ಟರ ಹುಡುಗ ಯಾಲಕ್ಕಿ ತೂಗಾಕ ತಕ್ಕಡಿ ಹಿಡಿದಿತ್ತ
ಗಿರಾಕಿ ಕೂಡ ಮಾತಾಡುವಾಗ ಹುಡುಗಿ ಎದುರುಬಂತ
ಯಾಲಕ್ಕಿ ತೂಗು ಹಾಕುವ ಕೈಯಾ ಹಾಕೇ ಹಾಕುತಿತ್ತಾ
ಹುಡುಗಿ ಗುಂಗಿನಾಗ ಯಾಲಕ್ಕಿ ಡಬ್ಬಿ ಖಾಲಿ ಆಗಿ ಹೋತಾ

ಸಿಂಪಿಗ್ಯಾರ ಹುಡುಗ ಅಂಗಿ ಹೊಲಿದು ಕಿಸೆ ಹಚ್ಚತಿತ್ತ
ಕಿಸೆ ಕತ್ತರಿಸಿ ಹಚ್ಚೊ ಮುಂದ ಹುಡುಗಿ ಎದುರುಬಂತ
ಹುಡುಗಿನ ನೋಡಿದ ಹುಡುಗನ ಅಳತಿ ಹೇರಪೇರ ಆತ
ಎದಿಗೆ ಹಚ್ಚುವ ಕಿಸೇದ ತುಕುಡಿ ಡುಬ್ಬಕ ಹಚ್ಚಿತ್ತ

ಪೂಜಾರ ಹುಡುಗ ಹನುಮಂತ ದೇವರ ಪೂಜೆಗೆ ನಡೆದಿತ್ತ
ಪೂಜಿವ್ಯಾಳೆ ಮೀರಿ ಹೋಗ್ಯೆತಂತ ಗಡಬಡಿಸಿ ಹೊಂಟಿತ್ತ
ಬೆಕ್ಕು ಅಡ್ಡ ಹಾದು ಹೋಗುವಂಗ ಹುಡುಗಿ ಅಡ್ಡ ಬಂತ
ಪೂಜಾ ಮರೆತು ಬಾಯಿ ತೆರೆದು ನಿಂತು ಜೊಲ್ಲ ಸೋರತಿತ್ತ

ಬಡಿಗ್ಯಾರ ಹುಡುಗ ಆಳಿನ ಕೂಡ ಉಜ್ಜಗೊಡ್ಡ ಹೊಡಿತಿತ್ತ
ಕೊಡ್ಡದ ಮ್ಯಾಲ ಉಜ್ಜಗೊಡ್ಡು ಹಿಂದ ಮುಂದಾಗತಿತ್ತ
ಬಡಾಗ್ಯಾನ ಮರೆತು ಆಳು ಆ ಹುಡುಗಿನ ಡೊಗ್ಗಿ ನೋಡಿತ್ತ
ಹುಡುಗಿ ಲಕ್ಷ್ಯಕ್ಕ ಆಳಿನ ಡುಬ್ಬಾ ಕೆತ್ತಿ ಕೆತ್ತಿ ಹೋತಾ

ಚಾದ ಅಂಗಡಿ ಹೊರಗ ಆಳೊಂದು ಭಜಿ ಮಾಡುತಿತ್ತ
ಭಜಿ ಮಾಡಿ ಮಾಡಿ, ಹಾಕುವಾಗ ಹುಡುಗಿ ಹಾದ ಹೋತ
ಹುಡುಗಿನ ನೋಡಿದ ಆಳು ಹುಡುಗನ ಜೀವ ಝುಲ್ ಅಂತ
ಹಿಟ್ಟಿನ ಬುಟ್ಯಾಗ ಹಾಕುವ ಕೈ ಎಣ್ಣಿಗೆ ಹಾಕಿತ್ತ

ನಾದಿಗಾರ ಹುಡುಗನ ಮುಂದೊಂದು ಹಣ್ಣಣ್ಣ ಮುದುಕ ಕುಂತಿತ್ತ
ಹುಡುಗನ ಕತ್ತಿ ಮುದುಕನ ಮೀಸೆ ಕಟ್ ಮಾಡತಿತ್ತ
ಹಾದಿಲೆ ಹೋಗುವ ಹುಡುಗಿನ ನೋಡ್ತಾ ಮುದುಕನ್ನ ಮರೆತ
ಲೇ ಅಂತ ಒದರುವಾಗ ಮೂಗು ಜಿಗಿದು ಬಿತ್ತ.[೧೪]

ಗುರುರಾಜ ಹೊಸಕೋಟೆ ಅವರಿಗೆ ಜನಪ್ರಿಯತೆಯನ್ನು ತಂದುಕೊಟ್ಟ 'ಕಲಿತ ಹುಡುಗಿ ಕುದ್ರಿ ನಡಿಗಿ ನಡೆದು ಬರತಿತ್ತ...' ಎಂಬ ಈ ಹಾಡು ಒಂದು ಕಾಲಕ್ಕೆ ಸದ್ದಿಲ್ಲದಂತೆ ಎಲ್ಲರ ನಿದ್ದೆಗೆಡಿಸಿದ ಹಾಡಿದು. ಈ ಹಾಡು ಇಂದಿನ ಹೆಣ್ಣು ಮಕ್ಕಳು ಯಾವ ರೀತಿಯಾಗಿ ಸಮಾಜದಲ್ಲಿ ಕಾಣಿಸಿಕೊಳ್ಳುತ್ತಾರೆ ಅವರನ್ನು ಸಮಾಜ ನೋಡುವ ದೃಷ್ಟಿಕೋನ ಎಲ್ಲವನ್ನು ಹಾಡಿನ ಮೂಲಕ ಇಲ್ಲಿ ವರ್ಣಿಸಲಾಗಿದೆ. ಚಮಕ್ಕು ರಾಣಿಯ....ಹೀಲ್ಸಿನ ಸದ್ದಿಗೆ ಬಗ್ಗಿ ನೋಡಿಬಿಟ್ನಾ...ಕಂಡಿದ್ರೆ ತಾನೇ ಆ ಬಡ ಜೀವಾ ಇಂತ ಅಂದ ಚಂದಸೈಡು ಹೊಡೆಯೋಕೋಗಿ ಮೋರಿ ಸೈಡು ಜಾರಿ ತಡಕ್ಕ್ ಅಂತ ಬಿದ್ನಾ...ಹೀಗೆ ಪದಗಳನ್ನು ಜೋಡಿಸಿ ಹಾಡುವ ಜಾಣ್ಮೆ ಹೊಸಕೋಟೆ ಅವರದು.

**ಪ್ರೇಮ ಗೀತೆ :**

ನಿನ್ನ ಮರೆತ್ಯಾಂಗ ನಾ ಇರಲಿ
ಮನಸ್ಸಿಲ್ಲದ ಮನೆಯಲ್ಲಿ...
ನನ್ನ ಎದೆ ಅಂಗಳದಲ್ಲಿ
ನೀ ಅಳುಕದ ರಂಗೋಲಿ...
ಸುರುಗಿಗೆ ನಾ ಹೆಂಗೊಗಲಿ
ಮದುಮಗಳು ನಾ ಹ್ಯಾಂಗಾಗಲಿ ॥ಹೆ॥
ನನ್ನ ನೆನಪು ನಿನಗಿರಲಿ ಗುಂಡಿಗೆಯ ಗೂಡಲ್ಲಿ
ದೂರಾದಿ ನನ್ನ ಗೆಳತಿ, ನಿನ್ನ ಬಂಡಿ ಸಾಗಲಿ
ಕಂಕಣವು ಕೂಡಿ ಚಂದಾಗಲಿ...
ಕಣ್ಣೀರು ಇಂದಿಗೆ ದೂರಾಗಲಿ ॥ಗ॥
ನಿನ್ನ ಮರೆತ್ಯಾಂಗ ನಾ ಇರಲಿ
ಮನಸ್ಸಿಲ್ಲದ ಮನೆಯಲ್ಲಿ ॥ಹೆ॥
ನನ್ನ ನೆನಪು ನಿನಗಿರಲಿ ಗುಂಡಿಗೆಯ ಗೂಡಲ್ಲಿ॥ಗ॥.[೧೫]

ಈ ಗೀತೆ ಬಸವರಾಜ ನರೇಂದ್ರ ಅವರು ಹಾಡಿದ ಪ್ರೇಮ ಗೀತೆಯಾಗಿದೆ. ಇಲ್ಲಿ ನಿನ್ನ ಮರೆತ್ಯಾಂಗ ನಾ ಇರಲಿ, ಮನಸ್ಸಿಲ್ಲದ ಮನೆಯಲ್ಲಿ ಎಂಬುದು ಗಂಡು ಹೆಣ್ಣು ಪರಸ್ಪರ ದೂರವಾಗುತ್ತಿರುವ ಚಿತ್ರಣವಿದೆ.

ಈ ರೀತಿಯಾಗಿ ಕಂಠಸ್ಥ ಸಂಪ್ರದಾಯದ ಮೂಲಕ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದ ಕಲಾಪ್ರಕಾರಗಳು ನಿರಂತರವಾಗಿ, ಹೊಸ ರೀತಿ ನೀತಿಗಳನ್ನು ಒಳಗೊಳ್ಳುತ್ತಾ ಸಾಗಬೇಕಾದ ಹಾದಿಯಿಂದ ವಿಮುಖಗೊಳ್ಳುತ್ತಿರುವುದು ಖೇದಕರ ಸಂಗತಿ. ಇತ್ತೀಚೆಗಂತೂ ಜಾನಪದ ಕ್ರಾಂತಿಗಳ ಮಿತಿ ದುರ್ಬಲಗೊಂಡು ವರ್ಣಲೋಕದ ಭ್ರಾಂತಿಯ ಹಾವಳಿಗೆ ಯುವಪೀಳಿಗೆ ಸಂಪೂರ್ಣ ಶರಣಾಗಿರುವುದು ಭವಿಷ್ಯದಲ್ಲಿ ಮತ್ತೆ ನಮ್ಮ ನೆಲದ ಕಲಾ ಪ್ರಕಾರಗಳನ್ನು ಕಾಣಲು ಸಾಧ್ಯವಾಗದ ಪರಿಸ್ಥಿತಿಯ ಆರಂಭವೋ ಎನ್ನುವ ಆತಂಕ

ಮೂಡಿಸುತ್ತಿದೆ. ಒಂದಂತೂ ಸತ್ಯ ಯಾವುದೇ ಕಲೆ ಸಂಸ್ಕೃತಿಯನ್ನು ಒಮ್ಮೆ ಕಳೆದುಕೊಂಡರೆ ಮತ್ತೆ ದೊರಕಿಸಿಕೊಳ್ಳುವುದು ಸುಲಭದ ಮಾತಲ್ಲ. ಇಂದಿನ ದುರಂತ ಏನೆಂದರೆ ಯುವ ಪೀಳಿಗೆ ಜನಪದದ ಅಮೂಲ್ಯ ಕಥೆ, ಹಾಡುಗಳ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವುದು ಒಂದೆಡೆಯಾದರೆ, ಕಲೆ, ಸಂಸ್ಕೃತಿಯ ಅಪಹಾಸ್ಯ, ಯಕಶ್ಚಿತ್‌ಗಳನ್ನು ವೈಭವೀಕರಣದ ಲೇಪ ಹೊದಿಸಿ ತೋರಿಸುವ ದೃಶ್ಯ ಮಾಧ್ಯಮದ ಎದುರು ನಾಗರಿಕ ಅನಿಸಿಕೊಂಡವರು, ಸುಸಂಸ್ಕೃತ ಅನಿಸಿಕೊಳ್ಳುವಲ್ಲಿ ಹಿಂದೆ ಬೀಳುತ್ತಿರುವುದು.

**೬.೨ ಇತರೆ ವರ್ಗದವರು**

ಜನಪದ ಸಾಹಿತ್ಯದಲ್ಲಿ ಗೀತೆಯೊಂದು ಪ್ರಮುಖ ಪ್ರಕಾರವಾಗಿದ್ದು, ಈ ಗೀತೆಗಳು ಮುಟ್ಟದ ವಸ್ತುವಿಲ್ಲ, ಸಂಸಾರದ ಮುಖಗಳೆಲ್ಲವೂ ಇಲ್ಲಿ ಚಿತ್ರಣಗೊಂಡಿವೆ. ಪತಿ ಪತ್ನಿಯರು, ತಾಯಿ–ಮಗಳು, ಅತ್ತೆ– ಸೊಸೆ, ಅಣ್ಣ–ತಂಗಿ, ಅತ್ತಿಗೆ, ನಾದಿನಿ, ಮೈದುನರು, ತಂದೆ–ಮಗ, ಹೆಣ್ಣು ಜನ್ಮ, ಮಕ್ಕಳು–ಮೊಮ್ಮಗಳು, ಸಾವು–ನೋವು ಹೀಗೆ ಹತ್ತು ಹಲವು ಪ್ರಕಾರದ ಗೀತೆಗಳನ್ನು ನಾವು ಕಾಣುತ್ತೇವೆ. ಹಿಂದಿನಿಂದಲೂ ಬೆಳೆದು ಬಂದ ಈ ಜನಪದ ಗೀತೆಗಳು ಪ್ರತಿಯೊಂದು ಸನ್ನಿವೇಶದಲ್ಲಿ ಬಳಕೆಗೊಳ್ಳುವ ವಿಷಯಗಳನ್ನು ಒಳಗೊಂಡಿವೆ. ಆದ್ದರಿಂದಲೇ ಈ ರೀತಿಯ ಹಾಡುಗಳನ್ನು ಕೇಳುವ ವರ್ಗಗಳು ಇಂದು ಹೆಚ್ಚಾಗಿ ಕಂಡುಬರುತ್ತವೆ.

ಆಧುನಿಕ ಸಂದರ್ಭದಲ್ಲಿ ಕಾಲದ ಬದಲಾವಣೆ ಆದರೂ ಸಹ ಒಂದು ರೀತಿಯ ನಿಯಮಗಳಿಗೆ ಕಟ್ಟು ಬಿದ್ದವರು ನಾವು. ನಮ್ಮ ಸಂಸ್ಕೃತಿಯನ್ನು ಬಿಟ್ಟು ಬದುಕು ಇರಲಾರದ ಕಲ್ಪನೆಯೂ ನಮಗಿಲ್ಲ. ಆದ್ದರಿಂದಲೇ ಹಿರಿಯರು ಹೇಳಿದ ಮಾತುಗಳು ಅವರು ಹೇಳಿದ ನೀತಿ ಬದ್ಧವಾದ ಹಾಡುಗಳು ಎಲ್ಲವನ್ನು ನಾವು ಇಂದು ಕೇಳುತ್ತಾ, ಬಳಸುತ್ತಾ ಬದುಕನ್ನು ಕಟ್ಟಿಕೊಳ್ಳುತ್ತಿದ್ದೇವೆ. ಹಿಂದಿನ ಕಾಲದಲ್ಲಿ ನೇರವಾದ ಮೌಖಿಕ ರೀತಿಯಲ್ಲಿ ಹಾಡುಗಳನ್ನು ಕೇಳುತ್ತಿದ್ದೇವು. ಆದರೆ ಇಂದು ಈ ಪ್ರಮಾಣ ಕಡಿಮೆ ಆಗಿ ಹಿಂದಿನ ಸಾಹಿತ್ಯದ ಮುಂದುವರೆದ ಭಾಗವಾಗಿ ಆಧುನಿಕ ಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯೂಟ್ಯೂಬ್, ಇಂಟರ್‌ನೆಟ್ ಹೀಗೆ ಹಲವು ಮಾಧ್ಯಮಗಳ ಮೂಲಕ ಜನಪದ ಗೀತೆಗಳನ್ನು ಕೇಳುತ್ತಿದ್ದೇವೆ.

ಯುವಜನಾಂಗವನ್ನು ಬಿಟ್ಟು ಉಳಿದೆಲ್ಲ ಜನರು, ಮಕ್ಕಳು, ತಂದೆ–ತಾಯಿಗಳು, ಮಹಿಳೆಯರು, ಹಿರಿಯರು ಎಲ್ಲರನ್ನು ನಾವು ಇತರೆ ವರ್ಗದಲ್ಲಿ ಸೇರಿಸಬಹುದು. ಈ ವರ್ಗದವರೆಲ್ಲರೂ ಹೆಚ್ಚಾಗಿ ಕೌಟುಂಬಿಕ ಜನಪದ ಗೀತೆಗಳನ್ನೇ ಹೆಚ್ಚಾಗಿ ಕೇಳುತ್ತಾರೆ. ಆದ್ದರಿಂದಲೇ ಇವರನ್ನು ಯುವಜನಾಂಗದಿಂದ ಭಿನ್ನವಾಗಿ ನಾವು ಗುರುತಿಸುತ್ತೇವೆ. ಈ ವರ್ಗದವರು ಹಾಡುಗಳನ್ನು ಕೇಳುವುದರ ಜೊತೆಗೆ ರಚನೆ ಕೂಡ ಮಾಡುತ್ತಾರೆ. ಒಂದು ಹಾಡನ್ನು ಹಾಡಿದ ನಂತರ ಆ ಹಾಡಿಗೆ ಬೆಲೆ ಬರುವುದು ಕೇಳುಗರು ಇದ್ದಾಗ ಮಾತ್ರ. ಹಾಗೆ ಈ ಜನಪದ ಹಾಡುಗಳು ಯಾವ ಕಾಲದಲ್ಲಿ ರಚನೆಗೊಂಡವೊ ಯಾರಿಗೆ ಗೊತ್ತು.

ಆದರೆ ಇಂದಿಗೂ ಈ ಹಾಡುಗಳನ್ನು ಕೇಳುವವರು ಇರುವುದರಿಂದ ಅವು ಜೀವಂತವಾಗಿ ಉಳಿದುಕೊಂಡಿವೆ.

ಇಂದು ನವಮಾಧ್ಯಮಗಳಲ್ಲಿ ಬಳಕೆಗೊಳ್ಳುತ್ತಿರುವ ಜನಪದ ಹಾಡುಗಳನ್ನು ಕೇಳುವ ವರ್ಗ ಹೆಚ್ಚಾಗುತ್ತಿದೆ. ಏಕೆಂದರೆ ಹಿಂದಿನ ಕಾಲದ ಹಾಡು ಕೇವಲ ಬಾಯಿಂದ ಮಾತ್ರ ಬರುವುದಾದರೆ, ಇಂದು ಅದರ ಜೊತೆಗೆ ಸಂಗೀತದ ಲಯ, ವಾದ್ಯಗಳು ಕೂಡ ಸೇರಿಕೊಂಡು ವಿಶಿಷ್ಟವಾದ ಶೈಲಿಯಲ್ಲಿ ರಚನೆಗೊಂಡು ಬಳಕೆಯಾಗುವುದರೊಂದಿಗೆ ಎಲ್ಲರ ಗಮನವನ್ನು ಸೆಳೆಯುತ್ತಿವೆ. ಇಲ್ಲಿ ಹಾಡುಗಳನ್ನು ಕೇಳುತ್ತಿರುವ ವರ್ಗಗಳು ಎಂತಹ ಹಾಡುಗಳನ್ನು ಕೇಳುತ್ತಾರೆ ಎಂಬುದನ್ನು ಇಲ್ಲಿ ನೋಡಬಹುದು.

**ಮಕ್ಕಳ ಹಾಡುಗಳು :**

ಹಾವಿನ ಹೆಡೆ ಚಂದ ಮಾವಿನ ಮಿಡಿ ಚೆಂದ
ಹಾರಾಡಿ ಬರುವ ಗಿಣಿ ಚಂದ ಕಂದಯ್ಯ
ನೀ ಚಂದ ನಮ್ಮ ಮನೆಗೆಲ್ಲ॥

ತೊಟ್ಟಿಲದಾಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಮೇಲಾಗಿ ಮಲಗ್ಯಾನ ಕಂದಯ್ಯಗೆ
ಮುತ್ತೀನ ದೃಷ್ಟಿ ತೆಗೆದೇನ॥

ಅಂಗೀಯ ತೊಟ್ಟರೆ ರಂಗನಾ ಸರಿಯೆಂಬೆ
ಚುಂಗುಬಿಟ್ಟರೆ ನವಿಲೆಂಬೆ ಕೃಷ್ಣಯ್ಯ
ಶೃಂಗಾರವಾಗೆ ದೊರೆಯೆಂಬೆ.[೧೬]

ತಾಯಿಗೆ ತನ್ನ ಮಗುವಿನ ಮೇಲೆ ಅಪಾರ ಪ್ರೇಮ ತನ್ನ ಕಂದಮ್ಮನನ್ನು ತನ್ನ ಜೀವಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಾಳೆ. ತನ್ನ ಕೂಸನ್ನು ಎಷ್ಟು ಹೊಗಳಿದರೂ ಕಡಿಮೆ, ಎಷ್ಟು ವರ್ಣಿಸಿದರೂ ಕಡಿಮೆಯೇ ಹೀಗಿರುವಾಗ ತಾಯಿಯ ಪ್ರೀತಿ ಜನಪದರ ಮುಖಾಂತರ ಹೇಗೆ ಹೊಮ್ಮಿದೆ, ಚಿಮ್ಮಿದೆ ಎಂಬುವುದಕ್ಕೆ ಈ ಪದ್ಯ ಸಾಕ್ಷಿಯಾಗಿದೆ. ಇಲ್ಲಿ ತಾಯಿ ಮಗುವನ್ನು ಹಾವಿನ ಹೆಡೆ, ಮಾವಿನ ಮಿಡಿ, ಮರದ ಗಿಣಿ, ತೊಳೆದ ಮುತ್ತು ಎಂದೆಲ್ಲ ಉಪಮಾನ, ಉಪಮೇಯ ರೂಪಕಗಳನ್ನು ಬಳಸುತ್ತಾಳೆ. ಅಷ್ಟೇ ಅಲ್ಲದೇ ಮುಂದುವರೆದು ತನ್ನ ಕಂದನನ್ನು ರಂಗನಿಗೆ ಹೋಲಿಸುತ್ತಾಳೆ. ಅಂದರೆ ತನ್ನ ಕಂದ ಚಂದದ ಅಂಗಿಯೊಂದನ್ನು ಧರಿಸಿ ಬಿಟ್ಟರೆ ಅವನು ರಂಗನೇ ಸರಿ. ಅಂಗಿ ಇಂದ ಚುಂಗು ಜೋತು ಬಿದ್ದರೆ ಅವನು ನವಿಲಿನಂತೆ ಕಾಣಿಸುತ್ತಾನೆ, ಕೃಷ್ಣನಂತೆ ಕಾಣುತ್ತಾನೆ ಎಂಬುದು ತಾಯಿಯ ಅಪರೂಪದ ಕಲ್ಪನೆ ಈ ಗೀತೆಯಲ್ಲಿ ಮೂಡಿಬಂದಿದೆ.

**ಜೋಗುಳ ಹಾಡು :**

ಜೋಗುಳ ಹಾಡಿದರೆ ಆಗಲೇ ಕೇಳ್ಯಾನು
ಹಾಲ ಹಂಬಲವ ಮರೆತಾನು। ಕಂದಂಗೆ
ಜೋಗೂಳದಾಗೆ ಅತಿಮುದ್ದು॥

ಅತ್ತು ಕಾಡುವನಲ್ಲ ಮತ್ತೆ ಬೇಡುವನಲ್ಲ
ಎತ್ತಿಕೊಳ್ಳೆಂಬ ಹಟವಿಲ್ಲ। ನಿನ್ನಂತ
ಹತ್ತು ಮಕ್ಕಳೂ ಇರಬಹುದು[೧೭]...

ಮಮತೆಭರಿತ ಮಾತೃತ್ವದ ಜೋಗುಳದ ಧ್ವನಿ ಮಗುವಿಗೆ ಆದೆಷ್ಟು ಮುದ್ದಾಗಿ, ಮೋಹಕವಾಗಿ ಕೇಳಿಸುತ್ತದೆ ಎಂಬುದನ್ನು ಈ ಪದ್ಯದಲ್ಲಿ ಕಾಣಬಹುದು. ಹಾಲಿಗಾಗಿ ಹಂಬಲಿಸುತ್ತಿರುವ ಕೂಸು ತಾಯಿಯ ಜೋಗುಳ ಧ್ವನಿಯನ್ನು ಕೇಳಿದ ತಕ್ಷಣ ಹಾಲಿನ ಹಂಬಲವನ್ನು ಬಿಡುತ್ತದೆ. ಜೀವಿಗಳಿಗೆ ಗಾಳಿ, ನೀರು, ಆಹಾರ ಮುಂತಾದವುಗಳು ಮೂಲಭೂತ ಅವಶ್ಯಕತೆಗಳಾಗಿವೆ. ಅವುಗಳು ಇಲ್ಲದೇ ಇದ್ದರೆ ಜೀವಿಗಳು ಬದುಕುವುದು ಕಷ್ಟಕರವಾಗುತ್ತದೆ. ಗಾಳಿ ನೀರಿನ ನಂತರ ಬರುವ ಅವಶ್ಯಕತೆಯೆ ಆಹಾರ. ಇಲ್ಲಿ ಹೇಳ ಬಯಸುವ ವಿಷಯವೇನೆಂದರೆ ಆಹಾರ ಜೀವಿಗಳಿಗೆ ಅತಿ ಅವಶ್ಯಕವಾದದು. ಅಂತ ಅವಶ್ಯಕತೆಯಾದ ಆಹಾರಕ್ಕಾಗಿ ಮಗು ಅಳುತ್ತಿರುವಾಗ ಮಗುವಿನ ಕಿವಿಗೆ ಜೋಗುಳದ ಧ್ವನಿ ಕೇಳಿದರೆ ಮಗು ಹಸಿವನ್ನೇ ಮರೆತು ಬಿಡುತ್ತದೆ. ಇದರ ಅರ್ಥ ಇಷ್ಟೇ ತಾಯಿಯ ಜೋಗುಳದ ಧ್ವನಿ ಎಲ್ಲವನ್ನು ಮರೆಸಿ ಬಿಡುವಷ್ಟು ಶಕ್ತಿಯುತವಾದದ್ದು.

ಕೆಲವೊಮ್ಮೆ ತಾಯಂದಿರು ತಮ್ಮ ಕಂದಮ್ಮನ ಶಾಂತ ಸ್ವಭಾವವನ್ನು ಕಂಡು ತಮ್ಮ ಜೋಗುಳ ಧ್ವನಿಯಲ್ಲಿ ಹೀಗೆ ಹೇಳುತ್ತಾರೆ. ನನ್ನ ಕಂದ ಅತ್ತು ಕಾಡುವವನಲ್ಲ, ಎತ್ತಿಕೋ ಎಂದು ಹೇಳುವವನಲ್ಲ, ಮತ್ತೇನು ಬೇಡುವವನಲ್ಲ ಇಂತಹ ಹತ್ತು ಮಕ್ಕಳನ್ನು ಹೆತ್ತರು ಬೇಸರವಿಲ್ಲ. ಇಂತಹ ಹತ್ತು ಮಕ್ಕಳಿದ್ದರೂ ಯಾವ ತೊಂದರೆ ಇಲ್ಲ. ಅವುಗಳನ್ನು ಜ್ವಾಕಿ ಮಾಡಬಹುದು ಎಂದು ತಾಯಿ ಹೇಳುತ್ತಾಳೆ. ಕೊನೆಯದಾಗಿ ತಾಯಿಯು ಆಡಲು ಹೋದ ಕಂದನನ್ನು ಈ ರೀತಿ ಬರಮಾಡಿಕೊಳ್ಳುತ್ತಾಳೆ.

ಆಡಿ ಬಾ ನನ್ನ ಕಂದ ಅಂಗಾಲ ತೊಳದೇನ
ತೆಂಗಿನ ಕಾಯಿ ತಿಳಿನೀರ ತಕ್ಕೊಂಡು
ಬಂಗಾರದ ಮಾರಿ ತೊಳೆದೇನ[೧೮]...

ಅಂದರೆ ಆಟವನ್ನು ಆಡಿ ಬಂದ ಕಂದಮ್ಮನ ಅಂಗಾಲನ್ನು ತಾಯಿ ಮುದ್ದಿನಿಂದ ತೊಳೆಯ ಬಯಸುತ್ತಾಳೆ. ತೆಂಗಿನ ಕಾಯಿಯ ತಿಳಿನೀರನ್ನು ತೆಗೆದುಕೊಂಡು ಬಂಗಾರ ದಂತಹ ಮುಖವನ್ನು ತೊಳೆಯ ಬಯಸುತ್ತಾಳೆ. ಹೀಗೆ ಜನಪದರು ತಾವು ಕಂಡ ಹತ್ತು ಹಲವಾರು ಸಂಗತಿಗಳನ್ನು ತಮ್ಮ ಹಾಡಿನ ಮೂಲಕ ಬಹು ಸುಂದರವಾಗಿ ತೋರಿಸಿದ್ದಾರೆ.

ಇಂತಹ ಜನಪದದ ಕೆಲವೊಂದು ತುಣುಕುಗಳನ್ನು ಆಯ್ದುಕೊಂಡು ಆಧುನಿಕ ಕಲಾ ಪ್ರಕಾರಗಳಲ್ಲಿ ಬಳಸಿಕೊಂಡಿದ್ದಾರೆ. ಅಲ್ಲದೇ ಕೆಲವೊಂದು ಹಾಡಿನ ಸಾಲುಗಳನ್ನು ಚಲನಚಿತ್ರಗಳಲ್ಲಿಯೂ ಬಳಸಿಕೊಂಡಿದ್ದಾರೆ. ಒಟ್ಟಾರೆಯಾಗಿ ಒಂದಿಲ್ಲೊಂದು ರೀತಿಯಿಂದ ಈ ಸಾಹಿತ್ಯದ ಪ್ರಭಾವ ಮತ್ತು ಬಳಕೆ ಆಗುತ್ತಲೇ ಇದೆ. ಆಧುನಿಕ ಮಾಧ್ಯಮಗಳನ್ನು ಸೇರಿಕೊಂಡಾಗಲಂತೂ ಅದರ ಭರಾಟೆ ಇನ್ನೂ ಹೆಚ್ಚುತ್ತಿದೆ.

**ಚೆಲ್ವಿ ಚೆಲ್ವಿ ಎಂದು :**

ಚೆಲ್ವಿ ಚೆಲ್ವಿ ಎಂದು ಅತಿಯಾಸೆ ಪಡಬೇಡ
ಚೆಲ್ವು ಇದ್ದರೇನು ಗುಣವಿಲ್ಲ
ಹೊಳೆನೀರು ತಿಳಿ ಇದ್ದರೇನು ರುಚಿ ಇಲ್ಲಾ

ಕಪ್ಪು ಹೆಂಡತಿಯೆಂದು ಕಳವಳ ಪಡಬೇಡ
ನೇರಳೆ ಹಣ್ಣು ಬಲು ಕಪ್ಪು
ಇದ್ದರೂ ತಿಂದು ನೋಡಿದರೆ ರುಚಿ ಬಹಳ

ಕೆಂಪು ಹೆಂಡತಿಯೆಂದು ಸಂತೋಷ ಪಡಬೇಡ
ಹತ್ತಿಯ ಹಣ್ಣು ಬಲು ಕೆಂಪು
ಇದ್ದರೂ ಒಡೆದು ನೋಡಿದರೆ ಹುಳು ಬಹಳ[೧೯]...

ಪ್ರಸ್ತುತ ಜನಪದ ಪದ್ಯದಲ್ಲಿ ಆಡಂಬರವನ್ನು ವಿಡಂಬನೆ ಮಾಡುತ್ತಿರುವುದು ಕಂಡು ಬರುತ್ತದೆ. ಮಾನವನು ಬಾಹ್ಯ ಸೌಂದರ್ಯಕ್ಕೆ ಹೆಚ್ಚಿನ ಆದ್ಯತೆ ಕೊಡುತ್ತಿದ್ದಾನೆ. ಅದಕ್ಕಾಗಿ ಈ ಪದ್ಯವು ಮಾನವನಿಗೆ ಹಲವಾರು ರೂಪಕಗಳ ಮೂಲಕ ಬಾಹ್ಯ ಸೌಂದರ್ಯಕ್ಕಿಂತ ಅಂತರಂಗ ಮತ್ತು ಮಾನವೀಯತೆ ಸೌಂದರ್ಯ ಬಹಳ ಮುಖ್ಯ ಎಂದು ತೋರಿಸುತ್ತದೆ.

**ಹೆಣ್ಣು ಮಕ್ಕಳಿಗೆ ಬುದ್ಧಿವಾದ :**

ಬುದ್ಧಿ ಮಾತು ಹೇಳಿದರೆ ಕೇಳಬೇಕಮ್ಮ।
ಮಗಳೇ ಮನಶುದ್ಧಳಾಗಿ ಗಂಡನೊಡನೆ ನೀ ಬಾಳಬೇಕಮ್ಮ।

ಅತ್ತೆ ಮಾವರಿಗಂಜಿ ನಡೆಯಬೇಕಮ್ಮ।
ಚಿತ್ತದ ಅಕ್ಕರೆಯ ಪಡೆಯಬೇಕಮ್ಮ

ಹೊತ್ತು ಹೊತ್ತಿಗೆ ಮನೆಯ ಕೆಲಸ ಮಾಡಬೇಕಮ್ಮ।
ಹತ್ತು ಮಂದಿ ಒಪ್ಪುವ ಹಾಗೆ ನಡೆಯಬೇಕಮ್ಮ

ಕೊಟ್ಟು ಕೊಂಬುವ ನೆಂಟರೊಡನೆ ದ್ವೇಷ ಬೇಡಮ್ಮ
ಉಟ್ಟು ಉಂಬುವ ಕಾಲದಲ್ಲಿ ಆಟ ಬೇಡಮ್ಮ

ಹಟ್ಟಿ ಬಾಗಿಲಲ್ಲಿ ಬಂದು ನಿಲ್ಲ ಬೇಡಮ್ಮ
ಕಟ್ಟಿ ಆಳುವ ಗಂಡನೊಡನೆ ಕೂಡಬೇಡಮ್ಮ

ನೆರೆಹೊರೆಯವರಲ್ಲಿ ನ್ಯಾಯ ಕೇಳಮ್ಮ
ಕೋಪ ಮತ್ಸರ ಬಿಟ್ಟು ಶಿವನ ಸ್ಮರಣೆ ಮಾಡಬೇಕಮ್ಮ॥.[೨೦]

ಮದುವೆಯಾದ ಹೆಣ್ಣುಮಗಳು ಗಂಡನ ಮನೆಗೆ ಹೋಗಬೇಕಾದ ಸಂದರ್ಭದಲ್ಲಿ ತಂದೆ–ತಾಯಿ ತನ್ನ ಮಗಳಿಗೆ ಗಂಡನ ಮನೆಯಲ್ಲಿ ಯಾವ ರೀತಿಯಾಗಿ ಬದುಕಬೇಕೆಂಬ ಸಂಸ್ಕಾರವನ್ನು ತಿಳಿಸುವ ಸಂದರ್ಭವನ್ನು ಈ ಪದ್ಯ ಕಟ್ಟಿಕೊಟ್ಟಿದೆ. ಹೆಣ್ಣು ಜಗದ ಕಣ್ಣು ಎಂತಲೂ ಕರೆಯುತ್ತಾರೆ. ಆದ್ದರಿಂದ ತವರು ಮನೆಯ ಮೇಲೆ ಎಷ್ಟು ಪ್ರೀತಿ ಇರುತ್ತೋ ಹಾಗೆಯೇ ಗಂಡನ ಮನೆಯ ಮೇಲೆ ಅಷ್ಟೆ ಪ್ರೀತಿಯನ್ನಿಟ್ಟುಕೊಂಡು ಜೀವನ ನಡೆಸಬೇಕೆಂಬ ತಿಳಿಮಾತುಗಳನ್ನು ಇಲ್ಲಿ ಕಾಣಬಹುದು.

**ಇದೇ ನಮ್ಮ ನಾಡು :**

ಇದೇ ನಮ್ಮ ನಾಡು ಸಿರಿ ಕನ್ನಡ ನಾಡು
ಶಿವಶರಣರು ಹುಟ್ಟಿ ಬೆಳೆದ ನಾಡು
ವೀರರೆಲ್ಲ ಬಾಳಿ ಹೋದ ನಾಡು
ಅಣ್ಣ ಬಸವಣ್ಣ ಜನಿಸಿ।
ಧರ್ಮ ಬೋಧನೆಯನ್ನು ಬೋಧಿಸಿ
ಮೇಲು ಕೀಳು ಎಂಬುದ ಮರೆಸಿ
ಮುಕ್ತಿ ಮಾರ್ಗವ ಜಗಕೆ ತೋರಿಸಿ

ಶೂರ ಹಕ್ಕ–ಬುಕ್ಕರು
ಕಟ್ಟಿ ಬೆಳೆಸಿದ ಸಿರಿ ಕನ್ನಡ ನಾಡು
ವೀರ ಕೇಸರಿ ಕಿತ್ತೂರ ರಾಣಿ
ಧೀರ ಮಹಿಳೆ ಜ್ಞಾನಿಯಾದ
ದೇಶಾಭಿಮಾನಿ ಒನಕೆ ಓಬವ್ವಳ
ವೀರನಾಡು ಚಾಲುಕ್ಯರಾಳಿದ
ಜನಿಸಿದ ನಾಡು ಸಿರಿಕನ್ನಡ ನಾಡು
ತಾಯಿ ರೇಣುಕಾದೇವಿ ತಂದೆ ಜಮದಗ್ನಿ
ಅಣ್ಣ–ತಮ್ಮಯ್ಯ ಎಕ್ಕಯ್ಯ ಜೋಗಯ್ಯ
ಪರಶುರಾಮ ಜನಿಸಿದ ನಾಡು

ಶೂರ ಧೀರರು ಹುಟ್ಟಿದ ನಾಡು
ಕವಿ ಪುಂಗವರು ಜನಿಸಿದ ನಾಡು

ಎಡೆಯೂರ ಸಿದ್ಧಲಿಂಗೇಶ್ವರ ಶಿಶುನಾಳ ಶರೀಫ್ ಸಾಹೇಬ
ಬಾಳಿ ಹೋದ ಇದು ನಮ್ಮದು ಈ ಕನ್ನಡ ನಾಡು।

ಹುಯಿಲಿಗೋಳ ಪುರವೊಂದು ಶರಣರ ನೆಲೆಬೀಡಿ।
ಹನುಮನುದಿಸಿದ ನಾಡು ಇದು ನಮ್ಮ ನಾಡು ॥೪॥.[೨೧]

ಸಿರಿಗನ್ನಡಂ ಗೆಲ್ಗೆ ಎಂಬಂತೆ ನಮ್ಮ ಕರುನಾಡು ಮಣ್ಣಿನಲ್ಲಿ ಬಸವಣ್ಣನಂತಹ ಮಹಾನ ಪುರುಷರು, ಪರಾಕ್ರಮಿಗಳಾದಂತಹ ಹಕ್ಕಬುಕ್ಕರು, ವೀರರಾಣಿ ಕಿತ್ತೂರ ಚೆನ್ನಮ್ಮ, ಓಬವ್ವ, ಚಾಲುಕ್ಯರು, ತಾಯಿ ಯಲ್ಲಮ್ಮ, ಯಡೆಯೂರು ಸಿದ್ಧಲಿಂಗೇಶ, ಶಿಶುನಾಳ ಶರೀಫ್‌ರಂತಹವರಿಗೆ ಜನ್ಮ ನೀಡಿ ಸಾಕಿ ಬೆಳೆಸಿದಂತಹ ತಾಯ್ನೆಲ ನಮ್ಮದು. ಇಂತಹ ಮಹನೀಯರು ತಾಯ್ನೆಲಗೊಸ್ಕರ ಹೋರಾಡಿ ಬೆಳೆಸಿದನ್ನು ಇಲ್ಲಿ ಸ್ಮರಿಸಲಾಗಿದೆ.

ಕನ್ನಡಾಂಬೆಯ ಒಡಲಿನಲ್ಲಿ ಎಷ್ಟು ಉತ್ತಮ ಪುಣ್ಯ ಪುರುಷರು ಜನಿಸಿ, ನಾಡು ನುಡಿಗೆ ಅಪಾರವಾದ ಕೊಡುಗೆಗಳನ್ನು ಕೊಟ್ಟಿದ್ದಾರೆ. ಅಂತಹ ಮಹಾನ್ ವ್ಯಕ್ತಿಗಳನ್ನು ಸ್ಮರಿಸುವುದೇ ಈ ಪದ್ಯದ ಆಶಯವಾಗಿದೆ.

**ಮುತ್ತಿನಂಥ ಮಾತು :**

ಮುತ್ತಿನಂಥ ಮಾತು ಹೇಳತೀನಿ ತಂಗಿ
ನೀತಿವಂತಳಾಗಿ ಬಾಳಬೇಕು ತಂಗಿ ॥ಪ॥

ಮಾತು ಹೇಳತೀನಿ ಅಂತ ಬೈದು ಬುದ್ಧಿ ಹೇಳಿ
ದಾರಿ ತೋರಿಸೋ ಮಾತು ಕೇಳಿ ಸಿಟ್ಟಿಗೆ ಬರಬೇಡಾ
ನುಡಿಯ ಬೇಡಾ ಕೆಟ್ಟದೆಲ್ಲ ಸುಟ್ಟು ಹಾಕು ದಿಟ್ಟತನದಿ
ಬಾಳಬೇಕು ಕೆಟ್ಟ ಜನರ ಸಹವಾಸ ಮಾಡಬೇಡಾ ॥೧॥
ಚಾಡಿ ಮಾತು ಕೇಳಿ ನೀನು ಜಾರಿ ಬೀಳಬೇಡ
ಬಿದ್ದ ಮೇಲೆ ಮಾನ ಉಳಿಯೋದಿಲ್ಲ
ಶೀಲ ಹೋದರೆ ಸತ್ತಂಗ ಗಡಿಗೆ ಒಡಿದರೆ ಬಾರದಂಗ
ಹೆಣ್ಣಾಗಿ ಇದ್ದೂ ನೀನು ಇಲ್ಲದಂಗ ॥೨॥

ಪುಂಡಿಪಲ್ಲೇ ಚಟ್ನಿ ರೊಟ್ಟಿ ತಿಂದರ್‍ಯಾಕ ಇರವಲ್ಲಿ
ತುಪ್ಪ ತಿನ್ನೋ ತುಡಗ ಹೆಂಗಸು ನೀನು ನಂಬಬೇಡ
ತಿನಸಿನ ಗೆಳೆತನ ಮಾಡಬೇಡ ಮನಸ್ಸು ಸಡಿಲ ಬಿಡಬೇಡ
ಹೆಂಡಾ ಕುಡಿದು ಮಂಗ್ಯಾನಂಗ ಆಗಬೇಡಾ ॥೩॥

ತಾಳಿ ಕಟ್ಟಿದ ಮ್ಯಾಲೆ ನೀ ತಮಾಷೆ ಮರೆತಂತೆ
ಗಂಡನ ಮನೆ ದೇವರ ಗುಡಿಯಂತೆ ನಂಬಬೇಕು

ನಿನ್ನ ದೇವರ ನೀ ನಂಬಿ ಪಾದ ಪೂಜೆ ಮಾಡಬೇಕು
ಸಿದ್ಧಲಿಂಗೇಶ್ವರನ ಪದಾ ನೀ ತಿಳಿಯಬೇಕು ॥೪॥.[೨೨]

ಗಂಡನ ಮನೆಗೆ ಹೋಗಬೇಕಾದ ಹೆಣ್ಮಕ್ಕಳಿಗೆ ನೀತಿ ಬೋಧನೆ ತಿಳಿ ಹೇಳುವ ಸಂದರ್ಭದ ಚಿತ್ರಣವನ್ನು ಈ ಪದ್ಯದಲ್ಲಿ ಕಾಣುತ್ತೇವೆ. ಅನುಭವಸ್ಥರು ಹೇಳುವ ಮಾತುಗಳಿಗೆ ಸಿಟ್ಟಿಗೆ ಬರಬೇಡ, ಕೆಟ್ಟವರ ಸಹವಾಸ ಮಾಡಬೇಡ, ಹೆಣ್ಣಿಗೆ ಶೀಲವೆ ಮುಖ್ಯ, ಚಾಡಿಮಾತನ್ನು ಕೇಳಬೇಡ, ಬಡತನ ಬಂದರೂ ಸಹ ಕೆಟ್ಟ ದಾರಿ ತುಳಿಯಬೇಡ, ಗಂಡನೇ ದೇವರೆಂದು ತಿಳಿದು ಜೀವನ ಸಾಗಿಸಬೇಕು ಎಂಬ ಜೀವನದ ಆದರ್ಶಗಳನ್ನು ತಿಳಿಯಪಡಿಸುವ ಸಂದರ್ಭಗಳನ್ನು ಇಲ್ಲಿ ಕಾಣುತ್ತೇವೆ.

**ನನ್ನ ಗಂಡ ತಿರಸಟ್ಟಿ ಬಾಳವ್ವ :**

ನನ್ನ ಗಂಡ ತಿರಸಟ್ಟಿ ಬಾಳವ್ವ ಎಡವಟ್ಟಿ
ಹೊಡಿತಾನ ಹಗಲೆಲ್ಲಾ ಮೂಲಿಗ್ಹಾಕಿ
ನಾ ಅಂತ ತಡದೇನಿ ನೆಟ್ಟುಳ್ಳಾಕಿ
ಸಿಟ್ಟ ಬಂದ್ರ ಬಾಳ ಕೊಟ್ಟಿ
ಒಡಿತಾನ ತಲಿಪಟ್ಟಿ

ಬಾಳ ಬಾಳ ಬಿರಿ ಅವನ ಕೈಯಾಗ
ಸತ್ತ ಹುಟ್ಟಿ ಬರತೇನ ದಿನಾ ಬೆಳಗ
ಜಗಳಂದ್ರ ಬಾಳ ಜೂಟ
ಈತ ಹುಲಿಹಾಂಗ ಥೇಟ
ಯಾಂವಾರ ಅಡಮುಟ್ಟಿ ನ್ಯಾಯ ತಗದಾನ
ಎತ್ತಿ ಒಗಿತಾನ ಕಲ್ಲಪಡಿಮ್ಯಾಗ

ಯಾತರದೇನ ದರಕಾರ ಇಲ್ಲ
ಮಾತು ರೀತಿ ಬಾಳ ಬಿರಸ
ನಯಾ ನಾಜೂಕ ಒಂದೂ ಇಲ್ಲ ಏನ ಹೇಳ್ಲಿ
ಕೂಡಿದ ಮಂದ್ಯಾಗ ಕುರುತಾನ ಬಾಮಳ್ಳಿ
ಗಂಡಾ ಹೆಂಡರ ಮಾತು ಅಂದ್ರೆ
ಅಂಗ್ಡ್ಯಾಗಿನ ದಿನಸ ಅಲ್ಲ

ಎಲ್ಲಾರ ಮುಂದ ಇಟ್ಟಿಟ್ಟ ತೋರಸಾಕ
ಮರ್ಯಾದಿ ಸಂಗಾಟ ಮಾತ ಇರಬೇಕು
ಹಿಂತಾ ಮಾತಿನ ಗುರುತ
ನಮ್ಮಾಂವ್ಗ ಏನ ಗೊತ್ತ

ಕುಂತಲ್ಲಿ ನಿಂತಲ್ಲಿ ಬಿಡತಾನ ಬಾಯಿ ಸೈಲ
ಮನಿ ಹಾರಿ ಹೋಗುವಂಗ ಬಟಾ ಬೈಲ

ಮಂದಿ ಹಾಂಗ ಅರಿವಿ ತೊಟ್ಟ
ಚೆಂದದಿ ತಿರಗಾಂವಲ್ಲ
ಹರಕಂಗಿಗೆ ಹದಿನಾರ ಗಂಟ್ಹಾಕಿ
ತೊಡತಾನ ಅವಂಗಿಲ್ಲ ಬ್ಯಾಸರಕಿ
ಸಂಸಾರದಾಗೇನೈತಿ
ಉಂಡುಟ್ಟ ಹೋಗೋದೈತಿ
ನಮಗಿಲ್ಲ ಹಂತಾದೇನ ಬಡತನ
ಹಾಗಂದ್ರ ಹಲ್ಲು ಮುರಿದೇನಂತಾನ
ಅಗಸ್ಯಾನೆಲ್ಲಾ ಗುಂಡಾ
ಉಳಸಾಂವ ನನ ಗಂಡಾ ಆಗ ಬ್ಯಾಸರಕಿ ಬೈಲಾಗಿ
ಪ್ರೀತಿ ತೊಳೆಯತೈತಿ ಮೇಲಾಗಿ
ನನಗಂಡ ತಿರಸಟ್ಟಿ ಬಾಳವ್ವ ಎಡವಟ್ಟ

ಇದ್ದರ ಇರಲೇಳ ಅಂವ ಪಾಡ
ಏನೆಂದ್ರ ಅಳಬುರುಕ ಗಂಡ ಬ್ಯಾಡ.[೨೩]

ಮದುವೆಯಾದ ಹೆಣ್ಣುಮಗಳು ಗಂಡನ ಮನೆಯಲ್ಲಿ ತನಗಾದ ಅನುಭವವನ್ನು ಈ ಗೀತೆಯ ಮೂಲಕ ತಿಳಿಸುತ್ತಾಳೆ. ಗಂಡ ಬಹಳ ಒರಟು ಸ್ವಭಾವದವ. ಏನಾದರು ಪ್ರಶ್ನೆ ಮಾಡಿದರೆ ಬಡಿತಾನ. ದಿನಾಲು ಆತನ ಕಿರುಕುಳ ನೋಡಿದರೆ ದಿನಾಲು ಹುಟ್ಟಿ ಬಂದಂತಹ ಅನುಭವವಾಗುತ್ತದೆ. ಯಾವುದೇ ವಿಚಾರ ಮಾಡದೆ ದರ್ಪತೋರಿಸುತ್ತಾನೆ. ಮಂದಿಯ ಮುಂದೆಯೋ ಬಾಯಿ ಬಿಡುತ್ತಾನೆ. ಸರಿಯಾದ ಬಟ್ಟೆ ಹಾಕೊದಿಲ್ಲ, ಹರಕ ಅಂಗಿ ತೊಡತಾನ. ನನ್ನ ಪತಿ ಹುಲಿಯ ಹಾಗೆ ಇದ್ದಾನೆ. ಹೀಗೆ ಇರುವ ಗಂಡ ಇದ್ದರು ಉಪಯೋಗವಿಲ್ಲ ಎನ್ನುತ್ತಾಳೆ. ಗಂಡ–ಹೆಂಡತಿಯರಲ್ಲಿ ಪರಸ್ಪರ ಹೊಂದಾಣಿಕೆ ಇರಬೇಕು ಇಲ್ಲವಾದರೆ ಜೀವನ ನಡೆಸುವುದು ಕಷ್ಟ ಎಂಬುದನ್ನು ನಿಷ್ಪ್ರಯೋಜಕ ಗಂಡನ ಹಿನ್ನಲೆಯಲ್ಲಿ ಈ ಗೀತೆಯ ಆಶಯ ಮೂಡಿಬಂದಿದೆ.

**ಕೊಟ್ಟಾರೆ ಕೊಡು ಶಿವನೆ :**

ಕೊಟ್ಟಾರೆ ಕೊಡು ಶಿವನೆ
ಕುಡುಕನಲ್ಲದ ಗಂಡನ।

ಕೆಟ್ಟ ಚಾಳಿ ಇಲ್ಲದ
ಒಟ್ಟಾರೆ ಗುಣವಂತನ।

ಸಾರಾಯಿ ಸಹವಾಸ ಚಟವೊಂದು ಇರುವೋನು
ಇರುಳು ಕುಡಿದು ಬಂದು ಬಡಿದು ಬೈದಾಡುವನು
ಹೆತ್ತ ಮಕ್ಕಳು ಎಂದು ಆದಾರು ಬೀದಿ ಪಾಲು
ಆದೀತು ಎನ್ನ ಬಾಳು ನೆರೆ ಹೊರೆಯ ಬಾಯಿ ಪಾಲು
ಕಂಡ ಹೆಣ್ಣನು ಕಂಡು ಬಾಯಿ ಬಾಯಿ ಬಿಡುವೋನು
ಅಕ್ಕ ತಂಗೀರ ಭೇದ ತಾ ಎಂದು ಮಾಡನು
ಮುದ್ದಿನ ಮಡದಿಯ ಕಣ್ಣೆತ್ತಿ ನೋಡಾನು
ಮೂರೊತ್ತು ಸೂಳೇರ ಸಹವಾಸದಿ ಕಳೆದಾನು ॥ಕೊಟ್ಟಾರೆ॥

ಜಿಪುಣ ಬುದ್ಧಿಯ ಗಂಡ ನನಗೆಂದು ಸಿಗದಿರಲಿ
ಹೆಂಡತಿ ಮಕ್ಕಳುಣ್ಣುವ ಅನ್ನ ಲೆಕ್ಕ ಹಾಕೊನು
ಕಾಯಿ ಲೆಕ್ಕ ಸಾಲೆಯು ತರಲು ಖರ್ಚು ಮಾಡದೆ
ನಡುವೆಯೇ ಸತ್ತನ್ನ ವಿಧವೆಯ ಮಾಡಾನು
ಒಪ್ಪತ್ತಿನ ಗಂಜಿ ಇರಲಿ ಮೈಮೇಲೆ ಚಿಂದಿ ಇರಲಿ
ನಾನು ನನದೆಂಬ ಅಭಿಮಾನ ಒಂದಿರಲಿ ಸುಖದ ಸಿರಿಯು ಬೇಡ
ನಗ ನಾಣ್ಯವೂ ಬೇಡ
ನಗು ನಗುತ ಬಾಳು ಸರಿಸೋ ಗಂಡನ ನೀಡೋ ॥ಕೊಟ್ಟಾರೆ॥.[೨೪]

ಹೆಣ್ಣುಮಗಳು ದೇವರಲ್ಲಿ ನಿವೇದನೆ ಮಾಡಿಕೊಳ್ಳುವ ಚಿತ್ರಣವನ್ನು ಇಲ್ಲಿ ಕಾಣಬಹುದು. ಶಿವನೆ ಕುಡಿಯುವ ಚಟವಿಲ್ಲದ ಗಂಡನನ್ನು ಕೊಡು. ಯಾವುದೇ ಕೆಟ್ಟ ಚಟಗಳಿಲ್ಲದ ಗಂಡನನ್ನು ದಯಪಾಲಿಸು. ಏಕೆಂದರೆ ಕುಡಿದು ಬಂದು ಬಡಿಯುವ ಗಂಡಬೇಡ, ಮಕ್ಕಳನ್ನು ಸರಿಯಾಗಿ ನೋಡಲು ಅವನಿಂದ ಸಾಧ್ಯವಿಲ್ಲ. ಅಕ್ಕ–ತಂಗಿಯರನ್ನು ಸರಿಯಾಗಿ ನೋಡುವ, ನನ್ನನ್ನು ಪ್ರೀತಿಯಿಂದ ನೋಡಿಕೊಳ್ಳುವ, ಸೂಳೆಯರ ಸಹವಾಸ ಮಾಡದ ಗಂಡನನ್ನು ಕರುಣಿಸು ಶಿವನೆ ಎಂದು ದೇವರಲ್ಲಿ ಪ್ರಾರ್ಥಿಸಿಕೊಳ್ಳುವ ಚಿತ್ರಣ ಇಲ್ಲಿದೆ.

**ಬಾಜ್ಯಾರ ಬಾಜ್ಯಾರ ತಿರಗ್ಯಾರ :**

ಬಾಜ್ಯಾರ ಬಾಜ್ಯಾರ ತಿರಗ್ಯಾರ ಈ ಬೀದಿ ಬಸವ್ಯಾರ
ಭಂಡಾರ ಹಚ್ಚೂತ ನಡೆದಾರ ಕಂಡೋರ ಕೈ ಮಾಡಿ ಕರದಾರ
ಭಂಡ ಹೆಂಗಸರಿವರು ಕಂಡು ಕಂಡಾಂಗ ನಡೆದಾರ

ರಬಕವಿ ಪ್ಯಾಟಿ ಸೋಮವಾರ ಇಲ್ಲಿ ಎಲ್ಲಾ ಊರಿನ ಜೋಗತ್ಯಾರ
ಅಂಗಡಿ ಅಂಗಡಿ ತಿರಗ್ಯಾರ ಇವರು ಖಬರ ತಗದಿಟ್ಟ ನಿಂತಾರ
ಥೂ ಥೂ ಅಂತಾ ಉಗಳಿದರು ತುಂತುನಿ ಬಾರಸ್ಯಾರ
ಹಗಲು ರಾತ್ರಿ ಅನ್ನಲಾರದ ಹಣದ ರಾಶಿ ಕೂಡಿಸ್ಯಾರ

ಮಾಲಿಂಗಪೂರ ಬಜಾರದಲ್ಲಿ ಸಂತಿ ನಡೆದಾಗ ಮಂಗಳವಾರ
ಗುರುತಿನ ಗಂಡಸರ ತರಬ್ಯಾರ ಗುದುಮುರಗಿ ಮಾತನಾಡ್ಯಾರ
ಎಲ್ಲಮ್ಮನ ಹೆಸರಿನ ಮ್ಯಾಲೆ ಕೆಲಸ ಎಲ್ಲ ಮುಗಿಸಿ
ಬಲ್ಲಂಗ ರೊಕ್ಕ ತುಂಬಿಕೊಂಡು ಖುಲ್ಲಾ ಮನಸೀಲೆ ಬಂದಾರ

ಬನಹಟ್ಟಿ ಊರ ಬಾಜಾರ ಇದು ಎಲ್ಲಾ ಹಳ್ಳಿಗೆ ಹತ್ತಿರ
ಎಲ್ಲಿ ಕಾಣೆ ಪದಾ ಅಂದಾರ ಚೌಡಕಿ ಬಾರಸಿ ಚಾ ಕುಡದಾರ
ಪರಿಚಯದ ಹೆಂಗಸರಿವರು ಪಕ್ಕಾ ಗಳಿಸುವವರಿವರು
ಸೋಗ ಹಾಕಿ ಮೆರಿತಾರ, ಕತಿ ಕೇಳುವ ಸೋಗಲಾಡ್ಯಾರ

ಸುಂದರ ಸುಂದರ ಹುಡುಗ್ಯಾರ ಇವರು ಚಂದಾನ ಪಾತರಗಿತ್ತ್ಯಾರ
ಸಿನಿಮಾಕ ಹೋಗಿ ಬರತಾರ ನಾಟಕದಾಗೂ ಇರತಾರ
ಊರಿಗೆ ಬಂದ ಮೆಟ್ಟ ಮಾಡಿ ಉತ್ತಮರಂಗ ಮೆರಿತಾರ
ಯಾಕಲಗೆ ಜೋಗವ್ವ ಅನುತ ಎಲ್ಲಮ್ಮ ತಾಯಿ ಹೆಸರ ಕೆಡಿಸ್ಯಾರ

ಚಿಮ್ಮಾಡಿ ಊರ ಚಲುವ್ಯಾರ ಇವರು ಚಿತ್ರದಾಗಿನ ಗೊಂಬ್ಯಾರ
ನಾವಲಗಿ ಊರ ಹುಡಗ್ಯಾರ ನೋಡು ನವಲಿನ ನಡಿಗಿಹೊಂಟಾರ
ಎಲ್ಲಾ ಊರಿನ ಬಾಲ್ಯಾರ ಎಲ್ಲಮ್ಮನ ಹರಕಿ ಹೊತ್ತಾರ
ಮುಂಬೆ ಪ್ಯಾಟೆಲ್ಲಾ ತಿರುಗಿ ಮೂಗ ಬಟ್ಟು ಕಳಕೊಂಡಾರ

ರಂಡ್ಯಾರ ಹುಣಿವಿ ಮಾಡ್ಯಾರ ಯಾಕೋ ಏನೋ
ಕೈಯಾ ಬಳಿ ಒಡದಾರ ಇವರು ಊರೆಲ್ಲ ಚಿಲ್ಲರ ಮಾಡ್ಯಾರ
ಮುತ್ತೈದಿ ಹುಣವಿ ದಿನಾ ಮುತ್ತಿನ ಬಳಿ ತೊಟ್ಟಾರ
ಮುತ್ತೈದಿ ಮಕ್ಕಳಾಗಿ ಗರತಿ ಗಂಗವ್ವನಂಗ ತಿರುಗ್ಯಾರ

ರೇಣುಕಾದೇವಿ ಪದ ಹಾಡ್ಯಾರ ಅಲ್ಲಿ ಜಮದಗ್ನಿ ಶಾಪ ಕೊಟ್ಟಾರ
ಪತಿವ್ರತೆ ಕತಿ ಕೇಳಿದರೆ ಆಗತೈತಿ ಪಾಪ ಪರಿಹಾರ
ಎಲ್ಲಮ್ಮ ತಾಯಿ ನಿನ್ನ ಭಕ್ತರ ಹೊಲಸ ಚಾಳಿ
ಹರದಾಕಿದರು ಕೆಂಧೂಳಿಯವರು ಪದ ಹಾಡಿ
ಕೈಮುಗಿದು ನಿಂತಾರ.[೨೫]

ಪ್ರಸ್ತುತ ಕವನವು ಭಂಡ(ಜೋಗಮ್) ಹೆಂಗಸರು ಸಮಾಜದಲ್ಲಿ ಕಾಣಿಸಿಕೊಳ್ಳುವ ಚಿತ್ರಣ ಇಲ್ಲಿ ಮೂಡಿಬಂದಿದೆ. ಇಂತಹ ಹೆಂಗಸರು ಬಜಾರದಲ್ಲಿ ಹೇಗೆ ತಿರುಗುತ್ತಿರುತ್ತಾರೆ, ಹಾಡುಗಳನ್ನು ಹಾಡಿಕೊಂಡು, ಚೌಡಕಿಯನ್ನು ಬಾರಿಸುತ್ತಾ, ದೇವರ ಹೆಸರುಗಳನ್ನು ಸ್ಮರಿಸುತ್ತಾರೆ ಎಂಬುದು ಇಲ್ಲಿ ಚಿತ್ರಣಗೊಂಡಿದೆ.

**ತಲಿಮ್ಯಾಲ ಬುಟ್ಟಿ :**

ತಲಿಮ್ಯಾಲೆ ಬುಟ್ಟಿ ಹೊತ್ತಕೊಂಡು ಹುಡುಗಿ
ಯಾವೂರಿಗೆ ಹೊಂಟಿ ಹೇಳು ಅದರಾಗೇನೈತಿ।

ಬುಟ್ಟಿ ಒಳಗಿನ ತೋರಸತೀನಿ ಹುಡುಗ
ಗಾಬರಿ ನೀ ಆಗತಿ ಅದರೊಳಗೆ ಹಾವೈತಿ।

ಓ... ಚಲುವನಿ ಕಾಣದ ಹುಡುಗಿ ನೀ ಕಾಣತಿ
ಇದನ್ಯಾಕ ಸೋಗ ಸಿನಿಮಾನಟಿ ಹಂಗ ಇದ್ದಂಗ ನಿನ್ನ ಮೂಗ।

ಓ...ಗಾಗರ ಇದ್ದರ ಹಿಂಗ ಗಂಡಿನ ಮೋಹ ತಿಳಿಯುವುದಿಲ್ಲ
ಶೃಂಗಾರ ಆದರೂ ಹುಡುಗರ ಕೆಟ್ಟ ದೃಷ್ಟಿ ಈ ಕಾಲದಾಗ
ಹಾವಗಾರತಿ ಅಲ್ಲನಿ ಹುಡುಗಿ ಬ್ಯಾರೆ ಏನು ಐತಿ
ಅದರ ಒಳಗ ಏನು ಐತಿ।

ಗಾಳ್ಯಾಗ ದೊಡ್ಡ ಕುಬಸ
ಇಳಕಲ್ಲ ಸೀರಿ ನನ್ನ ಮೆಚ್ಚುಗೆ ಐತಿ।

ಸೀರಿ ಉಟ್ಟುಕೊಂಡು ಹೋಗೋದು ಹಳ್ಳಿಯ ಪದ್ಧತಿ
ಇಳಕಲ್ಲ ಸೀರಿ ಅಂದ್ರೆ ಕರ್ನಾಟಕದಲ್ಲಿ ಹೆಸರು ಪಡದೈತಿ
ಹೆಸರಾದ ಸೀರಿ ಉಟ್ಟು ನೀ ಹೊರಟಿ ಅಂದ್ರ ನಿಂದ ಹೆಸರ
ಸೀರಗೆ ಹೋದ ಮಾರ ನೀನು ಬುಟ್ಟಿಯಾಗೆ ಯಾಕ ಬಿದ್ದಿ
ಅದರೊಳಗ ಹಾವೈತಿ।

ವಹಾ...ವಹಾ ಭಾರಿ ಹೆಣ್ಣು ಭಾರಿ ಹೆಣ್ಣು ಇರಬೇಕು
ನೋಡಿದವರು ಅಂತಾರು ಭಾರತೀಯ ನಾರಿ ಯಾವತ್ತು ನಿನಗ
ಅಂದಗಾತಿ ಅನ್ನಬಾರದು ನೋಡಿ ಜನರು ಕೆಟ್ಟವ್ವಾ ಅಂದಂಗ
ನೀನೇನು ನಡೆದರೆ ನಾನು ತಂದಿ ತಾಯಿಗೆ ಸಿಟ್ಟು ಬರುವ ಹಾಂಗ
ಸಂತಿಗಿ ಹೊರಟಿನಿ ಬರುವಾ ಬುಟ್ಟಿ ತುಂಬಿರತೈತಿ।

ಬರುವಾಗ ಬುಟ್ಟಿ ತುಂಬಿರತೈತಿ
ಹೋಗುವಾಗ ಖಾಲಿ ಐತಿ
ನಿಂದ ಮಾತ ಖರೆ ಐತಿ।[೨೬]

ತಲೆಯ ಮೇಲೆ ಬುಟ್ಟಿ ಇಟುಕೊಂಡು ಹೋಗುತ್ತಿರುವ ಹುಡುಗಿಗೆ ಹುಡುಗ ಪ್ರಶ್ನಾರ್ಥಕವಾಗಿ ಕೇಳುವ ಚಿತ್ರಣವನ್ನು ಇಲ್ಲಿ ಕಾಣಬಹುದು. ಇಳಕಲ್ಲ ಸೀರೆ ಹೆಣ್ಣುಮಕ್ಕಳಿಗೆ

ಬಹಳ ಚೆನ್ನಾಗಿ ಕಾಣುತ್ತದೆ. ಆ ಸೀರೆ ಉಟ್ಟುಕೊಂಡು ಹೋಗು ಎಂದು ಹೇಳುವುದು ಇಲ್ಲಿ ಭಾರತೀಯ ಸಂಸ್ಕೃತಿಯನ್ನು ನೆನಪಿಸುತ್ತದೆ.

**ತಾಯಿ ಸತ್ತ ಮೇಲೆ :**

ತಾಯಿ ಸತ್ತ ಮೇಲೆ ತವರಿಗೆಂದೂ ಹೋಗಬಾರದವ್ವ
ನಾಯಿಗಿಂತ ಕಡಿಯಾಗಿ ಹೋಯಿತು ನನ್ನ ಬಾಳ ಜೀವ
ಬಾಳ ಮಕ್ಕಳ ಬಡತನ ಸಂಸಾರ ನನ್ನ ನಸೀಬದಾಗ
ಬರೆದು ಕಳಿಸ್ಯಾನ ಏನು ಮಾಡಲಿ ಕರುಣೆ ಇಲ್ಲ ಶಿವಗ॥
ಸಿರಿಯು ತವರಿಗೆ ತುತ್ತು ಕೂಳಿಗಾಗಿ ನಾ ಹೋಗಿರಲಿಲ್ಲ
ಕರಳು ತಡೆಯದೆ ಅಣ್ಣನ ನೋಡಲು ಹೊರಟು ಬಂದೆನಲ್ಲ
ಬಗಲಾಗ ಒಂದು ಕೈಯಾಗ ಒಂದು
ಕೂಸನು ಕಟಗೊಂಡು ಹರಿದಾರಿಹತ್ತು
ಉಸಿರು ಹಾಕುತ ಬಂದೆನು ನಡಕೊಂತ॥
ತವರಿನ ಹೊಸ್ತಿಲ ತುಳಿಯುವದರೊಳಗ
ಅಣ್ಣನ ಹೆಂಡತಿ ಕಂಡರೂ ಕಾಣದಾಂಗ
ಒಳಗೆ ಹೋದರು ಕರೆಯದೆ ಕರೆಯುವ ಗತಿ ಇಲ್ಲ
ನೆತ್ತಿಯ ಮೇಲೆ ಬಿಸಿಲು ಬಂದಿತು
ಮಕ್ಕಳು ಚಡಪಡಿಸಿ ನೀರಿಗಾಗಿ
ಕಣ್ಣಿರು ಹಾಕುತ ಅತ್ತಾವ ಪುಟಪುಟಿಸಿ॥
ಹುಟ್ಟಿ ಬೆಳೆದ ನನ್ನ ತವರೂರ ಮನಿಯಾಗ ನೀರಿಗೆ ಗತಿಯಿಲ್ಲ
ಬಾ ನನ್ನ ಮಗಳ ಯಾವಾಗ ಬಂದಿಯಂತ ಕರೆಯುವ ಕರುಳಿಲ್ಲ
ಕೆಲಸದ ಮೇಲೆ ಹೋಗಿದ್ದ ಅಣ್ಣಯ್ಯ ಮನೆಗೆ ಬಂದು
ದಿಕ್ಕು ಇಲ್ಲದ ತಂಗಿಯ ನೋಡಿ
ಬಂದ್ಯಾಕ ಅವಕರೆದಾ ಮನಸಿನವಳಗೆ ಕಾಲಿಡಬೇಡಂದರು॥
ಹಸಿದ ಮಕ್ಕಳ ನೋಡಿ ಅಣ್ಣನ ಮನೆಯೊಳು
ಒಳಗೆ ಹೋದೆನು ಅಣ್ಣನ ಜೊತೆಗೂಡಿ
ಒಳಗ ಬಂದ ಅಣ್ಣನ ಹೆಂಡತಿ
ಕಿವಿಯೊಳು ತುಂಬ್ಯಾಳು । ಬಾಯಿ ಮುಚ್ಚಿ ಬರ್‍ರಿ ಸುಮ್ಮನೆ
ಇರುವಂತೆ ಕಿವಿಯೊಳು ತುಂಬ್ಯಾಳ । ಗಂಡ ಹೆಂಡಿರ ಮುಸರಿಯ॥
ಮಕ್ಕಳು ಮುಸರಿ ಉಣ್ಣುವಾಗ । ತಾಯಿಯ ನೆನಪಾಯ್ತು
ಅಣ್ಣನ ಮುಂದೆ ಕಣ್ಣೀರು ತೆಗೆದು
ಅವ್ವ ಸಾಯುವಾಗ ಒಬ್ಬಾಕಿ ತಂಗಿ

ಚೆಂದಾಗಿ ನೋಡಿಕೊ ಅಂತ ಹೇಳಿದಾಗ
ಮದುವೆಯೂ ಕೆಲ ದಿನಗಳವರೆಗೆ॥
ಚಂದಾಗಿ ನೋಡಿದ ಮಡದಿ ಬಂದು। ಮೂರು ತಿಂಗಳೊಳಗೆ ತಂಗಿ
ಮರೆತು ಬಿಟ್ಟು ಕೀಳು ಕುಲದಣ್ಣ
ಮಕ್ಕಳಾಂಗ ಅತ್ತಿಗೆ ನಮ್ಮನ್ನು ನೋಡಿದಳೆ
ಜೋಡ ಹಕ್ಕಿಹಾಂಗ ನಾವು ಅಣ್ಣಯ್ಯ
ಕೂಡಿ ಬೆಳೆದ ಮಾತು ತುಪ್ಪ ಹಾಕಿ ಕೈಮಾಡಿ ಉಣಿಸಿದ
ನೆನಪಾಯ್ತು ತಾಯಿ ಇದ್ದರ ತಂಗಿಗೆ॥
ಈ ಗತಿ ಬರುತಿತ್ತೇನೀಗ ಅಣ್ಣ ಬಿಟ್ಟರೂ ನಾ ಹೆಂಗ ಮರಿಲವ್ವ
ನಮ್ಮಂತ ಬದುಕಿರುವ ಅಣ್ಣನ ಕರುಣಾಂಗ
ನೀರ ನಿನಗೇನುವೆನೆಂದ
ಅಣ್ಣ ಬಿಟ್ಟರೂ ನಾ ಹೆಂಗ ಬಿಡಲೆವ್ವ ಕರುಳಿನ ಸಂಬಂಧ॥.[೨೭]

ತಾಯಿ ಸತ್ತ ಮೇಲೆ ಗಂಡನ ಮನೆಯಿಂದ ತವರಿಗೆ ಬಂದ ಹೆಣ್ಣುಮಗಳಿಗೆ ಆಗುವ ಅವಮಾನ, ಹಿಂಸೆಯನ್ನು ಈ ಹಾಡಿನ ಮೂಲಕ ಮಾರ್ಮಿಕವಾಗಿ ಹೇಳಲಾಗಿದೆ. ತಾಯಿ ಇರುವವರೆಗೆ ಮಾತ್ರ ಹೆಣ್ಣಿಗೆ ಪ್ರೀತಿಯ ರಸದೌತಣ, ತಾಯಿ ಸತ್ತಮೇಲೆ ಆ ಹೆಣ್ಣಿಗೆ ಕಸದೌತಣ. ಅಣ್ಣನಿದ್ದರೂ ಅವಳಿಗೆ ಸರಿಯಾದ ಪ್ರೀತಿ, ಸನ್ಮಾನಗಳು ಸಿಗದಿರುವುದು. ಅತ್ತಿಗೆ ಸಹ ಸರಿಯಾಗಿ ನೋಡಿಕೊಳ್ಳದೆ ಇವಳನ್ನು ತಿರಸ್ಕರಿಸುವ ಚಿತ್ರಣ ಇಲ್ಲಿ ಮೂಡಿಬಂದಿದೆ.

**ಮಾತಾಡ್ ಮಲ್ಲಿಗೆ :**

ಮಾತಾಡ್ ಮಾತಾಡ್ ಮಲ್ಲಿಗೆ
ಸಂಪಿಗೆ ಸೇವಂತಿಗೆ ಗುಂಪಿನಲ್ಲಿ
ಮಾತಾಡ್ ಮಾತಾಡ್ ಮಲ್ಲಿಗೆ

ಒಬ್ಬನ್ನ ಕಟ್ಟಿದ್ದೆ । ಒಬ್ಬನ ಬಿಟ್ಟಿದ್ದೆ
ಒಬ್ಬನ್ನ ಕರಕೊಂಡು ಒಳಗ್ಹೋದೆ ಮಲ್ಲಿಗೆ
ಯಾವನ್ನ ಕಟ್ಟಿದ್ದೆ ಯಾವನ್ನ ಬಿಟ್ಟಿದ್ದೆ
ಯಾವನ್ನ ಕರಕೊಂಡು ಒಳಗ್ಹೋದೆ ಮಲ್ಲಿಗೆ
ಹಸವನ್ನ ಕಟ್ಟಿದ್ದೆ ಕರುವನ್ನ ಬಿಟ್ಟಿದ್ದೆ
ಹಾಲನ್ನು ಕರಕೊಂಡು ಒಳಗ್ಹೋದೆ ಮಲ್ಲಿಗೆ

ಒಬ್ಬನ್ನ ನೂಕಿದ್ದೆ ಒಬ್ಬನ್ನ ಹಾಕಿದ್ದೆ
ಒಬ್ಬನ್ನ ಜೊತೆಯಲ್ಲಿ ತಿರುಗಿಬಂದೆ ಮಲ್ಲಿಗೆ
ಯಾವನ್ನ ನೂಕಿದ್ದೆ ಯಾವನ್ನ ಹಾಕಿದ್ದೆ

ಯಾವನ್ನ ಜೊತೆಯಲ್ಲಿ ತಿರುಗಿಬಂದೆ ಮಲ್ಲಿಗೆ
ಕದವನ್ನು ನೂಕಿದ್ದೆ ಅಗಳಿಯ ಹಾಕಿದ್ದೆ
ದೀಪದ ಜೊತೆಯಲ್ಲೇ ತಿರುಗಿ ಬಂದೆ ಮಲ್ಲಿಗೆ

ಒಬ್ಬನ್ನ ಹಾಸಿದ್ದೆ ಒಬ್ಬನ್ನ ಹೊದ್ದಿದ್ದೆ
ಒಬ್ಬನ್ನ ಎಳಕೊಂಡು ಮಲಗಿದ್ದೆ ಮಲ್ಲಿಗೆ
ಯಾವನ್ನ ಹಾಸಿದ್ದೆ ಯಾವನ್ನ ಹೊದ್ದಿದ್ದೆ

ಯಾವನ್ನ ಎಳಕೊಂಡು ಮಲಗಿದ್ದೆ ಮಲ್ಲಿಗೆ
ಒಬ್ಬನ್ಗೆ ಸೀರೆಯನ್ನೇ ಕೊಟ್ಟುಬಿಟ್ಟೆ ಮಲ್ಲಿಗೆ
ಯಾವೂನ್ಗೆ ಕಾಲ್ಕೊಟ್ಟೆ ಯಾವೂನ್ಗೆ ಕೈಕೊಟ್ಟೆ

ಯಾವೂನ್ಗೆ ಸೀರೆಯನ್ನು ಕೊಟ್ಟುಬಿಟ್ಟೆ ಮಲ್ಲಿಗೆ
ಕಂಚಗಾರಗೆ ಕಾಲ್ ಕೊಟ್ಟೆ ಬಳೆಗಾರ್ಗೆ ಕೈಕೊಟ್ಟೆ
ಮಡಿವಾಳಗೆ ಸೀರೆಯನ್ನೆ ಕೊಟ್ಟು ಬಿಟ್ಟೆ ಮಲ್ಲಿಗೆ

ಮಾತಾಡ್ ಮತಾಡ್ ಮಲ್ಲಿಗೆ.[೨೮]

ಈ ಕವನವು ಒಗಟಿನ ರೂಪದಲ್ಲಿದ್ದು ಪ್ರಶ್ನೆಗಳಿಗೆ ಒಗಟಿನ ರೂಪದಲ್ಲಿ ಉತ್ತರ ಕೊಟ್ಟಿದ್ದು ಬಹಳ ಸ್ವಾರಸ್ಯಕರವಾಗಿದೆ. ಮಲ್ಲಿಗೆಗೆ ಪ್ರಶ್ನಿಸುವಂತಹ ಪ್ರಸಂಗ ಯಾರನ್ನು ಕಟ್ಟಿದ್ದೆ. ಒಬ್ಬನ ಬಿಟ್ಟಿದ್ದೆ, ಇನ್ನೊಬ್ಬನನ್ನು ಕರಕೊಂಡು ಒಳಗೆ ಹೋದಿ ಎಂಬ ಪ್ರಶ್ನೆಗೆ ಹಸುವನ್ನು ಕಟ್ಟಿ, ಕರುವನ್ನು ಬಿಟ್ಟು, ಹಾಲನ್ನು ಕರೆದುಕೊಂಡು ಒಳಗೆ ತೆಗೆದುಕೊಂಡು ಒಳಹೋದೆ ಎಂದು ಹೇಳುವ ಉತ್ತರ ಬಹಳ ಸುಂದರವಾಗಿ ಕಾಣುವಂತಹದ್ದು. ಹೀಗೆ ಹಲವಾರು ಒಗಟಿನ ಪ್ರಶ್ನೆಗಳಿಗೆ ಸರಳವಾಗಿ ಉತ್ತರಿಸಿರುವುದನ್ನು ಇಲ್ಲಿ ನೋಡುತ್ತೇವೆ.

**ಅವ್ವನ ನುಡಿ :**

ತಾವರೆಯ ಗಿಡಹುಟ್ಟಿ ದೇವರಿಗೆ ನೆರಳಾಗಿ
ನಾ ಹುಟ್ಟಿ ಮನೆಗೆ ಎರವಾದೆ ಹಡದವ್ವ
ನೀ ಕೊಟ್ಟ ಮನೆಗೆ ಸ್ಥಿರವಾದೆ

ಬ್ಯಾಸಗಿ ದಿವಸಕ್ಕ ಬೇವಿನ ಮರ ತಂಪ
ಭೀಮಾರತಿಯೆಂಬ ಹೂಳಿತಂಪು ಹಡೆದವ್ವ
ನೀ ತಂಪು ನನ್ನ ತವರಿಗೆ

ಹೆಣ್ಣು ಹಡೆಯಲಿಕ್ಕೆ ಬ್ಯಾಡ ಹೇರವರಿಗೆ ಕೊಡಬ್ಯಾಡ
ಹೆಣ್ಣು ಹೋಗುವಾಗ ಅಳಬ್ಯಾಡ । ಹಡೆದವ್ವ
ಸಿಟ್ಟಾಗಿ ಶಿವಗೆ ಬೈಬ್ಯಾಡ

ಗಂಜೀಯ ಕುಡಿದರೂ ಗಂಡನ ಮನಿಲೇಸು
ಅಂದಣದ ಮ್ಯಾಲೆ ಚವುರದ ಸಾರಿದರ
ಹಂಗಿನ ತವರ ಮನಿಸಾಕ

ತಾಯಿ ಮಕ್ಕಳ ದನಿಯು ತಾಳ ಬಾರಿಸಿದಾಂಗ
ಜೋಡು ಕಿನ್ನರಿ ನುಡಿದಾಂಗ ಹಳಸಂಗಿ
ಹೊತ್ತೇರಿ ತಾಸೆ ಬಡಿದಾಂಗ.[೨೯]

ತ್ರಿಪದಿಯ ರೂಪದಲ್ಲಿರುವ ಈ ಪದ್ಯದಲ್ಲಿ ಹೆಣ್ಣು ಮಗಳು ತನ್ನ ಮನಸ್ಸಿನಲ್ಲಿರುವ ವಿಚಾರವನ್ನು ತಿಳಿಸುತ್ತಾ, ತನ್ನ ತವರಿನಲ್ಲಿರುವ ತಾಯಿಯನ್ನು ನೆನಪಿಸಿಕೊಂಡು ಆಕೆಯ ವ್ಯಕ್ತಿತ್ವವನ್ನು ಪ್ರಶಂಸಿಸುತ್ತಿರುವುದನ್ನು ಇಲ್ಲಿ ಕಾಣುತ್ತೇವೆ. ಗಂಜಿ ಕುಡಿದರು ಸರಿ ಗಂಡನ ಮನೆಯಲ್ಲಿ ಇರುವೆ ಎಂದು ಹೇಳುತ್ತಾಳೆ. ಈ ಕವನವು ಇಂದು ಎಲ್ಲರ ಬಾಯಲ್ಲಿ ಹಾಗೂ ಜನಮಾನಸದಲ್ಲಿ ಉಳಿದಿದೆ. ಹೆಣ್ಣು ಮಗಳ ದಿನಂಪ್ರತಿ ಮಾಡುವ ಕಾಯಕದ ಚಿತ್ರಣ ಇಲ್ಲಿದೆ.

**ಬಳೆಗಾರ :**

ಭಾಗ್ಯದ ಬಳೆಗಾರ ಹೋಗಿ ಬಾರಯ್ಯ ನನ್ನ ತೌರಿಗೆ
ಇನ್ನೆಲ್ಲಿ ನೋಡಲಿಂಥ ಬಳೆಗಾರಶೆಟ್ಟಿ
ನಮ್ಮ ನಾಡಲ್ಲಿ ಬಳೆಯಿಲ್ಲ ಬಳೆಗಾರ
ಹೋಗಿ ಬಾರಯ್ಯ ನನ್ನ ತೌರಿಗೆ

ನಿನ್ನ ತವರೂರು ನಾನೆಂತು ಬಲ್ಲೆನು
ಗೊತ್ತಿಲ್ಲ ನನಗೆ ಗುರಿಯಿಲ್ಲ । ಎಲೆಬಾಲೆ
ತೋರಿಸು ತವರೂರ ಹಾದೀಯ

ಬಾಳೆ ಬಲಕೆ ಬಿಡು ಸೀಗೆ ಎಡಕೆ ಬಿಡು
ನಟ್ಟನಡುವೆ ಹೊರಟ್ಹೋಗು ಬಳೆಗಾರ
ಅಲ್ಲಿರುವುದು ನನ್ನ ತವರೂರು॥

ಹಂಚಿನ ಮನೆಗಾಣೋ ಕಂಚಿನ ಕದ ಕಾಣೊ
ಇಂತಾಡುವೆರಡು ಗಿಣಿ ಕಾಣೋ ಬಳೆಗಾರ
ಅದೇ ಕಾಣೋ ನನ್ನ ತವರೂರು॥

ಅಲೆ ಆಡುತಾವ ಗಾಣ ತಿರುಗುತಾವ
ನವಿಲು ಸಾರಂಗಿ ನಗುತಾವೆ । ಬಳೆಗಾರ
ಅದೇ ಕಾಣೋ ನನ್ನ ತವರೂರು॥

ಅಣ್ಣನ ಹೊಟ್ಟೀಲಿ ನಂದಿ ಕೋಲ್ಯೆದು
ಗೊಂಬೆ ತೇರ್ಯೆದು ಹರಿದಾವೋ । ಬಳೆಗಾರ
ಅದೇ ಕಾಣೋ ನನ್ನ ತವರೂರು

ಮುತ್ತೈದೆ ಹುಟ್ಟೀಲಿ ಮುತ್ತಿನ ಚಪ್ಪರ ಹೂಡಿ
ನಟ್ಟ ನಡುವೆ ಪಗಡೆಯ । ನಾಡ್ತಾಳೆ
ಅವಳೆ ಕಣಯ್ಯ ನನ್ನ ಹಡದವ್ವ

ಅಚ್ಚ ಕೆಂಪು ಬಳೆ ಕರಿಯ ಪಟ್ಟೆ ಬಳೆ
ನನ್ನ ಹಡದವ್ವಗೆ ಬಲು ಆಸೆ । ಬಳೆಗಾರ
ಹೋಗಿ ಬಾರಯ್ಯ ನನ್ನ ತವರೀಗೆ॥.[೩೦]

ಬಳೆಗಾರ ಕಾವ್ಯದಲ್ಲಿ ಹೆಣ್ಣೊಬ್ಬಳು ಬಳೆಗಾರನಿಗೆ ತನ್ನ ತವರಿಗೆ ಹೋಗುವ ಮಾರ್ಗದ ಬಗ್ಗೆ ಸಾಂಕೇತಿಕವಾಗಿ ತಿಳಿಸಿಕೊಡುವ ಆಕೆಯ ಕೌಶಲ್ಯವನ್ನು ಮೆಚ್ಚಬಹುದಾಗಿದೆ. ತವರು ಹೆಣ್ಣಿಗೆ ಅಚ್ಚುಮೆಚ್ಚು ಇಳಿ ವಯಸ್ಸಾದರೂ ತವರಿನ ಹಂಗು ತೊರೆಯಲಾರದು. ಇನ್ನೂ ಹರೆಯದ ಹೆಣ್ಣಂತೂ ತವರಿನ ಬಗ್ಗೆ ಎಷ್ಟೊಂದು ಪ್ರೀತಿ, ಮಮಕಾರ, ಅತ್ಯಾಸಕ್ತಿ ಇಟ್ಟುಕೊಂಡಿರುತ್ತಾಳೆಂಬುದು ಹೇಳತೀರದು. ತವರಿಗೆ ಹೋಗುವ ಬಳೆಗಾರನಲ್ಲಿ ತನ್ನ ಮನೆ, ಅದರ ಸ್ಥಾನ, ತಾಯಿ, ಅಣ್ಣ, ಹೋಗುವ ರೀತಿ ಎಲ್ಲವನ್ನು ತಿಳಿಸುವ ಪರಿಯನ್ನು ಇಲ್ಲಿ ಕಾಣುತ್ತೇವೆ.

ಇಲ್ಲಿ ಹೆಣ್ಣುಮಗಳು ತನ್ನ ಮನೆಗೆ ಬಂದಂತಹ ಬಳೆಗಾರನಿಗೆ ತನ್ನ ತವರಿಗೆ ಹೋಗು ಅಲ್ಲಿ ಬಳೆಗಾರನಿಲ್ಲ, ನನ್ನ ತಾಯಿಗೆ ಕೆಂಪುಬಳೆ ಕರಿಪಟ್ಟಿ ಬಳೆ ಅಂದರೆ ಬಲು ಪ್ರಾಣ, ನನ್ನೂರಿಗೆ ಹೋಗು ಎಂದು ಹೇಳುವ ರೂಪಕ ಬಹಳ ಸುಂದರವಾಗಿ ಮೂಡಿಬಂದಿದೆ. ನಿನ್ನ ತವರು ನನಗೆ ಗೊತ್ತಿಲ್ಲ ಎಂದಾಗ ತನ್ನ ತವರಿಗೆ ಹೋಗುವ ದಾರಿಯನ್ನು ತಿಳಿಸುವುದು ಸ್ವಾರಸ್ಯಕರವಾಗಿ ಮೂಡಿಬಂದಿದೆ.

**ತಾಯಿ ಮಗಳಿಗೆ ಬುದ್ಧಿವಾದ :**

ಅತ್ತೆ ಮಾವಗಂಜಿ ಸುತ್ತೇಳು ನೆರೆಗಂಜಿ
ಮತ್ತೆ ಆಳೊ ದೊರೆಗಂಜಿ । ಮಗಳೆ
ಅತ್ತೆ ಮನೆಯಾಗೆ ಬಾಳಮ್ಮ॥

ಅತ್ತೆ ಮಾವರ ಪಾದ ತಂದೆ ತಾಯಿಯರ ಪಾದ
ಮತ್ತೆ ಗಂಡನ ಶ್ರೀಪಾದ । ನೆನೆದರೆ
ಬೆನ್ನ ಹಿಂದಿದೆ ಕೈಲಾಸ॥

ನೆರೆಮನೆ ಸಿರಿದೇವಿ ನೀನಾಗು ಮಗಳೇ
ಮನೆಯೋಳು ಭೇದ ಬಗಿಬೇಡ । ಮಗಳೇ

ತುಂಬಿದ ಮನೆಯನ್ನು ಒಡಿಬೇಡ॥

ಬಾಳುವೆ ಮಾಡಿದರೆ ಬಾ ತಂಗಿ ಅಂದಾರು
ಬಾಳೆವೆಗೆಟ್ಟು ಮತಿಗೆಟ್ಟು । ಬಾಳಿದರೆ
ಹೆತ್ತವರ ಕುಲಕೆ ಹಗೆಯಾದೆ॥

ಬೇಲಿಮೇಗಳ ಹೂವು ಬೆಳ್ಳಗಿದ್ದರೆ ಏನು
ಮಲ್ಲಿಗೆ ಹೂವಂಥ ಮನೆಗಂಡನ । ಬಿಟ್ಟು
ಅನ್ಯ ಪುರಷನ ಒಲಿಬೇಡ॥

ಕನ್ನಡಿ ಕೈ ತಪ್ಪಿ ಹನ್ನೆರಡು ಚೂರಾಗಿ
ಹೆಣ್ಣಿನ ಮನವು ಎರಡಾಗಿ । ದಾಳಿಂಬೆ
ಹಣ್ಣಾದರೇನು ಫಲವೇನು॥

ಮಾತ್ಗಂಟಿ ಮಗಳಲ್ಲ ತಾಟ್ಗಿತ್ತಿ ಸೊಸೆಯಲ್ಲ
ತೂಪರದ ಚಿಕ್ಕೆ ಓಲೆಗಲ್ಲ ತೌರಿಗೇ
ಮಾತ ತಂದೋಳು ಮಗಳಲ್ಲ॥

ಎಳೆಗರು ಎತ್ತಲ್ಲ ದಳವಾಯಿ ದೊರೆಯಲ್ಲ
ಮನಿಗೆ ಬಂದಳಿಯ ಮಗನಲ್ಲ । ತೌರಿಗೆ
ಮಾತ ತಂದೋಳು ಮಗಳಲ್ಲ॥

ಅತ್ತೆಯ ಮನೆಯಲ್ಲಿ ತೊತ್ತಾಗಿ ಇರಬೇಕು
ಹೊತ್ತಾಗಿ ನೀಡಿದರ ಉಣಬೇಕು । ತೌರಿಗೆ
ಉತ್ತಮ ಹೆಸರು ತರಬೇಕು

ಹೆತ್ತವ್ವ ಮಗಳನ್ನು ಎತ್ತಿ ತಬ್ಬಕೊಂಡು
ಹಾರದ ಹಿಂಗುರುಳ ಬಿಗಿದಾಚೆ । ನುಡಿದಾಳು
ಮಗಳೇ ನೀನಿಂದಿಗೆ ಎರವಾದೆ।

ಹಾಲುಬಾನವನುಂಡು ನಲವತ್ತು ಗಂಗಳ ಸವೆದು
ಬಾಲೆ ನಮ್ಮನೆಗಿಂದು ಎರವಾದೆ । ಮುಂದ್ಲೂರ
ಗೌಡರಹಟ್ಟಿಗೆ ಸೊಸೆಯಾದೆ॥

ಅತ್ತು ಹಾಡಿದರೇನು ಈ ದುಃಖ ಮಾಸದು
ಹತ್ತೊಂದಿಗೆ ಬಿಟ್ಟು ಇರಲಾರೆ । ಹಡೆದಮ್ಮ
ನಿನ್ನ ಬಿಟ್ಟು ನಡಿಲಾರೆ ಮುಂದೆ॥

ಆಲಕ್ಕೆ ಹೂವಿಲ್ಲ ಸಾಲಕ್ಕೆ ಕೊನೆಯಿಲ್ಲ

ಜಾಲಿಯ ಮರವು ನೆರಳಲ್ಲ । ಹೆಣ್ಣಿಗೆ
ತಾಯಿಯ ಮನಿಯು ಸ್ಥಿರವಲ್ಲ॥

ಕತ್ತಿನ ಮುತ್ತು ಕಿತ್ತು ದಾನ ಮಾಡಿ
ಹೆತ್ತಲ್ಲ ತಾಯಿ ನೆರೆಹೊರೆಗೆ । ಹೆಣ್ಣ
ಕೊಟ್ಟ ಮೇಲ್ಯಾಕೆ ಸುಖ-ದುಃಖ॥

ಹೆಣ್ಣು ಹೆತ್ತೆನೆಂದು ಹಚ್ಚಾಳ ನಿನಗೇಕೆ
ಹೆಣ್ಣು ನೆರೆಮನೆಗೆ ಸಿರಿದೇವಿ । ತಾಯಮ್ಮ
ಗಂಡ ನಿನ್ಮನಿಗೆ ತೊಲೆಗಂಬ॥

ಅಳಿಯ ಶರಣೆಂದ ಆಳು ಕುದುರೆಯ ಕೊಟ್ಟು
ಮಗಳೆ ನೀನೋಗಿ ಶರಣೆನ್ನ ನಿಮ್ಮಯ್ಯ
ಮಣಿಸರ ಕೊಟ್ಟು ಕೊಡತಾರೆ॥

ಸಾಣೇಕಲ್ಲು ಸಹಿತ ತ್ಯಾಗದ ಮಣಿ ಸಹಿತ
ಎಮ್ಮೆಯ ಹಿಂಡು ಐದಾರು । ಕೊಡುವಾರು
ನಿಮ್ಮಣ್ಣನ್ಗೆ ಹೋಗಿ ಶರಣೆನ್ನ॥.[೩೧]

ಮನೆಯೇ ಮೊದಲ ಪಾಠಶಾಲೆ 'ತಾಯಿ' ಮೊದಲ ಗುರು ಎನ್ನುವ ಮಾತೊಂದಿದೆ. 'ತಾಯಿ' ಲೋಕದ ದೈವ ಮಕ್ಕಳಿಗೆ ವಿದ್ಯಾಬುದ್ಧಿ, ನಡೆ-ನುಡಿ, ಆಚಾರ-ವಿಚಾರ, ರೀತಿ-ರಿವಾಜುಗಳನ್ನು ಕಲಿಸಿ ಕೊಡುತ್ತಾಳೆ. ಹೆಣ್ಣು ಮಗಳಿಗಂತೂ ತಾಯಿ ಇದೆಲ್ಲದರ ಜೊತೆಗೆ ಬದುಕಿನ ಅನುಭವವನ್ನು ಕಲಿಸಿ ಕೊಡುತ್ತಾಳೆ. ಏಕೆಂದರೆ ಅವಳು ಬದುಕಿನಲ್ಲಿ ಏನಾದರೂ ಎಡವಿದರೆ ಮಾತು ಬರುವುದು ತಾಯಿಗೆ ಅದಕ್ಕಾಗಿ ತಾಯಿ ಮೇಲೆ ಮಕ್ಕಳ ಬೆಳವಣಿಗೆ ಜವಾಬ್ದಾರಿ ಬಹಳಷ್ಟಿರುತ್ತದೆ. ಹಾಗಾಗಿ ತಾಯಿಯು ಮಗಳ ಸರ್ವಾಂಗೀಣ ಸುಧಾರಣೆಯ ಸಲುವಾಗಿ ಬಹಳಷ್ಟು ಜಾಗ್ರತೆಯಿಂದ ಶ್ರಮಿಸುತ್ತಿರುತ್ತಾಳೆ. ತಾಯಿಯಿಂದ ಮಗಳು ಎಲ್ಲವನ್ನು ಕಲಿತು ಎಷ್ಟು ಜಾಗೃತಳಾಗಿರಬೇಕೆಂಬುದನ್ನು ಹಂತಹಂತವಾಗಿ ತಿಳಿಸಿ ಕೂಡುತ್ತಾಳೆ. ಆ ಮೂಲಕವಾಗಿ ಹೆತ್ತ ಮನೆ ಹಾಗೂ ಕೊಟ್ಟ ಮನೆಗೆ ಬೆಳಕಾಗಿರಲು, ಮಲ್ಲಿಗೆಯಾಗಿರಲು, ಗಂಧವಾಗಿರಲು, ಸಕ್ಕರೆಯಾಗಿರಲು ತಾಯಿ ಬಯಸುತ್ತಾಳೆ. ಒಟ್ಟಾರೆಯಾಗಿ ಈ ಕಾವ್ಯ ಗಂಡನ ಮನೆಗೆ ಹೋಗುವ ತನ್ನ ಮಗಳಿಗೆ ಕಿವಿಮಾತನ್ನು ಹೇಳುವ ತಾಯಿಯ ಚಿತ್ರಣವನ್ನು ಚಿತ್ರಿಸಿದೆ.

**ಅಜ್ಜಿಯ ಅನುಭವದ ಮಾತು :**

ಚೆಲುವ ಚೆಲುವನೆಂದು ಹಲವ ಹಂಬಲಿಸ ಬ್ಯಾಡ
ಚೆಲುವಿದ್ದರೇನು ಗುಣವಿಲ್ಲದವಗೆ
ಚೆಲುವಿದ್ದರೇನು ಗುಣವಿಲ್ಲದವಗೆ ಗುಂಡದ ನೀರ

ತಿಳಿಯಿದ್ದರೇನು ರುಚಿಯಿಲ್ಲದನಕ॥
ಚೆಂಡು ಹೂವ್ವಂಥ ದುಂಡು ಮೊಲೆಯ ಹೆಣ್ಣೆ
ಕಂಡ ಕಂಡಲ್ಲಿ ನಗ ಬ್ಯಾಡಲೇ
ಕಂಡ ಕಂಡಲ್ಲಿ ನಗ ಬ್ಯಾಡಲೇ ಎಲೆ ಹುಡುಗಿ
ಕಣ್ಣಿಟ್ಟ ಹುಡುಗ ಬೆನ್ನ ಹತ್ಯಾನು॥
ನೀರಿಗ್ಹೋಗುವ ನಾರಿ ನೀ ಗುಲ್ಲ ಮಾಡಲಿ ಬ್ಯಾಡ
ಕಿಡಿಗೇಡಿ ಕೃಷ್ಣ ಕುಳಿತಾನ
ಕಿಡಿಗೇಡಿ ಕೃಷ್ಣ ಕುಳಿತಾನ । ಎಲೆ ಬಾಲೆ
ಸೆರಗ್ಹಿಡಿದು ನಿನ್ನ ಎಳಿತಾನ।

ಇಬ್ಬರ ಹೆಂಡಿರ ಮ್ಯಾಗ ಕದ್ದು ರಂಡೇರ ಮಾಡಿ
ಬಿದ್ದು ಮೊಣಕಾಲ ಒಡಕೊಂಡಾ
ಬಿದ್ದು ಮೊಣಕಾಲ ಒಡಕೊಂಡ ನನಗಂಡ
ಇದ್ದಂಥ ಬುದ್ದಿ ಕಳಕೊಂಡ॥

ಕಟ್ಟಾಣಿ ಸ್ಥಿರವಲ್ಲ ಕೈ ಗಂಟು ಬದುಕಲ್ಲ
ಇಟ್ಟಂತ ಸೂಳಿ ಮಡದೆಲ್ಲಾ
ಇಟ್ಟಂತ ಸೂಳಿ ಮಡದೆಲ್ಲಾ-ಮನಿಯ
ಗಂಡಾನ ಬಿಟ್ಟಾಕಿ ಗರತೆಲ್ಲಾ॥.[೨]

ಇಲ್ಲಿ ಅನುಭವಸ್ಥ ಅಜ್ಜಿಯೂ ಹರೆಯದ ಹುಡುಗಿಯ ಕುರಿತು ಅನುಭವದ ಮಾತುಗಳನ್ನು ಹಾಡಿನ ಮೂಲಕ ತಿಳಿಸಿದ್ದಾಳೆ. ಚೆಲುವು ಮುಖ್ಯವಲ್ಲ, ಗುಣವು ಬಹಳ ಮುಖ್ಯವೆಂದು ಹರೆಯದ ಹುಡುಗಿ ಕೇಳು, ಕಂಡ ಕಂಡಲ್ಲೇ ನಗಬ್ಯಾಡ ಊರಿನ ಹುಡುಗರು ಬೆನ್ನು ಹತ್ತುತ್ತಾರೆ. ನಂತರ ನಿನ್ನ ಚಾರಿತ್ರ್ಯವಧೆ ಮಾಡುತ್ತಾರೆ ಎಂದು ಹೇಳುತ್ತಾ ತನ್ನ ಜೀವನದಲ್ಲಿ ನಡೆದ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಎಚ್ಚರಿಕೆ ಮಾತುಗಳು ಈ ಗೀತೆಯಲ್ಲಿ ಮೂಡಿಬಂದಿವೆ.

**ಗಂಡಂದ್ರ ಏನು? :**

ಗಂಡಂದ್ರ ಗೋಲಿಯ ಗುಂಡಂತ ತಿಳುಕೊಂಡಿ।
ನೆನೆ ನೆನೆಸಿ ಆತುಗೊಂತ ಕುಂತಗೊಂಡಿ
ನೆನೆ ನೆನೆಸಿ ಆತುಗೊಂತ ಕುಂತಗೊಂಡಿ
ಅಧಿಕಾರದೆಣ್ಣಾಗಿ ದರ್ಪದಿ ನಡಕೊಂಡಿ
ಬಲಿಯಾಗ ಗಂಡನ್ನ ಹಾಕಿಕೊಂಡಿ।
ಇಲಿಯಾಂಗ ಗಂಡನ್ನ ನೀನೋಡಿಕೊಂಡಿ
ಹುಲಿಯಾಂಗ ಗಂಡನ್ನ ನೀ ಎದುರಿಸಿಕೊಂಡಿ

ಗಂಡನೇ ದೇವರೆನ್ನೋ ಹೆಣ್ಣನ ಆಡಿಕೊಂಡಿ
ಬುದ್ಧಿಯ ಹೇಳಿದಾಗ ನೀ ಸೆಟಗೊಂಡಿ
ಗಂಡನ್ನ ಕುಣಿಸಾಕ ಬಲುಜಾಣೆ ಅನಸಿಗೊಂಡಿ
ದೊಡ್ಡವರ ಮನೆತನ ಹೆಣ್ಣಂತ ಹೇಳಿಕೊಂಡಿ

ಮಾನಕ್ಕ ಹೆದರಿದ ಗಂಡನ್ನ ಬಡಕೊಂಡಿ
ಬಂಡಿಯ ಗಾಲಿಯ ಕೀಲನ್ನು ಕಿತುಗೊಂಡಿ
ದೇವರಂತ ಗಂಡನ್ನ ಶಾಪವ ಕಟಗೊಂಡಿ
ಚಿಂತ್ಯಾಗ ಸೊರ ಸೊರಗಿ ಸತ್ತು ಹೋದಿ ಹುಚ್ಚುಮುಂಡಿ

ಗಂಡ ಸತ್ತ ಮುಂಡ್ಯಾಗಿ । ಜಗದಾಗ ಉಳಕೊಂಡಿ
ಎಲ್ಲಾರು ಬೈವಾಗ ಗಂಡನ್ನ ಬೆಲಿಕಂಡಿ
ಸದ್ಗುಣಿಯಾಗದೆ ನೀನಾದೆ ಜಗಬಂಡಿ
ಮೃತ್ಯುಂಜಯನ ಹಾಡು ಕೇಳಿ ಕಸಿವಿಸಿಗೊಂಡಿ.[೩೩]

ಇಲ್ಲಿ ಮದುವೆಯಾದ ಹೆಣ್ಣುಮಗಳು ಗಂಡನನ್ನು ಯಾವ ರೀತಿಯಲ್ಲಿ ನೋಡಿ ಕೊಂಡಳು ಎಂಬ ರೂಪಕವನ್ನು ಇಲ್ಲಿ ನೀಡಲಾಗಿದೆ. ಗಂಡನನ್ನು ಗೋಲಿ ಗುಂಡಿನ ಹಾಗೆ ಹೇಗ ಬೇಕೋ ಹಾಗೆ ನಡೆಸಿಕೊಂಡು ಹುಲಿಯ ಹಾಗೆ ಇದ್ದ ಗಂಡನನ್ನು ಇಲಿಯ ಹಾಗೆ ಮಾಡಿದಿ. ಗಂಡನನ್ನು ದೇವರ ಹಾಗೆ ನೋಡಬೇಕಂತ ಹೇಳಿದರೆ ಸೆಟಕೊಂಡು ನಿಂತಿ. ಮಾನಕ ಹೆದರಿದ ಗಂಡನನ್ನು ಹೆದರಿಸಿಕೊಂಡು ಅವ ಸಾಯುವ ಹಾಗೆ ಮಾಡಿ ಪಾಪವನ್ನು ಕಟಕೊಂಡು ಜೀವನ ಹಾಳು ಮಾಡಿಕೊಂಡಿ ಎಂದು ಹೇಳುವ ತಿಳುವಳಿಕೆ ಮಾತುಗಳನ್ನು ಈ ಗೀತೆಯಲ್ಲಿ ಕಾಣುತ್ತೇವೆ.

**ಸುಳ್ಳರಿಗೆ ಸಂಪತ್ತು :**

ಸುಳ್ಳರಿಗೆ ಸಂಪತ್ತು ಕಳ್ಳರಿಗೆ ದೌಲತ್ತು
ಒಳ್ಳೆಯ ಕೆಲಸಕ್ಕೆ ಆಪತ್ತು
ಕಲಿಯುಗ ಕೆಟ್ಟು ಹೋತು ಈ ಹೊತ್ತು

ಪುಂಡರಿಗೆ ಸನ್ಮಾನ । ಎಷ್ಟೊಂದು ಬಿಗುಮಾನ
ಜಾರಿಣಿ ಹೆಣ್ಣಿಗೆ ಬಹುಮಾನ
ಅರೆಬುದ್ಧಿ ಅಧಿಕಾರಿ । ಎದೆಯುಬ್ಬಿ ಬರತಾನ
ಹೆಂಡವ ಕುಡಿ ಕುಡಿದು ಬೀಳತಾನ
ಸುಳ್ಳರಿಗೆ ಸಂಪತ್ತು

ಉಂಡವರ ಮನೆಯಲ್ಲಿ ಭಂಡತನದ ಹುಡುಕಾಟ
ಚೆಲುವಾದ ಹೆಣ್ಣಂದ್ರ ಮಂಗನಾಟ

ಕಿಸಿಕಿಸಿ ನಕ್ಕು ನಕ್ಕು ಸಲುಗೆಯ ಒಡನಾಟ
ಯಜಮಾನ ಬಡದಾಗ ಬಂತಿದು ಪೀಕಲಾಟ
ಸುಳ್ಳರಿಗೆ ಸಂಪತ್ತು

ಕತ್ತೆ ಲಿಂಗದ ಉದ್ರೆಯ ಒತ್ತಬ್ಯಾಡ
ನೀಚರ ಸಂಗವ ಮಾಡಬ್ಯಾಡ
ಮಾನೆಲ್ಲ ಹೋದಾಗ ಹುಡುಹುಡುಕಿ ಅಳಬ್ಯಾಡ
ಮೃತ್ಯುಂಜಯನ ಹಾಡನ್ನು ಮರಿಬ್ಯಾಡ
ಸುಳ್ಳರಿಗೆ ಸಂಪತ್ತು ಕಳ್ಳರಿಗೆ ದೌಲತ್ತು.[೩೪]

ಕಲಿಯುಗ ಸುಳ್ಳರಿಗೆ, ವಂಚಿಸುವವರಿಗೆ ಸನ್ಮಾನ ಮಾಡುವಂತ ಅವಕಾಶ ಕಲ್ಪಿಸಿದೆ ಎನ್ನುವ ತಾತ್ಪರ್ಯವನ್ನು ಈ ಪದ್ಯದಲ್ಲಿ ಕಾಣುತ್ತೇವೆ. ಸತ್ಯವಂತರನ್ನು ತುಳಿದ ವಂಚಕರು ಇವತ್ತು ಯಶಸ್ಸನ್ನು ಗಳಿಸುತ್ತಿದ್ದಾರೆ ಅನ್ನೋ ಪ್ರಸಂಗಗಳನ್ನು ಬೇರೆ ಬೇರೆ ರೀತಿಯಲ್ಲಿ ವ್ಯಕ್ತಪಡಿಸಿದೆ.

**ಯಾಕೆ ಬಡಿದಾಡ್ತಿ ತಮ್ಮ :**

ಯಾಕೆ ಬಡಿದಾಡ್ತಿ ತಮ್ಮ
ಮಾಯಾ ಮೆಚ್ಚಿ ಸಂಸಾರ ನೆಚ್ಚಿ
ನೀನೋಗದರಿಯೆ ತಮ್ಮ
ಕಣ್ಣ ಮುಚ್ಚಿ ಮಣ್ಣಮುಚ್ಚಿ ॥

ಹೆಂಡ್ರು ಮಕ್ಕಳಿರುವರು ತಮ್ಮ ಎಲ್ಲಿತನಕ
ಇದ್ರ ತಿಂಬೋ ತನಕ
ಸತ್ತಾಗ ಬರುವರು ತಮ್ಮ ಕುಣಿತನಕ
ಮಣ್ಣ ಮುಚ್ಚೋ ತನಕ ॥

ಅಣ್ಣ ತಮ್ಮ ಅಕ್ಕತಂಗಿ ಎಲ್ಲಿತನಕ
ಬದುಕಿ ಬೆಳೆಯೋ ತನಕ
ಸತ್ತಾಗ ಬರುವರು ತಮ್ಮ ಕುಣಿತನಕ
ಮಣ್ಣು ಮುಚ್ಚೋ ತನಕ ॥

ನೆಂಟ್ರುಯಿಷ್ಟ್ರು ಬರುವರು ತಮ್ಮ ಎಲ್ಲಿತನಕ
ಇದ್ರೆ ತಿನ್ನೋತನಕ ತಿಂದು ತೇಗೋ ತನಕ
ಸತ್ತಾಗ ಬರುವರು ತಮ್ಮ ಕುಣಿತನಕ
ಮಣ್ಣು ಮುಚ್ಚೋತನಕ ॥

ಹೆಣ್ಣು ಹೊನ್ನು ಮಣ್ಣು ನಿನ್ನದು ಎಲ್ಲಿತನಕ
ನಿನ್ನ ಕೊರಳಿಗೆ ಕುಣಿಕೆ ಬೀಳೋತನಕ
ನಿನ್ನಾಸೆ ಪ್ರಾಣಪಕ್ಷಿ ಹಾರೋ ತನಕ
ಕಳಚಯ್ಯ ಮಾಯಾದ ಪೋರೆಯ ಮುಕ್ತಿ ಹೊಂದಾಕ ॥.[೨೫]

ಹುಟ್ಟು ಆಕಸ್ಮಿಕ-ಸಾವು ಖಚಿತವೆಂಬಂತೆ ಈ ಮೂರು ದಿನದ ಬದುಕೆಂಬ ಸಂತೆಯಲ್ಲಿ ಸ್ವಾರ್ಥಕ್ಕಾಗಿ ಬಡಿದಾಡಬೇಡ ಜೀವನವೆಂಬುದು ಶಾಶ್ವತವಲ್ಲ. ಅದು ಹುಟ್ಟಿ, ಮಾಗಿ, ಮಾಸಿಹೋಗಿ ಮಣ್ಣಲ್ಲಿ ಮಣ್ಣಾಗುವಂಥಹದು. ಇಲ್ಲಿ ಎಲ್ಲ ಬಂಧು-ಬಳಗದವರ ಜೊತೆ ಇರೋದು ಸ್ವಲ್ಪ ದಿನವೇ, ಸತ್ತ ನಂತರವೂ ಮಂದಿಯ ಬಾಯಾಗ ಇರೋದು ಮೂರೇ ದಿನ. ಅದಕ್ಕಾಗಿ ಈ ಜೀವನ ಶ್ರಮವನ್ನರಿತು ಎಲ್ಲ ಸಂದರ್ಭಗಳಲ್ಲೂ ಪ್ರಾಮಾಣಿಕನಾಗಿ ಸೇವೆ, ತ್ಯಾಗದಂತಹ ಮನಸ್ಥಿತಿಗಳನ್ನು ಅಳವಡಿಸಿಕೊಂಡು, ಆದರ್ಶ ಜೀವನ ನಡೆಸಬೇಕೆಂಬುದು ಈ ಪದ್ಯದ ಆಶಯವಾಗಿದೆ.

**ಹೆಣ್ಣಿಗೆ ಮೂಗುತಿ ಚಂದ :**

ಹೆಣ್ಣಿನ ಮೂಗಿಗೆ ಮೂಗುತಿ ಚಂದ
ಹೆಣ್ಣೆ ಬಾಳಿಗೆ ಬಲು ಅಂದ
ಬಲು ಅಂದ

ಲೋಕಕ್ಕೆ ಸತಿ ಪತಿ ಚಂದ
ಮಡಿಲಿಗೆ ಮಕ್ಕಳೆ ಬಲುಚಂದ
ಪ್ರೀತಿಯ ಮಾಡುವ ಅತ್ತೆಯೇ ಚಂದ
ಮಗಳಂತೆ ಕಾಣುವ ಮಾವನೆ ಚಂದ
ಮಾವನೇ ಚಂದಾ ॥ಹೆಣ್ಣೀನ॥

ಸಹಿಸಿ ನಡೆಯುವ ಸೊಸೆ ಚಂದ
ಬಡತನವಿದ್ದರು ನಕ್ಕರು ಚಂದ
ಶೀಲವ ಕಾಯ್ದರೆ ಮುಕ್ಕಣ್ಣ ಬಂದ
ನೆರೆಮನೆ ಹಗರಣ ಬಿಟ್ಟರೆ ಚಂದ
ಬಿಟ್ಟರೆ ಚಂದ।

ಮುತ್ತಿನ ಹಾರದ ನುಡಿ ಚಂದ
ಹೆಣ್ಣಿಗೆ ವಿನಯವೇ ಸೌಗಂಧ
ದಾನವೇ ಹೆಣ್ಣಿಗೆ ಮಹದಾನಂದ
ನಸುನಗುತ ನಲಿದರ ಇನ್ನೂ ಚಂದ
ಇನ್ನೂ ಚಂದ॥

ತವರೂರ ಕೀರ್ತಿಯ ತಂದರೆ ಚಂದ
ಹೆಣ್ಣಿಗೆ ಗಂಡನ ಮನಿ ಚಂದ
ಮೃತ್ಯುಂಜಯನ ಹಾಡು ಬಲು ಅಂದ
ಸೋದರಿಯರು ಹಾಡಿದರೆ ಚಂದ ಚಂದ॥.[೩೬]

ಹೆಣ್ಣು ಸೀರೆಯಲ್ಲಿ ಹೇಗೆ ಸುಂದರವಾಗಿ ಕಾಣುತ್ತಾಳೊ, ಹಾಗೆಯೇ ಮೂಗುತಿ ತೊಟ್ಟರೆ ಇನ್ನೂ ಅಂದವಾಗಿ ಕಾಣುತ್ತಾಳೆ. ಹೀಗೆ ರೂಪಕದೊಂದಿಗೆ ಪ್ರಾರಂಭವಾದ ಈ ಪದ್ಯವು ಲೋಕಕ್ಕೆ ಸತಿ–ಪತಿ ಇದ್ದರೆ ಚೆಂದ, ಅವರಿಗೆ ಮಕ್ಕಳಿದ್ದರೆ ಇನ್ನೂ ಚೆಂದ, ಪ್ರೀತಿಸುವ ಅತ್ತೆ–ಮಗಳಂತೆ ಕಾಣುವ ಮಾವ ಇದ್ದರೆ ಬಲು ಅಂದ ಚೆಂದ, ಬಡತನವಿದ್ದರೂ ತಿಳಿದು ನಡೆಯುವಂತ ಸೊಸೆ ಇದ್ದರ ಚೆಂದ, ಹೆಣ್ಣಿಗೆ ವಿನಯತೆ ಸೌಗಂಧವಿದ್ದಂತೆ ಎಂದು ಹೇಳುವ ಹಲವಾರು ರೂಪಕಗಳನ್ನು ಈ ಪದ್ಯದ ಕಾಣುತ್ತೇವೆ.

**ಮೋಡಿ ಮಾಡಿದ ಮಾತುಗಾರ :**

ಎಲ್ಲೋ ಬಂದು ಎಲ್ಲೋ ನೋಡಿ
ಮೋಡಿ ಮಾಡಿದ ಮಾತುಗಾರ
ನನ್ನ ತನ್ನ ಬಲೆಗೆ ಎಳಕೊಂಡ ಗೆಣೆಕಾರ ॥ಎಲ್ಲೋ॥

ಬಾಳಿನ ಹಾದಿಲಿ ಬಂದಾನ ಬಂದಾನ ಬಂದಾನ
ಜೊತೆಯಲಿ ನಡೆಯಲು ನಿಂದಾನ ನಿಂದಾನ ನಿಂದಾನ
ಸೋತರೆ ನಾನಿರುವೆ ಎಂದಾನ, ಸೋತರೆ ನಾನಿರುವೆ ಎಂದಾನ

ಸುಖ ದುಃಖವ ಎಲ್ಲಾ ಸವಿಯೋಣ ಅಂದಾನ ॥ಎಲ್ಲೋ॥
ಜೀವಕೆ ಹರ್ಷವ ತಂದಾನ ತಂದಾನ ತಂದಾನ
ದುಃಖವನೆಲ್ಲಾ ಕೊಂದಾನ ಕೊಂದಾನ ಕೊಂದಾನ
ಮೈಮನ ಪುಳಕಿಸಿ ನಿಂದಾನ, ಮೈಮನ ಪುಳಕಿಸಿ ನಿಂದಾನ
ಹೊಸಭಾವ ತಂದಾನ ತಂದಾನ ತಂದಾನ ॥ಎಲ್ಲೋ॥

ನೀ ನನ್ನ ಜೀವ ಅಂದಾನ ಅಂದಾನ ಅಂದಾನ
ನಾ ನಿನ್ನ ಬಂಧೀ ಅಂದಾನ ಅಂದಾನ ಅಂದಾನ

ಜೀವಂತ ಪ್ರೀತಿಯ ತಂದಾನ, ಜೀವಂತ ಪ್ರೀತಿಯ ತಂದಾನ
ಪ್ರೇಮದ ರಾಗವ ಹಾಡ್ಯಾನ, ಪ್ರೇಮದ ರಾಗವ ಹಾಡ್ಯಾನ ॥ಎಲ್ಲೋ॥.[೩೭]

ಎಲ್ಲೋ ಇರುವ ಮನಸ್ಸು ಮಾತಿನ ಮೂಲಕ ಇನ್ನೊಂದು ಮನಸ್ಸನ್ನು ಸೇರಿದಂತಹ ಒಂದು ನಿದರ್ಶನ. ಪ್ರೀತಿಯಿಂದ ಮಾತನಾಡಿ ಹಲವಾರು ಕನಸುಗಳನ್ನು ನನ್ನ ಮನಸ್ಸಿನಲ್ಲಿ ಮೂಡಿಸಿ ಸಾಕಾರಗೊಳಿಸಿದಂತಹ ಪ್ರೀಯಕರನ ಬಿಟ್ಟು ಹೋದಂತಹ ಮಧುರ ಕ್ಷಣಗಳನ್ನು ನೆನೆಯುವ ಸಂದರ್ಭ ಇಲ್ಲಿ ಒಡಮೂಡಿದೆ.

**ಪ್ರೇಮ ವಿವಾಹ :**

ನೀರಿಗಂತ ನೀ ಬಂದಾಗ ಕೆರೆಗಂತ ನಾ ಬಂದೆ
ನಿನಗಿತ್ತು ಗ್ಯಾನ ನನ ಮ್ಯಾಗ।
ನಿನಗಿತ್ತು ಗ್ಯಾನ ನನಮ್ಯಾಗ–ಎಲೆಹುಡುಗಿ
ನನ್ನಾಸೆ ನಿನ್ನಾಸೆ ಎಂದಾಯ್ತು ॥೧॥

ಸೊಪ್ಪಿಗಂತ ನೀ ಬಾರೆ ಸೌದೆಗಂತ ನಾ ಬರುವೆ
ಮರ‍್ಯಾಗ ನಿಂತು ಮಾತ್ನಾಡೋಣ।
ಮರ‍್ಯಾಗ ನಿಂತು ಮಾತ್ನಾಡೋಣ–ಎಲೆ ಹುಡುಗಿ
ತಿಂಗ್ಳಿಂದ ನಿನಿ ಮ್ಯಾಗದೆ ನನಗ್ಯಾನ ॥೨॥

ಸುಣ್ಣದ ನೆಪಮಾಡಿ ಹಟ್ಟೀಲಿ ಸುಳದಾಡೆ
ಮುದ್ಮಾಡಿ ಕೊಡ್ತೀನಿ ಸುಣ್ಣ।
ಮುದದಿ ಕೊಡ್ತೀನಿ ಸುಣ್ಣ–ಎಲೆ ಹುಡುಗಿ
ತಿಂಗ್ಳಿಂದ ನಿನ ಮ್ಯಾಗದೆ ನನಗ್ಯಾನ ॥೩॥

ಮಾದೇಗೌಡ ನಾನು ಮಾದಗಿತ್ತಿ ನೀನು
ನಿನ್ ನಾನು ಮದುವ್ಯಾದ್ರೆ ।
ನಿನ್ ನಾನು ಮದುವ್ಯಾದ್ರೆ–ಎಲೆ ಹುಡುಗಿ
ದೂರದೂರಿಗೆ ನಿನ್ ಕದ್ದೊಯ್ದೇನು ॥೪॥.[೩೮]

ಇಲ್ಲಿ ಪ್ರಿಯಕರ–ಪ್ರೇಯಸಿಯರು ಕೂಡಲು ಹಾತೊರೆಯುತ್ತಿರುತ್ತಾರೆ. ಕೌಟುಂಬಿಕ ಬಂಧನದಲ್ಲಿರುವ ಹೆಣ್ಣಿಗೆ ಮುಕ್ತವಾಗಿ ವ್ಯವಹರಿಸಲು ಅಡಚಣೆಯಾಗುತ್ತದೆ. ಹಾಗಾಗಿ ಪ್ರಿಯಕರನು ತನ್ನ ಪ್ರೇಯಸಿಗೆ ಏನಾದರೊಂದು ನೆಪ ಮಾಡಿ ಬಂದರೆ, ನಾನು ನಿನ್ನನ್ನು ಅಲ್ಲಿ ಸಂಧಿಸುವೆನೆಂದು ತಿಳಿಸಿರುವ ಸಂದೇಶವನ್ನು ಈ ಪದ್ಯದಲ್ಲಿ ಕಾಣುತ್ತೇವೆ.

ಇಲ್ಲಿ ಪ್ರೀತಿಸುವ ಹುಡುಗ–ಹುಡುಗಿಯ ಸಂಭಾಷಣೆ ಇದೆ. ನೀರಿಗಂತ ನೀ ಹೋದಾಗ ಕೆರೆಗಂತ ನಾ ಬಂದೆ, ನಿನಗೆ ನನ್ನ ಮೇಲೆ ಮನಸ್ಸಿತ್ತು, ಸೊಪ್ಪಿಗಂತ ನೀನು ಬಾ ಸೌದೆಗಂತ ನಾ ಬರ್ತಿನಿ ಅಲ್ಲಿ ನಮ್ಮ ಮನದ ಇಂಗಿತವನ್ನು ವ್ಯಕ್ತಪಡಿಸೋಣ. ಮುಂದೆ ಇಬ್ಬರು ಮದುವೆ ಮಾಡಿಕೊಂಡು ಪ್ರೀತಿಯಿಂದ ಇರೋಣ ಎಂಬ ಕಲ್ಪನೆಯಲ್ಲಿ ಈ ಪದ್ಯ ಮೂಡಿಬಂದಿದೆ.

ಹೀಗೆ ಜನಪದ ಹಾಡುಗಳನ್ನು ಕೇಳುವ ವರ್ಗಗಳ ಹಿನ್ನೆಲೆಯಲ್ಲಿ ನೋಡಬಹುದು. ಇಂದು ಬಳಕೆಯಲ್ಲಿರುವ ಈ ಹಾಡುಗಳು ಜನಪದ ಹಾಡುಗಳೇ ಎನ್ನುವ ಮಟ್ಟಕ್ಕೆ ಬಂದು ತಲುಪಿವೆ ಎಂದು ಹೇಳಿದರೆ ತಪ್ಪಾಗಲಾರದು. ಅಂತಹ ಒಂದು ಬದಲಾವಣೆಯನ್ನು ನಾವಿಂದು ಕಾಣುತ್ತಿದ್ದೇವೆ. ಹಾಗಾದರೆ ಜನಪದ ಹಾಡುಗಳು ಬೆಳೆದು ಬಂದ ಬಗೆ

ನೋಡುವುದಾದರೆ, ಜನಪದ ಹಾಡುಗಳು ಗ್ರಂಥಸ್ಥವಾಗಿ ಬೆಳೆದು ಬಂದುದಲ್ಲ, ಅದು ಕಂಠದಿಂದ ಕಂಠಕ್ಕೆ ಹರಿದು ಬಾಳಿ ಬೆಳೆದು ಬಂದ ಹಾಡುಗಳಾಗಿವೆ. ಅದಕ್ಕೆ ಯಾವ ಶಾಸ್ತ್ರದ ಕಟ್ಟುನಿಟ್ಟು ಇಲ್ಲ. ಇತ್ತೀಚಿಗೆ ಈ ಅಮೂಲ್ಯ ನಿಧಿಯನ್ನು ಗ್ರಂಥಸ್ಥವನ್ನಾಗಿಸಲು ಅಲ್ಲಲ್ಲಿ ಪ್ರಯತ್ನಗಳು ನಡೆದಿದ್ದು, ಈ ದಿಸೆಯಲ್ಲಿ ಗಣನೀಯವಾದ ಕಾರ್ಯ ಇಂದು ಆಗಬೇಕಿದೆ.

**ಕೊನೆ ಟಿಪ್ಪಣಿಗಳು**

೧. https://youtu.be/lg_3if3ByAk.
೨. https://youtu.be/S0_A8PLltMY.
೩. https://youtu.be/XJ9Xn3kCDYk.
೪. https://youtu.be/en2bx4lVtsg.
೫. https://youtu.be/uB0jgGSp-ruM.
೬. https://youtu.be/l5NTXNNVp44.
೭. https://youtu.be/Q1JqNMhpoMY.
೮. https://youtu.be/phtqyiX6V3o.
೯. https://youtu.be/X9jewwDCSlQ.
೧೦. https://youtu.be/4ZDEEyfmGRA.
೧೧. http://youtu.be/7rc5ltYeZpc.
೧೨. https://youtu.be/WMMfi9rjR84.
೧೩. https://youtu.be/6L.RNtEOjpnk.
೧೪. https://youtu.be/syEj2TRlnml.
೧೫. https://youtu.be/0ha47lZ_H2Y.
೧೬. http://1234kh.blogspot.com/2014/07/blogpost_1451.html?m.
೧೭. https://kn.wikipedia.org/wiki.
೧೮. https://youtu.be/1i-3aDTBp6M.
೧೯. ನಾಗೇಶ ಹೊನ್ನೂರ, ಜಾನಪದ ಗೀತೆಗಳು, ಪುಟ: ೧೪.
೨೦. ಅದೇ, ಪುಟ: ೧೫.
೨೧. ಅದೇ, ಪುಟ: ೧೮.
೨೨. ಅದೇ, ಪುಟ: ೧೭.
೨೩. ಅದೇ, ಪುಟ: ೨೪.
೨೪. https://youtu.be/cElntLo4Bko.
೨೫. ನಾಗೇಶ ಹೊನ್ನೂರ, ಜಾನಪದ ಗೀತೆಗಳು, ಪುಟ: ೧೨.

೨೬. ಅದೇ, ಪುಟ: ೦೮.

೨೭. https://youtu.be/08uJlwpP-Ag.

೨೮. https://youtu.be/uAV5Xk8foaU.

೨೯. ಶ್ರೀ ಎಸ್.ವಿಜಯಕುಮಾರ, ಜಾನಪದ ಗೀತೆಗಳು, ಪುಟ: ೨೨.

೩೦. https://youtu.be/ACtdhKaBGaE.

೩೧. ನಾಗೇಶ ಹೊನ್ನೂರ, ಜಾನಪದ ಗೀತೆಗಳು, ಪುಟ: ೫೨.

೩೨. ಅದೇ ಪುಟ: ೫೪.

೩೩. https://youtu.be/AetdhKanbGab.

೩೪. ಶ್ರೀ.ಎಸ್.ವಿಜಯಕುಮಾರ, ಜಾನಪದ ಗೀತೆಗಳು, ಪುಟ: ೩೮.

೩೫. https://youtu.be/-jJqqTaY_r8.

೩೬. ಶ್ರೀ.ಎಸ್.ವಿಜಯಕುಮಾರ, ಜಾನಪದ ಗೀತೆಗಳು, ಪುಟ: ೪೦.

೩೭. ಜಿ.ಜಿ.ಸಾಗರ್, ಜನಪದ ಗೀತೆಗಳು, ಪುಟ: ೫೭.

೩೮. ಅದೇ, ಪುಟ: ೬೧.

# ಅಧ್ಯಾಯ : ಏಳು

## ನವಮೌಖಿಕ ಉತ್ಪಾದನ ಲೋಕ

೭.೧ ತಯಾರಕರು

೭.೨ ವಿತರಕರು

೭.೩ ನವಮಾಧ್ಯಮಗಳು

# ಅಧ್ಯಾಯ : ಏಳು

# ನವಮೌಖಿಕ ಉತ್ಪಾದನ ಲೋಕ

ಇಂದು ಜನಪದ ಗೀತೆಗಳ ಬಗ್ಗೆ ಮಾತನಾಡುವುದಾದರೆ ಇಲ್ಲಿ ಸಾಕಷ್ಟು ಬದಲಾವಣೆಯನ್ನು ಕಾಣುತ್ತೇವೆ. ಬಾಯಿಂದ ಬಾಯಿಗೆ ವರ್ಗಾವಣೆಗೊಂಡಿರುವ ಹಾಡನ್ನು ನಾವು ಮೌಖಿಕ ಎನ್ನುವುದಾದರೆ, ಅದರ ಮುಂದುವರೆದ ಭಾಗವಾಗಿ ಆಧುನಿಕ ಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯೂಟ್ಯೂಬ್‌ಗಳಲ್ಲಿ ಬಿತ್ತರಗೊಳ್ಳುತ್ತಿರುವ ಜನಪದ ಹಾಡುಗಳನ್ನು ನವಮೌಖಿಕ ಎಂದು ಗುರುತಿಸಬಹುದು. ಈ ನವಮೌಖಿಕ ಮಾಧ್ಯಮಗಳ ಮೂಲಕ ಪ್ರಸಾರಗೊಂಡ ಜನಪದ ಗೀತೆಗಳು ಇಂದು ಜನರನ್ನು ಎಷ್ಟರ ಮಟ್ಟಿಗೆ ತಲುಪುತ್ತಿವೆ ಎಂಬುದು ಇಲ್ಲಿ ಮುಖ್ಯ. ಹಾಗಾದರೆ ಆಧುನಿಕ ಮಾಧ್ಯಮಗಳು ಯಾವ ರೀತಿಯಲ್ಲಿ ಹಾಡುಗಳು ಬಿತ್ತರಗೊಳ್ಳಲು ಸಹಾಯಕವಾಗಿವೆ? ಎಂಬ ಹಲವು ಪ್ರಶ್ನೆಗಳು ಉಂಟಾಗುತ್ತವೆ. ಈ ಎಲ್ಲ ಪ್ರಶ್ನೆಗಳಿಗೆ ಇಂದು ಉತ್ತರ ಕಂಡುಕೊಳ್ಳಬೇಕಿದೆ. ಮೊದಲು ನವಮೌಖಿಕ ಉತ್ಪಾದನ ನೆಲೆಗಳಾದ ತಯಾರಕರು ಮತ್ತು ವಿತರಕರ ಬಗ್ಗೆ ತಿಳಿಯುವುದು ಅವಶ್ಯಕ. ಇಂದು ತಯಾರಕರು ಮತ್ತು ವಿತರಕರಿಂದ ಎಷ್ಟರ ಮಟ್ಟಿಗೆ ಜನಪದ ಗೀತೆಗಳು ಜೀವಂತವಾಗಿ ಉಳಿದುಕೊಂಡಿವೆ ಎಂಬುದನ್ನು ಅರಿಯಬೇಕಿದೆ.

## ೭.೧ ತಯಾರಕರು

ಕಣ್ಣಿಗೆ ಕಾಣದಂತೆ ಪರದೆಯ ಹಿಂದೆ ನಿಂತು ಕೆಲಸ ಮಾಡುವವರೆ ಹಾಡುಗಳ ತಯಾರಕರು. ಇಂದು ಒಂದು ಹಾಡು ರಚನೆಗೊಂಡು ಬಿಡುಗಡೆ ಯಾಗಬೇಕಾದರೆ, ಕವಿ, ಹಾಡುಗ, ತಯಾರಕ ಈ ಮೂರು ಜನರ ಪರಿಶ್ರಮದ ಫಲವೇ ಸುಂದರವಾದ ಧ್ವನಿಸುರುಳಿ ಬಿಡುಗಡೆ. ಅಧ್ಯಯನಕ್ಕೆ ಸಂಬಂಧಿಸಿದಂತೆ ಉತ್ತರ ಕರ್ನಾಟಕ ಭಾಗದಲ್ಲಿ ಜನಪದ ಗೀತೆಗಳ ತಯಾರಕರನ್ನು ಕಾಣುತ್ತೇವೆ. ಹಲವು ರೀತಿಯ ಜನಪದ ಗೀತೆಗಳಿಗೆ ಸಂಬಂಧಿಸಿದ ಸ್ಟುಡಿಯೋಗಳು ತಲೆ ಎತ್ತಿ ನಿಂತಿವೆ. ಇವು ಜನಪದ ಹಾಡುಗಳನ್ನು ರಚನೆ ಮಾಡಿ ಜನರ ಮನಕ್ಕೆ ತಲುಪಿಸುವ ಪ್ರಯತ್ನ ಮಾಡುತ್ತಿವೆ. ಉದಾಹರಣೆಯಾಗಿ ಈ ಸ್ಟುಡಿಯೋಗಳನ್ನು ನೋಡಬಹುದು.

೧) ನಾದಝುರಿ ಆಡಿಯೋ, ಸಪ್ತಾಪುರ– ಧಾರವಾಡ.

೨) ದೇವೇಂದ್ರ ಆಡಿಯೋ ವಿಡಿಯೋ, ಚಿಕ್ಕಮಲ್ಲಿಗೆವಾಡ–ತಾ/ಜಿ/– ಧಾರವಾಡ.

೩) ಯುವ ಶಕ್ತಿ ರೆಕಾರ್ಡಿಂಗ್ ಸ್ಟುಡಿಯೋ, ಮನಗೂಳಿ– ಬೆಳಗಾವಿ.

೪) ಬೂಮಾಬಿ ರೆಕಾರ್ಡಿಂಗ್ ಸ್ಟುಡಿಯೋ, ಮೂಡಲಗಿ– ಬೆಳಗಾವಿ.

೫) ಶ್ರೀ ಗುರು ಸಂಗಮ ರೆಕಾರ್ಡಿಂಗ್ ಸ್ಟುಡಿಯೋ, ಬೆಂಚಿನಮರಡಿ– ಬೆಳಗಾವಿ.

೬) ಸ್ವರ ಸಂಗಮ ರೆಕಾರ್ಡಿಂಗ್ ಸ್ಟುಡಿಯೋ- ವಿಜಯಪುರ.

೭) ಶ್ರೀ ಗುರು ಪುಟ್ಟರಾಜ ರೆಕಾರ್ಡಿಂಗ್ ಸ್ಟುಡಿಯೋ, ಮಟ್ಟಿಹಾಳ ಕ್ರಾಸ್– ವಿಜಯಪುರ.

೮) ಬೀರೇಶ ರೆಕಾರ್ಡಿಂಗ್ ಸ್ಟುಡಿಯೋ, ಸಾಲಹಳ್ಳಿ– ಬೆಳಗಾವಿ.

೯) ಧ್ವನಿ ಮುದ್ರಣ ಸ್ಟುಡಿಯೋ, ಹುಬ್ಬಳ್ಳಿ– ಧಾರವಾಡ.

೧೦) ವಿವೇಕ ಡಿಜಿಟಲ್ ರೆಕಾರ್ಡಿಂಗ್ ಸ್ಟುಡಿಯೋ, ಹುಬ್ಬಳ್ಳಿ– ಧಾರವಾಡ.

ಇಂತಹ ಹಲವಾರು ರೆಕಾರ್ಡಿಂಗ್ ಸ್ಟುಡಿಯೋಗಳು ಇಂದು ಜನಪದ ಹಾಡುಗಳನ್ನು ಬಿತ್ತರಿಸುತ್ತಿವೆ. ಕ್ಯಾಸೆಟ್ ಮತ್ತು ಸಿಡಿ, ಡಿವಿಡಿಗಳ ಮೂಲಕ ಹಾಡುಗಳು ಜನರಿಗೆ ತಲುಪುತ್ತಿವೆ. ಈ ಭಾಗದ ಹಾಡುಗಾರರ ಹಾಡುಗಳನ್ನು ಸಹ ಬೆಂಗಳೂರಿನ ಜಂಕಾರ ಮ್ಯೂಸಿಕ್, ಆನಂದ ಹಾಗೂ ಆಕಾಶ ಆಡಿಯೋದಲ್ಲಿ ಬಿತ್ತರಗೊಳ್ಳುವ ಮೂಲಕ ಜನರನ್ನು ತಲುಪುತ್ತಿವೆ. ಇಂದು ಈ ಹಾಡುಗಳು ಜನರ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರಿವೆ ಎಂಬುದು ಸ್ಪಷ್ಟವಾಗುತ್ತದೆ.

ನಾನು ಸ್ಟುಡಿಯೋ ಮಾಲಿಕರಾದ ದೇವೇಂದ್ರ ಒಡೆಯರ ಅವರನ್ನು ಭೇಟಿಯಾದಾಗ ಜನಪದ ಗೀತೆಗಳನ್ನು ಯಾವ ರೀತಿಯಲ್ಲಿ ತಯಾರಿಸುತ್ತೇವೆ ಮತ್ತು ಮಾರಾಟ ಮಾಡುತ್ತೇವೆ ಎಂಬುದರ ಬಗ್ಗೆ ಮಾಹಿತಿ ನೀಡಿದರು. ಇವರು ಮೂಲತಃ ಧಾರವಾಡ ಜಿಲ್ಲೆ ಹಾಗೂ ತಾಲೂಕಿನ ಹೀರೆಮಲ್ಲಿಗೆವಾಡ ಎಂಬ ಗ್ರಾಮದವರು. ಹಿಂದೂ ಕುರುಬ ವರ್ಗಕ್ಕೆ ಸೇರಿದ ಒಡೆಯರ ಅವರು ಪ್ರಸ್ತುತ ಎಲ್.ಆಯ್.ಸಿ.ಯಲ್ಲಿ ಕೆಲಸ ಮಾಡುತ್ತಾ ಜನಪದ ಹಾಡುಗಳನ್ನು ತಯಾರಿಸುವ ಉದ್ದೇಶದಿಂದ ತಮ್ಮ ಊರಲ್ಲಿ "ದೇವೇಂದ್ರ ಆಡಿಯೋ–ವಿಡಿಯೋ" ಎಂಬ ಹೆಸರಲ್ಲಿ ರೆಕಾರ್ಡಿಂಗ್ ಸ್ಟುಡಿಯೋವನ್ನು ಪ್ರಾರಂಭಿಸಿದ್ದಾರೆ. ಸತತ ಹದಿನಾಲ್ಕು ವರ್ಷಗಳಿಂದ ಕ್ಯಾಸೆಟ್ ಮತ್ತು ಸಿಡಿಗಳನ್ನು ತಯಾರಿಸಿ ಮಾರಾಟ ಮಾಡುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ನಿಮಗೆ ಸ್ಟುಡಿಯೋ ತೆಗೆಯಲು ಪ್ರೇರಣೆ ಯಾರು? ಎಂದಾಗ ಅವರು ಕೊಡುವ ಉತ್ತರ ಯಾರು ಇಲ್ಲಾ. ಏಕೆಂದರೆ ಜನಪದ ಹಾಡುಗಳು ಎಂದರೆ ನನಗೆ ತುಂಬ ಇಷ್ಟ, ಆದ್ದರಿಂದಲೇ ನಾನು ಈ ಕೆಲಸಕ್ಕೆ ಕೈ ಹಾಕಿದೆ ಎನ್ನುತ್ತಾರೆ. ನನ್ನ ಈ ಕೆಲಸದ ಉದ್ದೇಶ ಹಳ್ಳಿಗಳಲ್ಲಿ ಹಿಂದೆ ಉಳಿದಿರುವ ಜನಪದ ಹಾಡುಗಾರರನ್ನು ಹೊಸ ಜಾನಪದ ಲೋಕಕ್ಕೆ ಪರಿಚಯಿಸುವುದು ನನ್ನ ಮೂಲ ಉದ್ದೇಶ ಎಂದು ಹೇಳುತ್ತಾ ವಿಷಯಗಳನ್ನು ಅತಿ ಸಂತೋಷದಿಂದಲೇ ಹಂಚಿಕೊಂಡರು.

ಒಡೆಯರ ಅವರು ನಾನು ಜಾನಪದ ಲೋಕಕ್ಕೆ ಸುಮಾರು ಐದಾರು ಜನ ಹೊಸ ಹಾಡುಗಾರರನ್ನು ಪರಿಚಯಿಸಿದ್ದೇನೆ. ಆಕಾಶ ಮನಗೂಳಿ, ಈಶ್ವರ ಹಿರೇಮಠ, ಮಂಜುನಾಥ ಸಿಂಗಳೆದ, ಮೈಲಾರ ಚಿಕ್ಕಣ್ಣವರ, ಮಂಜುನಾಥ ಬೈರದೇವರಕೊಪ್ಪ,

ಇಮಾಮಸಾಬ ವಲ್ಲೆಪ್ಪನವರ ಹೀಗೆ ಹಲವು ಹೊಸ ಪ್ರತಿಭೆಗಳನ್ನು ಆಧುನಿಕ ಮಾಧ್ಯಮಗಳ ಮೂಲಕ ಪರಿಚಯಿಸಿದ್ದೇನೆ ಎಂದು ಹೆಮ್ಮೆಯಿಂದ ಹೇಳಿ ಕೊಳ್ಳುತ್ತಾರೆ.

ಯಾವ ಪ್ರಕಾರದ ಹಾಡುಗಳನ್ನು ನಿಮ್ಮ ಸ್ಟುಡಿಯೋ ಮೂಲಕ ಜನರಿಗೆ ಪರಿಚಯಿಸಿದ್ದಿರಿ? ಎಂದಾಗ ರೈತನ ಹಾಡುಗಳು, ಹಂತಿ ಹಾಡುಗಳು, ಡೊಳ್ಳಿನ ಪದಗಳು, ಅಣ್ಣ–ತಮ್ಮ, ಅಕ್ಕ–ತಂಗಿ, ತಾಯಿಯ ಕುರಿತು ಹೀಗೆ ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ಕೊಡುವ ಹಾಡುಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದೇನೆ ಎನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿ ಯಾವ ಪ್ರದೇಶಗಳಲ್ಲಿ ಜನಪದ ಹಾಡುಗಳನ್ನು ಕೇಳುವ ವರ್ಗವಿದೆ ಎಂದಾಗ ವಿಜಯಪುರ, ಬಾಗಲಕೋಟ, ಧಾರವಾಡ, ಗದಗ, ಬೆಳಗಾವಿ, ಹಾವೇರಿ ಈ ಜಿಲ್ಲೆಗಳಲ್ಲಿ ಹೆಚ್ಚಾಗಿ ಹಾಡುಗಳನ್ನು ಕೇಳುತ್ತಾರೆ. ಅಲ್ಲದೇ ಹೆಚ್ಚಾಗಿ ಹಾಡುಗಾರರನ್ನು ಈ ಜಿಲ್ಲೆಗಳಲ್ಲಿ ಕಾಣುತ್ತೇವೆ ಎಂದು ದೇವೇಂದ್ರ ಒಡೆಯರ ಅವರು ಸ್ಪಷ್ಟವಾಗಿ ಮಾಹಿತಿಯನ್ನು ನೀಡಿದರು. ಇವರು ಕೊಟ್ಟ ಮಾಹಿತಿ ನನಗೆ ಅಧ್ಯಯನದ ಚೌಕಟ್ಟನ್ನು ಹಾಕಿಕೊಳ್ಳಲು ಸಹಾಯವಾಯಿತು.

**೭.೨ ವಿತರಕರು**

ನವಮೌಖಿಕ ಉತ್ಪಾದನಾ ನೆಲೆಯಲ್ಲಿ ವಿತರಕರನ್ನು ನೋಡುವುದಾದರೆ, ಹಿಂದಿಗಿಂತಲೂ ಇಂದು ಸಾಕಷ್ಟು ಬದಲಾವಣೆ ಆಗಿರುವುನ್ನು ನಾವು ಗಮನಿಸಬಹುದು. ನವಮೌಖಿಕ ಸಾಹಿತ್ಯ ಎಂದಾಗ ಕ್ಯಾಸೆಟ್, ಸಿಡಿ ಹಾಗೂ ಯೂಟ್ಯೂಬ್‌ಗಳಲ್ಲಿ ಪ್ರಸಾರಗೊಂಡಿರುವುದು ಎಂದು ಸ್ಥೂಲವಾಗಿ ಹೇಳುತ್ತೇವೆ. ಆದರೆ ಇಂದು ಕ್ಯಾಸೆಟ್ ಮತ್ತು ಸಿಡಿಗಳ ಬಗ್ಗೆ ಮಾತನಾಡುವಂತಿಲ್ಲ. ೮೦–೯೦ರ ದಶಕದಲ್ಲಿ ಭಾರಿ ಸದ್ದು ಮಾಡಿದ ಕ್ಯಾಸೆಟ್ ಇಂದು ಕಣ್ಮರೆಗೊಂಡಿವೆ. ಕಾಲದೊಂದಿಗೆ ಎಲ್ಲವೂ ಬದಲಾಗುತ್ತದೆ ಎಂದು ಹೇಳುವುದು ಇದೇ ಅರ್ಥದಲ್ಲಿ ಇರಬೇಕು.

**ಕ್ಯಾಸೆಟ್ ಯುಗ**

ಇಂದು ಎಷ್ಟೋ ಮಕ್ಕಳಿಗೆ ಕ್ಯಾಸೆಟ್‌ಗಳ ಪರಿಚಯವಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಕಾರಣ ಅಷ್ಟೊಂದು ವೇಗವಾಗಿ ಕ್ಯಾಸೆಟ್‌ಗಳು ಕಣ್ಮರೆಯಾಗಿವೆ. ಅಂದು ಟಿ–ಸಿರಿಸ್, ಆನಂದ ಆಡಿಯೋ, ಜಂಕಾರ ಆಡಿಯೋ ಎಂಬ ಹೆಸರಿನಲ್ಲಿ ಜನಪದ ಗೀತೆಗಳನ್ನು ಜನರಿಗೆ ಮುಟ್ಟಿಸುವ ಕೆಲಸ ನಡೆಯುತಿತ್ತು. ಹಾಡುಗಳನ್ನು ಆಧರಿಸಿ ಒಂದು ಕ್ಯಾಸೆಟ್ ೧೦–೧೫ ಹಾಡುಗಳು ಒಳಗೊಂಡು ಕೇಳುಗರಿಗೆ ಅತೀವ ಆನಂದವನ್ನು ನೀಡುತ್ತಿದ್ದವು. ಈ ಕಾರಣದಿಂದಲೇ ಕ್ಯಾಸೆಟ್‌ಗಳ ಅಬ್ಬರ ಜಾಸ್ತಿ ಆಗಿತ್ತು. ಗುರುರಾಜ ಹೊಸಕೋಟೆ, ಶಬ್ಬೀರ ಡಾಂಗೆ, ಬಸವರಾಜ ಕೆಂಧೂಳಿ, ಆಕಾಶ ಮನಗೂಳಿ, ಬೈಲೂರು ಬಸವಲಿಂಗಯ್ಯ ಇಂತಹ ಹಲವಾರು ಜನ ಜನಪದ ಗಾಯಕರನ್ನು ಜನರಿಗೆ ಪರಿಚಯಿಸಿದ ಕೀರ್ತಿ ಈ ಕ್ಯಾಸೆಟ್‌ಗಳಿಗೆ ಸಲ್ಲುತ್ತದೆ.

ಅಂದು ಕಡು ಬಡವನ ಮನೆಯಲ್ಲೂ ಕೂಡಾ ಟೇಪ್‌ರೆಕಾರ್ಡರ್ ಇರುತಿತ್ತು. ಅವನು ಕೆಲಸ ಮಾಡುವಾಗ, ಮನೆಯಲ್ಲಿ ಇರುವಾಗ ಜನಪದ ಹಾಡುಗಳನ್ನು ಕೇಳುತ್ತಾ ಮೈ ಮರೆಯುತ್ತಿದ್ದ. ಇಂತಹ ಕ್ಯಾಸೆಟ್ ಸಂಸ್ಕೃತಿ ಇಂದು ನಮ್ಮ ಮುಂದೆ ಇಲ್ಲ. ಕ್ಯಾಸೆಟ್ ಮಾರಾಟ ಮಾಡುತ್ತಿದ್ದ ಅಂಗಡಿಗಳು ಸಹ ಇಂದು ಇಲ್ಲವಾಗಿವೆ. ಕೆಲವೇ ವರ್ಷಗಳಲ್ಲಿ ನೋಡ ನೋಡುತ್ತ ಇಷ್ಟೆಲ್ಲಾ ಬದಲಾವಣೆಗಳಾಗಿವೆ ಎಂಬುದೇ ಆಶ್ಚರ್ಯಕರ ಸಂಗತಿಯಾಗಿದೆ. ಇಂದು ಟೇಪ್‌ರೆಕಾರ್ಡ್‌ರ್‌ಗಳು ಮೂಲೆಗುಂಪಾಗಿವೆ. ಇವುಗಳ ಮೇಲೆ ಸಿಡಿ ಪ್ಲೇಯರ್ ತನ್ನ ಅಧಿಪತ್ಯವನ್ನು ಸ್ಥಾಪಿಸಿದ್ದನ್ನು ಕಾಣುತ್ತೇವೆ.

"ಹೊಸ ನೀರು ಬಂದಾಗ, ಹಳೆಯ ನೀರು ಹೋಗಬೇಕು" ಎನ್ನುವ ಮಾತಿನಂತೆ ಕ್ಯಾಸೆಟ್‌ಗಳು ಸಿಡಿಗಳ ಪ್ರವೇಶವಾದ ನಂತರ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡವು. ಇದಕ್ಕೆ ಕಾರಣ ಸಿಡಿಗಳು ೭೦೦ ಎಂಬಿ ಅಷ್ಟು ಇರುವ ಕಾರಣ. ನೂರಾರು ಹಾಡುಗಳನ್ನು ಒಂದೇ ಸಿಡಿಯಲ್ಲಿ ದೊರೆತರೆ ಯಾರು ತಾನೆ, ೧೦-೧೫ ಹಾಡುಗಳಿರುವ ಕ್ಯಾಸೆಟ್‌ಗಳನ್ನು ತಗೆದುಕೊಳ್ಳಲು ಮುಂದಾಗುತ್ತಾರೆ. ಇಂದು ಕ್ಯಾಸೆಟ್‌ಗಳನ್ನು ಉಚಿತವಾಗಿ ಕೊಡುತ್ತೇವೆಂದರು ಯಾರು ತೆಗೆದುಕೊಂಡು ಹೋಗುವ ಜನರು ಸಿಗಲಾರರು. ಅಂತಹ ಒಂದು ಸ್ಥಿತಿ ಇಂದು ಕ್ಯಾಸೆಟ್‌ಗಳಿಗೆ ಬಂದೊದಗಿದೆ.



ಇಂದು ಕ್ಯಾಸೆಟ್‌ಗಳಿಗೆ ಬಂದೊದಗಿದ ಸ್ಥಿತಿಯ ಚಿತ್ರ



**ಸಿಡಿ ಯುಗ**

ಕ್ಯಾಸೆಟ್‌ಗಳ ಕಾಲ ಮುಕ್ತಾಯವಾದ ನಂತರ ಮಾರುಕಟ್ಟೆಗೆ ಸಿಡಿಗಳ ಪರಿಚಯವಾಯಿತು. ಇಂದು ಎಲ್ಲರ ಮನೆಯಲ್ಲೂ ಸಿಡಿ ಪ್ಲೇಯರ್ ರಾರಾಜಿಸುತ್ತಿವೆ. ಅಷ್ಟೊಂದು ಅಬ್ಬರವನ್ನು ಸಿಡಿ ಮಾಡುತ್ತಿವೆ. ಇಂದು ಜನಪದ ಗೀತೆಗಳು ಸಿಡಿ ರೂಪದಲ್ಲಿ ಮಾರುಕಟ್ಟೆಯಲ್ಲಿ ದೊರೆಯುತ್ತಿವೆ. ಸಿಡಿ ಮಾರಾಟ ಮಾಡುವವರು, ಕ್ಯಾಸೆಟ್ ಪರಂಪರೆಯನ್ನು ಬಿಟ್ಟು ಸಿಡಿ ಪರಂಪರೆಯನ್ನು ಬೆಳೆಸಿಕೊಂಡು ಬರುತ್ತಿದ್ದಾರೆ. ಆದರೂ ಸಹ ಈ ಪರಂಪರೆಯು ಕೆಲವೇ ವರ್ಷಗಳಲ್ಲಿ ನೆಲಕಚ್ಚಿತು ಎಂಬ ಮಾತನ್ನು ತಳ್ಳಿ ಹಾಕುವಂತಿಲ್ಲ.

ಇತಿಹಾಸವನ್ನು ನೋಡಿದಾಗ ಮೊದಲು ಪ್ರಸಾರಗೊಳ್ಳುತ್ತಿರುವ ಮಾಧ್ಯಮಗಳ ಕಡೆ ಕಣ್ಣಾಯಿಸಿದಾಗ ಪ್ರಥಮದಲ್ಲಿ ಗ್ರಾಮೊಫೋನ್ ತಟ್ಟೆ ಇತ್ತು. ನಂತರದಲ್ಲಿ ವಿನೈಲ್ ರೆಕಾರ್ಡ ಬಂತು. ಕಾಲ ಕ್ರಮೇಣ ಕ್ಯಾಸೆಟ್, ಜಿಟಲ್ ಕ್ಯಾಸೆಟ್ ನಂತರ ಸಿಡಿ ಬಂದವು. ಕ್ಯಾಸೆಟ್ ಕಾಲದವರೆಗೂ ಎಲ್ಲವೂ ಚೆನ್ನಾಗಿತ್ತು. ಯಾವಾಗ ಸಿಡಿಗಳ ಪ್ರವೇಶ ಆಯಿತು. ಸಿಡಿಯಲ್ಲಿ ೭೦೦ಎಂಬಿ ಅಷ್ಟು ತುಂಬಬಹುದು ಎಂದಾಯಿತೋ, ಆಗ ಕ್ಯಾಸೆಟ್ ಸಂಸ್ಕೃತಿಗೆ ಪೆಟ್ಟು ಬಿತ್ತು. ಕಡಿಮೆ ಸೈಜ ಇರುವ ಎಂಪಿಥ್ರಿ (MP3) ಹಾಡುಗಳು ಬಂದವು. ಒಂದೇ ಸಿಡಿಯಲ್ಲಿ ನೂರಾರು ಹಾಡುಗಳನ್ನು ತುಂಬಲು ಸುಲಭವಾಯಿತು. ಇದರಿಂದ ಸಿಡಿ ಕೊಳ್ಳುವವರಿಗೆ ಹೆಚ್ಚಿನ ಹಾಡುಗಳನ್ನು ಕೇಳುವ ಅವಕಾಶ ಕಲ್ಪಿಸಿ ಕೊಟ್ಟಂತಾಯಿತು. ಸಿಡಿಗಳು ಬಂದ ನಂತರ ಜನರು ಮುಗಿಬಿದ್ದು ಸಿಡಿಗಳನ್ನು ಖರೀದಿಸಿದ್ದು, ಸಿಡಿ ಜನಪ್ರಿಯತೆಗೆ ಸಾಕ್ಷಿ ನುಡಿಯುವಂತಿದೆ.

**ಉದಾಹರಣೆಗೆ :**

೧) ಬಸವರಾಜ ನರೇಂದ್ರ ಅವರ ರೈತನ ಮಗ, ಭೂಮಿ ತೂಕದ ಬಸವಣ್ಣ–MP3

೨) ಶಬ್ಬಿರ್ ಡಾಂಗೆ ಅವರ ಕೌಟುಂಬಿಕ ಜಾನಪದ ಹಾಡುಗಳು– MP3

೩) ಬೈಲೂರು ಬಸವಲಿಂಗಯ್ಯರ ಜನಪದ ಹಾಡುಗಳು– MP3

೪) ಹೊತ್ತ ಮುಳಗಿತು ಭಜನಾ ಪದಗಳು- MP3

೫) ಕೋಟಿಗಿಂತ ಮೇಟಿ ಮೇಲು ಜಾನಪದ ಹಾಡುಗಳು– MP3

೬) ಹೂವಿನಂತ ಜಾನಪದ ಗೀತೆಗಳು– MP3

೭) ಖರೇ ಖರೇ ಸಂಗ್ಯಾ; ಬಾಳ್ಯಾ ಹಾಡುಗಳು– MP3

೮) ರೊಕ್ಕ ರೊಕ್ಕ ಎರಡಕ್ಕೂ ದುಃಖ– MP3....ಇತ್ಯಾದಿ.



**ಜನಪದ ಹಾಡುಗಳ ಸಿಡಿಗಳು**

ಹೀಗೆ ಹಲವು ಸಿಡಿಗಳು ಜನರನ್ನು ಆಕರ್ಷಿಸ ತೊಡಗಿದವು. ಆದರೆ ಇಂದು ಈ ಸಂಸ್ಕೃತಿಯು ಕೂಡ ಬದಲಾಗುತ್ತಾ ಹೊರಟಿದೆ ಎಂದೇ ಹೇಳಬಹುದು. ಇಲ್ಲಿಯೂ ಬದಲಾವಣೆ ಬಿರುಗಾಳಿ ಬೀಸಿತು.

ಯಾವಾಗ ಮೊಬೈಲ್(ಯೂಟ್ಯೂಬ್ ಬಳಕೆ) ಮತ್ತು ಪೆನ್ಡ್ರೈವ್‌ಗಳ ಕೆಪ್ಯಾಸಿಟಿ ಹೆಚ್ಚಾಯಿತೋ, ಯಾವಾಗ ಇಂಟರ್‌ನೆಟ್ ಮೂಲಕ ಹಾಡುಗಳನ್ನು ಡೌನ್‌ಲೋಡ್ ಮಾಡುವ ಪದ್ಧತಿ ಶುರುವಾಯಿತೋ ಅಲ್ಲಿಂದ ಸಂಗೀತದ ಮಾರುಕಟ್ಟೆಗೆ ದೊಡ್ಡ ಏಟು ಬಿದ್ದಿತು. ಇಂದು ಕ್ಯಾಸೆಟ್‌ಗಳನ್ನು ಬಿಡಿ, ಸಿಡಿಗೂ ಸಹ ಬೆಲೆಯಿಲ್ಲದಂತಾಗಿದೆ. ಮೊದಲಿನಂತೆ ಯಾರು ಸಿಡಿಗಳನ್ನು ಕೊಳ್ಳುವುದಿಲ್ಲ. ಹಾಗಾಗಿ ರಾಜ್ಯಾದ್ಯಂತ ಎಲ್ಲ ಭಾಗಗಳಲ್ಲೂ ಒಂದೊಂದಾಗಿ ಕ್ಯಾಸೆಟ್ ಮತ್ತು ಸಿಡಿ ಅಂಗಡಿಗಳು ಮುಚ್ಚುತ್ತಿವೆ. ಇಂದು ಜಾತ್ರೆ, ಸಾಹಿತ್ಯ ಸಮ್ಮೇಳನದಂತಹ ದೊಡ್ಡ ಕಾರ್ಯಕ್ರಮಗಳಲ್ಲಿ ಮಾರಾಟ ಮಾಡುವವರು ಸಿಗುತ್ತಾರೆ. ಅಲ್ಲದೇ ಪುಸ್ತಕ ಅಂಗಡಿಗಳಲ್ಲಿ ಒಂದೊಂದು ಸಿಡಿ ಸಿಗಬಹುದು. ಸಿಡಿ ಬಿಡುಗಡೆ ಸಮಾರಂಭವನ್ನೇ ನೋಡುವುದಾದರೆ ಸಮಾರಂಭದಲ್ಲಿ ಬಿಡುಗಡೆಯಾದ ಸಿಡಿಗಳು ಎಷ್ಟೋ ಅಂಗಡಿಗಳಲ್ಲಿ ಸಿಗುವುದಿಲ್ಲ. ಕಾರಣವೇನೆಂದರೆ ಕೇವಲ ಸಮಾರಂಭಕ್ಕೆ ಬರುವ ಜನರಿಗಾಗಿ ಮತ್ತು ನಿರ್ಮಾಪಕರ ಖುಷಿಗಾಗಿ ಒಂದ್ನೈನೂರೋ, ಸಾವಿರೋ ಸಿಡಿಗಳನ್ನು ಹಾಕಿಸಿದರೆ ಅದೇ ಹೆಚ್ಚು ಎನ್ನುವ ಸ್ಥಿತಿಗೆ ಬಂದು ನಿಂತಿದೆ. ಇಂದು ಪುಸ್ತಕಗಳಂತೆ ಸಿಡಿಗಳನ್ನು ಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ದಿನದಿಂದ ದಿನಕ್ಕೆ ಬದಲಾಗುತ್ತಿರುವ ತಂತ್ರಜ್ಞಾನವೇ ಮುಖ್ಯ ಕಾರಣವಾಗಿದೆ.



ಇಂದು ಯಾವುದೇ ಹಾಡಾಗಲಿ ಅದರ ಹೆಸರನ್ನು ಅಥವಾ ಹಾಡುಗಾರರ ಹೆಸರನ್ನು ಯೂಟ್ಯೂಬ್‌ನಲ್ಲಿ ಟೈಪ್ ಮಾಡಿದರೆ ಸಾಕು ಯೂಟ್ಯೂಬ್ ಪರದೆಯ ಮೇಲೆ ಆ ಹಾಡು ಪ್ರಸಾರವಾಗುತ್ತದೆ. ಇಷ್ಟು ಸರಳವಾದ ರೀತಿಯಲ್ಲಿ ಜನರಿಗೆ ಹಾಡುಗಳು ಸಿಗುವುದರಿಂದ ಅವರು ಕ್ಯಾಸೆಟ್ ಮತ್ತು ಸಿಡಿಗಳ ಸಂಸ್ಕೃತಿ ಬಿಟ್ಟು ಮುಂದಿನ ಹೆಜ್ಜೆಯೆಂಬಂತೆ ಯೂಟ್ಯೂಬ್‌ಗೆ ಬಂದಿರುವುದು. ಇದು ಸಮಯ, ಹಣ ಎಲ್ಲವನ್ನು ಉಳಿತಾಯ ಮಾಡುತ್ತದೆ. ಇದನ್ನು ತಂತ್ರಜ್ಞಾನದ ಮುನ್ನಡೆ ಎಂದೇ ಗುರುತಿಸಬಹುದು.

**ಯೂಟ್ಯೂಬ್ ಯುಗ**

ಸಾಮಾಜಿಕ ಜಾಲತಾಣಗಳಲ್ಲಿ ಒಂದಾದ ಯೂಟ್ಯೂಬ್ ಇಂದು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತ ಹೊರಟಿದೆ. ಪ್ರತಿಯೊಂದು ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳು, ಮನೆಗೆ ಸಂಬಂಧಿಸಿದ ಅಡುಗೆ ಆಗಿರಬಹುದು, ಜನಪದ ಗೀತೆಗಳು, ಚಲನಚಿತ್ರಗಳು, ಮಕ್ಕಳ ಹಾಸ್ಯ ವಿಡಿಯೋ ಆಗಿರಬಹುದು ಹೀಗೆ ಅನೇಕ ವಿಧದ ವೈವಿಧ್ಯಮಯವಾದ ವಿಡಿಯೋಗಳನ್ನು ನಾವು ಯೂಟ್ಯೂಬ್‌ನಲ್ಲಿ ವೀಕ್ಷಿಸಬಹುದು. ಇದನ್ನು ಎಲ್ಲ ಜನರು ಮೆಚ್ಚಿಕೊಂಡ ಒಂದು ಅತಿ ಜನಪ್ರಿಯ ವಿಶ್ವಾಸನೀಯವಾದ ಅಪ್ಲಿಕೇಶನ್ ಎಂದೇ ಹೇಳಬಹುದು. ಒಬ್ಬವ್ಯಕ್ತಿ ಎಷ್ಟೇ ಸಾಧನೆ ಮಾಡಿದರು ಆ ವ್ಯಕ್ತಿಯ ಹೆಸರು ಬರಬೇಕಾದರೆ ಆತನ ಕುರಿತು ಹೇಳುವ ಮಾಧ್ಯಮಗಳ ಪಾತ್ರ ಬಹಳ ಮಹತ್ವದಾದದ್ದು. ಏಕೆಂದರೆ ಸಾಧಕನ ಕುರಿತು ಯಾವ ರೀತಿಯ ವಿಷಯಗಳನ್ನು ಈ ಆಧುನಿಕ ಮಾಧ್ಯಮಗಳು ಹೇಳುತ್ತವೆಯೋ, ಅದು ನೇರವಾಗಿ ಜನರಿಗೆ ಮುಟ್ಟುವುದರಿಂದ ಅದೇ ಸತ್ಯ ಅನಿಸಿಕೊಳ್ಳುತ್ತದೆ.

ನಾನು ಸಹ ನನ್ನ ಅಧ್ಯಯನಕ್ಕೆ ಪೂರಕವಾಗಿ ಯುಟ್ಯೂಬ್ ಬಳಸಿಕೊಂಡಾಗ ಅನೇಕ ಜನ ಜನಪದ ಹಾಡುಗಾರರ ಪರಿಚಯವಾಯಿತು. ಹಾಡುಗಳು ಸಹ ದೊರೆತವು ಅಂದರೆ, ಇಂದು ಕಾಲದ ಬದಲಾವಣೆಯೊಂದಿಗೆ ಮಾಧ್ಯಮಗಳು ಬದಲಾದಾಗ ಅವು ಎಷ್ಟೊಂದು ಸಹಾಯಕಾರಿ ಎನ್ನುವುದನ್ನು ನಾನು ಸಹ ಕಂಡುಕೊಂಡೆ. ನಿಜಾಂ ಅಲ್ಲಾಖಾನ, ಶಬ್ಬೀರ್ ಡಾಂಗೆ, ಗುರುರಾಜ ಹೊಸಕೋಟೆ, ಬಸವಲಿಂಗಯ್ಯ ಹಿರೇಮಠ ಹೀಗೆ ಅನೇಕ ಜನಪದ ಕಲಾವಿದರ ಹಾಡುಗಳು ಅಷ್ಟೇ ಅಲ್ಲದೇ, ಅವರ ವೈಯಕ್ತಿಕ ವಿಷಯಗಳನ್ನು ತಿಳಿದುಕೊಳ್ಳಲು ಯೂಟ್ಯೂಬ್ ಅತ್ಯಂತ ಸಹಾಯಕಾರಿ ಮಾಧ್ಯಮವಾಗಿದೆ.

ವಿಡಿಯೋ ಅಪ್ಲೋಡ್ ಮಾಡುವುದು, ವೀಕ್ಷಿಸುವುದು, ಹಂಚಿಕೊಳ್ಳುವುದು, ಮೆಚ್ಚಿಗೆ ಸಲ್ಲಿಸಲು, ವರದಿ ಮಾಡಲು, ವಿಡಿಯೋಗಳಲ್ಲಿ ಕಾಮೆಂಟ್ ಮಾಡಲು ಮತ್ತು ಇತರ ಬಳಕೆದಾರರಿಗೆ ಚಂದಾದಾರರಾಗಲು ಯೂಟ್ಯೂಬ್ ಅನುಮತಿಸುತ್ತದೆ. ಇದು ವಿವಿಧ ರೀತಿಯ ಬಳಕೆದಾರ ಉತ್ಪಾದಿತ ಮತ್ತು ಕಾರ್ಪೊರೇಟ್ ಮಾಧ್ಯಮದ ವಿಡಿಯೋಗಳನ್ನು ಒದಗಿಸುತ್ತದೆ. ಲಭ್ಯವಿರುವ ವಿಷಯವು ವಿಡಿಯೋಗಳು, ಕಿರು

ಮತ್ತು ಸಾಕ್ಷ್ಯ ಚಿತ್ರಗಳು, ಧ್ವನಿ ಮುದ್ರಣಗಳು, ನೇರ ಸ್ಟ್ರೀಮಗಳು ಮತ್ತು ವಿಡಿಯೋ ಬ್ಲಾಗಿಂಗ್, ಕಿರು ಮೂಲ ವಿಡಿಯೋಗಳು ಮತ್ತು ಶೈಕ್ಷಣಿಕ ವಿಡಿಯೋಗಳಂತಹ ಇತರ ವಿಷಯಗಳನ್ನು ಒಳಗೊಂಡಿರುತ್ತದೆ. ಯೂಟ್ಯೂಬ್‌ನ ಹೆಚ್ಚಿನ ವಿಷಯವು ವ್ಯಕ್ತಿಗಳಿಂದ ಅಪ್ಲೋಡ್ ಮಾಡಲ್ಪಡುತ್ತದೆ.

ಇಂದು ವಿಶ್ವದಾದ್ಯಂತ ಯೂಟ್ಯೂಬ್ ಹೆಸರು ಮಾಡಿದೆ. ಪ್ರತಿಯೊಂದು ವಿಷಯದ ಕುರಿತು ಮಾಹಿತಿಗಳನ್ನು ಆಡಿಯೋ, ವಿಡಿಯೋ ರೂಪದಲ್ಲಿ ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದೆ. ಅಲ್ಲದೇ ಎಷ್ಟೋ ಜನಪದ ಹಾಡುಗಾರರನ್ನು ಇಂದು ಜನರಿಗೆ ಪರಿಚಯಿಸಿದ ಕೀರ್ತಿ ಯೂಟ್ಯೂಬ್‌ಗೆ ಸಲ್ಲುತ್ತದೆ. ಇಂದು ಯೂಟ್ಯೂಬ್‌ನಲ್ಲಿ ಜನಪದ ಹಾಡು, ಇಲ್ಲವೇ ಜನಪದ ಹಾಡುಗಾರರ ಹೆಸರನ್ನು ಟೈಪ್ ಮಾಡಿದರೆ ಸಾಕು ಎಲ್ಲವನ್ನು ಕ್ಷಣಾರ್ಧದಲ್ಲಿ ವೀಕ್ಷಿಸಬಹುದು. ಅಂತಹ ಒಂದು ತಂತ್ರಜ್ಞಾನ ನಮ್ಮ ಮುಂದೆ ಇದೆ. ಅದನ್ನು ಸರಿಯಾದ ರೀತಿಯಲ್ಲಿ ಇಂದು ಬಳಕೆ ಮಾಡಿಕೊಳ್ಳಬೇಕಿದೆ.

ಅಂತರ್ಜಾಲ ೨೧ನೇ ಶತಮಾನದಲ್ಲಾದ ಕ್ರಾಂತಿಕಾರಕ ಆವಿಷ್ಕಾರದ ಫಲ. ಅಂತರ್ಜಾಲ ಎಂದಾಕ್ಷಣ ಪ್ರತಿಯೊಬ್ಬ ಅದೊಂದು ಆಧುನಿಕ ರೀತಿಯ ಗಣಕಯಂತ್ರ (ಕಂಪ್ಯೂಟರ್) ಸಾಧನವೆಂದು ಹೇಳುತ್ತಾರೆ. ಆದರೆ ಸಕಲ ಮಾಹಿತಿಯನ್ನು ಕುಳಿತ ಸ್ಥಳದಿಂದ ಕಲೆ ಹಾಕಬಹುದಾದ ಅದ್ಭುತ ಮಾಹಿತಿವ್ಯೂಹ ಎಂದು ಹೇಳುವವರು ಅತೀ ವಿರಳ. ಇದರ ಕಾರ್ಯ ವೈಖರಿಯಾಗಲಿ, ಉಪಯುಕ್ತತೆಯ ಕುರಿತಾಗಲಿ, ಹೇಳಲು ಸಮರ್ಥರಾದವರು ಕಡಿಮೆ. ಅಂತರ್ಜಾಲ ಸೇವಾ ಸೌಲಭ್ಯಗಳನ್ನು ನೀಡುತ್ತಿರುವ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಪ್ರತಿದಿನ ಆಕರ್ಷಕ ಜಾಹೀರಾತುಗಳನ್ನು ಮಾಧ್ಯಮಗಳಲ್ಲಿ ನೀಡುವುದರ ಮೂಲಕ ಅಂತರ್ಜಾಲದ ಬಗೆಗೆ ಜ್ಞಾನ ನೀಡುತ್ತಿವೆ.

ಅಂತರ್ಜಾಲ ಇಂದು ಎಷ್ಟರಮಟ್ಟಿಗೆ ನೆರವಾಗುತ್ತಿದೆ ಎಂದು ಅನೇಕರು ಯೋಚಿಸುತ್ತಿರುವಾಗಲೇ ಆರ್ಥಿಕ, ಶೈಕ್ಷಣಿಕ, ಉದ್ಯೋಗ, ವ್ಯಾಪಾರ ಮುಂತಾದ ಕ್ಷೇತ್ರದ ವಿಷಯಗಳನ್ನು ತಿಳಿಯಲು ವ್ಯಾಪಾರಸ್ಥರು, ವಿದ್ಯಾರ್ಥಿಗಳು, ಉದ್ಯೋಗಸ್ಥರು ನಿರಂತರವಾಗಿ ಅಂತರ್ಜಾಲದ ಬಳಕೆಯಲ್ಲಿ ತೊಡಗಿದ್ದಾರೆ. ಮಾಹಿತಿಯ ಸಾಗರವಾಗಿರುವ ಅಂತರ್ಜಾಲ ಸರ್ವಕ್ಷೇತ್ರಗಳಲ್ಲೂ ಹಾಸುಹೊಕ್ಕಾಗಿದೆ. ಅಂತರ್ಜಾಲ ಗುಪ್ತಗಾಮಿನಿಯಂತೆ ಇದರಲ್ಲಿ ಸೇರ್ಪಡೆಯಾದರೆ, ಅಂದರೆ ಗಣಕಯಂತ್ರದ ಮೂಲಕ ಕೆಲವೇ ಕ್ಷಣಗಳಲ್ಲಿ ವಿಶ್ವದ ಮಾಹಿತಿಯನ್ನು ಪಡೆಯಬಹುದು.

ಕಾಲದ ನಿರಂತರ ಬದಲಾವಣೆಯಾದಂತೆಲ್ಲಾ ಅದರ ಜೊತೆಗೆ ತಂತ್ರಜ್ಞಾನ, ಹಾಗೂ ಸಂವಹನ ಕ್ಷೇತ್ರದಲ್ಲಾಗುವ ಬದಲಾವಣೆ ಸಮಾಜಕ್ಕೆ ಪೂರಕವಾಗುವ ನಿಟ್ಟಿನಲ್ಲಿ ಬಳಕೆಯಾದರೆ ಮಾತ್ರ ಹೊಸ ಆವಿಷ್ಕಾರಗಳು, ಬೆಳವಣಿಗೆಗಳು

ಸಾರ್ಥಕವೆನಿಸುತ್ತವೆ. ತಂತ್ರಜ್ಞಾನದ ಬೆಳವಣಿಗೆಯಿಂದ ಸಮಾಜದ ಅಭಿವೃದ್ಧಿಗೆ ಪ್ರೇರಣೆಯಾಗಬೇಕೆ ವಿನಾ, ವಿನಾಶಕ್ಕೆ ದಾರಿಯಾಗಬಾರದು.

**೭.೩. ನವಮಾಧ್ಯಮಗಳು**

ಇಂದು ಬೆಳೆಯುತ್ತಿರುವ ಆಧುನಿಕ ತಂತ್ರಜ್ಞಾನ ಯಾವ ಹಂತಕ್ಕೆ ತಲುಪಿದೆ ಎಂದರೆ ಅದು ಇಲ್ಲದೆ ಜೀವನವೇ ಇಲ್ಲ ಎಂಬ ಮಟ್ಟಕ್ಕೆ ಬಂದು ನಿಂತಿದೆ. ಕಾಲದೊಂದಿಗೆ ಬಳಸುವ ಮಾಧ್ಯಮಗಳು ಕೂಡ ಬದಲಾಗುತ್ತಿವೆ. ಅಂತಹ ಮಾಧ್ಯಮಗಳನ್ನು ನವಮಾಧ್ಯಮಗಳೆಂದು ಕರೆಯುತ್ತೇವೆ. ನವಮಾಧ್ಯಮಗಳು ಸಾಮಾಜಿಕ ಮಾಧ್ಯಮಗಳಾಗಿ ಕೆಲಸ ಮಾಡುತ್ತಿವೆ. ಸಾಮಾಜಿಕ ಮಾಧ್ಯಮಗಳೆಂದರೆ ಏನು? ಎಂಬುದನ್ನು ವ್ಯಾಖ್ಯಾನಿಸುವುದು ಸುಲಭದ ಮಾತಲ್ಲ. ಇವು ಜನರು ಭಾಗಿಗಳಾಗಿ ಚರ್ಚಿಸುವ, ಮಾಹಿತಿ ಹಾಗೂ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಜಾಲತಾಣಗಳಾಗಿವೆ ಎಂಬುದಾಗಿ ಸುಲಭವಾಗಿ ಹೇಳಬಹುದು. ಆದರೆ ಒಂದೊಂದು ಸಾಮಾಜಿಕ ಮಾಧ್ಯಮ ಜಾಲತಾಣವೂ ಒಂದೊಂದು ರೀತಿಯ ವಿಭಿನ್ನ ಸೇವೆಗಳನ್ನು ನೀಡುವುದರಿಂದಾಗಿ ಅವುಗಳೆಲ್ಲವನ್ನೂ ಒಂದೇ ಕಡೆ ಇಟ್ಟು ವ್ಯಾಖ್ಯಾನಿಸುವುದು ಕಷ್ಟಕರ. ಉದಾಹರಣೆಗೆ ಫೇಸ್‌ಬುಕ್, ಯೂಟ್ಯೂಬ್, ಬ್ಲಾಗರ್, ಗೂಗಲ್ ಇವೆಲ್ಲವೂ ಸಾಮಾಜಿಕ ಮಾಧ್ಯಮ ಜಾಲತಾಣಗಳೇ ಹೌದು. ಆದರೆ ಅವುಗಳ ಕಾರ್ಯವು ಬೇರೆ ತೆರನಾದದ್ದು.

ಫೇಸ್‌ಬುಕ್‌ನಲ್ಲಿ ಒಬ್ಬ ವ್ಯಕ್ತಿ ತನ್ನದೆಯಾದ ಸ್ವವಿವರ(ಪ್ರೊಫೈಲ್) ರಚಿಸಿ ಸ್ನೇಹಿತರನ್ನು ಸೇರಿಸಿಕೊಳ್ಳಬಹುದು, ಹೊಸ ಗೆಳೆಯರನ್ನು ಹುಡುಕಬಹುದು, ಅವರೊಡನೆ ವಿಷಯಗಳನ್ನು ಹಂಚಿಕೊಳ್ಳಬಹುದು, ವೀಡಿಯೋಗಳನ್ನು ಅಪ್ಲೋಡ್ ಮಾಡಬಹುದು. ಬ್ಲಾಗನಲ್ಲಿ ಕಥೆ, ಕವಿತೆ, ಜನಪದ ಗೀತೆಗಳ ಲೇಖನಗಳನ್ನು ರಚಿಸಿ ಪ್ರಕಟಿಸುವುದು, ಫೋಟೋ, ವೀಡಿಯೋಗಳನ್ನು ಪ್ರಕಟಿಸುವುದು ಮತ್ತು ಚರ್ಚೆ ಮಾಡುವುದು ಸಾಧ್ಯವಿದೆ. ಆದರೆ ಮಾಹಿತಿ ತಂತ್ರಜ್ಞಾನದಲ್ಲಿ (ವಿಕಿಪೀಡಿಯಾದಲ್ಲಿ) ಸ್ನೇಹ–ಸಂಪರ್ಕ ಎಲ್ಲ ಗೌಣ. ಇಲ್ಲಿ ಕೇವಲ ಜಾಗತೀಕವಾಗಿ ಓದುಗರಿಗೆ ಅಗತ್ಯವಾದ ಮಾಹಿತಿಯನ್ನು ಹಾಕಬಹುದು ಮತ್ತು ಬೇರೆಯವರು ಹಾಕಿದ ಮಾಹಿತಿಯನ್ನು ಬೆಳಸಬಹುದು. ಹೀಗಿರುವಾಗ ಸಾಮಾಜಿಕ ಮಾಧ್ಯಮ ಅಂದರೆ ಸಾಮಾಜಿಕ ಸಂಪರ್ಕಗಳನ್ನು ಬಳಸಿಕೊಳ್ಳುವುದೇ, ಬರವಣಿಗೆಗಳನ್ನು ಪ್ರಕಟಿಸಿ ಓದುಗರೊಂದಿಗೆ ಹಂಚಿಕೊಂಡು ಚರ್ಚಿಸುವುದೇ ಅಥವಾ ಮಾಹಿತಿಗಳನ್ನು ಬೆಳೆಸುವುದೇ? ಇವೆಲ್ಲವೂ ಸಾಮಾಜಿಕ ಸಂವಹನಗಳಾದ್ದರಿಂದ ಸಾಮಾಜಿಕ ಮಾಧ್ಯಮವನ್ನು ಸಾಮಾಜಿಕ ಸಂವಹನದ ಸಾಧನ ಎಂದು ಕರೆಯಬಹುದಾಗಿದೆ.

ಸುದ್ದಿ ಮಾಧ್ಯಮಕ್ಕೂ, ಸಾಮಾಜಿಕ ಮಾಧ್ಯಮಕ್ಕೂ ವ್ಯತ್ಯಾಸವಿದೆ. ಈವರೆಗಿನ ಪ್ರಸಿದ್ಧ ಸುದ್ದಿ ಮಾಧ್ಯಮಗಳಾದ ಪತ್ರಿಕೆಗಳು, ರೇಡಿಯೋ ಮತ್ತು ಟಿವಿಗಳು

ಏಕಮುಖಿ ಮಾಹಿತಿ ಪ್ರಸಾರ ಸಾಧನಗಳಾಗಿವೆ. ಆದರೆ ಸಾಮಾಜಿಕ ತಾಣಗಳಲ್ಲಿ ಯಾರು ಬೇಕಾದರೂ ಭಾಗವಹಿಸಬಹುದು ಮತ್ತು ತಮ್ಮ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ವ್ಯಕ್ತಪಡಿಸಬಹುದು.

ಜಾಗತೀಕವಾಗಿ ಅತ್ಯಂತ ಪ್ರಸಿದ್ಧವಾದ ಫೇಸ್‌ಬುಕ್, ಟ್ವೀಟರ್ ಮತ್ತು ಇತ್ತೀಚಿಗೆ ಬಂದು ಗಮನ ಸೆಳೆಯುತ್ತಿರುವ ಗೂಗಲ್‌ಪ್ಲಸ್‌ನಂತಹ ಸಾಮಾಜಿಕ ತಾಣಗಳ ಹೊರತಾಗಿ ಇನ್ನೂ ಅನೇಕ ರೀತಿಯ ಸೇವೆಗಳನ್ನು ನೀಡುತ್ತಿರುವ ತಾಣಗಳಿವೆ. ಉದಾಹರಣೆಗೆ: ಫ್ಲಿಕ್ಸ್ಟರ್ ಎಂಬ ತಾಣವು ಇತರ ಬಳಕೆದಾರರು ನೀಡಿದ ಶ್ರೇಣಿಗಳ (ರೇಟಿಂಗ್) ಆಧಾರದ ಮೇಲೆ ನೀವು ನೋಡಬಹುದಾದ ಸಿನೆಮಾಗಳನ್ನು ನೀಡಲು ಸಹಕಾರಿ ಆಗುತ್ತದೆ.

**ಬ್ಲಾಗಿಂಗ್**

ಇಂದು ಸಾಮಾಜಿಕ ಮಾಧ್ಯಮಗಳಲ್ಲಿ ಬ್ಲಾಗ್‌ಗೆ ಮಹತ್ವದ ಸ್ಥಾನವಿದೆ. ಅಂತರ್ಜಾಲದಲ್ಲಿ ವಿಷಯಗಳನ್ನು ಪ್ರಕಟಪಡಿಸುವುದನ್ನು ವೆಬ್ ಲಾಗಿಂಗ್ ಅಥವಾ ಬ್ಲಾಗಿಂಗ್ ಎಂದು ಕರೆಯುತ್ತಾರೆ. ಯಾರು ಬೇಕಾದರೂ ಉಚಿತವಾಗಿ ತಮ್ಮದೇ ಆದ ಬ್ಲಾಗ್ ರಚಿಸಿಕೊಂಡು ತಮ್ಮ ಸೃಜನಶೀಲ ಬರಹಗಳನ್ನು, ವೀಡಿಯೋಗಳನ್ನು, ಫೋಟೋ, ಜನಪದ ಸಾಹಿತ್ಯ, ಜನಪದ ಹಾಡುಗಳನ್ನು ಪ್ರಕಟಿಸಬಹುದು. ಬ್ಲಾಗ್ ಪೋಸ್ಟಗಳು ಎಂದು ಕರೆಯಲ್ಪಡುವ ಈ ಪ್ರಕಟಣೆಗಳನ್ನು ಆಸಕ್ತರು ಓದಬಹುದು, ಪ್ರತಿಕ್ರಿಯೆ ನೀಡಬಹುದು ಮತ್ತು ಸಾಮಾಜಿಕ ತಾಣಗಳಲ್ಲಿ ಹಂಚಿಕೊಳ್ಳಬಹುದು. ಈ ಬ್ಲಾಗಿಂಗ್ ಸೇವೆ ನೀಡುತ್ತಿರುವ ಪ್ರಮುಖ ತಾಣಗಳೆಂದರೆ ವರ್ಡ್ಪ್ರೆಸ್, ಬ್ಲಾಗರ್, ಕನ್ನಡದ ಕಣಜ ಇತ್ಯಾದಿಗಳು.

**ಮೈಕ್ರೋ ಬ್ಲಾಗಿಂಗ್**

ಇಂದು ಜಗತ ಪ್ರಸಿದ್ಧವಾಗಿರುವುದು ಮೈಕ್ರೋ ಬ್ಲಾಗಿಂಗ್. ಬ್ಲಾಗಿಂಗ್ ತಾಣಗಳಲ್ಲಿ ಎಷ್ಟು ಬೇಕಾದರೂ ಬರೆಯಬಹುದು. ಇದನ್ನು ಹೊಸ ಮಾಧ್ಯಮದವರು ತಕ್ಷಣದ ಸುದ್ದಿಯನ್ನಾಗಿ ಜಗತ್ತಿಗೆ ತಿಳಿಸಲು ಬಳಸುತ್ತಾರೆ. ಫೇಸ್‌ಬುಕ್ ಮತ್ತು ಗೂಗಲ್‌ಪ್ಲಸ್‌ನಲ್ಲಿಯೂ ಮೈಕ್ರೋ ಬ್ಲಾಗಿಂಗ್ ಮಾಡಬಹುದು. ಇಂದು ಟ್ವಿಟರ್ ಅನ್ನು ಕ್ರೀಡೆ, ಸಿನೆಮಾ ತಾರೆಯರು, ಸುದ್ದಿ ಮಾಧ್ಯಮಗಳು, ವೃತ್ತಿಪರ ವ್ಯಕ್ತಿಗಳು ಮತ್ತು ವಿದ್ಯಾರ್ಥಿಗಳು ಬಳಸುತ್ತಿದ್ದಾರೆ. ಅಷ್ಟೇ ಅಲ್ಲದೇ ಉದ್ದಿಮೆಗಳು, ಸಂಘ-ಸಂಸ್ಥೆಗಳು ನಿರಂತರವಾಗಿ ಬಳಸುತ್ತಿರುವುದನ್ನು ನಾವು ನೋಡುತ್ತೇವೆ.

ನಮ್ಮ ದೇಶದಲ್ಲಿ ನವಮಾಧ್ಯಮಗಳು ಮೊದಲು ಅಷ್ಟೊಂದು ಪ್ರಖ್ಯಾತಿ ಪಡೆದಿರಲಿಲ್ಲ. ನಂತರದ ದಿನಗಳಲ್ಲಿ ಕ್ರಮೇಣ ಜಾಗತೀಕರಣ ಬೆಳವಣಿಗೆಯಿಂದ ಅಂತರ್ಜಾಲದ ಪ್ರಭಾವ ನಗರಗಳಲ್ಲಿ ಅಷ್ಟೇ ಅಲ್ಲ, ಗ್ರಾಮೀಣ ಪ್ರದೇಶಗಳಿಗೂ ಅದರ ವ್ಯಾಪ್ತಿ ವಿಸ್ತರಿಸಿತು.

**ಸಾಮಾಜಿಕ ಸಂಪರ್ಕ ಜಾಲತಾಣಗಳು**

ಸಾಮಾಜಿಕ ಸಂಪರ್ಕ ಜಾಲತಾಣಗಳು ಯುವಜನಾಂಗವನ್ನು ಇಂದು ಆಕರ್ಷಿತ್ತಿವೆ. ಇವು ಉದ್ಯೋಗಿಗಳಲ್ಲಿ, ಉದ್ದಿಮೆಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಹಾಗೂ ಹೆಚ್ಚು ಬಳಸಲ್ಪಡುತ್ತಿರುವ ತಾಣಗಳಾಗಿವೆ. ಇಲ್ಲಿ ನಮ್ಮ ಪ್ರೊಫೈಲ್ ರಚಿಸಿಕೊಳ್ಳಬಹುದು, ಸ್ನೇಹಿತರನ್ನು ಹೊಂದಬಹುದು, ಗುಂಪುಗಳನ್ನು ರಚಿಸಬಹುದು ಮತ್ತು ಸೇರಬಹುದು. ಮನರಂಜನೆಯ ಮಾಹಿತಿಗಳನ್ನು ಹಂಚಿಕೊಳ್ಳಬಹುದು. ಇಷ್ಟೇ ಅಲ್ಲದೇ ಅವುಗಳಿಗೆ ಪ್ರತಿಕ್ರಿಯೆ ನೀಡಬಹುದು. ಉದಾಹರಣೆ: ಫೇಸ್‌ಬುಕ್, ಇಮೋ, ಆರ್ಕುಟ್, ಗೂಗಲ್‌ಪ್ಲಸ್, ಇನ್ಸ್ಟಾಗ್ರಾಮ್, ಟೆಲಿಗ್ರಾಂ, ಮುಂತಾದವುಗಳು. ಇದಷ್ಟೇ ಅಲ್ಲದೇ ಪ್ರತಿಯೊಬ್ಬರೂ ತಮ್ಮ ದೇಶ, ಭಾಷೆ, ಊರು, ಆಸಕ್ತಿ ಮುಂತಾದ ಸಂಗತಿಗಳ ಕುರಿತು ತಮ್ಮದೇ ಆದ ಸಾಮಾಜಿಕ ಸಂಪರ್ಕ ಜಾಲ ತಾಣಗಳನ್ನು ಗುಂಪುಗಳನ್ನು ರಚಿಸಿಕೊಳ್ಳಬಹುದಾಗಿದೆ.

**ಸಾಮಾಜಿಕ ಛಾಯಾಚಿತ್ರ ಮತ್ತು ವಿಡಿಯೋ ಹಂಚುವಿಕೆ**

ಈ ತಾಣಗಳಲ್ಲಿ ಛಾಯಾಚಿತ್ರ(ಫೋಟೋ) ಮತ್ತು ವೀಡಿಯೋಗಳನ್ನು ಅಪ್ಲೋಡ್ ಮಾಡಿ ಅವುಗಳನ್ನು ಗೆಳೆಯರೊಂದಿಗೆ ಮತ್ತು ವಿಶ್ವದ ಎಲ್ಲ ಆಸಕ್ತರೊಂದಿಗೆ ಹಂಚಿಕೊಳ್ಳಬಹುದು. ಇದಕ್ಕೆ ಫ್ಲಿಕರ್, ಪಿಕಾಸಾ ವೆಬ್ ಮುಂತಾದವು ಪ್ರಸಿದ್ಧವಾಗಿವೆ.

ಸಾಮಾಜಿಕ ಮಾಧ್ಯಮಗಳ ಪರಿಚಯ ಮತ್ತು ಬಳಕೆ ಇತ್ತೀಚಿನ ಜೀವನದಲ್ಲಿ ಅತ್ಯಂತ ಅಗತ್ಯವಾಗಿದೆ. ಅದನ್ನು ಸಮರ್ಪಕವಾಗಿಯೂ ಬಳಸುವುದು ಅಷ್ಟೇ ಅನಿವಾರ್ಯವಾಗಿದೆ.




**ಅಂತರ್ಜಾಲದ ಮುಖಾಂತರ ಬಳಕೆಗೊಳ್ಳುತ್ತಿರುವ ಸಾಮಾಜಿಕ ಜಾಲತಾಣಗಳು**[೧]



ಹೀಗೆ ನವಮಾಧ್ಯಮಗಳಲ್ಲಿ ಜನಪದ ಹಾಡುಗಳು ಬಿತ್ತರಗೊಂಡು ಇಂದು ಎಲ್ಲರ ಗಮನವನ್ನು ತನ್ನತ್ತ ಸೆಳೆಯುತ್ತಿವೆ. ಮಾಧ್ಯಮಗಳಲ್ಲಿ ಬಳಕೆಗೊಂಡ ಜನಪದ ಗೀತೆಗಳು ಜನಪ್ರಿಯತೆಯನ್ನು ಪಡೆಯುವುದರ ಜೊತೆಗೆ ಇಂದು ಗಟ್ಟಿಗೊಳ್ಳುತ್ತಿವೆ.

**ಕೊನೆ ಟಿಪ್ಪಣಿಗಳು**

೧. https://images.app.goo.gl/FUAZbim77u3ZWXN9A.

# ಅಧ್ಯಾಯ : ಎಂಟು

# ಸಮಾರೋಪ

# ಅಧ್ಯಾಯ : ಎಂಟು

# ಸಮಾರೋಪ

ಜನಪದ ಗೀತೆಗಳು ಸಾಹಿತ್ಯ ಸಂಸ್ಕೃತಿಯ ಪ್ರತಿಬಿಂಬವಾಗಿವೆ. ಇವು ಕಟ್ಟುನಿಟ್ಟಾಗಿ ತರಬೇತಿ ಒಳಪಡದೆ ಬಾಯಿಂದ ಬಾಯಿಗೆ ಹರಡುತ್ತ ಬಂದಿವೆ. ಮೂಲದಲ್ಲಿ ಜನಪದ ಗೀತೆಗಳನ್ನು ರಚಿಸುವ ಮತ್ತು ಹಾಡುವ ವಿಷಯಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಅಭಿವ್ಯಕ್ತಪಡಿಸುವ ಕ್ರಮಬದ್ಧತೆ ಹಲವು ಸಂದರ್ಭದಲ್ಲಿ ವ್ಯವಸ್ಥಿತವಾಗಿ ಕಾಣಿಸುತ್ತವೆ. ಅವು ಕೇಳುವುದರಿಂದಲೇ ತಲೆಮಾರಿನಿಂದ ತಲೆಮಾರಿಗೆ ಮೌಖಿಕವಾಗಿ ಸಾಗುತ್ತ ಬರುತ್ತಿವೆ. ನಗರ ಜನಸಮೂಹದ ಜೀವನಶೈಲಿ ತೀವ್ರಗತಿಯಲ್ಲಿ ಬದಲಾಗುತ್ತಿದೆ. ಇದರ ಪ್ರಭಾವವು ಗ್ರಾಮೀಣ ಪ್ರದೇಶಗಳ ಮೇಲೂ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ಜನಪದ ಮೌಖಿಕ ಹಾಡುಪರಂಪರೆಯು ಹೊಸ ರೂಪಧಾರಣೆ ಮಾಡುತ್ತಿವೆ. ಇದಕ್ಕೆ ಸಾಕ್ಷಿಯಾಗಿ ಕರ್ನಾಟಕದ ನವಮೌಖಿಕ ಕವಿಗಳೂ, ಹಾಡುಗಾರರೂ ಇದ್ದಾರೆ.

ಈ ಜನಪದ ಗೀತೆಗಳನ್ನು ರಚಿಸಿದವರು ಯಾರು? ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟ. ಇವರ ಕುರಿತಾದ ಮಾಹಿತಿಗಳು ಇಲ್ಲವಾಗಿವೆ. ಯಾವ ಕಾಲದಲ್ಲಿ ರಚನೆಗೊಂಡವು ಎಂಬುದು ಸಹ ತಿಳಿಯದು. ಜನಪದ ಕವಿಗಳು ತಮ್ಮ ವಿಷಯದಲ್ಲಿ ಏನನ್ನೂ ಹೇಳದೇ ಮೌನತಾಳಿದ್ದಾರೆ. ಆಧುನಿಕ ಸುಧಾರಣೆಯ ಗಾಳಿ ಬೀಸದ ಸಾಮಾನ್ಯ ಸ್ತ್ರೀ ಪುರುಷರು ತಮಗೆ ಪರಿಚಯವಿದ್ದ ಯಾವುದೋ ಹಾಡಿನ ಮಟ್ಟವನ್ನು ಹಿಡಿದು, ತಮ್ಮ ಹೃದಯ ತುಂಬಿ ಬಂದಾಗ ಹಾಡಿದರು. ತಮ್ಮ ಹಿಂದಿನ ತಲೆ ಮಾರಿನವರು ಹಾಗೂ ಸಮಕಾಲೀನರು ಕಟ್ಟಿದಂತಹ ಹಾಡುಗಳನ್ನು ಸ್ಮರಣೆಯಲ್ಲಿ ಇಟ್ಟುಕೊಂಡು ಪ್ರೀತಿ–ಉತ್ಸಾಹದಿಂದ ಹಾಡಿದರು. ಮುಂಜಾನೆ ಎದ್ದು ಕಸಗುಡಿಸುವಾಗ, ರಂಗೋಲಿ ಹಾಕುವಾಗ, ಮೊಸರು ಕಡಿಯುವಾಗ, ಹಾಲು ಕರೆಯುವಾಗ, ಗಾಡಿ ಹೊಡೆಯುವಾಗ, ಗಾಣ ಹೊಡೆಯುವಾಗ, ಬಣವಿಯನ್ನು ಒಟ್ಟುವಾಗ, ರಾಶಿ ಮಾಡುವಾಗ ಹೀಗೆ ಹಲವು ಕಾಯಕಗಳನ್ನು ಮಾಡುತ್ತಾ ಹಾಡಿದರು. ಮುಂದೆ ಕಸ ತಗೆಯುವಾಗ, ಸಸಿ ನೆಡುವಾಗ, ಭತ್ತ ಕುಟ್ಟುವಾಗ ಗುಂಪುಗೂಡಿ ಹಾಡತೊಡಗಿದರು. ನಂತರದಲ್ಲಿ ಈ ಮೌಖಿಕ ಗೀತೆಗಳೆ ಮುಂದೆ ನವಮೌಖಿಕ ಪ್ರವೇಶವನ್ನು ಪಡೆದುಕೊಂಡು ಇಂದು ಬಿತ್ತರಗೊಳ್ಳುತ್ತಾ ಜನರನ್ನು ಆಕರ್ಷಿಸುತ್ತಿವೆ. ಈಗಲೂ ನವಮೌಖಿಕ ಗೀತೆಗಳು ಗ್ರಾಮೀಣ ಜನರ ದುಡಿಮೆಯ ಭಾಗವೇ ಆಗಿವೆ. ಚಕ್ಕಡಿ ಹೊಡೆಯುವಾಗ, ಗೊಬ್ಬರ ತುಂಬುವಾಗ, ಟ್ರ್ಯಾಕ್ಟರ್ ನಡೆಸುವಾಗ ಅವನ್ನು ಅವರು ಆಲಿಸುವರು. ಕೆಲಸದ ಸ್ವರೂಪ ಬದಲಾಗಿದೆ. ಆದರೆ ಗ್ರಾಮೀಣ ರೈತಾಪಿ ಶ್ರಮಿಕರ ಭಾಗವಾಗಿ ಹುಟ್ಟಿಬೆಳೆಯುವ ಮೌಖಿಕ ಸಾಹಿತ್ಯದ ಸಂಬಂಧ ತುಂಡಾಗಿಲ್ಲ.

ಸಾಹಿತ್ಯವು ಕಾಲದ ಬದಲಾವಣೆಯೊಂದಿಗೆ ತಾನು ಬದಲಾಗುತ್ತದೆ. ಈ ಮಾತನ್ನೇ ಜನಪದ ಗೀತೆಗಳಿಗೆ ಹೋಲಿಸಿದರೆ, ಇಂದು ಹಲವಾರು ಬದಲಾವಣೆಗಳನ್ನು ನಾವು ಈ ಗೀತೆಗಳಲ್ಲಿ ಕಾಣುತ್ತೇವೆ. 'ಹಳೇ ಬೇರು ಹೊಸ ಚಿಗುರು' ಎಂಬಂತೆ ಹಳೆಯ ಜನಪದ ಗೀತೆಗಳು ಇಂದು ನವಮೌಖಿಕ ರೂಪತಾಳಿ ಬಿತ್ತರಗೊಳ್ಳುತ್ತಿವೆ. ಮೂಲ ಹಾಡುಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಯಾದರೂ ತನ್ನ ಮೂಲ ಆಶಯವನ್ನು ಬಿಟ್ಟಿಲ್ಲ. ಆಧುನಿಕ ಮಾಧ್ಯಮಗಳಾದ ಕ್ಯಾಸೆಟ್, ಸಿಡಿ, ಯೂಟ್ಯೂಬ್ ಹಾಗೂ ಇಂಟರ್‌ನೆಟ್ ಮುಂತಾದ ಮಾಧ್ಯಮಗಳು ಇಂದು ಹಾಡುಗಳನ್ನು ರಚನೆ ಮಾಡುವ, ಹಾಡುವ, ಕೇಳುಗ ವರ್ಗಗಳನ್ನು ದಿನದಿಂದ ದಿನಕ್ಕೆ ಹೆಚ್ಚಿಸುತ್ತಿವೆ. ಈ ಮಾಧ್ಯಮಗಳ ಮೂಲಕ ಗೀತೆಗಳು ಜನರನ್ನು ಅತಿಬೇಗನೆ ತಲುಪುತ್ತಿವೆ. ಮೌಖಿಕ ಸಾಹಿತ್ಯದ ಹೊಸ ರೂಪವೆಂದೇ ನವಮೌಖಿಕತೆಯನ್ನು ಇಲ್ಲಿ ಗುರುತಿಸುತ್ತೇವೆ. ಇದರ ಬಗ್ಗೆ ಕನ್ನಡದಲ್ಲಿ ಹೆಚ್ಚಿನ ಅಧ್ಯಯನಗಳು ಆಗಿಲ್ಲ. ಇದು ಸಾಂಪ್ರದಾಯಕ ಜನಪದ ಹಾಡುಪರಂಪರೆಯ ಮುಂದುವರಿಕೆಯಾಗಿದೆ. ಈ ಎರಡೂ ಪರಂಪರೆಯಲ್ಲಿ ಕೇಳುವಿಕೆಯು ಪ್ರಧಾನವಾಗಿದೆ. ಸಾಂಪ್ರದಾಯಿಕ ಹಾಡು ಪರಂಪರೆಯಲ್ಲಿ ಕೇಳುವಿಕೆ ನೇರವಾಗಿ ಇರುತ್ತಿತ್ತು. ಈಗ ಕೇಳುವಿಕೆಯು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಪರೋಕ್ಷವಾಗಿದೆ.

ಇಂದು ಉತ್ತರ ಕರ್ನಾಟಕ ಭಾಗದ ಬೆಳಗಾವಿ, ಬಾಗಲಕೋಟ, ವಿಜಯಪುರ, ಧಾರವಾಡ, ಹಾವೇರಿ, ಗದಗ ಹೀಗೆ ನಾನಾ ಜಿಲ್ಲೆಗಳ ಜವಾರಿ ಭಾಷೆಯ ಹಾಡುಗಳು ಇಂದು ಜಾಲತಾಣಗಳಾದ ಫೇಸ್‌ಬುಕ್, ಯುಟ್ಯೂಬ್, ವಾಟ್ಸಾಪ್ ಸ್ಟೇಟಸ್ ಹಾಗೂ ಖಾಸಗಿ ವಾಹಿನಿಗಳಲ್ಲಿ ಭಾರಿ ಸದ್ದು ಮಾಡುತ್ತಿವೆ. ಎಲ್ಲರ ಗಮನವನ್ನು ತಮ್ಮತ್ತ ಸೆಳೆಯುತ್ತಿವೆ. ಗ್ರಾಮೀಣ ಜನರು ಸುಲಭವಾಗಿ ಲಭ್ಯವಾಗುವ ತಾಂತ್ರಿಕತೆಯ ಮೂಲಕ ಈ ಹಾಡುಗಳನ್ನು ಆಲಿಸುತ್ತಿದ್ದಾರೆ. ಮೊಬೈಲ್ ಎಲ್ಲರಲ್ಲೂ ಲಭ್ಯವಾಗಿರುವುದರಿಂದ, ಈ ಹಾಡುಗಳ ಪ್ರಸಾರಕ್ಕೆ ಹಿಂದಿನಂತೆ ಟೇಪ್‌ರೆಕಾರ್ಡರಿನ ಹಂಗೂ ಬೇಡವಾಗಿದೆ. ಗ್ರಾಮೀಣ ಜನರೂ ಅದರಲ್ಲೂ ರೈತಾಪಿ ತರುಣರು ಮೊಬೈಲುಗಳ ಮೂಲಕ, ಮಹಿಳೆಯರು ಟಿವಿಗಳ ಮೂಲಕ ಈ ನವಮೌಖಿಕ ಸಾಹಿತ್ಯದ ಗ್ರಾಹಕರಾಗಿ ಬದಲಾಗಿದ್ದಾರೆ.

ಜಾಲತಾಣಗಳ ಪ್ರಭಾವದಿಂದ ಪ್ರೇರೇಪಿತಗೊಂಡ ಯುವ ಪೀಳಿಗೆಯ ನೂತನ ಪ್ರತಿಭೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದಾರೆ. ಇಂಥ ಜವಾರಿ ಹಾಡುಗಳ ಸಂಖ್ಯೆ ಕೂಡ ಈಗ ಹೆಚ್ಚಾಗುತ್ತಿವೆ. ಈ ಹಾಡುಗಳಲ್ಲಿ ಜೀವನದ ಸಂದೇಶ, ತಂದೆ-ತಾಯಿಯರ ಮಹತ್ವ, ಅಣ್ಣ-ತಂಗಿ, ತಾಯಿ-ಮಗ, ಸಾಮಾಜಿಕ ಕಾಳಜಿ, ಬಡತನ, ನೀತಿ ಬೋಧನೆ, ಹಾಸ್ಯ, ಪ್ರೇಮ ನಿವೇದನೆ, ಸಂಬಂಧಗಳ ಮಿಲನ, ಸಾಹಿತ್ಯಾಸಕ್ತಿ, ಕ್ರಿಯಾಶೀಲತೆ ಹೀಗೆ ಹಲವು ಬಗೆಯ ಅಂಶಗಳನ್ನು ಒಳಗೊಂಡಿವೆ. ದಕ್ಷಿಣ ಕರ್ನಾಟಕ ಭಾಗದ ಜನಕ್ಕೆ ಈ ಹಾಡುಗಳು ಅರ್ಥವಾಗದಿದ್ದರೂ ಹಾಡಿನ ಸಾರಾಂಶ ಮಾತ್ರ ಅರಿಯಬಲ್ಲರು. ಹೆಚ್ಚಾಗಿ ಈ ಹಾಡುಗಳನ್ನು ಪಡ್ಡೆ ಹುಡುಗರು ಬರೆದು, ಹಾಡುತ್ತಿರುವುದರಿಂದ ಯುವ ಮನಸ್ಸುಗಳನ್ನು

ಬೇಗ ಮುಟ್ಟುತ್ತಿವೆ. ಅಲ್ಲದೇ ಇಂದು ಜಾಲತಾಣಗಳಲ್ಲಿ ಸಂಚಲನವನ್ನು ಮೂಡಿಸಿವೆ. ದಿನ ನಿತ್ಯ ಫೇಸ್‌ಬುಕ್, ಯೂಟ್ಯೂಬ್ ಆನ್ ಮಾಡಿದರೆ ಸಾಕು ದಿನಕ್ಕೆ ಈ ಭಾಗದ ಆರೇಳು ಹಾಡುಗಳು ಇನ್ ಬಾಕ್ಸ್‌ಗೆ ಬಂದಿರುತ್ತವೆ. ಅವುಗಳನ್ನು ಕೇಳುಗರ ಸಂಖ್ಯೆ ಕೂಡ ಇಂದು ಹೆಚ್ಚುತ್ತಿದೆ. ಇದನ್ನು ನವಮೌಖಿಕತೆಯ ವಿಸ್ತರಣೆ ಎಂದು ಕರೆಯಬಹುದು. ಸಾಂಪ್ರದಾಯಿಕ ಜನಪದ ಹಾಡುಪದ್ಧತಿಯು ಹಾಡುವ ಸ್ಥಳ ಮತ್ತು ಗಾಯಕರಿಗೆ ಸೀಮಿತಗೊಂಡಿದೆ. ಆದರೆ ಈ ನವಮೌಖಿಕ ಜನಪದ ಹಾಡುಪದ್ಧತಿಯು ಎಲೆಕ್ಟ್ರಾನಿಕ್ ಉಪಕರಣಗಳ ಮೂಲಕ, ತನ್ನ ಸೀಮೆಯನ್ನು ವಿಸ್ತರಿಸಿಕೊಂಡಿದೆ. ಇದನ್ನು ಸೀಮೋಲ್ಲಂಘನೆ ಎಂದು ಕರೆಯಬಹುದು.

ಆಧುನಿಕ ಮಾಧ್ಯಮಗಳಲ್ಲಿ ಡೊಳ್ಳಿನ ಪದ, ಗೀಗೀ ಪದ, ಮೊಹರಂ ಪದ, ದೇವರ ಕುರಿತಾದ ಹಾಡುಗಳು ಇತ್ಯಾದಿ ವಿಷಯಗಳನ್ನು ಇಟ್ಟುಕೊಂಡು ರಚನೆಯಾದ ಹಾಡುಗಳು ಒಂದೆಡೆಯಾದರೆ, ಇಂದು ವಿಭಿನ್ನ ಹೆಸರಿನಲ್ಲಿ ಬಿತ್ತರಗೊಳ್ಳುತ್ತಿರುವ ಹಾಡುಗಳು ಇನ್ನೊಂದೆಡೆಯಾಗಿ ನಿಲ್ಲುತ್ತವೆ. ಅವುಗಳೆಂದರೆ ಉತ್ತರ ಕರ್ನಾಟಕದ ಹೈಕ್ಳು, ಹುಬ್ಬಳ್ಳಿ ಮಂದಿ, ಬಾಗಲಕೋಟೆ ಮಂದಿ, ಉತ್ತರ ಕರ್ನಾಟಕದ ಪಡ್ಡೆ ಹುಡುಗರು, ಉತ್ತರ ಕರ್ನಾಟಕದ ಖಡಕ್ ಹುಡುಗರು, ಇಳಕಲ್ ಹುಡುಗರ ಗುಂಪು, ವಿಜಯಪುರ ಜವಾರಿ ಹುಡುಗರು, ಜಾನಪದ ಝೇಂಕಾರ ಹೀಗೆ ಹಲವು ಬಗೆಯ ಹೆಸರಿನ ಗುಂಪುಗಳು ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಅದರಲ್ಲೂ ವಿಶೇಷವಾಗಿ ಬಾಗಲಕೋಟ ಜಿಲ್ಲೆಯ ಎಂಜನಿಯರ್ ವಿದ್ಯಾರ್ಥಿಗಳ 'ನನ ಗೆಳಯ, ನನ ಗೆಳಯ' ಹಾಗೂ ಜನಪದ ಯುವ ಕವಿ ಮಂಜುನಾಥ ಅವರು ರಚನೆ ಮಾಡಿದ 'ನನ ಗೆಳತಿ, ನನ ಗೆಳತಿ' ಹಾಡುಗಳು ಯುವಕರ ಮನ ಮುಟ್ಟಿವೆ. ಹೀಗೆ ನಾವು ಬೇರೆ ಬೇರೆ ಪ್ರಕಾರದ ಗೀತೆಗಳನ್ನು ಇಂದು ನವಮೌಖಿಕತೆಯಲ್ಲಿ ಕಾಣುತ್ತಿದ್ದೇವೆ. ಇದನ್ನು ಮೌಖಿಕ ಸಾಹಿತ್ಯದ ಮುನ್ನಡೆಯೆಂದೆ ಗ್ರಹಿಸಬಹುದು. ಇದರ ಫಲವಾಗಿ ಗ್ರಾಮೀಣ ಪ್ರದೇಶದಲ್ಲಿ ಹೊಸ ಹಾಡುಗಾರರು ಮತ್ತು ಕವಿಗಳು ಹುಟ್ಟಿದ್ದಾರೆ. ಇವರು ತಮ್ಮದೇ ಊರಿನ ಸಾಂಪ್ರದಾಯಿಕ ಜನಪದ ಕವಿ ಮತ್ತು ಹಾಡುಗಾರರಿಗಿಂತ ಹೆಚ್ಚು ಜನಪ್ರಿಯರೂ ಆಗಿದ್ದಾರೆ.

**ಅಧ್ಯಯನದ ಫಲಿತಗಳು**

೧. ಆಧುನಿಕ ಮಾಧ್ಯಮಗಳ ಮೂಲಕ ಬಿತ್ತರಗೊಂಡ ಜನಪದ ಹಾಡುಗಳು ಏಕಕಾಲದಲ್ಲಿ ಲಕ್ಷಾಂತರ ಜನರನ್ನು ತಲುಪುತ್ತವೆ. ಒಂದು ಸಾರಿ ಹಾಡಿದರೆ ಸಾಕು ಅದರ ಮೇಲೆ ಸಾವಿರಾರು ಪ್ರತಿಗಳನ್ನು ತಯಾರಿಸಬಹುದು. ಇದು ಆಧುನಿಕ ಮಾಧ್ಯಮಗಳ ಮುನ್ನಡೆ ಎಂದೇ ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಇದರಿಂದ ಜನಪದ ಮೌಖಿಕತೆಯು ಸ್ಥಳೀಯತೆಯ ಸೀಮಿತ ಗಡಿಯನ್ನು ಮೀರಿ ಇಡೀ ಕರ್ನಾಟಕದ ವ್ಯಾಪ್ತಿಯನ್ನು ಪಡೆದುಕೊಂಡಿದೆ. ದೂರದ ಮಹಾರಾಷ್ಟ್ರದಲ್ಲೊ, ಮಂಗಳೂರಲ್ಲೊ ಕೆಲಸಕ್ಕೆ ಹೋಗಿರುವ ಉತ್ತರ ಕರ್ನಾಟಕದ ಶ್ರಮಿಕರ ಜೀವನದಲ್ಲಿ ಇದು ಊರಿನ ಸಂಬಂಧವನ್ನು ಕಟ್ಟುವ ಕೆಲಸವನ್ನು ಸಹ ಮಾಡುತ್ತಿದೆ.

೨. ಉತ್ತರ ಕರ್ನಾಟಕ ಭಾಷೆಯಲ್ಲಿ ರಚನೆಗೊಂಡ ನವಮೌಖಿಕ ಹಾಡುಗಳಿಗೆ ಸಾರ್ವಜನಿಕರು ಮಾರು ಹೋಗಿದ್ದಾರೆ. ಇಂದು ಹಾಡುಗಾರರಿಗೆ ಭಾರಿ ಬೇಡಿಕೆ ಬಂದಿದೆ. ಅಲ್ಲದೇ ಗಾಯಕರನ್ನು ಪ್ರೋತ್ಸಾಹಿಸಲು ಜಾಲತಾಣಗಳಲ್ಲಿ ಕೇಳಿದ ಜನ ಕಾಮೆಂಟ್, ಲೈಕ್ ಮಾಡುವ ಮೂಲಕ ಅವರನ್ನು ಪ್ರೇರೇಪಿಸುತ್ತಿದ್ದಾರೆ ಎಂಬ ಅಂಶ ಈ ಸಂಶೋಧನೆಯಿಂದ ತಿಳಿಯುತ್ತದೆ. ಇದರಿಂದ ಕೇವಲ ಮೌಖಿಕವಾಗಿ ಇರುವ ಪರಂಪರಾಗತ ಹಾಡುಗಾರರು ಮತ್ತು ಗಾಯಕರು ತಮ್ಮ ಮಹತ್ವವನ್ನು ಕಳೆದುಕೊಳ್ಳುವ ಅಥವಾ ಸೀಮಿತ ನೆಲೆಯಲ್ಲಿ ಮಾತ್ರ ಅಸ್ತಿತ್ವ ಪಡೆದಿರುವ ಸನ್ನಿವೇಶವು ಬರುವ ಸಾಧ್ಯತೆಯಿದೆ.

೩. ಇಂದು ಜಾನಪದವನ್ನು ಆಧುನಿಕತೆಯ ಪರಿಕಲ್ಪನೆ ಜೊತೆ ವಿವರಿಸುವ ಬಿಡಿ ಬಿಡಿ ಬರಹಗಳು ಬಂದಿವೆ. ಆದರೂ ಸಹ ತಾತ್ವಿಕ ಗಟ್ಟಿತನ ಕನ್ನಡ ಜಾನಪದ ಅಧ್ಯಯನದಲ್ಲಿ ಇದು ಇನ್ನೂ ಭ್ರೂಣಹಂತದಲ್ಲಿದೆ ಎಂಬುದು ಈ ಅಧ್ಯಯನದಿಂದ ಗುರುತಿಸುತ್ತೇವೆ. ಇದನ್ನು ಸಾಹಿತ್ಯ ಮತ್ತು ಸಂಗೀತದ ನೆಲೆಯಿಂದ ಮಾತ್ರವಲ್ಲದೆ, ಮನಶಾಸ್ತ್ರೀಯ ಮತ್ತು ಮನರಂಜನಾತ್ಮಕ ನೆಲೆಯಿಂದ ಅಧ್ಯಯನ ಮಾಡುವ ಸಾಧ್ಯತೆಗಳು ಇನ್ನೂ ತೆರೆದುಕೊಂಡಿವೆ.

೪. ಕೆಲವೊಮ್ಮೆ ಆಧುನಿಕ ಮಾಹಿತಿ ತಂತ್ರಜ್ಞಾನದ ಜೊತೆಗೆ ನಾವು ಹೆಜ್ಜೆ ಹಾಕದಿದ್ದರೆ, ಅಂದರೆ ಜನಪದ ಸಾಹಿತ್ಯವನ್ನು ಹಿಡಿದಿಡುವ ಚೌಕಟ್ಟಿಗೆ ನಾವು ಒಳಪಡದಿದ್ದರೆ, ಈಗಿರುವಷ್ಟು ಜನಪದ ಸಾಹಿತ್ಯ ಮುಂದೆ ಇನ್ನಷ್ಟು ಕಣ್ಮರೆಯಾಗಬಹುದೇನೋ, ಇದು ಅನಿವಾರ್ಯವಾದರೂ ಕೂಡ ಸಾಂದರ್ಭಿಕವಾದ ಅಭಿಪ್ರಾಯಗಳು ಇದಕ್ಕೆ ಪೂರಕವಾಗಿ ಕೆಲಸ ಮಾಡುತ್ತವೆ ಎಂಬುದು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಈ ಹಿನ್ನೆಲೆಯಿಂದ ಹೇಳುವುದಾದರೆ, ನವಮೌಖಿಕ ಹಾಡುಸಾಹಿತ್ಯವು ಮೌಖಿಕ ಹಾಡುಸಾಹಿತ್ಯದ ಮೇಲೆ ಯಾವ ಬಗೆಯ ಪರಿಣಾಮ ಬೀರಲಿದೆ ಎಂಬುದನ್ನು ಕಾದುನೋಡಬೇಕಿದೆ.

೫. ನೆಲದೊಳಗೆ ಬೀಜ ಬಿತ್ತನೆಯ ನಂತರ ಅದು ಮಣ್ಣೊಳಗಿನ ಸಾರ ಹೀರಿಕೊಂಡು ಸಂಸ್ಕಾರ ಪಡೆದು ಸಸಿ, ಗಿಡ, ಮರವಾಗಿ ಬೆಳೆದು ನಿಂತು ಮತ್ತೆ ತನ್ನ ಒಡಲಿನಿಂದ ಮತ್ತೊಂದು ಬೀಜ ನಿರ್ಮಾಣಕ್ಕೆ ಕಾರಣವಾಗುತ್ತದೆ. ಅದೇ ರೀತಿ ನವಮೌಖಿಕ ಸಾಹಿತ್ಯದ ಗೀತೆಗಳು ಹೊಸತನಕ್ಕೆ ತನ್ನ ಆಯಾಮಗಳೊಡನೆ ಹೊಸ ಹೊಸ ಅರ್ಥಗಳನ್ನು ಕೊಡುತ್ತ ತುತ್ತತುದಿಗೇರಿ ಮತ್ತೆ ಮೂಲ ಸ್ಥಾನಕ್ಕೆ ಮರಳುತ್ತದೆ. ಒಂದೆಡೆ ವಿಕಾಸದ ಪ್ರಕ್ರಿಯೆ ಮೂಲಕ, ಮತ್ತೊಂದೆಡೆಯಲ್ಲಿ ಮುಕ್ತಾಯದ ಸ್ಥಿತಿಗೆ ಮುಖ ಮಾಡಿದೆ ಎಂಬುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಜನ ಯಾವುದು ಪರಂಪರೆಯಿಂದ ಬಂದಿದೆಯೊ ಅದನ್ನೇ ನೆಚ್ಚಿಕೊಳ್ಳದೆ ಯಾವುದು ಹೆಚ್ಚು ಜನಪ್ರಿಯವಾಗಿರುತ್ತದೆಯೊ, ಪ್ರಭಾವಶಾಲಿ ಆಗಿರುತ್ತದೆಯೊ

ಅದನ್ನು ಸ್ವೀಕರಿಸುವ ಗುಣವನ್ನು ಹೊಂದಿದ್ದಾರೆ ಎಂಬುದು ತಿಳಿಯುತ್ತದೆ. ಕಾರಣ, ಜನಪದರಲ್ಲಿ ಈ ನವಮೌಖಿಕ ಹಾಡುಪರಂಪರೆಗೆ ವಿರೋಧವು ವ್ಯಕ್ತವಾಗಿಲ್ಲ.

೬. ಇತ್ತೀಚಿನ ವರ್ಷಗಳಲ್ಲಿ ಹಾಡುಗಳ ಸಂಗ್ರಾಹಕರ ಸಂಖ್ಯೆ ಹೆಚ್ಚಾಗಿದೆ. ವಿವಿಧ ಸಮಾರಂಭ, ವೇದಿಕೆಗಳಲ್ಲಿ ಹಾಡುಗಾರಿಕೆಗೆ ಹೆಚ್ಚು ಅವಕಾಶ ದೊರೆತಿದ್ದರ ಪರಿಣಾಮವಾಗಿ ನಮ್ಮ ಗ್ರಾಮೀಣ ವಕ್ತೃಗಳು ಇಂದು ಹೊಸ ವಾತಾವರಣಕ್ಕೆ ಹೊಂದಿಕೊಳ್ಳುವಂತಾಗಿದೆ. ಇದನ್ನು ನಾವು ನವಮೌಖಿಕತೆಯ ಮುನ್ನಡೆ ಎಂದೇ ಗುರುತಿಸಬಹುದು. ಹೀಗಾಗಿ ನವಮೌಖಿಕ ಹಾಡುಪರಂಪರೆಯು ಹಳ್ಳಿಗಳಲ್ಲಿ ಮತ್ತು ಪಟ್ಟಣಗಳಲ್ಲಿ, ಉತ್ಸವ, ಜಾತ್ರೆ ಸಮಾರಂಭಗಳಲ್ಲಿ ದೊಡ್ಡ ಅವಕಾಶವನ್ನು ಪಡೆದುಕೊಳ್ಳುತ್ತಿರುವುದನ್ನು ಕಾಣಬಹುದು. ಇದನ್ನು ನಾವು ನವಮೌಖಿಕತೆಯ ಮಾರುಕಟ್ಟೆಯ ಆಯಾಮ ಎಂದು ಕರೆಯಬಹುದು.

೭. ಜನಪದ ಗೀತೆಗಳು ನಿರ್ದಿಷ್ಟ ಸಂದರ್ಭಗಳಲ್ಲಿ, ಆವರ್ತನ ಕಾಲದಲ್ಲಷ್ಟೇ ಅಲ್ಲದೇ ಹಬ್ಬ, ಹುಣ್ಣಿಮೆ, ಅಮಾವಾಸ್ಯೆ, ಸುಗ್ಗಿಯ ಕಾಲ, ಮದುವೆ, ತಿಥಿ ಮುಂತಾದ ಹಲವಾರು ಸಂದರ್ಭಗಳಲ್ಲಿ ಕಲೆ ಪ್ರದರ್ಶನಗೊಳ್ಳುತ್ತವೆ. ಹೀಗೆ ಪ್ರದರ್ಶನ ಕೊಡುತ್ತಾ ಬಂದ ಕಲೆಗಳು ಇಂದು ಕೆಲವರಿಗೆ ವೃತ್ತಿಯಾದರೆ, ಕೆಲವರಿಗೆ ಆರಾಧನಾ ಹಾಗೂ ಹವ್ಯಾಸ ಕಲೆಯಾದವು ಎಂಬುದನ್ನು ಇಂದು ನವಮೌಖಿಕತೆ ಹಿನ್ನೆಲೆಯಲ್ಲಿ ಈ ಅಧ್ಯಯನದ ಮೂಲಕ ಗ್ರಹಿಸುತ್ತೇವೆ. ನವಮೌಖಿಕ ಹಾಡು ಪರಂಪರೆಯು ಹಲವಾರು ಜನರಿಗೆ ಉದ್ಯೋಗವನ್ನು ದೊರಕಿಸಿಕೊಟ್ಟಿರುವುದರಿಂದ, ಇದಕ್ಕೆ ಆರ್ಥಿಕ ಆಯಾಮವೂ ಒದಗಿದೆ.

೮. ಇಂದು ವೈಜ್ಞಾನಿಕ ಸಂಗ್ರಹಕಾರ್ಯ ಎಂಬುದು ಆದರ್ಶ ಆಲೋಚನೆಯಾಗಿದೆ. ಆದರೆ ಎಲ್ಲರಿಂದಲೂ ಈ ಕೆಲಸ ಸಾಧ್ಯವಾಗದು. ತೋಟದಲ್ಲಿ ಕೆಲಸ ಮಾಡುತ್ತಿರುವ ರೈತನ ಮುಂದೆ ಸಂಗ್ರಹಕಾರ ತಾನು ಟೇಪರೆಕಾರ್ಡರ್ ಹಿಡಿದುಕೊಂಡು ಓಡಾಡಲು ಸಾಧ್ಯವೇ? ಹಾಗೆ ಮಾಡಿದಾಗಲೂ ಟೇಪ್‌ನಲ್ಲಿ ಮುದ್ರಿತವಾದ ಎಲ್ಲ ಶಬ್ದಗಳು ಸ್ಪಷ್ಟವಾಗಿ ಗುರುತಿಸುವಂತೆ ದಾಖಲಾಗಲು ಸಾಧ್ಯವೇ? ಹೇಳಿದ್ದನ್ನೆಲ್ಲ ಸರಿಯಾಗಿ ಗ್ರಹಿಸಿ ಹಾಗೆ ಬರೆದುಕೊಳ್ಳುವ ಕಂಪ್ಯೂಟರ್ ಬಂದರೆ ಸಾಧ್ಯವಾಗಬಹುದು. ಈ ಅಂಶವನ್ನು ಅಧ್ಯಯನದಿಂದ ಗುರುತಿಸಲಾಗಿದೆ. ಆದರೆ ನವಮೌಖಿಕ ಸಾಹಿತ್ಯದ ಸಂಗ್ರಹದಲ್ಲಿ ಈ ಕಷ್ಟವಿಲ್ಲ. ಎಲ್ಲ ಹಾಡುಗಳು ಎಲೆಕ್ಟ್ರಾನಿಕ್ ಮುದ್ರಿತ ರೂಪದಲ್ಲಿ ಸಿಗುವುದರಿಂದ, ಅವುಗಳನ್ನು ಸಂಗ್ರಹಿಸುವುದು ಸುಲಭವಾಗಿದೆ. ಮುಂದಿನ ದಿನಗಳಲ್ಲಿ ಈ ಹಾಡುಗಳ ಸಂಪಾದನೆಯೂ ಪ್ರಕಟಣೆಯು ಸಾಧ್ಯವಾಗಬಹುದು.

೯. ಜನಪದರು ಅಂದು ಏರು ಧ್ವನಿಯಲ್ಲಿ ಹಾಡುತ್ತಿದ್ದರು. ಇಂದು ಅದೇ ಹಾಡುಗಳು ನವಮೌಖಿಕತೆಯಲ್ಲಿ ಬಿತ್ತರಗೊಳ್ಳುತ್ತಿರುವಾಗ ಗಾಯಕನ ಪರಿಶ್ರಮ ಕಡಿಮೆ ಇದ್ದರೂ

ಸಹ ಸಂಗೀತದ ಪ್ರಭಾವದಿಂದ ಹಾಡು ಕೇಳುಗರನ್ನು ಆರ್ಕರ್ಷಿಸುತ್ತಿವೆ. ಈ ಅಂಶವನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ. ಇದರಿಂದ ಜನಪದ ಗಾಯಕರ ಹಾಗೆ ಕಷ್ಟಪಡದೆ ಸ್ಟುಡಿಯೊಗಳಲ್ಲಿರುವ ಮೈಕುಗಳಿಗೆ ತಮ್ಮ ಕಂಠವನ್ನು ಈ ಗಾಯಕರು ಹೊಂದಿಸಿಕೊಂಡು, ಸಹಜವಾಗಿ ಜನಪದ ಗಾಯಕರು ಸಮುದಾಯದ ಮುಂದೆ ಹಾಡುವಾಗ ತೋರುವ ಕಂಠದ ಸಹಜತೆಯನ್ನು ಕಳೆದುಕೊಳ್ಳುತ್ತಿದ್ದಾರೆ.

೧೦. ರೊಕ್ಕದ ಬೆನ್ನು ಹತ್ತುವುದಕ್ಕಿಂತ ಮೊದಲು ಒಬ್ಬ ಕಲಾವಿದ, ನಂತರದಲ್ಲಿ ರೊಕ್ಕದ ಬೆನ್ನು ಹತ್ತಿದ ಮೇಲೆ ಅವನಲ್ಲಾದ ಬದಲಾವಣೆ, ಇಲ್ಲವೇ ಜನಪ್ರಿಯತೆ ಪಡೆದ ನಂತರ ಆತನಲ್ಲಾದ ಬದಲಾವಣೆಯನ್ನು ಈ ಅಧ್ಯಯನದ ಮೂಲಕ ಗುರುತಿಸಲಾಗಿದೆ. ಈ ಗಾಯಕರು ಸಿನಿಮಾ ಅಥವಾ ಟಿವಿ ನಟ, ಗಾಯಕರ ಹಾಗೆ ಹೆಚ್ಚಿನ ಬೇಡಿಕೆ ಪಡೆದಿರುವರು ಮತ್ತು ಸ್ಟಾರ್‌ಮೌಲ್ಯವನ್ನು ಗಳಿಸಿರುವರು. ಇದರಿಂದ ಅವರ ವೃತ್ತಿಜೀವನದಲ್ಲಿಯೂ ಹೆಚ್ಚು ಆಧುನಿಕತೆಯನ್ನು ರೂಢಿಸಿಕೊಂಡು ಟಿವಿಯಂತಹ ಹೊಸ ಮಾಧ್ಯಮಗಳಲ್ಲಿ ಪ್ರವೇಶ ಪಡೆಯುವುದಕ್ಕೆ ಸಾಧ್ಯವಾಗಿದೆ.

೧೧. ಇಂದು ಮೌಖಿಕತೆ ಎನ್ನುವುದು ಆಡುಭಾಷೆಯ ಸಂಬಂಧದಲ್ಲಿ ಅಸ್ತಿತ್ವ ಪಡೆದಿದೆ. ಸಂವಹನ ಎಂಬುದು ಕಣ್ಣು ಮತ್ತು ಕಿವಿಗಳ ನಡುವಿನ ಸ್ಪರ್ಧೆಯಾಗಿದೆ ಎನ್ನುವುದನ್ನು ಈ ಅಧ್ಯಯನದಿಂದ ಗುರುತಿಸಬಹುದು. ಜನಪದದಲ್ಲಿ ಕೇಳುವಿಕೆ ಮುಖ್ಯವಾಗಿತ್ತು. ನೇರವಾಗಿ ಗಾಯಕರನ್ನು ನೋಡುವುದು ಸಹ ಸಾಧ್ಯವಿತ್ತು. ಈಗ ಟಿವಿ ಪರದೆಯ ಮೇಲೆ ಗಾಯಕರು ಬರುವುದರಿಂದ ಕೇಳುವಿಕೆ ಮತ್ತು ನೋಡುವಿಕೆಗಳಿಗೆ ಹೊಸ ಪ್ರಭಾವ ವಲಯವು ಪ್ರಾಪ್ತವಾಗಿದೆ.

೧೨. ಜನರಿಗೆಲ್ಲ ಗುಂಗು ಹಿಡಿಸುವಂತೆ ಆಕರ್ಷಣೆ ಮಾಡುವಂತ ಮಾಧ್ಯಮ ಜನಪದ ಸಂಗೀತ. ಅದು ನಮ್ಮನ್ನು ಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಂಡು ಆಳಕ್ಕೆ ಇಳಿಯುತ್ತದೆ. ಆ ಗುಂಗು ಒಳ್ಳೆಯ ಬದಲಾವಣೆಯನ್ನು ತರುವಂತಹದ್ದು. ಅಲ್ಲದೇ ಒಂದು ಹಾಡಿಗೆ ಎಲ್ಲರ ಅನುಭವವನ್ನು ಮರುಕಳಿಸುವ ಶಕ್ತಿಯಿದೆ ಎಂಬುದನ್ನು ಈ ಅಧ್ಯಯನದಿಂದ ಗುರುತಿಸಬಹುದು.

೧೩. ಇಂದು ಮೌಖಿಕ ಹಾಡುಗಳ ಪರಂಪರೆ ಕ್ಯಾಸೆಟ್, ಸಿಡಿ, ಯೂಟ್ಯೂಬ್ ರೂಪದಲ್ಲಿ ಸಂವಹನವಾಗುತ್ತಿವೆ. ಇದರಿಂದ ಹೊಸ ನಂಬಿಕೆ, ಹೊಸ ಸಾಮಾಜಿಕ ಕಥನಗಳು ಸಮಾಜದಲ್ಲಿ ತನ್ನಷ್ಟಕ್ಕೆ ತಾನೇ ಕ್ರಿಯಾಶೀಲವಾಗುತ್ತಿವೆ. ಮುಂದಿನ ಹಂತವಾಗಿ ನವಮೌಖಿಕತೆ ಸಂವಹನ ಮಾಧ್ಯಮದ ಮೂಲಕ ರೂಪ ಪಡೆದುಕೊಳ್ಳುತ್ತಿದೆ. ಎನ್ನುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

೧೪. ಸಾಮಾಜಿಕ ಜಾಲತಾಣಗಳಲ್ಲಿ ಚುನಾವಣೆ ಕುರಿತು, ರಾಜಕೀಯ ಪಕ್ಷಗಳ ಕುರಿತು, ಚುನಾವಣೆಗೆ ಸ್ಪರ್ಧಿಸಿದವರ ಕುರಿತು, ರಾಜಕೀಯ ನಾಯಕರ ಬಗೆಗಿನ ಹಲವು ಜೋಕು, ವ್ಯಂಗ್ಯಗಳು ಹುಟ್ಟಿವೆ. ಈ ಚುನಾವಣೆಯು ಸೈಬರ ಫೋಕ್

ಬಹುರೂಪಿಯಾಗಿದೆ. ಸಂಯೋಜಿತ ಚಿತ್ರ, ಕಾರ್ಟೂನ್ ವಿಡಿಯೋ ರೂಪದಲ್ಲಿ ಹಂಚಿಕೆ ಆಗಿರುವುದನ್ನು ನವಮೌಖಿಕತೆಯ ಮುನ್ನಡೆ ಎಂದೇ ಗುರುತಿಸುತ್ತೇವೆ.

೧೫. ಚುನಾವಣಾ ಪ್ರಚಾರದಲ್ಲಿ ಜನಪ್ರಿಯ ಜನಪದ ಗೀತೆಗಳ ರಿಮಿಕ್ಸ್‌ಗಳು ಯಥೇಚ್ಛವಾಗಿ ಬಳಕೆಯಾಗಿವೆ. ಪಕ್ಷ ಸಿದ್ಧಪಡಿಸಿದ ಹಾಡು-ವಿಡಿಯೋಗಳು ಆಯಾ ಭಾಗದ ಚುನಾಯಿತ ಪ್ರತಿನಿಧಿಗಳು ತಮ್ಮ ಬಗೆಗಿನ ಹಾಡು ವಿಡಿಯೋಗಳನ್ನು ಸಿದ್ಧಪಡಿಸಿ ಮೊಬೈಲುಗಳಲ್ಲಿ ಹರಿಬಿಟ್ಟರು. ಇಂತಹ ಅಭಿವ್ಯಕ್ತಿಯ ರೂಪಗಳನ್ನು ಸಂಗ್ರಹಿಸಿದರೆ ಪ್ರಜಾಪ್ರಭುತ್ವದ ಬಗೆಗಿನ ಜನಾಭಿಪ್ರಾಯ ತಿಳಿಯುತ್ತದೆ. ಅಂತೆಯೇ ಜಾನಪದದ ಗ್ರಹಿಕೆಗೆ ಹೊಸ ನೆಲೆಯೊಂದು ಒದಗಿದಂತಾಗುತ್ತದೆ.

೧೬. ಜಾನಪದ ಎಲ್ಲಾ ಸಂದರ್ಭಗಳಲ್ಲಿ ಮಾನವ ಜೀವನದೊಡನೆಯೇ ಸಾಗುತ್ತ ಬೆಳೆದು ಬಂದಿದೆ. ಆಧುನಿಕ ಯುಗದಲ್ಲಿಯೂ ಆಧುನಿಕತೆಯ ರೀತಿಯಲ್ಲಿ ಮುಂದುವರೆಯುತ್ತಿದೆ. ಇಂದು ಮಾನವನ ನಡೆ, ವೇಷಭೂಷಣ, ಬದುಕಿನ ವೈಖರಿ ಬದಲಾವಣೆಯಾಗುವಂತೆಯೇ? ಜಾನಪದ ಅದಕ್ಕೆ ಒಗ್ಗಿಕೊಂಡು ಹೊಸ ರೂಪವನ್ನು ಪಡೆಯುತ್ತ ನವಜಾನಪದವಾಗಿ ಮುಂದುವರಿಯುತ್ತಿರುವುದನ್ನು ಈ ಅಧ್ಯಯನದಿಂದ ಗ್ರಹಿಸಬಹುದು.

೧೭. ಇಂದು ಟಿವಿ, ರೇಡಿಯೋ, ಸಿನಿಮಾ, ಸಿಡಿ, ಡಿವಿಡಿ, ಯುಟ್ಯೂಬ್ ಮುಂತಾದ ಸಮೂಹ ಮತ್ತು ವಿದ್ಯುನ್ಮಾನ ಮಾಧ್ಯಮಗಳ ಆಗಮನವು ಜನಪದ ಸಂಗೀತದ ಮೇಲೆ ಪ್ರಭಾವ ಬೀರಿದೆ. ಸಿನಿಮಾ ಹಾಡುಗಳು ಮತ್ತು ಸುಗಮ ಸಂಗೀತಗಳ ಪ್ರಭಾವವು ಕೂಡ ಜನಪದ ಸಂಗೀತದ ಮೇಲೆ ಆಗಿದೆ. ಜನಪದ ಗಾಯಕರು ಜನಪ್ರಿಯತೆಯ ಆಮಿಷಕ್ಕೆ ಬಿದ್ದು ಮನರಂಜನೆಗಾಗಿ ಜನಪದ ಸಂಗೀತವನ್ನು ಮೂಲ ಧಾಟಿ ಬಿಟ್ಟು ಜನಪ್ರಿಯ ಧಾಟಿ ಅಂದರೆ ಸಿನಿಮಾ ಹಾಡು ಮತ್ತು ಸುಗಮ ಸಂಗೀತದ ಧಾಟಿಯಲ್ಲಿ ಹಾಡುವುದು ಹೆಚ್ಚುತ್ತಿದೆ. ಆದರೂ ಸಹ ಇದನ್ನು ಹೊಸತನದ ಪ್ರಯತ್ನ ಎಂದೇ ಇಲ್ಲಿ ಗುರುತಿಸಬಹುದು.

ಈ ಹಿನ್ನೆಲೆಯಲ್ಲಿ ಜನಪದ ಹಾಡುಗಳ ಕುರಿತು ವಿವೇಚಿಸುವಾಗ ಜನಪದ ಹಾಡುಗಳು ಸಾರ್ವತ್ರಿಕವಾಗಿ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಎಂಬುದು ತಿಳಿಯುತ್ತದೆ. ಕಾಲ, ದೇಶ, ವ್ಯಕ್ತಿಯನ್ನು ಮೀರಿ ಬೆಳೆಯುವ ಇವು ಅತೀತವಾದ ಗುಣಗಳನ್ನು ಕಾಲಕ್ರಮೇಣ ಪಡೆದುಕೊಳ್ಳುತ್ತವೆ. ಯಾವ ಒಬ್ಬ ವ್ಯಕ್ತಿಯೂ ಇಲ್ಲಿ ಶಾಶ್ವತವಾಗಿ ನಿಲ್ಲಲಾರ. ಆದರೆ ಆತನ ಹಾಡುವ ಕಲೆ ಮತ್ತು ಹಾಡುಗಳು ಪ್ರಧಾನವಾಗಿ ಉಳಿದುಕೊಳ್ಳುತ್ತವೆ.

ಈ ಸಂಶೋಧನಾ ಪ್ರಬಂಧ ಮುಂದಿನ ಸಂಶೋಧಕರಿಗೆ ಇನ್ನೂ ಅನೇಕ ಆಯಾಮಗಳಲ್ಲಿ ಚರ್ಚಿಸಲಿಕ್ಕೆ ಸಾಧ್ಯತೆಗಳಿವೆ. ನನ್ನ ಸಂಶೋಧನಾ ವಿಷಯ **ಉತ್ತರ ಕರ್ನಾಟಕದ ನವಮೌಖಿಕ ಸಾಹಿತ್ಯದ ಆಯಾಮಗಳು** ಆಗಿರುವುದರಿಂದ ನಾನು ಈ

ಅಧ್ಯಯನದಲ್ಲಿ ಉತ್ತರ ಕರ್ನಾಟಕ ಭಾಗದ ವಿಜಯಪುರ, ಬಾಗಲಕೋಟ, ಬೆಳಗಾವಿ, ಧಾರವಾಡ, ಹಾವೇರಿ, ಗದಗ ಈ ಆರು ಜಿಲ್ಲೆಗಳನ್ನು ಮಾತ್ರ ಅಧ್ಯಯನಕ್ಕೆ ತಗೆದುಕೊಂಡಿದ್ದೇನೆ. ಇದು ಅಧ್ಯಯನದ ಮಿತಿಯೂ ಹೌದು. ನವಮೌಖಿಕ ಸಾಹಿತ್ಯದಲ್ಲಿ ಗೀತೆ, ಕಥೆ, ಗಾದೆ, ಒಗಟು ಹೀಗೆ ಹತ್ತು ಹಲವು ಪ್ರಕಾರಗಳನ್ನು ಕಾಣುತ್ತೇವೆ. ಬೇರೆ ಬೇರೆ ಪ್ರಕಾರಗಳನ್ನು ಇಟ್ಟುಕೊಂಡು ಅಧ್ಯಯನವನ್ನು ಮಾಡಬಹುದು. ಮೌಖಿಕ ಮತ್ತು ನವಮೌಖಿಕತೆಯನ್ನು ತೌಲನಿಕವಾಗಿಯೂ ಅಧ್ಯಯನ ಕೈಗೊಳ್ಳಬಹುದು.

# ಅನುಬಂಧ – ೧

# ಅಭ್ಯಾಸ ಸೂಚಿ

## I–ಪ್ರಾಥಮಿಕ ಆಕರಗಳು

### ಕ್ಯಾಸೆಟ್ ಮತ್ತು ಸಿಡಿಗಳು


೧. ಆಕಾಶ ಮನಗೂಳಿ, ೨೦೦೮, **ಭಜನಾ ಪದಗಳು**, ಲಹರಿ ಮ್ಯೂಸಿಕ್, ಬೆಂಗಳೂರು.

೨. ಆಕಾಶ ಮನಗೂಳಿ, ೨೦೧೦, **ಭಾರತದೊಳಗ ಮಟಕಾ ಬಂದ್ಯೆತಿ**, ಲಹರಿ ಮ್ಯೂಸಿಕ್, ಬೆಂಗಳೂರು.

೩. ಆಕಾಶ ಮನಗೂಳಿ, ೨೦೧೨, **ಕಾಡಬೇಡ ಅತೀ**, ದೇವೇಂದ್ರ ಆಡಿಯೋ–ವಿಡಿಯೋ, ಚಿಕ್ಕಮಲ್ಲಿಗವಾಡ, ತಾ॥ ಜಿ॥ ಧಾರವಾಡ.

೪. ಆಕಾಶ ಮನಗೂಳಿ, ೨೦೧೪, **ಹೊತ್ತ ಮುಳಗಿತು**, ದೇವೇಂದ್ರ ಆಡಿಯೋ–ವಿಡಿಯೋ, ಚಿಕ್ಕಮಲ್ಲಿಗವಾಡ, ತಾ॥ ಜಿ॥ ಧಾರವಾಡ.

೫. ಇಮಾಮಸಾಬ ವಲ್ಲೆಪ್ಪನವರ, ೨೦೧೨, **ಒಕ್ಕಲಗಿತ್ತಿ**, ದೇವೇಂದ್ರ ಆಡಿಯೋ–ವಿಡಿಯೋ, ಚಿಕ್ಕಮಲ್ಲಿಗವಾಡ, ತಾ॥ ಜಿ॥ ಧಾರವಾಡ.

೬. ಇಮಾಮಸಾಬ ವಲ್ಲೆಪ್ಪನವರ, ೨೦೧೨, **ಊಳುವಯೋಗಿ**, ದೇವೇಂದ್ರ ಆಡಿಯೋ ವಿಡಿಯೋ, ಚಿಕ್ಕಮಲ್ಲಿಗವಾಡ, ತಾ॥ ಜಿ॥ ಧಾರವಾಡ.

೭. ಗುರುರಾಜ ಹೊಸಕೋಟಿ, ೨೦೧೧, **ಜನಪ್ರಿಯ ಜಾನಪದ ಗೀತೆಗಳು**, ಲಹರಿ ಮ್ಯೂಸಿಕ್, ಬೆಂಗಳೂರು.

೮. ಗುರುರಾಜ ಹೊಸಕೋಟಿ, ೨೦೧೩, **ದುಡ್ಡು ದುಡಿದ ಹಾಡೋ ತಮ್ಮ..**, ಲಹರಿ ಮ್ಯೂಸಿಕ್, ಬೆಂಗಳೂರು.

೯. ಗುರುರಾಜ ಹೊಸಕೋಟಿ, ೨೦೧೪, **ದುಡ್ಡುಕೊಟ್ಟರೆ ಬೇಕಾದ ಸಿಗತೈತೆ**, ಲಹರಿ ಮ್ಯೂಸಿಕ್, ಬೆಂಗಳೂರು.

೧೦. ಬಸವರಾಜ ನರೇಂದ್ರ, ೨೦೧೦, **ಕೋಟಿಗಿಂತ ಮೇಟಿ ಮೇಲು**, ದೇವೇಂದ್ರ ಆಡಿಯೋ–ವಿಡಿಯೋ, ಚಿಕ್ಕಮಲ್ಲಿಗವಾಡ, ತಾ॥ ಜಿ॥ ಧಾರವಾಡ.

೧೧. ಬಸವರಾಜ ನರೇಂದ್ರ, ೨೦೧೦, **ರೈತನ ಜಾತ್ರೆ**, ದೇವೇಂದ್ರ ಆಡಿಯೋ–ವಿಡಿಯೋ, ಚಿಕ್ಕಮಲ್ಲಿಗವಾಡ, ತಾ॥ ಜಿ॥ ಧಾರವಾಡ.

೧೨. ಬೈಲೂರು ಬಸವಲಿಂಗಯ್ಯ, ೨೦೧೦, **ರೊಕ್ಕ ರೊಕ್ಕಾ ಎರಡಕ್ಕೂ ದುಃಖ**, ಜಾನಪದ ಸಂಶೋಧನ ಕೇಂದ್ರ, ಧಾರವಾಡ.

೧೩. ಬೈಲೂರು ಬಸವಲಿಂಗಯ್ಯ, ೨೦೧೦, ಖರೇ ಖರೇ **ಸಂಗ್ಯಾ–ಬಾಳ್ಯಾ ಹಾಡುಗಳು**, ಜಾನಪದ ಸಂಶೋಧನ ಕೇಂದ್ರ, ಧಾರವಾಡ.

೧೪. ಬೈಲೂರು ಬಸವಲಿಂಗಯ್ಯ, ೨೦೧೦, ಜನಪದ **ಹಾಡುಗಳು**, ಜಾನಪದ ಸಂಶೋಧನ ಕೇಂದ್ರ, ಧಾರವಾಡ.

೧೫. ಮಂಜುಳಾ ಗುರುರಾಜ್, ೨೦೦೯, **ಜಾನಪದ ಸಂಗಮ**, ಲಹರಿ ಮ್ಯೂಸಿಕ್, ಬೆಂಗಳೂರು.

೧೬. ಶಬ್ಬೀರ್ ಡಾಂಗೆ, ೨೦೧೩, **ಕೌಟುಂಬಿಕ ಜಾನಪದ ಹಾಡುಗಳು**, ಜಂಕಾರ್ ಮ್ಯೂಸಿಕ್, ಬೆಂಗಳೂರು.

## ಅಂತರ್ಜಾಲದ ಕೊಂಡಿಗಳು (ಇಂಟರ್ನೆಟ್ ಲಿಂಕ್ಸ್)


- https://avadhimag.com/?p=178492
- https://youtu.be/ZDjwSnJWBBs.
- https://youtu.be/84GbVpEe49c.
- https//www.prajavani.net/columns/%EO.
- https://youtu.be/aJg7JwLliGl.
- https://books.google.com/books/about/KANNADA_SUKHI_DAMPATYA_NIMMADAGUVUDU_HEG.html?id=3lqaAwAAQBAJ.
- https://youtu.be/yob4Sk27bzw.
- https://youtu.be/krZ31rUUl_A.
- https://youtu.be/NTy8AK8w3z4
- https//samajamukhi.com/%EO.
- https://www.kannadaprabha.com/edition/printkp.aspx.
- https://balavana.wordpress.com/2008.
- https://youtu.be/K_S8be0rxOl.
- https://youtu.be/3_BqKKWSeOY.
- https://youtu.be/KtV-Rsn6Me4.
- http://kanaja.in/?p=49190.
- https://youtu.be/G5BbeNLBLRO.
- https://kn.wikipedia.org/wiki/%EO.
- https://sampada.net/blog/%EO.
- http://sahityasudha.blogspot.com/2017/08/blog-post_27.html.
- https://youtu.be/p04_bNXiwx4.
- https://youtu.be/q8Tu3Gv1oX8.
- https://youtu.be/p04_bNxiwxsi5.

- https://youtu.be/txhD12Xsik.
- https://youtu.be/HenMcOgCltM.
- https://youtu.be/9YKxXptWdmM.
- https://youtu.be/jhkCox4d4wg.
- https://youtu.be/t4-recUElLA.
- https://www.vijayavani.net/western-film-song-folk-song-rukmini-harnala.
- https://youtu.be/dtNNzzXp_al.
- https://youtu.be/i5F2mS20-c4.
- https://youtu.be/KXpBp2VwFYg.
- https://youtu.be/2FHNA0gLsBY.
- https://youtu.be/J3eChaYnqyA.
- https://youtu.be/Z_ikRB96W9U.
- https://youtu.be/9kOsvimDN9l.
- https://youtu.be/lg_3if3ByAk.
- https://youtu.be/S0_A8PLltMY.
- https://youtu.be/XJ9Xn3kCDYk.
- https://youtu.be/en2bx4lVtsg.
- https://youtu.be/uB0jgGSp-ruM.
- https://youtu.be/l5NTXNNVp44.
- https://youtu.be/Q1JqNMhpoMY.
- https://youtu.be/phtqyiX6V3o.
- https://youtu.be/X9jewwDCSlQ.
- https://youtu.be/4ZDEEyfmGRA.
- http://youtu.be/7rc5ltYeZpc.
- https://youtu.be/WMMfi9rjR84.
- https://youtu.be/6L.RNtEOjpnk.
- https://youtu.be/syEj2TRlnml.
- https://youtu.be/0ha47lZ_H2Y.
- http://1234kh.blogspot.com/2014/07/blogpost_1451.html?m=1.
- https://kn.wikipedia.org/wiki.

- https://youtu.be/1i-3aDTBp6M.
- https://youtu.be/cElntLo4Bko.
- https://youtu.be/08uJlwpP-Ag.
- https://youtu.be/uAV5Xk8foaU.
- https://youtu.be/ACtdhKaBGaE.
- https://images.app.goo.gl/FUAZbim77u3ZWXN9A.


## II–ದ್ವಿತೀಯ ಆಕರಗಳು


೧. ಅಂಬಳಿಕೆ ಹಿರಿಯಣ್ಣ, ೧೯೯೬, **ಜಾನಪದ ಸಿದ್ಧಾಂತಗಳು ಮತ್ತು ವಿಧಾನಗಳು,** ಶಕ್ತಿ ಪ್ರಕಾಶನ, ಮೈಸೂರು.

೨. ಅರುಣ್ ಜೋಳದಕೂಡ್ಲಿಗಿ., ೨೦೧೨, **ಕನ್ನಡ ಜಾನಪದ ಅಧ್ಯಯನದ ತಾತ್ವಿಕ ನೆಲೆಗಳು,** ರೂಪ ಪ್ರಕಾಶನ, ಮೈಸೂರು.

೩. ಕಮಲಾ ಹೆಮ್ಮಿಗೆ, ೨೦೦೮, **ಹೂವು ಬಿದ್ದಾವ ನೆಲಕ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪. ಕರೀಂಖಾನ್ ಕೆ.ಎಸ್., ೨೦೦೭, **ಜನಪದ ಗೀತೆಗಳು,** ದಿವ್ಯಚಂದ್ರ ಪ್ರಕಾಶನ ಬೆಂಗಳೂರು.

೫. ಗದ್ದಗಿಮಠ ಬಿ.ಎಸ್., ೧೯೬೨, **ಕನ್ನಡ ಜಾನಪದ ಗೀತೆಗಳು,** ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬. ಗಿರಡ್ಡಿ ಗೋವಿಂದರಾಜ, ೧೯೯೪, **ಜನಪದ ಕಾವ್ಯ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೭. ಗುರುಪಾದ ಫಿವಾರಿ, ೧೯೮೭, **ಜನಪದ ಗೀತೆಗಳಲ್ಲಿ ಶೃಂಗಾರ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೮. ಗೋವಿಂದರಾಜು ಟಿ., ೨೦೧೬, **ಆಧುನಿಕ ಜಾನಪದ ಸ್ವರೂಪ,** ಕಾವ್ಯಕಲಾ ಪ್ರಕಾಶನ, ಬೆಂಗಳೂರು.

೯. ಚಂದ್ರಶೇಖರ ಕಂಬಾರ, ೧೯೮೦, **ನಮ್ಮ ಜಾನಪದ,** ಅಭಿಜಾತ ಗ್ರಂಥಮಾಲೆ, ಬೆಂಗಳೂರು.

೧೦. ಚಂದ್ರು ಕಾಳೇನಹಳ್ಳಿ, ೧೯೭೭, **ಜಾನಪದ ಪ್ರವೇಶ,** ಹೊಯ್ಸಳ ಪ್ರಕಾಶನ, ಕಾಳೇನಹಳ್ಳಿ.

೧೧. ಚಂದ್ರು ಕಾಳೇನಹಳ್ಳಿ, ೧೯೭೮, **ನಗರ ಜಾನಪದ,** ಭಾರತೀ ಪ್ರಕಾಶ, ಮೈಸೂರು.

೧೨. ಜವರೇಗೌಡ ದೇ., ೧೯೭೭, **ಜಾನಪದ ಸೌಂದರ್ಯ,** ಸಹ್ಯಾದ್ರಿ ಪ್ರಕಾಶನ, ಮೈಸೂರು.

೧೩. ಜವರೇಗೌಡ ದೇ., ೨೦೧೭, **ಜಾನಪದ ಗೀತಾಂಜಲಿ,** ಸಪ್ನ ಬುಕ್ ಹೌಸ್, ಬೆಂಗಳೂರು.

೧೪. ತಿರುಮಲೈ ಸೋದರಿಯರು, ೨೦೧೬, **ಕರ್ನಾಟಕ ಸಂಗೀತ ದರ್ಪಣ,** ಶ್ರೀನಿವಾಸ ಪ್ರಕಾಶನ, ರಾಜಾಜಿನಗರ, ಬೆಂಗಳೂರು.

೧೫. ದೇವೇಂದ್ರ ಕುಮಾರ ಹಕಾರಿ, ೨೦೦೪, ಜನಪದ **ಹಾಡು ಮತ್ತು ಭಕ್ತಿ,** ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೬. ನಾಯಕ ಹಾ.ಮಾ., ೧೯೭೧, **ಜಾನಪದ ಸ್ವರೂಪ,** ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು.

೧೭. ನಾಗರಾಜಯ್ಯ ಹಂಪ(ಸಂ), ೧೯೮೨, **ಜಾನಪದ ಅಧ್ಯಯನ ವಿಚಾರ ಸಂಕಿರಣ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೮. ನಾಗೇಶ ಹೊನ್ನೂರ, ೨೦೦೦, **ಜಾನಪದ ಗೀತೆಗಳು,** ಬಸವ ಪ್ರಕಾಶನ, ಗದಗ.

೧೯. ನಾವಲಗಿ ಸಿ.ಕೆ., ೨೦೦೬, **ಉತ್ತರ ಕರ್ನಾಟಕದ ಭಜನೆ ಹಾಡುಗಳು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಜೆ.ಪಿ. ರಸ್ತೆ, ಬೆಂಗಳೂರು.

೨೦. ನಿಂಗಣ್ಣ ಚಿ.ಸಿ., ೨೦೦೮, **ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ,** ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

೨೧. ಪದ್ಮಪ್ರಸಾದ ಪಿ.ಎಸ್., ೧೯೯೭, **ಜಾನಪದ ವರ್ಷ-೯೫,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೨. ಪುರುಷೋತ್ತಮ ಬಿಳಿಮಲೆ, ೧೯೯೩, **ಜಾನಪದ ಕ್ಷೇತ್ರಕಾರ್ಯ-ಆಧುನಿಕ ವಿಧಾನಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಬಸವರಾಜ ಮಲಶೆಟ್ಟಿ, ೧೯೮೭, **ಉತ್ತರ ಕರ್ನಾಟಕದ ಜಾನಪದ ವಾದ್ಯಗಳು,** ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

೨೪. ಬಾಳಣ್ಣ ಸೀಗೀಹಳ್ಳಿ(ಸಂ), ೨೦೧೦, **ಹಾಡ ತೂರ್ಯಾಡ್ಯಾವ,** ಲಿಂಗಾಯತ ಅಧ್ಯಯನ ಅಕಾಡೆಮಿ, ನಾಗನೂರು ರುದ್ರಾಕ್ಷಿಮಠ, ಬೆಳಗಾವಿ.

೨೫. ಮೊಗಳ್ಳಿ ಗಣೇಶ್, ೧೯೯೭, **ದೇಸಿ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ಮೊಗಳ್ಳಿ ಗಣೇಶ್, ೨೦೦೦, **ದಲಿತರು ಮತ್ತು ಜಾಗತೀಕರಣ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೭. ರಹಮತ್ ತರೀಕೆರೆ, ೨೦೧೮, **ಸಂಶೋಧನ ಮೀಮಾಂಸೆ,** ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮. ರಾಜಪ್ಪ ದಳವಾಯಿ, ೨೦೧೦, **ಕನ್ನಡ ಸಾಹಿತ್ಯ ಕೋಶ,** ದಳವಾಯಿ ಪ್ರಕಾಶನ, ಬೆಂಗಳೂರು.

೨೯. ವಿಜಯಕುಮಾರ ಎಸ್., ೨೦೦೩, **ಜಾನಪದ ಗೀತೆಗಳು**, ಮಾರುತಿ ಬುಕ್ ಸೆಂಟರ್, ಗದಗ.

೩೦. ಶಾರದಾ ವಿ. ಭಟ್ಟ, ೨೦೦೯, **ನಾದಪ್ರಿಯಾ ಶ್ರೀ ನಾರಾಯಣ ಪಂಡಿತರ ಅಭಿನವಭಾವ ಬಂದಿಶ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೧. ಶಿರೂರ ಬಿ.ವ್ಹಿ., ೨೦೧೬, **ಸಂಶೋಧನ ಸ್ವರೂಪ**, ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ.

೩೨. ಸಜ್ಜನ್ ಎಂ.ಎನ್., ೨೦೧೪, **ವೈವಿಧ್ಯಮಯ ಹಾಡುಗಳು**, ಮೆ॥ ಪಿ.ಸಿ. ಶಾಬಾದಿಮಠ ಬುಕ್‌ಡಿಪೋ, ಗದಗ.

೩೩. ಸಾಗರ್ ಜಿ.ಜಿ., ೨೦೧೪, **ಜನಪದ ಗೀತೆಗಳು**, ಕನ್ನಡಾಂಬೆ ಪ್ರಕಾಶನ, ಬೆಂಗಳೂರು.

೩೪. ಹಲಸಂಗಿ ಗೆಳೆಯರು, ೨೦೧೭, **ಗರತಿಯ ಹಾಡು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೫. ಹಿರೇಮಠ ಆರ್.ಸಿ., ೧೯೭೪, **ಜಾನಪದ ಸಾಹಿತ್ಯ ದರ್ಶನ**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

# ಅನುಬಂಧ–೨

# ಭಾವಚಿತ್ರಗಳು




ಸಾವಿರ ಹಾಡಿನ ಸರದಾರರೆಂದೇ ಪ್ರಸಿದ್ಧರಾಗಿದ್ದ ಬಾಳಪ್ಪ ಹುಕ್ಕೇರಿ




ಉತ್ತರ ಕರ್ನಾಟಕದ ಪ್ರಸಿದ್ಧ ಜನಪದ ಹಾಡುಗಾರರಾದ ಬಸವಲಿಂಗಯ್ಯ ಹಿರೇಮಠ



ಜನಪದ ಹಾಡುಗಳ ಮೋಡಿಗಾರ ಎಂದೇ ಪ್ರಸಿದ್ಧರಾದ ಗುರುರಾಜ ಹೊಸಕೋಟೆ


ಬಸವರಾಜ್ ನರೇಂದ್ರ


ಬಸವರಾಜ ನರೇಂದ್ರ ಅವರ ಹಸ್ತಾಕ್ಷರಗಳಲ್ಲಿ ರಚನೆಯಾದ ಜನಪದ ಗೀತೆ



ಶಬ್ಬೀರ ಡಾಂಗೆ ಅವರ ಹಸ್ತಾಕ್ಷರಗಳಲ್ಲಿ ರಚನೆಯಾದ ಜನಪದ ಗೀತೆ



ಶಬ್ಬೀರ ಡಾಂಗೆ ಅವರ ೨೦೧೮ರ ಸಾಲಿನ 'ಗುರು ಪುಟ್ಟರಾಜ ಜಾನಪದ ಕೋಗಿಲೆ' ಪ್ರಶಸ್ತಿ ಪ್ರದಾನ ಸಮಾರಂಭ



ಸಾರ್ವಜನಿಕ ಕಾರ್ಯಕ್ರಮದಲ್ಲಿ ಆಕಾಶ ಮನಗೂಳಿ ಅವರ ಭಜನಾ ಗಾಯನ




ಇಮಾಮಸಾಬ ವಲ್ಲೆಪ್ಪನವರ ಆಧುನಿಕ ಶೈಲಿಯ ಡೊಳ್ಳಿನ ಪದಗಳ ಸಿಡಿ




ಯುಟ್ಯೂಬ್‌ನಲ್ಲಿ ಬಿತ್ತರಗೊಂಡು ಯುವಜನಾಂಗವನ್ನು ಆಕರ್ಷಿಸುತ್ತಿರುವ ಡಿಜೆ ಜನಪದ ಗೀತೆಗಳು




ರುಕ್ಮೀಣಿ ಹರಿನಾಳ ಅವರ ೨೦೧೫ರ ಸಾಲಿನ 'ಪ್ರವಾಸಿ ಜಾನಪದ ಲೋಕೋತ್ಸವ' ಪ್ರಶಸ್ತಿ ಪ್ರದಾನ ಸಮಾರಂಭ



ಸಿದ್ದಪ್ಪ ಬಿದರಿ ಅವರ ೨೦೧೮ರ ಸಾಲಿನ 'ಅಂಬಿಕಾತನಯದತ್ತ' ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ



ಜನಪದ ಹಾಡುಗಾರರಾದ ಬಸವರಾಜ ನರೇಂದ್ರ ಅವರನ್ನು ಭೇಟಿಯಾದ ಸಂದರ್ಭ



ಜನಪದ ಹಾಡುಗಳ ಸರದಾರ ಗುರುರಾಜ ಕೆಂಥೂಳಿ



ಬೂಮಾಬಿ ರಿಕಾರ್ಡಿಂಗ್ ಸ್ಟುಡಿಯೋದಲ್ಲಿ ಶಬ್ಬೀರ ಡಾಂಗೆ ಅವರನ್ನು ಭೇಟಿಯಾದ ಸಂದರ್ಭ




ಟಿವಿ ಮಾಧ್ಯಮದಲ್ಲಿ ಪ್ರಸಾರಗೊಂಡ ನಿಂಗಪ್ಪ ಗುಡ್ಡದ ಅವರ ಡೊಳ್ಳಿನ ಪದಗಳ ಗಾಯನ



ಸ..ರಿ..ಗ..ಮ..ಪ ಸೀಸನ್ ಹದಿನಾಲ್ಕರ ಕಾರ್ಯಕ್ರಮದಲ್ಲಿ ಲಕ್ಷ್ಮೀ ತಳವಾರ ಗಾಯನ




ಸ..ರಿ..ಗ..ಮ..ಪ ಸೀಸನ್ ಹದಿನೈದರ ಕಾರ್ಯಕ್ರಮದಲ್ಲಿ ಹನುಮಂತನ ಗಾಯನ




ಅಂದಿನ ಕ್ಯಾಸೆಟ್ ಕಾಲಘಟ್ಟದ ಜನಪ್ರಿಯ ಜನಪದ ಗೀತೆಗಳು




ಇಂದು ಯೂಟ್ಯೂಬ್ ಮೂಲಕ ಇತಿಹಾಸ ನಿರ್ಮಿಸಿದ ಜನಪ್ರಿಯ ಜನಪದ ಗೀತೆಗಳು



ಕನ್ನಡ ವಿಶ್ವವಿದ್ಯಾಲಯ

ಮಾತೆಂಬುದು ಜ್ಯೋತಿರ್ಲಿಂಗ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ